3) ಪ್ರಕಟಣೆ

ವಿಷಯ : ಮಾನ್ಯ ಪಶುಸಂಗೋಪನೆ ಸಚಿವರಿಂದ ಮಾನ್ಯ ಸದಸ್ಯರುಗಳಿಗೆ ಭೋಜನ ಕೂಟದ ಏರ್ಪಾಡು.

ಉಪಾಧ್ಯಕ್ಷರು :– ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್, ಪಶುಸಂಗೋಪನೆ ಹಾಗೂ ವಕ್ಫ್ ಸಚಿವರು ಈ ದಿನ ಮಧ್ಯಾಹ್ನ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿರುತ್ತಾರೆ, ಮಾನ್ಯ ಸದಸ್ಯರು ಎಲ್ಲರೂ ಹೋಗಬೇಕೆಂದು ವಿನಂತಿ, ಈಗ ಸದನವನ್ನು 3.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.00 ಗಂಟೆ 2 ನಿಮಿಷಕ್ಕೆ ಮುಂಡೂಡಲ್ಪಟ್ಟು ಪುನಃ ಮಧ್ಯಾಹ್ನ3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3–16 ಗಂಟೆಗೆ ಸಮಾವೇಶಗೊಂಡಿತು. ಶ್ರೀ ಕೃಷ್ಣ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

4) ವಿತ್ತೀಯ ಕಾರ್ಯಕಲಾಪ :

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ. (ಬೇಡಿಕೆಗಳ ಸಂ. 1, 23 ಮತ್ತು 17)

ಅ) ಕೃಷಿ ಸಚಿವರಿಂದ ಉತ್ತರ

ಅಧ್ಯಕ್ಷರು :– ಈಗ ಮಾನ್ಯ ಶ್ರೀನಿವಾಸಗೌಡರು.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೇ, ನಾನು ಇನ್ನೂ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡುವುದು ಇದೆ. ನಮಗೆ ಅವಕಾಶ ಕೊಟ್ಟಿಲ್ಲ. ಬಹಳ ಪ್ರಮುಖವಾಗಿ ಹೇಳುವುದು ಇದೆ.

ಅಧ್ಯಕ್ಷರು :– ಈಗಾಗಲೇ ಚರ್ಚೆಯನ್ನು ಮುಕ್ತಾಯ ಮಾಡಿದ್ದೇನೆ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :– ಇನ್ನೂ ಹತ್ತು ನಿಮಿಷಗಳ ಕಾಲಾವಕಾಶವನ್ನಾದರೂ ಕೊಡಬೇಕು.

(ಗೊಂದಲ)

ಅಧ್ಯಕ್ಷರು :– ದಯಮಾಡಿ ಕೇಳಿ. ಇನ್ನೂ ಅನೇಕ ಬೇಡಿಕೆಗಳಿವೆ. ಆ ಬೇಡಿಕೆಗಳ ಮೇಲೆ ಮಾತನಾಡಲು ನಾನು ಅವಕಾಶವನ್ನು ಕೊಡುತ್ತೇನೆ. ದಯಮಾಡಿ ಈಗ ಉತ್ತರ ಕೊಡಿಸುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಈಗ ಶ್ರೀನಿವಾಸಗೌಡರೇ

ತಾವು ಶುರುಮಾಡಿ. ದಯಮಾಡಿ ಕುಳಿತುಕೊಳ್ಳಬೇಕು. ಬೇರೆ ಬೇಡಿಕೆಗಳ ಮೇಲೆ ಚರ್ಚೆ ನಾಳೆ ಅವಕಾಶ ಕೊಡುತ್ತೇನೆ. ಇದೇನಿದು? ನಾನು ಹೇಳುವುದನ್ನು ಸ್ವಲ್ಪ ಅರ್ಥಮಾಡಿಕೊಳ್ಳಿ. ಈ ರೀತಿಯಾದರೆ ಹೇಗೆ? ನಾನು ಚರ್ಚೆಯನ್ನು 12 ಗಂಟೆಗೆ ಕ್ಲೋಸ್ ಮಾಡಬೇಕೆಂದಿದ್ದೆ. ಅದು ಎರಡು ಗಂಟೆಯವರೆಗೂ ಆಗಿದೆ. ಮತ್ತೆ ಹೀಗೆಲ್ಲಾ ಪದೇ ಪದೇ ಕೇಳುವುದಕ್ಕಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ. ಉತ್ತರ ಹೇಳಿ. ಮಾನ್ಯ ಸಚಿವರ ಉತ್ತರ ಬಿಟ್ಟರೆ ಇನ್ನೇನು ರೆಕಾರ್ಡ್‌ಗೆ ಹೋಗುವುದಿಲ್ಲ.

(x) ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ಕೃಷಿ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರನೇಕರು ಮಾತನಾಡಿ ಅನೇಕ ಸಲಹೆಗಳನ್ನು ನೀಡಿದ್ದಾರೆ. ಇವತ್ತು ರೈತನಿಗೆ ಬೇಕಾಗಿರುವುದು ಮೂರೇ ಮೂರು. ಇಡೀ ರೈತರ ಹಿನ್ನೆಲೆ, ಅವರ ಬದುಕು ಹೇಗೆ ಇದೆ ಎಂದು ಹೇಳಿದರೆ...

ಇವತ್ತು ಸಮ್ಮಿಶ್ರ ಸರ್ಕಾರವು ಬಂದಮೇಲೆ ನಾವು ಕಡಿಮೆ ಬಡ್ಡಿಗೆ ಅಂದರೆ ಇವತ್ತು ಆರು ಪರ್ಸೆಂಟ್ ಬಡ್ಡಿ ದರದಲ್ಲಿ ಸಹಕಾರ ಸಂಘಗಳ ಮೂಲಕ ನಾವು ಸಾಲವನ್ನು ಕೊಡುತ್ತಿದ್ದೇವೆ. ಇದು ಮೊದಲನೆಯ ಆದ್ಯತೆಗಳಲ್ಲಿ ಕೃಷಿಕರ ಏನು 70 ಭಾಗ ರೈತಾಪಿ ಜನಗಳ ಹಿನ್ನೆಲೆಯಿಂದ, ಈ ಸಮ್ಮಿಶ್ರ ಸರ್ಕಾರ ಮೊದಲನೇ ಆದ್ಯತೆಯಾಗಿ ತೆಗೆದುಕೊಂಡಂಥ ಒಂದು ದಿಟ್ಟ ಕ್ರಮ. ಎರಡನೆಯದಾಗಿ ನೀರು. ಇವತ್ತಿನ ದಿನಗಳಲ್ಲಿ ನೀರು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ ಇವತ್ತು ಕೆಲವಾರು ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಕೂಡ ತೊಂದರೆಯಾಗಿದೆ. ನಮ್ಮಲ್ಲಿ ನೀರಿಗೆ ನಮ್ಮ ಪೂರ್ವಕರು ಸಾವಿರಾರು ವರ್ಷಗಳ ಹಿಂದೆಯೇ ಕೋಲಾರದಂಥ ಜಿಲ್ಲೆಗಳಲ್ಲಿ ಕೆರೆಗಳನ್ನು ಕಟ್ಟಿದರು. 1070 ವರ್ಷಗಳ ಹಿಂದೆ ಕೋಲಾರ ಜಿಲ್ಲೆಯಲ್ಲಿ ಕೆರೆಗಳನ್ನು ಕಟ್ಟಿದಂಥ ಶಾಸನಗಳು ಇವತ್ತಿಗೂ ಲಭ್ಯವಾಗುತ್ತದೆ. ಅಂದರೆ ಮಳೆ ನೀರನ್ನು ಶೇಖರಣೆ ಮಾಡುವುದು ಮತ್ತು ಮಳೆ ನೀರನ್ನು ಹಾರ್ವೆಸ್ಟ್ ಮಾಡುವಂಥ ಪದ್ಧತಿಗಳು ನಮಗಿಂತಲೂ ಹೆಚ್ಚಿಗೆ ಪೂರ್ವಿಕರು ಮಾಡಿದ್ದರು ಎನ್ನುವುದಕ್ಕೆ ಇದು ಒಂದು ಉದಾಹರಣೆ. ಕೋಲಾರ ಜಿಲ್ಲೆಯ ಒಂದು ಉದಾಹರಣೆಯನ್ನು ನಾನು ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಇಡೀ ಜಿಲ್ಲೆಗೆ 3608 ಕೆರೆಗಳನ್ನು ಸ್ವತಂತ್ರ ಪೂರ್ವದಲ್ಲಿ ಕಟ್ಟಿದ್ದಾರೆ. ನಮ್ಮ ಪೂರ್ವಿಕರು, ಅವರಿಗೆ ಇದ್ದಂತಹ ರಾಜ ಮಹಾರಾಜರು, ಪಾಳೆಗಾರರು ಅಥವಾ ಆ ಸಂಬಂಧಪಟ್ಟ ರೈತರು, ಸಣ್ಣ ರೈತರು, ಆ ಊರಿನ ಕೆಲವು ಶ್ರಮ ಜೀವಿಗಳೂ ಕೂಡ ಕೆರೆಗಳನ್ನು ಕಟ್ಟಿ ಅವರ ಹೆಸರಿನ ಕೆರೆಗಳು ಇನ್ನೂ ಇವೆ. ಇವತ್ತು ಕೆರೆ ಎನ್ನುತ್ತಾರೆ. ಈ ತರಹ ಹೆಸರುಗಳನ್ನು ಇಟ್ಟು ಇವತ್ತು ಆ ಕೆರೆಗಳು ಮಳೆ ನೀರಿನ ಸಂಗ್ರಹಕ್ಕೆ ಅಷ್ಟು

(x) ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.

ಒತ್ತು ಕೊಟ್ಟುಕೊಂಡು ಬಂದಿರುವ ಕೋಲಾರ ಜಿಲ್ಲೆಯಂತಹ ಬರ ಪೀಡಿತ ಜಿಲ್ಲೆಗಳಲ್ಲಿ ಇವತ್ತು ಅಂತಹ ಪರಿಸ್ಥಿತಿಯಲ್ಲಿ ನಾವೇನು ಮಾಡುತ್ತಿದ್ದೇವೆ? ನೀರನ್ನು ಸದ್ಬಳಕ್ಕೆ ಮಾಡಬೇಕು. ಕನಿಷ್ಟ ಇವತ್ತು ರೈನ್ ವಾಟರ್ ಹಾರ್ವೆಸ್ಟಿಂಗ್ ಮತ್ತು ಮ್ಯಾನೇಜ್‌ಮೆಂಟ್ ವಿಚಾರ. ಮ್ಯಾನೇಜ್‌ಮೆಂಟ್ ಇವತ್ತು ಇಡೀ ದೇಶದಲ್ಲೇ ಸರಿಯಾದಂತಹ ಪ್ರಾಯೋಗಿಕವಾಗಿ ನಡೆದಿಲ್ಲ ಎನ್ನುವಂತಹ ನನ್ನ ದೃಢವಾದ ನಂಬಿಕೆ. ನಾನು ನೀರಿನ ವಿಚಾರವಾಗಿ ಬಹಳ ಸಾರಿ ಈ ಮನೆಯಲ್ಲಿ ಹೇಳಿದ್ದೇನೆ. ನಾನು ಆ ಕಡೆ ಇದ್ದಾಗಲೂ ನೀರಿನ ವಿಚಾರ ಮಾತನಾಡುತ್ತಿದ್ದೆ. ಇವತ್ತು ಇಲ್ಲಿ ನಮ್ಮ ನೀರಾವರಿ ಮಂತ್ರಿಗಳು ಇದ್ದಾರೆ. ನಾನು ಅನೇಕ ಸಾರಿ ಹೇಳುತ್ತಿದ್ದೆ. ಇವತ್ತು ಏನು ಕೆಆರ್‌ಎಸ್ ಮತ್ತು ಆಲಮಟ್ಟಿ ಎರಡು ನದಿಗಳು ಸಾಕು, ಇಡೀ ರಾಜ್ಯಕ್ಕೆ ನೀರು ಕೊಡಬಹುದು. ನೀರನ್ನು ಸಮರ್ಪಕವಾಗಿ ಬಳಸುವಂತಹ ಪದ್ಧತಿಗಳನ್ನು ನಾವೇನಾದರೂ ಮಾಡಿದರೆ ಯಾವತ್ತೂ ಕೂಡ ತೊಂದರೆ ಆಗುವುದಿಲ್ಲ ಎನ್ನುವಂತಹ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮಗೆ ಈಗ ಇರುವಂತಹ ನೀರನ್ನು ಸದ್ಬಳಕೆ ಮಾಡುವಂತಹ ಕೆಲಸ ಆಗಬೇಕು ಎನ್ನುವಂತಹದು ಮೊದಲನೆಯದು, ಎರಡನೆಯದಾಗಿ ನೀರಿಗೆ ಆದ್ಯತೆ. ಮೂರನೆಯದು ಮಾರುಕಟ್ಟೆ. ಇವತ್ತು ರೈತರು ಬೆಳೆದಂತಹ ಬೆಳೆಗಳಿಗೆ ಸರಿಯಾದಂತಹ ಬೆಲೆ ಸಿಗುತ್ತಿಲ್ಲ, ನಾನು ಒಪ್ಪುತ್ತೇನೆ. ಅನೇಕ ನಾಯಕರುಗಳು ಹೇಳಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಯಡಿಯೂರಪ್ಪನವರು, ನಮ್ಮ ಮಾನ್ಯ ವಿಶ್ವೇಶ್ವರ ಹೆಗಡೆಯವರು, ಮಾನ್ಯ ವಾಟಾಳ್ ನಾಗರಾಜ್ ಅವರು; ನಮ್ಮ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮಾತನಾಡಿದ್ದಾರೆ. ಇನ್ನೂ ಅನೇಕರು ಹೇಳಿದ್ದಾರೆ. ಈ ಕಡೆಗೆ ನಮ್ಮ ಮಾನ್ಯ ಬಸವರಾಜ ರಾಯರೆಡ್ಡಿಯವರು, ಮಾನ್ಯ ಶ್ರೀ ಡಿ.ಆರ್. ಪಾಟೀಲ್ ಅವರು, ಮಾನ್ಯ ವೈಜನಾಥ ಪಾಟೀಲ್ ಅವರುಗಳೆಲ್ಲಾ ಮಾತನಾಡಿದ್ದಾರೆ. ಇವತ್ತು ರೈತರು ಬೆಳೆದಂತಹ ಬೆಳೆಗಳಿಗೆ ಬೆಲೆ ಸಿಗುವಂತಹ ಕೆಲಸ ರೈತರಿಗೆ ಆಗುತ್ತಿಲ್ಲ; ಇವು ರೈತರು ಸಂಕಷ್ಟದಲ್ಲಿರಬೇಕಾದಂತಹ ಈ ಮೂರರಲ್ಲಿ, ಈ ಮೂರು ಕೂಡ ಪ್ರಾಮುಖ್ಯವಾಗಿದೆ. ಒಂದು ಕಡಿಮೆ ಬಡ್ಡಿ ಸಾಲ ಇನ್ನೊಂದು ನೀರು, ಮೂರನೆಯದು ಮಾರುಕಟ್ಟೆ. ಈ ಮಾರುಕಟ್ಟೆಯನ್ನು ಸರ್ಕಾರ ನಾಲ್ಕು ವರ್ಷಗಳ ಹಿಂದೆ ಮಾನ್ಯ ಎಸ್.ಎಂ.ಕೃಷ್ಣ ಅವರು ಇಲ್ಲಿ ಮುಖ್ಯ ಮಂತ್ರಿಗಳು ಆಗಿದ್ದಾಗ, ಆವರ್ತ ನಿಧಿಯನ್ನು ನೂರು ಕೋಟಿ ರೂ.ಗಳ ಮೂಲಕ ಹುಟ್ಟು ಹಾಕಿದರು. ಇವತ್ತು ಆವರ್ತ ನಿಧಿ ಮೂಲಕ ಈ ಸಾರಿ ಕೂಡ ಗೋವಿನ ಜೋಳ, ರಾಗಿ, ಭತ್ತು ಮತ್ತು ಟೊಮ್ಯಾಟೋ, ಉಳ್ಳಾಗಡ್ಡೆ ಈ ತರಹ ಅನೇಕ ಪದಾರ್ಥಗಳು ಮಾರ್ಕೆಟ್ ಇಂಟರ್‌ವೆನಷನ್ ಆಗಿದೆ. ಅಡಿಕೆ, ಕೂಡ ಆಗಿದೆ. ಇವೆಲ್ಲಕ್ಕೂ ಕೂಡ ನಾವು ಮಾರ್ಕೆಟ್ ಇಂಟರ್‌ವೆನಷನ್

ಮಾಡಿದ್ದೇವೆ. ಅದೂ ಕೆಲವರು ಹೇಳುವ ಪ್ರಕಾರ, ಕೆಲವು ನಮ್ಮ ನಾಯಕರು ಹೇಳುವ ಪ್ರಕಾರ ಅಷ್ಟಾಗಬೇಕಾಗಿತ್ತು, ಇಷ್ಟಾಗಬೇಕಾಗಿತ್ತು ಎಂದು ಹೇಳುತ್ತಾರೆ. ಆದರೆ ಸರ್ಕಾರದ ಯಾವುದೇ ಮಾರ್ಕೆಟ್ ಇಲ್ಲದೇ ಇದ್ದರೆ, ಅವತ್ತು ರೇಟುಗಳೂ ಕೂಡ ಜಂಪ್ ಆಗುತ್ತದೆ. ನಮ್ಮ ಉದ್ದೇಶ ಏನು? ಅಲ್ಲಿರುವಂತಹ ಎಲ್ಲಾ ಸರಕನ್ನು ಕೊಂಡುಕೊಳ್ಳುವಂತಹ ಉದ್ದೇಶ ಇಲ್ಲ. ಮಾರ್ಕೆಟ್ ಇಂಟರ್‌ವೆನ್‌ಷನ್ ಅಂದರೆ ಸರ್ಕಾರ ಇಂಟರ್‌ವೆನಷನ್ ಆದರೆ ಮಾರ್ಕೆಟ್ ರೈಸ್ ಆಗುತ್ತದೆ. ಇದು ಪ್ರತಿ ಒಬ್ಬ ರೈತರಿಗೆ ಸಿಗಬೇಕು ಎನ್ನುವ ಒಂದೇ ಒಂದು ಉದ್ದೇಶದಿಂದ ಈ ಮಾರ್ಕೆಟ್ ಅನ್ನು ಮಾಡಲಿಕ್ಕೆ ನಾವು ಹೊರಟ್ಟಿದ್ದೇವೆ. ಇವತ್ತು ಏನಾಗಿದೆ ಇಡೀ ನಮ್ಮ ದೇಶದ ಎಲ್ಲಾ ರೈತ ವರ್ಗ, ಈ ಕೃಷಿಕನಿಗೆ ಏನಾಗಿತ್ತು ಅಂದರೆ ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲು ಎಂದು ರೈತರಿಗೆ ಒಂದು ಹಣೆ ಬರಹ ಕಟ್ಟಿದರು. ಅವನು ರೈತ; ನೀನು ವಿದ್ಯಾಭ್ಯಾಸ ಮಾಡಬೇಡ. ನೀನು ಮೇಟಿ ಹಿಡಿದುಕೊಂಡು ಉತ್ತುಕೊಂಡೇ ಇರಬೇಕು ಎನ್ನುವಂತಹ ದಬ್ಬಾಳಿಕೆ. ಐದಾರು ಸಾವಿರ ವರ್ಷಗಳಿಂದ ಕೃಷಿಕನ ಮೇಲೆ ಆದಂತಹ ದಬ್ಬಾಳಿಕೆ ಎಂತಲೇ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ದಬ್ಬಾಳಿಕೆಯಲ್ಲೂ ಕೂಡ ರೈತ ಇವತ್ತು ಜೀವಂತವಾಗಿ ಇದ್ದಾನೆ ಎಂದು ಹೇಳಿದರೆ ಇವತ್ತು ನಾವು ಪ್ರತಿಯೊಬ್ಬರೂ ಕೂಡ ಆ ರೈತನನ್ನು ಅಪ್ರೀಷಿಯೇಟ್ ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲೂ ಕೂಡ, ಸಾವಿರಾರು ವರ್ಷಗಳಿಂದ ವಿದ್ಯಾಭ್ಯಾಸದಿಂದ ವಂಚಿತರಾದಂತಹ ಈ ಕೃಷಿಕನಿಗೆ ಇವತ್ತು ವಿದ್ಯಾಭ್ಯಾಸ ಕೊಟ್ಟಿದ್ದರೆ, ಯಾವ ಅಗ್ರಿಕಲ್ಚರ್ ಯೂನಿವರ್ಸಿಟಿಯವರು ಹೇಳಿಕೊಡಬೇಕಾಗಿರಲಿಲ್ಲ. ಅಷ್ಟೊಂದು ವಿದ್ಯಾಭ್ಯಾಸದಿಂದ ಅವನು ವಂಚಿತನಾಗಿದ್ದಾನೆ. ಇವತ್ತೂ ಕೂಡ ನಮ್ಮ ರಾಜ್ಯದಲ್ಲಿ 30 ಪರ್ಸೆಂಟ್ ವಿದ್ಯಾವಂತರು ಇಲ್ಲದಂತೆ ಆಗಿದೆ. ಕೇವಲ 69 ಪರ್ಸೆಂಟ್ ವಿದ್ಯಾವಂತರು ಆಗಿದ್ದಾರೆ. ಅದೇ ಕೇರಳದಲ್ಲಿ ನೂರಕ್ಕೆ ನೂರು ಭಾಗ ವಿದ್ಯಾವಂತರು ಆಗಿದ್ದಾರೆ. ಇವೆಲ್ಲಾ ಕಾರಣಗಳನ್ನು ನಾವು ಹೋಲಿಸುತ್ತಾ ಹೋಗುತ್ತಿದ್ದರೆ ರೈತನಿಗೆ ಇವತ್ತು ಕೇವಲ ಕೆಲವೇ ದಿನಗಳಿಂದ ಬಂದಂತಹ ಶಾಪವಲ್ಲ. ಸಾವಿರಾರು ವರ್ಷಗಳಿಂದ ಬಂದಂತಹ ಶಾಪ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಈ ಮನೆಯಲ್ಲಿ ಮಾನ್ಯ ವಿರೋಧ ಪಕ್ಷದವರು ಈ ಬೇಡಿಕೆಗಳನ್ನು ಮೊದಲನೇ ದಿನ 30ನೇಯ ತಾರೀಖು ಇಟ್ಟಿರಿ. 30ನೇ ತಾರೀಖು ಇಟ್ಟು, ಮಾನ್ಯ ವಿಶ್ವೇಶ್ವರ ಹೆಗಡೆಯವರು ಎರಡನೇ ದಿನವೇ ಚರ್ಚೆಯನ್ನು ಶುರು ಮಾಡಿದರು. ಯಾವ ಬೇಡಿಕೆಗಳು ಇವತ್ತು 70 ಭಾಗದ ಜನಸಂಖ್ಯೆಗೆ ಅಗತ್ಯ ಇದೆ ಅದನ್ನು ನೀವು ಕಡೆಗಣಿಸಿದಿರಿ. ಅವರಿಗೂ ಕೂಡ ಸರಿಯಾದ ಸಮಯ ಕೊಡಲಿಲ್ಲ. ಇವತ್ತು ನಿಮಗೆ ಸಮಯದ ಅಭಾವ ಇದೆ, ನಾನು ಒಪ್ಪುತ್ತೇನೆ. ಆದರೆ ಅವರು ಆ 3-4 ದಿವಸ ಮಾಡಿದಂತಹ ಕೆಲಸ, ಇಂತಹ ಒಳ್ಳೆಯ ಸಬ್ಜೆಕ್ಟ್ ಬಂದಾಗ ಮೂರು ದಿನ

ಸ್ಟ್ರೈಕ್ ಮಾಡಿಕೊಂಡು ಹೊರಗಡೆ ನಿಂತರು. ಸದನವನ್ನು ಬಾಯ್‌ಕಾಟ್ ಮಾಡಿ ಮೂರು ದಿನ ಈ ಕೃಷಿಕರ ಮೇಲೆ, ಅವರ ಕಷ್ಟ-ಸಂಕಷ್ಟಗಳಲ್ಲಿ ಪಾಲ್ಗೊಳ್ಳುವಂತಹದನ್ನು ಕಡಿಮೆ ಮಾಡಿದರು, ಮೊಟಕುಗೊಳಿಸಿದರು. ಇವತ್ತು ಅವರ ಭಾಗದಲ್ಲೇ ಬಹಳಷ್ಟು ಜನ ನಮಗೆ ಮಾತನಾಡಲು ಟೈಮ್ ಕೊಡಲಿಲ್ಲ ಎಂದು ಹೇಳಿದರು. ಇದಕ್ಕೆ ಕಾರಣ ಸರ್ಕಾರ ಅಲ್ಲ. ಅವರೇ ಕಾರಣರು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಇದರಿಂದ ಏನಾಗುತ್ತದೆ ಗೊತ್ತಾ?

ಶ್ರೀ ವಾಟಾಳ್ ನಾಗರಾಜ್ :- ಇಲಾಖೆ ಬಗ್ಗೆ ಉತ್ತರ ಕೊಡಿ. ಧರಣಿ ಮಾಡಿದ್ದರ ಬಗ್ಗೆ ಆಮೇಲೆ ಮಾತನಾಡೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವು ಹೀಗೆಲ್ಲಾ ಮಾತನಾಡಿದರೆ ನಾವು ಹೊರಗಡೆ ಹೋಗಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ :- ನೀವೇ ಒಬ್ಬರು ಮಂತ್ರಿಗಳು ಇನ್ನೊಬ್ಬ ಮಂತ್ರಿಗಳ ಮೇಲೆ ಭ್ರಷ್ಟಾಚಾರದ ಆರೋಪಗಳನ್ನು ಹೊರಿಸಿಕೊಂಡು ಡಿಮ್ಯಾಂಡ್ ಮೇಲೆ ರಿಪ್ಲೈ ಕೊಡುವುದು ಈ ರೀತಿನಾ?

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :- ಸರ್ಕಾರದಲ್ಲೇ ಸರಿ ಇಲ್ಲ, ನಮಗೆ ಹೇಳುತ್ತಿದ್ದಾರೆ.

(ಗೊಂದಲ)

ಮಾನ್ಯ ಸದಸ್ಯರು :- ಅವರು ಬಳಸಿದ ಪದವನ್ನು ಹಿಂತೆಗೆದುಕೊಳ್ಳಬೇಕು.

ಶ್ರೀ ಅರಗ ಜ್ಞಾನೇಂದ್ರ :- ಸರ್ಕಾರದಲ್ಲೇ ಸರಿಯಿಲ್ಲ, ನಮಗೆ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸ ಗೌಡ :- ನನ್ನ ನೋವು ಏನೆಂದರೆ....

ಅಧ್ಯಕ್ಷರು :- ಆಯಿತು.

ಶ್ರೀ ಕೆ. ಶ್ರೀನಿವಾಸ ಗೌಡ :- ಸರಿಯಾದಂತಹ ಸಮಯ ಅವರಿಗೆ ಸಿಗಲಿಲ್ಲ ಎಂದು ಸರ್ಕಾರವನ್ನು ಕೃಷಿ ಮಂತ್ರಿಗಳನ್ನು ಆಗಲಿ... ಸರ್ಕಾರದ ಯೋಜನೆಗಳ ಅನುಷ್ಠಾನದ ಬಗ್ಗೆಯಾಗಲಿ ಅವರು ಮಾತನಾಡಿ ಇನ್ನಷ್ಟು ಎಚ್ಚರಿಕೆ ಗಂಟೆ ಬಾರಿಸಬಹುದಿತ್ತು.

ಶ್ರೀ ವಾಟಾಳ್ ನಾಗರಾಜ್ :– ಇದೇ ಮಾತನ್ನು ಮುಂದುವರಿಸಿದರೆ ನಾವು ಇವರ ಭಾಷಣವನ್ನು ಬಹಿಷ್ಕರಿಸಬೇಕಾಗುತ್ತದೆ. ನಾವು ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಧರಣಿ ಮಾಡುವುದು ನಮ್ಮ ಹಕ್ಕು.

ಶ್ರೀ ಕೆ. ಶ್ರೀನಿವಾಸಗೌಡ :– ನಾನು ನಿಮಗೆ ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಅವರು ನಾವು ಎಲ್ಲಾ ಒಂದೇ.

ಶ್ರೀ ಹೆಚ್.ಡಿ. ಬಸವರಾಜ್ :– ವಿರೋಧ ಪಕ್ಷದಲ್ಲಿ ಭೇದ ಮಾಡುವುದು ಬೇಕಾಗಿಲ್ಲ. ಅವರಿಗೆ ಮಾತ್ರ ಬೇಕೆ? ಇವರಿಗೆ ಹಾಗಾದರೆ ಬೇಕಾಗಿಲ್ಲವಾ?

ಶ್ರೀ ಕೆ. ಶ್ರೀನಿವಾಸ ಗೌಡ :– ಏಕೆ ನೋವಾದ್ದು ಎಂದು ಹೇಳುತ್ತೇನೆ. ಬಹಳಷ್ಟು ಜನ ಸದಸ್ಯರು ಮಾತನಾಡಬೇಕು ಎಂದು ಹೇಳಿದಾಗ...

ಶ್ರೀ ವಾಟಾಳ್ ನಾಗರಾಜ್ :– ನಿಮಗೆ ಉತ್ತರ ಕೊಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ ತಾನೇ? ನೀವೇನು ಮಾತನಾಡಬೇಡಿ ಎಂದು ಹೇಳಲಿಲ್ಲವಲ್ಲಾ. ನೀವು ಮಾತನಾಡಿ.

ಅಧ್ಯಕ್ಷರು :– ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಏನೋ ಹೇಳುತ್ತಾರೆ. ಮಾನ್ಯ ಮಂತ್ರಿಗಳು ಹೇಳುತ್ತಾರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :– ಮೂರು ದಿವಸ ಈ ಸದನ ಯಾವ ಕಾರಣದಿಂದ ಮುಂದೆ ಹೋಯಿತು ಎಂಬ ಬಗ್ಗೆ ಒಂದು ಚರ್ಚೆ ಆಗಲಿ. ನೋಡೋಣ.

ಶ್ರೀ ವಾಟಾಳ್ ನಾಗರಾಜ್ :– ಅದು ಸರಿಯಲ್ಲ.

ಶ್ರೀ ಹೆಚ್.ಡಿ. ಬಸವರಾಜ್ :– ಧರಣಿ ಮಾಡುವುದು ನಮ್ಮ ಹಕ್ಕು.

ಶ್ರೀ ಕೆ. ಶ್ರೀನಿವಾಸ ಗೌಡ :– ಹಕ್ಕನ್ನು ನಾನು ಯಾವತ್ತೂ ಪ್ರಶ್ನೆ ಮಾಡುವವನಲ್ಲ. ಈ ಮನೆಯ 224 ಜನಕ್ಕೂ ಹಕ್ಕು ಇದೆ. ಆದರೆ ಅನ್ಯಾಯವಾಗಿ ಇನ್ನೂ ಅನೇಕ ವಿಷಯಗಳನ್ನು ನನ್ನ ಗಮನಕ್ಕೆ ತರುವಂತಹ ಅವಕಾಶಗಳು ನನಗೆ ತಪ್ಪಿ ಹೋಯಿತಲ್ಲಾ ಎಂಬ ಆ ನೋವಿನಿಂದ ಹೇಳಿದೆನೇ ವಿನಹ. ಬೇರೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್ :– ಅವರು ಹೇಳಿದ ಮಾತನ್ನು ಕಡತದಿಂದ ತೆಗೆಯಬೇಕು.

(ಗೊಂದಲ)

ಶ್ರೀ ಕೆ. ಶ್ರೀನಿವಾಸ ಗೌಡ :- ನನಗೆ ಇನ್ನಷ್ಟು ವಿಚಾರಗಳನ್ನು ಎನ್‌ಲೈಟೆನ್ ಮಾಡಬಹುದಿತ್ತು. ಇನ್ನಷ್ಟು ಜನ ಮಾತನಾಡುವ ಅವಕಾಶ ಇತ್ತು. ಅದನ್ನು ಮಾಡಲಿಲ್ಲ ಎಂಬುದು ನನ್ನ ನೋವು.

ಶ್ರೀ ವಾಟಾಳ್ ನಾಗರಾಜ್ :- ಇದು ಒಳ್ಳೆಯ ಸೂಚನೆ ಅಲ್ಲ. ವಿರೋಧ ಪಕ್ಷದವರು ಪೂರ್ತಿಯಾಗಿ ಅವರ ಉತ್ತರವನ್ನು ಕೇಳುತ್ತಿರುವಾಗ, ಉತ್ತರವನ್ನು ಕೃಷಿ ಇಲಾಖೆ ಬಗ್ಗೆ ಹೇಳಬೇಕೆ ಹೊರತು ಬೇರೆ ಅಲ್ಲ. ಅವರು ಕೆರೆಗಳನ್ನು ಶುರು ಮಾಡಿದರು, ಮುಂದೆ ರಸ್ತೆಗೆ ಬರುತ್ತಿದ್ದಾರೆಂದು ನಾನು ನೋಡುತ್ತಾ ಇದ್ದರೆ ಇವರು ನಮ್ಮ ಕಡೆಗೇ ಬರುತ್ತಿದ್ದಾರೆ. ಅರ್ಥ ಏನಿದೆ? ಇವರಿಗೆ ಬೇರೆ ದಾರಿಯೇ ಇಲ್ಲವೇ?

ಶ್ರೀ ಕೆ. ಶ್ರೀನಿವಾಸಗೌಡ :- ನಾನು ಸಬ್ಜೆಕ್ಟಿಗೆ ಬರುತ್ತೇನೆ, ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಒಂದು ನಿಮಿಷ ಯೀಲ್ಡ್ ಆಗುತ್ತೀರಾ?

ಶ್ರೀ ಕೆ. ಶ್ರೀನಿವಾಸಗೌಡ :- ಏನೋ ನಮ್ಮ ನಾಯಕರು ಹೇಳುತ್ತಿದ್ದಾರೆ. ನಮ್ಮ ಅಧ್ಯಕ್ಷರು ಹೇಳುತ್ತಿದ್ದಾರೆ, ಬಿಡಿ ಹೋಗಲಿ. ಅನೇಕ ವಿಷಯಗಳಲ್ಲಿ....

ಶ್ರೀ ಜೆ.ಸಿ. ಮಾಧುಸ್ವಾಮಿ :- ನಮ್ಮ ಅಧ್ಯಕ್ಷರು ಎಂದು ಅಸೆಂಬ್ಲಿಯಲ್ಲಿ ಹೇಳುತ್ತಾರಾ?

ಶ್ರೀ ವಾಟಾಳ್ ನಾಗರಾಜ್ :- ನಮ್ಮ ಅಧ್ಯಕ್ಷರು ಹೇಳುತ್ತಾರೆಂದು ಹೇಳಬಹುದಾ?

ಶ್ರೀ ಜೆ.ಸಿ. ಮಾಧುಸ್ವಾಮಿ :- ವಿಧಾನಸಭೆ ಅಧಿವೇಶನ ನಡೆಯುತ್ತಿದೆ. ಇಲ್ಲಿ ಹೇಳಬಹುದಾ?

ಶ್ರೀ ವಾಟಾಳ್ ನಾಗರಾಜ್ :- ಈ ಸದನದಲ್ಲಿ ನಮ್ಮ ಅಧ್ಯಕ್ಷರು ಹೇಳುತ್ತಾರೆ ಎಂದು ಹೇಳಬಹುದಾ?

ಶ್ರೀ ಜೆ.ಸಿ. ಮಾಧುಸ್ವಾಮಿ :- ನಮ್ಮ ಹಿರಿಯ ಮಂತ್ರಿಗಳು ಹೇಳುತ್ತಾರೆ ಎಂದು ಹೇಳಬೇಕೋ ಅಥವಾ ನಮ್ಮ ಅಧ್ಯಕ್ಷರು ಹೇಳುತ್ತಾರೆ ಎಂದು ಹೇಳಬೇಕೋ?

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಮಂತ್ರಿಗಳು, ಹಿರಿಯ ಮಂತ್ರಿಗಳು ಎಂದು ಹೇಳಿದರೆ ಒಪ್ಪಿಕೊಳ್ಳೋಣ. ನಮ್ಮ ಅಧ್ಯಕ್ಷರು ಎಂದು ಹೇಳಿ ಬಿಟ್ಟರೆ ಇವರಿಗೆ ಎಷ್ಟು ತಲೆ ಕೆಟ್ಟು ಹೋಗಿದೆ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಇದೇನು ಪಾರ್ಟಿ ಮೀಟಿಂಗಾ?

ಶ್ರೀ ವಾಟಾಳ್ ನಾಗರಾಜ್ :- ಎಂತಹ ಪರಿಸ್ಥಿತಿ ಇವರಿಗೆ ಆಗಿದೆ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಏನು ಪಾರ್ಟಿ ಮೀಟಿಂಗ್ ಮಾಡುತ್ತಿದ್ದೀರಾ? ಕಾಂಗ್ರೆಸ್ ಪಾರ್ಟಿ ಮೀಟಿಂಗ್ ಆಗುತ್ತಿದೆಯಾ?

ಶ್ರೀ ವಾಟಾಳ್ ನಾಗರಾಜ್ :– ಇದೇನಿದು?

ಶ್ರೀ ಎಸ್.ಎಸ್. ಪಾಟೀಲ್ :– ತಪ್ಪೇನಾಯಿತು? ಅಧ್ಯಕ್ಷರು ಆಗಿದ್ದಾರೆ, ಆದ್ದರಿಂದ ಹೇಳುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಕಡತಕ್ಕೆ ಹೋಗುತ್ತದೆ. ನಮ್ಮ ಅಧ್ಯಕ್ಷರು ಹೇಳುತ್ತಾರೆ ಎಂದು ಹೇಳಿದರೆ? ಮಾನ್ಯ ಖರ್ಗೆಯವರು ಬಗ್ಗೆ ಅವರು ಮಾನ್ಯ ಸಚಿವರು ಎಂದು ಬೇಕಾದರೆ ಹೇಳಲಿ. ನಮ್ಮ ಅಧ್ಯಕ್ಷರು ಎಂದು ಹೇಳಿದರೆ ಗತಿ ಏನು?

ಶ್ರೀ ಕೆ. ಶ್ರೀನಿವಾಸ ಗೌಡ :– ಮಾನ್ಯ ಸಚಿವರು ಹೇಳಿದರು ಬಿಡಿ. ನಮ್ಮ ಮಾನ್ಯ ಹಿರಿಯ ಸಚಿವರು ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ :– ನಾನು ಏಕೆ ಎದ್ದುನಿಂತುಕೊಂಡೆ ಅಂದರೆ ನೀವು ಡಿಮ್ಯಾಂಡ್ ಬಗ್ಗೆ ವಿರೋಧ ಪಕ್ಷದ ಸದಸ್ಯರಂತೆ ಭಾಷಣ ಮಾಡುತ್ತಿದ್ದೀರೋ ಅಥವಾ ನಾವು ಮಾತನಾಡಿದ್ದಕ್ಕೆ ಉತ್ತರ ಕೊಡುವುದಕ್ಕೆ ನಿಂತಿದ್ದೀರೋ ಎಂಬ ನಾನು ಕನ್‌ಫ್ಯೂಷನ್‌ನಲ್ಲಿ ನಾನು ಇದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೆ, ಇವತ್ತು ನೀರನ್ನು ಸಮರ್ಪಕವಾಗಿ ಬಳಸುವುದಕ್ಕೆ ನಾವು ವಿಫಲರಾಗಿದ್ದೇವೆ ಎಂದು ನಾನಂತೂ ಭಾವಿಸುತ್ತೇನೆ. ಇದಕ್ಕೆ ಆಗಲೇ ಮಾನ್ಯ ಮಾಧುಸ್ವಾಮಿಯವರು ಹಾಗೂ ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ನಿನ್ನೆ ಹೇಳಿದರು. ನಾವು ಈ ಸಾರಿ ಮಡಗಾಸ್ಕರ್ ಮೆಥೆಡ್ ಏರೋಬಿಕ್ ಮೆಥೆಡ್ ಮತ್ತು ಶ್ರೀ ಮೆಥೆಡ್‌ಗಳನ್ನು ತಂದಿದ್ದೇವೆ. ಕಡಿಮೆ ನೀರಿನಲ್ಲಿ ಭತ್ತವನ್ನೇ ಹೂಳಿ ಬೆಳೆ ತೆಗೆಯುತ್ತೇವೆ ನಾವು ಪೈರನ್ನೂ ಕೂಡ ಹೂಳುವುದಿಲ್ಲ. ಭತ್ತ ಹೂಳಿದರೆ 95 ಟಿಲ್ಲರ್ಸ್ ಬೆಳೆ ಬಂದಂತಹ ಪ್ರಯೋಗಗಳು ನಮ್ಮ ತಾಲ್ಲೂಕಿನಲ್ಲಿ ಆಗಿದೆ. ನಾವೆಲ್ಲಾ ಬೋರ್‌ವೆಲ್‌ನಲ್ಲಿ ನೀರು ತೆಗೆದರೆ, ಕೆಲವರು, ಮಳೆ ನೀರು ಆಶ್ರಿತದಿಂದ ಹೇಗೆ ಬೆಳೆ ಮಾಡಿದ್ದಾರೋ ಹಾಗೆ ಮಾಡಿ, ಗದ್ದೆಗಳಿಗೆ ಬಂದು ನೋಡಿ ಎಂದರು. ನಾನು ಅಲ್ಲಿಗೂ ಹೋಗಿ ನೀವು ಬೋರ್‌ವೆಲ್ ನೀರಿನಲ್ಲಿ ಬೆಳೆಯಬೇಡಿ ಎಂದು ಹೇಳಿದೆ. ನೀರು ಕಡಿಮೆ ಉಪಯೋಗಿಸುವುದರಿಂದ ಹತ್ತರಿಂದ ಹದಿನೈದು ಪರ್ಸೆಂಟ್ ಯೀಲ್ಡ್ ಜಾಸ್ತಿಯಾಗುತ್ತದೆ. ಮಂಡ್ಯ ತಾಲ್ಲೂಕಿನಲ್ಲಿ 250 ಎಕರೆ ಈ ಮಡಗಾಸ್ಕರ್ ಮೆಥಡ್‌ನಲ್ಲಿ ಹೋದ ಸಾರಿ ಅದನ್ನು ಮಾಡಿದ್ದೇವೆ.

ಮಾನ್ಯ ಸದಸ್ಯರಾದ ಶ್ರೀ ವಿಶ್ವೇಶ್ವರ ಹೆಗಡೆಯವರಿರಬಹುದು, ಅಥವಾ ಶ್ರೀ ಮಾನ್ಯ ಮಾಧುಸ್ವಾಮಿಯವರೇ ಹೇಳಿದರು. ಎಲ್ಲೆಲ್ಲಿ ನೀರು ಸಿಗುತ್ತದೆ, ಪ್ರತಿ ಹಳ್ಳಿಯಲ್ಲೂ ಕೂಡ ಮಡಗಾಸ್ಕರ್ ಮೆಥಡ್, ಏರೋಬಿಕ್ ಮೆಥಡ್‌ನಲ್ಲಿ ಗದ್ದೆ ಮಾಡಿಸುವಂತೆ ನಾನು ನಿನ್ನೆಯೇ ಸೂಚನೆ ಕೊಟ್ಟಿದ್ದೇನೆ. ಇನ್ನು ಮುಂದೆ ನೀರಿನ ಲಭ್ಯತೆ ನೋಡಿಕೊಂಡು ಪ್ರತಿ ಹಳ್ಳಿಯಲ್ಲೂ ಕೂಡ ಕನಿಷ್ಠ ಎರಡು ಎಕರೆ ಈ ಮಡಗಾಸ್ಕರ್ ಮೆಥಡ್ ಆಗಲಿ, ಏರೋಬಿಕ್ ಮೆಥಡ್ ಆಗಲಿ ಅಥವಾ ಶ್ರೀ ಮೆಥಡ್ ಆಗಲಿ ಮಾಡಬೇಕೆನ್ನುವಂಥ ಸೂಚನೆಯನ್ನು ಈಗಾಗಲೇ ನಾನು ನೀಡಿದ್ದೇನೆ. ಅಂತಹ ಒಳ್ಳೆಯ ವಿಷಯಗಳನ್ನು ನೀವು ಹೇಳಿದಾಗ ನನಗೂ ಕೂಡ ಅದರ ಕಡೆ ಗಮನ ಬಂತು. ನಾನು ಈಗಾಗಲೇ ನಾನು ನೀಡಿದ್ದೇನೆ. ಅಂತಹ ಒಳ್ಳೆಯ ವಿಷಯಗಳನ್ನು ನೀವು ಹೇಳಿದಾಗ ನನಗೂ ಕೂಡ ಅದರ ಕಡೆ ಗಮನ ಬಂತು. ನಾನು ಈಗಾಗಲೇ ಅದರ ಬಗ್ಗೆ ಸೂಚನೆ ಕೊಟ್ಟಿದ್ದೇನೆ ಎನ್ನುವುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಹಿಂದೆ ಒಂದು ಸಾರಿ ಇಸ್ರೇಲ್‌ಗೆ ಹೋಗಿದ್ದೆ. ಮಾನ್ಯ ಬೈರೇಗೌಡರು ಕೃಷಿ ಮಂತ್ರಿಗಳಾಗಿದ್ದಾಗ ಅವರ ಜೊತೆಯಲ್ಲಿ ಹೋಗಿದ್ದೆ. ಆಗ ತೋಟಗಾರಿಕೆ ಮಂತ್ರಿಗಳಾಗಿದ್ದ ಶ್ರೀ ಜಯಕುಮಾರ್ ಅವರೂ ಕೂಡ ಬಂದಿದ್ದರು. ನಾನು ಎಲ್ಲಿಗೆ ಹೋದರೂ ಇದನ್ನು ಹೆಚ್ಚಿಗೆ ಹೇಳುತ್ತೇನೆ. ನಾನು ಅಲ್ಲಿಗೆ ಹೋದಾಗ ಕೊಚ್ಚಿನ್‌ನಿಂದ ಹೋದಂಥ ಒಬ್ಬ ರೈತ ಕಳೆದ ಮೂವತ್ತು ವರ್ಷಗಳಿಂದಲೂ ಅಲ್ಲಿಯೇ ನೆಲೆಸಿ ನಮ್ಮನ್ನು ಸಂಜೆ 5.00, 5.30 ಗಂಟೆಗೆ ಟೀಗೆ ಕರೆದ. ಅಲ್ಲಿಗೆ ಹೋದಾಗ ನಾವು ಮೂರ್ನಾಲ್ಕು ಜನರು ಕುಳಿತಿದ್ದೆವು. ನಮ್ಮ ದೇಶದ ಕೊಚ್ಚಿನ್‌ನಿಂದ ಬಂದಿರುವ ನೀನು ಇಷ್ಟು ಸಂತೋಷದಿಂದಿದ್ದೀಯಲ್ಲಾ, ಏನು ಕಾರಣವೆಂದು ಕೇಳಿದೆ. ವ್ಯವಸಾಯದಲ್ಲಿ ನೀನು ಇಷ್ಟು ಲಾಭ ಮಾಡುವುದಕ್ಕೆ ಹೇಗಾಗುತ್ತದೆ ಎಂಬ ಮಾತನ್ನು ನಾನು ಕೇಳಿದೆ. ಆತ ಒಂದು ಮಾತನ್ನು ಹೇಳಿದ, "Mr.Gowda, one drop of water, one inch of land, I will earn one dollar" ಎಂದು ಆ ಮಾತನ್ನು ಕೇಳಿ ಇವೊತ್ತಿಗೂ ಕೂಡ ನನ್ನ ಕಿವಿಯಲ್ಲಿ ಜಿರ್ರ್ ಅನ್ನುತ್ತದೆ. ನಾವೂ ಕೂಡ ಒಂದು ಡ್ರಾಪ್ ನೀರನ್ನು ಒಂದು ಇಂಚು ಜಮೀನಿನಲ್ಲಿ 50 ರೂಪಾಯಿಯನ್ನು ಯಾವತ್ತು ಪಡೆಯುತ್ತೇವೋ ಅವತ್ತು ರೈತ ಸುಖವಾಗಿರುತ್ತಾನೆ. ಎಲ್ಲಿಯವರೆಗೂ ಆ ರೈತ ಆ ಮಟ್ಟದಲ್ಲಿ ಒಂದು ಇಂಚಿಗೆ ಐವತ್ತು ರೂಪಾಯಿಗಳಷ್ಟು ಸಂಪಾದನೆ ಮಾಡುವಷ್ಟು ಶಕ್ತಿ ಬರುವುದಿಲ್ಲವೋ, ಅಲ್ಲಿಯವರೆಗೂ ನಮ್ಮ ರೈತ ಸುಖವಾಗಿರಲಿಕ್ಕೆ ಸಾಧ್ಯವಿಲ್ಲ. ನಾನು ಜಪಾನ್ ದೇಶಕ್ಕೆ 15–20 ವರ್ಷಗಳ ಹಿಂದೆಯೇ ಯಾವುದೋ ಒಂದು ಟ್ರೈನಿಂಗ್‌ಗೆ ಹೋಗಿದ್ದೆ. ಒಂದು ಕಲ್ಲಂಗಡಿಯ ಬೆಲೆ ಇಲ್ಲಿ ನಮಗೆ ಮ್ಯಾಗ್ಜಿಮಮ್ 5 ರೂಪಾಯಿ. ಜಪಾನ್ ದೇಶದಲ್ಲಿ ಮೂರು ಸಾವಿರ ರೂಪಾಯಿ. ಇವೊತ್ತು ಬೇರೆ ದೇಶಗಳಲ್ಲಿ ರೈತರಿಗೆ ಕೊಡುವಂಥ ಪ್ರೋತ್ಸಾಹ ನಮ್ಮ

ದೇಶದಲ್ಲಿ ಹೆಚ್ಚಿಗೆ ಕೊಡುತ್ತಾ ಬರಲಿಲ್ಲ. ಇದನ್ನು ನಾನು ಒಪ್ಪಿಯೇ ಹೇಳುತ್ತೇನೆ. ಏಕೆಂದರೆ, ಇವೊತ್ತು ರೈತನಿಗೆ ಆದ್ಯತೆಗಳಲ್ಲಿ ಮಾರ್ಕೆಟ್ ಎಷ್ಟು ಮುಖ್ಯವೋ ನೀರು ಎಷ್ಟು ಮುಖ್ಯವೋ ಕಡಿಮೆ ಬಡ್ಡಿಯಲ್ಲಿ ಸಾಲ ಕೊಡುವುದು ಎಷ್ಟು ಮುಖ್ಯವೋ ಇವು ಮೂರಕ್ಕೆ ನಾವು ಇನ್ನೆಷ್ಟು ಆದ್ಯತೆಗಳನ್ನು ಕೊಡಬೇಕೆನ್ನುವುದೇ ನನ್ನ ಉದ್ದೇಶವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಈ ದಿಕ್ಕಿನಲ್ಲಿ ನಾವು ನೀರನ್ನು ಸಮರ್ಪಕವಾಗಿ ಬಳಸುವಂಥ ಕೆಲಸಗಳನ್ನು ಮಾಡಬೇಕೆಂಬ ಮಾತನ್ನು ಈ ಸಮಯದಲ್ಲಿ ಹೇಳಿ, ಇವೊತ್ತು ನಮ್ಮ ಆಹಾರಧಾನ್ಯಗಳು. ನಿನ್ನೆ ಕೆಲವರು ಮಾತನಾಡಿದಾಗ ಆಹಾರಧಾನ್ಯಗಳ ಗುರಿ ಎಷ್ಟಿದೆ ಎಂದು ಕೇಳಿದರು. ನಮ್ಮ ಆಹಾರಧಾನ್ಯದ ಗುರಿ 2005–06ಕ್ಕೆ 82.10 ಲಕ್ಷ ಟನ್ ಇದೆ. ಎಣ್ಣೆಕಾಳು 12 ಲಕ್ಷ ಟನ್ ಬೆಳೆಯಬೇಕೆಂದಿದೆ ಗುರಿ. ಹತ್ತಿ 5.14 ಲಕ್ಷ ಭೇಲ್‌ಗಳನ್ನು ಬೆಳೆಯಬೇಕೆಂದಿದ್ದೇವೆ. ಕಬ್ಬು 260 ಲಕ್ಷ ಟನ್ ಬೆಳೆಯಬೇಕೆಂದಿದ್ದೇವೆ. ತಂಬಾಕು 0.87 ಲಕ್ಷ ಟನ್‌ಗಳಷ್ಟು ಬೆಳೆಯಬೇಕೆಂದಿದ್ದೇವೆ. ತಂಬಾಕನ್ನು ಏಕೆ ನಾನು ಇದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆಂದರೆ, ನಮ್ಮಲ್ಲಿ ಹೆಗ್ಗಡದೇವನಕೋಟೆಯಿಂದ ಹಾವೇರಿವರೆಗೂ 247 ಕಿಲೋಮೀಟರ್ 35 ಕಿಲೋಮೀಟರ್ ಅಡ್ಡ ಅಗಲ ಬೆಳೆಯುವಂಥ ಈ ಹೊಗೆಸೊಪ್ಪು. ಇಡೀ ಪ್ರಪಂಚದಲ್ಲೇ ಬೇಡಿಕೆ ಇರುವಂಥ ಹೊಗೆಸೊಪ್ಪು ಆಗಿದೆ. ಇದರಲ್ಲಿ ನಿಕೋಟಿನ್ ಬಹಳ ಕಡಿಮೆ ಅಂಶ ಇರುವುದರಿಂದ, ಇವೊತ್ತು ಎಲ್ಲಿ ನೋಡಿದರೂ ಕೂಡ ಆ ಹೊಗೆಸೊಪ್ಪಿಗಾಗಿ ಬರುತ್ತಾರೆ. ಅದಕ್ಕೆ ಅನೇಕ ರಾಜಕೀಯ ಕಾರಣಗಳಿವೆ. ಪಕ್ಕದ ರಾಜ್ಯದಲ್ಲಿ ಟೊಬ್ಯಾಕೋ ಬೋರ್ಡ್ ಆಗಿ ನಾನು ಮಂತ್ರಿಯಾದ ಮೇಲೆ ಕಡೆಗೆ ನಮ್ಮ ರಾಮಸ್ವಾಮಿಯವರು ಇರಬೇಕು. ಅವರು ನನಗೆ ಬಹಳಷ್ಟು ಮಾಹಿತಿ ಕೊಟ್ಟಾದ ಮೇಲೆ ಹೋದ ಸಾರಿ 73,000 ಲಕ್ಷ ಕೆಜಿಗಳಷ್ಟು ಬೆಳೆದು ಹತ್ತಿರ ಹತ್ತಿರ 90 ಲಕ್ಷ ಮಿಲಿಯನ್ ಕೆಜಿಗಳನ್ನು ಉತ್ಪತ್ತಿ ಮಾಡಿದ್ದೇವೆ. ನಮಗೆ ಅದು ಹಾಟ್ ಕೇಕ್. ಒಳ್ಳೆಯ ರೇಟ್ ಸಿಗುತ್ತದೆ. ಆದರೆ, ನಮ್ಮಲ್ಲಿ ಬೆಳೆದಿದ್ದನ್ನು ಆ ಟೊಬ್ಯಾಕೋ ಬೋರ್ಡ್‌ನವರು ಒಪ್ಪುವುದಿಲ್ಲ. ಇವೆಲ್ಲಾ ಒಂದಕ್ಕೊಂದು ಕಾರಣಗಳು. ಈ ಸಾರಿ ಇನ್ನಷ್ಟು ಜಾಸ್ತಿ ಬೇಕಿರುವುದರಿಂದ ಈ ಭಾಗದಲ್ಲಿ ಬೆಳೆಯುತ್ತೇವೆ. ಆ ಲೈಟ್ ಸಾಯಿಲ್‌ನಲ್ಲಿ ಬೆಳೆಯುವಂಥ ಹೊಗೆಸೊಪ್ಪನ್ನು ಇಡೀ ಪ್ರಪಂಚದಲ್ಲಿ ಕ್ಯಾನ್ಸರ್‌ಫ್ರೀ ಇರುವಂತಹ ಹೊಗೆಸೊಪ್ಪು ಎಂದು ಹೇಳುತ್ತಾರೆ. ಇಂತಹ ಹೊಗೆಸೊಪ್ಪನ್ನು ಇಡೀ ಪ್ರಪಂಚದಲ್ಲೇ ಎಲ್ಲೂ ಬೆಳೆಯುವುದಿಲ್ಲ. ಇಡೀ ನಮ್ಮ ರಾಜ್ಯದಲ್ಲಿ ಅದರಲ್ಲೂ ಹೆಗ್ಗಡದೇವನಕೋಟೆಯಿಂದ ಹಾವೇರಿವರೆಗೂ ಈ ಲೈಟ್ ಸಾಯಿಲ್‌ನಲ್ಲಿ ಬೆಳೆಯುವಂಥ ಹೊಗೆಸೊಪ್ಪೆಂದು ಹೇಳಲು ನಾನು ಇಚ್ಛೆಪಡುತ್ತೇನೆ. ಅಧ್ಯಕ್ಷರೆ, ಮಳೆ ಕೂಡ ಈ ಸಾರಿ 2005–06ರಲ್ಲಿ ನಮಗೆ ಸಾಮಾನ್ಯ 306 ಬರಬೇಕಾಗಿತ್ತು. ವಾಸ್ತವಿಕ 346 ಇರಬೇಕಾಗಿತ್ತು. ಹಿಂದಿನ ವರ್ಷ 434 ಮಳೆಯಾಗಿತ್ತು. ಜುಲೈ

11ರವರೆಗೂ ಸಾಮಾನ್ಯವಾಗಿ ಬಿತ್ತನೆಯಾಗಬೇಕಾಗಿದ್ದುದು ನಮ್ಮ ಅಂದಾಜುಗಳ ಪ್ರಕಾರ 1 ಲಕ್ಷ ಹೆಕ್ಟೇರ್ ಅನ್ನು ನಾವು ಬಿತ್ತನೆ ಮಾಡಬೇಕಾಗಿತ್ತು. ಆದರೆ ನಾವು ಬಿತ್ತನೆ ಮಾಡಿರುವುದು ಕೇವಲ 23.78 ಲಕ್ಷ ಹೆಕ್ಟೇರ್. ಇದೇ ಹಿಂದಿನ ವರ್ಷ 37 ಲಕ್ಷ 11 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿದ್ದೆವು ಎನ್ನುವುದನ್ನು ಈ ಮನೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಾ, ಇವೊತ್ತು ಏನು ನಾವು ಈ ಬೆಳೆಗಳನ್ನು ಬೆಳೆಯುತ್ತಿದ್ದೇವೆ, ಇದಕ್ಕೆಲ್ಲಾ ನಮ್ಮ ಆಯವ್ಯಯದಲ್ಲಿ ಏನಿದೆ ಎನ್ನುವಂತಾದ್ದನ್ನೂ ಕೂಡ ನಾನು ಈ ಮನೆಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. 2005–06ನೇ ಸಾಲಿನಲ್ಲಿ ಕೃಷಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಹಾಗೂ ಒದಗಿಸಿದ ಅನುದಾನ 370 ಕೋಟಿ 61 ಲಕ್ಷ 79 ಸಾವಿರ ರೂ.ಗಳ ಇದರಲ್ಲಿ ರಾಜ್ಯ ವಲಯ ಶೇ.31 ಕೋಟಿ 181 ಲಕ್ಷ ರೂ.ಗಳು. ಜಿಲ್ಲಾ ವಲಯಕ್ಕೆ 5880 ಲಕ್ಷ ರೂ.ಗಳು ಇದು ಇವೊತ್ತು ನಮ್ಮ ಬಜೆಟ್. ಇದರಲ್ಲಿ ನಿಮಗೆ ಬೇಕಾದರೆ ಯಾವ್ಯಾವುದಕ್ಕೆ ಎಷ್ಟೆಷ್ಟು ಇಟ್ಟಿದ್ದೇವೆಂದು ಹೇಳಬೇಕಾದರೆ, ಕೃಷಿ ನಿರ್ದೇಶನಾಲಯಕ್ಕೆ 506 ಲಕ್ಷ ರೂ.ಗಳು. ಬೀಜಗಳ ಪೂರೈಕೆ ಬಗ್ಗೆ ನಿಮಗೆ ಮಾಹಿತಿ ಬೇಕೆಂದರೆ ಕೊಡುತ್ತೇನೆ. ಏಕೆಂದರೆ, ನಮಗೆ ಇವೊತ್ತು ಎಷ್ಟು ಟೋಟಲ್ ಹಣ ಇಟ್ಟಿದ್ದಾರೆ ಎನ್ನುವುದರ ಬಗ್ಗೆ ನಾನು ಈ ಮನೆಯಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಾ, ಅವುಗಳಿಗೆ ಒದಗಿಸಿದ ಅನುದಾನ, ಕೃಷಿ ಕ್ಷೇತ್ರ ಮತ್ತು ಅಭಿವೃದ್ಧಿಗೆ 26.58 ಲಕ್ಷ ರೂ.ಗಳು ಹನಿ ನೀರಾವರಿಗೆ 709.89 ಲಕ್ಷ ರೂ.ಗಳು. ಬೇಸಾಯ ಸಂಬಂಧಿತ ಚಟುವಟಿಕೆಗಳಿಗೆ 387 ಲಕ್ಷ ರೂ.ಗಳು. ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆಗೆ 302 ಲಕ್ಷ ರೂ.ಗಳು ಎಣ್ಣೆ ಬೀಜಗಳ ಉತ್ಪತ್ತಿ ಯೋಜನೆಗೆ 1138 ಲಕ್ಷ ರೂ.ಗಳು ನೂತನ ವಿಸ್ತೃತ ವಿವರಣಾ ಮಾದರಿ ಅಡಿಯಲ್ಲಿ ಕೃಷಿ ಅಭಿವೃದ್ಧಿ work plan ಗೆ 1598 ಲಕ್ಷ ರೂ.ಗಳು. ಒಟ್ಟು 5451 ಲಕ್ಷ ರೂಪಾಯಿಗಳನ್ನು ಇದಕ್ಕೆ ಒದಗಿಸಿದ್ದೇವೆ. ಇಸವಿಯಿಂದ ತಂದೆವು. ಮಾನ್ಯ ಅಧ್ಯಕ್ಷರೆ, ಈ ಬೆಳೆ ವಿಮೆಯಲ್ಲಿ ಇಲ್ಲಿ ಯಾವ್ಯಾವುದಕ್ಕೆ ಎಷ್ಟೆಷ್ಟು ಎನ್ನುವುದಕ್ಕಿಂತ ಹೆಚ್ಚಿಗೆ ನಾವು ನಮ್ಮ ಈ ಬೆಳೆ ವಿಮೆ ನಮ್ಮ ರಾಜ್ಯಕ್ಕೆ ಇವೊತ್ತಿಗೆ 939 ಕೋಟಿ ರೂಪಾಯಿ ಹಣವನ್ನು ನಾವು 2001 ರಿಂದ ಈ ವರ್ಷದವರೆಗೂ ಕೊಟ್ಟಿದ್ದೇವೆ. ಯಾರಿಗೂ ಬಾಕಿ ಇಲ್ಲ. ಆದರೆ, ಅದರಲ್ಲಿ 39 ಲಕ್ಷ ರೈತರು ಪಾಲ್ಗೊಂಡಿದ್ದರು. ಇದರಲ್ಲಿ 17.33 ಲಕ್ಷ ರೈತರು ಬೆಳೆ ವಿಮೆ ನಷ್ಟ ಪರಿಹಾರ ಪಡೆದಿರುವುದಿಲ್ಲ. ಬಹುಶಃ ಅದು ಥ್ರೆಶೋಲ್ಡ್ ಯೀಲ್ಡ್ ಇರಬಹುದು, ಕೆಲವರು ಏನು ಮಾಡಿದ್ದಾರೆಂದರೆ, ನಿನ್ನೆ ಕೆಲವರು ಧಾರವಾಡ ತಾಲ್ಲೂಕಿನವರು ಬಂದಿದ್ದರು. ನಮ್ಮ ಮಾನ್ಯ ಜಗದೀಶ್ ಶೆಟ್ಟರ್‌ರವರು ಕರೆದುಕೊಂಡು ಬಂದಿದ್ದರು. ಅವರು ನಾಲ್ಕು ಹೆಕ್ಟೇರ್‌ನಲ್ಲಿ ಶೇಂಗಾ ಹಾಕಿದ್ದಾರೆ. ಒಂದು ಎಕರೆಗೆ ಮಾತ್ರ ಪ್ರೀಮಿಯಂ ಕಟ್ಟಿದ್ದಾರೆ. ಅವರ ಲೆಕ್ಕದಲ್ಲಿ ನಾನು ನಾಲ್ಕು ಎಕರೆಗೆ ಶೇಂಗಾ ಹಾಕಿದ್ದೇನೆ ಎಂದಾಗ ಅವರು ಪ್ರೀಮಿಯಂ ಕಟ್ಟಿರುವುದು

ಒಂದು ಎಕರೆಗೆ. ಈ ತರಹ ನ್ಯೂನತೆಗಳು ಇದ್ದುದ್ದರಿಂದ ಸುಮಾರು 17.33 ಲಕ್ಷ ರೈತರಿಗೆ ಬೆಳೆ ವಿಮೆ ಕೊಡದೆ ಹಾಗೆ ಆಗಿದೆ. ಇದನ್ನು ನಾನು ಈ ಮನೆಯ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಾ, ಇವತ್ತು ಏನು ಕೃಷಿ ಆಧಾರಿತ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ಕೊಡಬೇಕಾಗಿತ್ತು ಅದನ್ನೂ ಕೂಡುವುದಕ್ಕೆ ಈ ಸಾರಿ ಮಾರುಕಟ್ಟೆ ಇಂಟರ್‌ವೆನ್‌ಷನ್‌ನಲ್ಲಿ ಕೂಡ ಇಳಿದಿದ್ದೇವೆ. ನಿಮಗೆಲ್ಲಾ ಗೊತ್ತು, ಹೋದ ಸಾರಿ ನಮ್ಮ ವಿರೋದ ಪಕ್ಷದ ನಾಯಕರು ಹೇಳುತ್ತಿದ್ದರು, ನಮಗೆ ಭತ್ತವನ್ನೆ ತೆಗೆದಿಲ್ಲವೆಂದು. ನಾವು 187 ಕೋಟಿ ರೂಪಾಯಿಗಳಷ್ಟು ಮುಸುಕಿನ ಜೋಳವನ್ನು ಕೊಟ್ಟಿದ್ದೇವೆ. ನಿಮ್ಮಲ್ಲೇನೊ ಲೇಟಾಗಿದೆ ಎಂದು ಅದರ ಮಾಹಿತಿಯನ್ನು ನಿಮಗೆ ಕಳುಹಿಸಿ ಎಂದು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿದೆ, ಇವತ್ತು ಇದೂ ಕೂಡ ಬಹಳ ಮುಖ್ಯವಾಗಿರುವುದರಿಂದ ಸರ್ಕಾರ ಆ ಕೆಲಸವನ್ನು ಮಾಡಿದೆ ಎನ್ನುವುದನ್ನು ಹೇಳುತ್ತಾ, ಇವತ್ತು ಮಡಗಾಸ್ಕರ್ ಬಗ್ಗೆ ಮತ್ತೊಮ್ಮೆ ಹೇಳುತ್ತೇನೆ, ದಯವಿಟ್ಟು ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಇಡೀ 224 ಜನ ಶಾಸಕರ ಕ್ಷೇತ್ರದಲ್ಲಿ ನೀರಿದ್ದರೆ ಈ ಮಡಗಾಸ್ಕರ್, ಏರೋಬಿಕ್ ಮತ್ತು ಶ್ರೀ method ಗಳನ್ನು ಉಪಯೋಗಿಸಿ ಬೆಳೆ ಬೆಳೆಯುವಂಥ ಕೆಲಸ ಮಾಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ನಿನ್ನೆ ಮಾನ್ಯ ನಮ್ಮ ವಾಟಾಳ್‌ನಾಗರಾಜ್‌ರವರು ಹೇಳಿದರು, ಬೀಜವನ್ನು ಆ ಗ್ರಾಮದಲ್ಲೇ ಬೆಳೆದು ಆ ರೈತನು ಇಟ್ಟುಕೊಳ್ಳುವ ಪದ್ಧತಿ ಇತ್ತು, ಈಗ ಆ ಪದ್ಧತಿ ಇಲ್ಲ ಎಂದು. ಅದಕ್ಕೆ ಈಗಾಗಲೇ ನಮ್ಮಲ್ಲಿ ಜಿ.ಎಸ್.ಎಸ್. ಸಂಸ್ಥೆ ಮತ್ತು ಮೈಸೂರಿನ ಜಿಲ್ಲಾಪಂಚಾಯಿತಿ ಸೇರಿ ನಮಗೆ ಕೇಂದ್ರ ಸರ್ಕಾರದಿಂದ 75 ಮತ್ತು 25 ಪರ್‌ಸೆಂಟ್‌ನಲ್ಲಿ 21 ಜಿಲ್ಲೆಗಳಲ್ಲಿ ಈ ಏನು own your own seed ಅಂದರೆ seed villages ಎಂದು ಮಾಡಿ ಅಲ್ಲಿ ಬೆಳೆಯುವಂಥ ಸೀಡನ್ನು ಆ ಸುತ್ತಮುತ್ತಲಿನ ಗ್ರಾಮಗಳಲ್ಲೆ ಕೊಟ್ಟು ಬಿತ್ತನೆ ಮಾಡುವಂಥ ಪದ್ಧತಿಯನ್ನು ನಾವು ಜಾರಿಗೆ ತಂದಿದ್ದೇವೆ. ಇದಕ್ಕಾಗಿ ಸುಮಾರು 14.85 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ಕೂಡ ನಾನು ಹೇಳಲು ಇಚ್ಛೆಪಡುತ್ತೇನೆ. ಇವತ್ತು ನಮ್ಮ ಬಿತ್ತನೆ ಬೀಜ, ಬಹಳಷ್ಟು ಜನ ಬಿತ್ತನೆ ಬೀಜದ ವಿಷಯ ಹೇಳಿದರು. ನಮ್ಮ ರಾಜ್ಯದಲ್ಲಿ ಬಿತ್ತನೆ ಬೀಜ ಬೇಕಾಗಿರುವುದು 5 ಲಕ್ಷದ 55 ಸಾವಿರದ 380 ಕ್ವಿಂಟಾಲು ಬೇಡಿಕೆಯ ಅಂದಾಜು ಮಾಡಿದ್ದೇವೆ. ಇವತ್ತು ಆರು ಸಂಸ್ಥೆಗಳಿಗೆ 83 ಖಾಸಗಿ ಸಂಸ್ಥೆಗಳ ಮೂಲಕ ಸುಮಾರು 9 ಲಕ್ಷದ 90 ಸಾವಿರದ 290 ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ವಿತರಣೆಮಾಡುವುದಕ್ಕೆ ರೆಡಿಯಾಗಿದೆ. ಇವತ್ತು 2005ರ ಅಂತ್ಯಕ್ಕೆ 1 ಲಕ್ಷದ 76 ಸಾವಿರದ 237 ಕ್ವಿಂಟಾಲ್ ಬೀಜವನ್ನು ರೈತರಿಗೆ ಕೊಟ್ಟಿದ್ದೇವೆ. ಇವತ್ತು ನಮ್ಮ ಹತ್ತಿರ ಬೀಜದ ಕೊರತೆ ಇಲ್ಲ. ಬೀಜ ಇದೆ ಎನ್ನುವುದನ್ನು ಕೂಡ ನಾನು ಹೇಳಲು ಇಚ್ಛೆಪಡುತ್ತೇನೆ. ಹಿಂದೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ 32 ಕೋಟಿ ರೂಪಾಯಿಗಳನ್ನು ನಮ್ಮ finance minister subsidy ಗೆ

ಕೊಟ್ಟಿದ್ದರು. ಅದು ಸಾಲದು ಎಂದು, ಆಗ 25 ಪರ್‌ಸೆಂಟ್ ಸಬ್ಸಿಡಿಯನ್ನು ಡಿಕ್ಲೇರ್ ಮಾಡಿದ್ದೆವು. ಅದು ಸಾಲದು ಎಂದು ನಾನು ಕ್ಯಾಬಿನೇಟ್‌ನಲ್ಲಿ ತಂದಮೇಲೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪಮುಖ್ಯಮಂತ್ರಿಗಳು ಒಪ್ಪಿಕೊಂಡು ಇವತ್ತು ನಮಗೆ ಇನ್ನೂ 20 ಕೋಟಿ ರೂಪಾಯಿಗಳನ್ನು ಕೊಟ್ಟು ಸುಮಾರು 52 ಕೋಟಿ ರೂಪಾಯಿ ಹಣ ಕೊಟ್ಟಿದ್ದರಿಂದ ಇಡೀ ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನಾವು ಐವತ್ತು ಪರ್‌ಸೆಂಟ್ ಸಬ್ಸಿಡಿಯನ್ನು ಕೊಡುವಂಥ ಕೆಲಸ ಮಾಡಿದ್ದೇವೆ. ಸಂಕಷ್ಟದಲ್ಲಿರುವಂಥ ರೈತರಿಗೆ 176 ತಾಲ್ಲೂಕುಗಳಲ್ಲೂ ಕೂಡ ನಾವು ಈ ಯೋಜನೆಯನ್ನು ತಂದಿದ್ದೇವೆ ಎನ್ನುವಂಥಾದ್ದನ್ನು ನಾನು ಈ ಸಮಯದಲ್ಲಿ ತಮ್ಮ ಮೂಲಕ ಈ ವಿಧಾನಸಭೆಗೆ ಹೇಳಲು ಇಚ್ಛೆಪಡುತ್ತೇನೆ. ಕಡ್ಲೇಕಾಯಿಗೆ ಸ್ವಲ್ಪ ಕಡಿಮೆ ಸಬ್ಸಿಡಿ ಇದೆ ಎಂದು ಹೇಳಿದ್ದಾರೆ. ಹೋದ ಸಾರಿ ಏನು ಕೇಂದ್ರ ಸರ್ಕಾರದಿಂದ ಹಣ ಬಂತು ಆಗ ಒಂದು ಹೆಕ್ಟೇರ್‌ಗೆ ಒಂದು ಸಾವಿರ ರೂಪಾಯಿ ಎಂದು ಏನು ಕೊಡುತ್ತಿದ್ದೆವೋ ಅದೇ ರೀತಿ ಅದಕ್ಕೂ ಕೂಡ ಕೊಡುತ್ತಿದ್ದೇವೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಿ, ರೈತ ಸಂಪರ್ಕ ಕೇಂದ್ರಗಳ ಮೂಲಕವೇ ಇವೆಲ್ಲ ಹೆಚ್ಚಿಗೆ ಕೊಡುವಂಥ ಕೆಲಸ ಮಾಡಿದ್ದೇವೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಹಾಗೆಯೇ ಬೀಜ ವಿತರಣೆ ಮಾಡಬೇಕಾದರೆ ನಮ್ಮ ಇಲಾಖೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಕೊಪ್ಪಳ ಜಿಲ್ಲೆಯಲ್ಲಿ ಇಳಕಲ್‌ಗುಡ ರೈತ ಸಂಪರ್ಕ ಕೇಂದ್ರದಿಂದ ಆಗ್ರೊ ಸಂಸ್ಥೆಯವರು 7701 ತಳಿ ಹಾಗೂ ಶ್ರೀರಾಂ ಬಯೋಸೀಡ್ ಸಂಸ್ಥೆಯವರು, ಎಸ್.ಆರ್.ಬಿ.ಎಸ್. 8421 ತಳಿ ಬಿತ್ತನೆ ಬೀಜವನ್ನು ಅಕ್ರಮಕ್ಕಾಗಿ 18 ಮತ್ತು 12 ರೂಪಾಯಿಗಳ ರಿಯಾಯಿತಿ ದರದಲ್ಲಿ ಮಾರಾಟ ಮಾಡಿದ್ದರು. ಈ ಬಿತ್ತನೆ ಬೀಜವನ್ನು ಹತ್ತು ಜನ ರೈತರು ಕೊಂಡಿದ್ದು ದಿನಾಂಕ 25.06.2005 ರಂದು ಟಾಕಾಗಳಲಿ ನೋಡಿದಾಗ ಮೊಳಕೆ ಉತ್ತಮವಾಗಿ ಬಂದಿರಲಿಲ್ಲ. ಅದು ಏಕೆಂದರೆ ಬಿತ್ತನೆ ಮಾಡುತ್ತಲೇ ಹೆಚ್ಚಿಗೆ ಮಳೆಯಾಗಿದ್ದರಿಂದ ಅಲ್ಲಿ ಮೊಳಕೆ ಬರಲಿಲ್ಲವೆಂದು ತಿಳಿದುಬಂತು. ಇದನ್ನು ಬಿಟ್ಟು ಬೇರೆ ಯಾವುದೇ ಬಿತ್ತನೆ ಬೀಜ ಕಂಪ್ಲೆಂಟ್ ಬಂದಿಲ್ಲವೆಂಬ ಮಾತನ್ನು ನಾನು ಈ ಸಮಯದಲ್ಲಿ ಹೇಳಲು ಇಚ್ಛೆ ಮಾಡುತ್ತೇನೆ. ಇನ್ನು ಕೆಲವು ಕಂಪನಿಗಳು ನಾವು ಸಬ್ಸಿಡಿ ಡಿಕ್ಲೇರ್ ಮಾಡಿದಮೇಲೆ ನಮಗೆ ಒಂದು ರೇಟು ಹೇಳಿ ಅವರು ಮಾರುವಾಗ ಕಡಿಮೆ ದರದಲ್ಲಿ ಮಾರುತ್ತಾರೆ ಎಂಬ ಕಂಪ್ಲೆಂಟ್ಸ್ ಬಂದಿತ್ತು. ಅವರ ಮೇಲೂ ಕೂಡ ಕ್ರಮ ಜರುಗಿಸುವಂಥ ಕೆಲಸ ಮಾಡಿದ್ದೇವೆ ಎಂಬ ಮಾತನ್ನು ನಾನು ಈ ಸಮಯದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇವತ್ತು ಕರ್ನಾಟಕ ಬೀಜ ನಿಗಮ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂಬ ನಮ್ಮ ಮಾನ್ಯ ವಿಶ್ವೇಶ್ವರ ಹೆಗಡೆಯವರು ಪ್ರಸ್ತಾಪ ಮಾಡಿದ್ದರು. ಇದು ನಮ್ಮ ರಾಜ್ಯ ಬೀಜ ನಿಗಮ, ನಮ್ಮ ಸರ್ಕಾರದ ಒಡೆತನದಲ್ಲಿರುವಂಥ ಬೀಜ ನಿಗಮ. ಇವತ್ತು ಅದು

ಪ್ರತಿಶತ 35 ರಷ್ಟು ಬೀಜಗಳನ್ನು ಇಲ್ಲಿ ವಿತರಣೆ ಮಾಡುತ್ತಿದೆ. ಹಾಗಾಗಿ ಅಲ್ಲಿ ಏನು ಸ್ವಲ್ಪ ಬೆಲೆಗಳಲ್ಲಿ ವ್ಯತ್ಯಾಸವಿದೆ ಎನ್ನುವುದು ನನ್ನ ಗಮನಕ್ಕೆ ಬಂದಿತ್ತು ಆಗಿಂದಾಗ್ಯೆ ಅದನ್ನು ನಾನೇ ಸ್ವತಃ ಕರೆದು ಅದನ್ನು ಚರ್ಚೆ ಮಾಡಿ ಎಲ್ಲೆಲ್ಲಿ ಬೆಲೆ ಇಳಿಸಬೇಕೋ ಅದನ್ನೆಲ್ಲಾ ಇಳಿಸಿ ಅವರ ಹೋಲಿಕೆಗಳನ್ನು ತರುವಂಥ ಕೆಲಸ ಮಾಡಿದ್ದೇನೆ ಎನ್ನುವ ಮಾತನ್ನು ಹೇಳುತ್ತಾ. ಇವತ್ತು ಕೆಲವು ನಕಲಿ ಗೊಬ್ಬರಗಳನ್ನು ಮಾರಾಟ ಮಾಡುತ್ತಿರುವುದು ತಿಳಿದುಬಂದಿದೆ. ನಾನು ಆಗಲೇ ಹೇಳಿದೆ, ಕೋಲಾರ ಮತ್ತು ಪಾವಗಡ ತಾಲ್ಲೂಕುಗಳಲ್ಲಿ ಒಂದು ಕಂಪನಿ ಮೂಲಕ ಕಳಪೆ ಗೊಬ್ಬರ ಮಾಡುವಂಥ ಕೆಲಸ ನಡೆಯುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ನಿನ್ನೆ ಕೋಲಾರದಲ್ಲಿ ಇಬ್ಬರನ್ನು ಅರೆಸ್ಟ್ ಮಾಡಿದ್ದೇವೆ. ಹಾವೇರಿಯಲ್ಲಿ ಗೊಬ್ಬರ ಇಲ್ಲವೆಂದು ಹೇಳುತ್ತಿದ್ದರು. ಒಂದು ಕಷ್ಟ ಏನಾಗಿದೆಯೆಂದರೆ, ಫಾಸ್‌ಆಸಿಡ್. ಏಕೆಂದರೆ ಕಾಂಪ್ಲೆಕ್ಸ್ ಫರ್ಟಿಲೈಜರ್ಸ್ ವಿಷಯದಲ್ಲಿ ನನಗೂ ಕೂಡ ಸ್ವಲ್ಪ ಅನುಭವ ಇದೆ. ನಾನು ಆ ಕ್ಷೇತ್ರದಲ್ಲಿ ಬಹಳಷ್ಟು ವರ್ಷದಿಂದ ಕೆಲಸ ಮಾಡಿದ್ದೇನೆ. ಅಲ್ಲಿ ಫಾಸ್‌ಆಸಿಡ್‌ನ ರೇಟನ್ನು ಫಿಕ್ಸ್ ಮಾಡುವುದು ಕೇಂದ್ರ ಸರ್ಕಾರ. ಅದು ಸ್ವಲ್ಪ ಡಿಲೇಯಾಗಿರುವುದರಿಂದ ಡಿ.ಎ.ಪಿ; ಎನ್.ಪಿ.ಕೆ. ಗಳು ಸ್ವಲ್ಪ ತೊಂದರೆಯಾಗಿದೆ. ನಾನು ನನ್ನದೇ ಆದ influence ನ್ನು ಉಪಯೋಗಿಸಿ ನಮ್ಮ ರಾಜ್ಯಕ್ಕೆ ಎಲ್ಲೂ ಆ ತರಹ ತೊಂದರೆ ಆಗದಂತೆ ಇವತ್ತು ತಾನೆ ಗಮನಹರಿಸಿದ್ದರಿಂದ ನಾನು ಈಗಾಗಲೇ ಅವರಿಗೆ ಸೂಚನೆ ಕೊಟ್ಟಿದ್ದೇನೆ. ಗೊಬ್ಬರ ಸಿಗುವಂಥ ಕೆಲಸ ಮಾಡಲು ನಾನು ಎಲ್ಲಾ ವಿಧದಲ್ಲೂ ಕೂಡ ಮಾಡುತ್ತೇನೆ. ಸಸ್ಯ ಸಂರಕ್ಷಣೆ ಕೂಡ ಅದೇ ರೀತಿ, ನಮಗೆ ಏನೇನು ಬೇಕೋ ಅದನ್ನೆಲ್ಲಾ ಕೂಡ ರೈತರ ಸಂಪರ್ಕ ಕೇಂದ್ರದ ಮೂಲಕ ಕೀಟ ನಾಶಕಗಳನ್ನು ಕೊಡುವಂಥ ಕೆಲಸ ಮಾಡುತ್ತೇವೆ ಎಂಬ ಮಾತನ್ನು ಹೇಳಿ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಇಲಿಗಳ ಹಾವಳಿಯನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು. 2003–04ನೇ ಸಾಲಿನಿಂದ ಅದನ್ನು ನಾವು ಕೈಬಿಟ್ಟಿದ್ದೇವೆ. ಅದು ಆ ತಾಲ್ಲೂಕಿನಲ್ಲಿ ನಿಮ್ಮ ತಾಲ್ಲೂಕು ಪಂಚಾಯಿತಿಯವರು ಆ ಪ್ಲಾನ್ ಮಾಡಿಕೊಂಡಿದ್ದು. ಹಾಗಾಗಿ ಆ ಇಲಿಗಳಿಗೂ ನಮ್ಮ ಕೃಷಿ ಇಲಾಖೆಗೂ ಸಂಬಂಧವಿಲ್ಲವೆಂಬ ಮಾತನ್ನು ನಾನು ಈ ಸಮಯದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಅರಗಜ್ಞಾನೇಂದ್ರ :– ಹಾಗಾದರೆ ಸರ್ಕಾರದವರು ಇಲಿಗೆ ಓಡಿಸಲು ಏನೂ ಮಾಡುವುದಿಲ್ಲವೆ?

ಶ್ರೀ ಕೆ. ಶ್ರೀನಿವಾಸಗೌಡ :– ನಾವು ಕೊಟ್ಟಿಲ್ಲ. ಅದಕ್ಕೆ ಬೇರೆ ಡಿಪಾರ್ಟ್‌ಮೆಂಟ್ ಇದೆ. ಪ್ಲೇಗ್ ನಿವಾರಣಾ ಕೇಂದ್ರ ಎಂದು Health Department ನಿಂದ ಇದೆ. ರೈತ ಸಂಪರ್ಕ ಕೇಂದ್ರಗಳಲ್ಲಿ ನಾವು ಅದರ ಮೂಲಕ ಅನೇಕ ಕೆಲಸಗಳನ್ನು ಮಾಡಿದ್ದೇವೆ.

ಆದರೆ ನಮ್ಮ ಮಾನ್ಯ ವಿಶ್ವೇಶ್ವರ ಹೆಗಡೆಯವರು ಇವು ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಿದ್ದರು. ನಮ್ಮ ಪಟ್ಟಿಯ ಪ್ರಕಾರ ಸ್ವಲ್ಪ ಸ್ಟಾಫ್ ಕಡಿಮೆ ಇದೆ. ಆದರೂ ಎಲ್ಲಾ ರೈತ ಸಂಪರ್ಕ ಕೇಂದ್ರದಲ್ಲಿ ಕನಿಷ್ಟ ಒಬ್ಬರನ್ನು ಇಟ್ಟು ರೈತರಿಗೆ ಬೇಕಾದಂಥ ಮಾಹಿತಿ ಕೊಡುವಂಥ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಲು ಇಚ್ಛೆಪಡುತ್ತೇನೆ. 942 ಸಹಾಯಕ ಕೃಷಿ ಅಧಿಕಾರಿಗಳಲ್ಲಿ 705 ಹುದ್ದೆಗಳನ್ನು ನಾವು ಭರ್ತಿ ಮಾಡಿದ್ದೇವೆ, ಇನ್ನೂ 237 ಖಾಲಿ ಹುದ್ದೆಗಳು ಇವೆ. ಅದಕ್ಕೆ ಇತ್ತೀಚಿನ ದಿನಗಳಲ್ಲಿ ಅದನ್ನೂ ಮಾಡುವಂಥ ಕೆಲಸವನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾ, ಕೃಷಿ ಯಾಂತ್ರೀಕರಣ, ಎಂದೆಂದೂ ಇಲ್ಲದ್ದನ್ನು ಹೋದ ವರ್ಷ 2004-05ರಲ್ಲಿ ಅನೇಕರು ಪವರ್ ಟೆಲ್ಲರ್‌ಗಳನ್ನು ಕೇಳಿದರು. ನಾನು ಬಹಳಷ್ಟು ಶಾಸಕರು ಹೇಳಿದ ಕೆಲವು ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಅದಕ್ಕೆ ಹೆಚ್ಚಿಗೆ ಡಿಮ್ಯಾಂಡ್ ಇತಿತ್ತು, ಅದರಲ್ಲೂ ನಾರ್ಥ್‌ಕೆನರಾ, ಸೌಥ್‌ಕೆನರಾ, ಉಡುಪಿ, ಶಿವಮೊಗ್ಗ ಈ ಭಾಗಗಳಲ್ಲಿ ಈ ಪವರ್ ಟಿಲ್ಲರ್‌ಗಳಿಗೆ ಬಹಳ ಡಿಮ್ಯಾಂಡ್ ಇತ್ತು. ನಮ್ಮ ಹಳೆ ಮೈಸೂರು ಭಾಗದಲ್ಲಿ ಮತ್ತು ಮಧ್ಯ ಕರ್ನಾಟಕ ಭಾಗದಲ್ಲಿ ಟ್ರ್ಯಾಕ್ಟರ್‌ಗಳಿಗೆ ಡಿಮ್ಯಾಂಡ್ ಇದೆ. ಟ್ರ್ಯಾಕ್ಟರ್‌ಗಳು 35 ಹೆಚ್.ಪಿ.ಯವರೆಗೆ ಕೊಡುವಂಥದು ಇದೆ. ಆದರೆ, ಟ್ರ್ಯಾಕ್ಟರ್‌ಗಳು ಸಾಮಾನ್ಯವಾಗಿ ನಮ್ಮೆಲ್ಲರ ಅನಿಸಿಕೆ, ಟ್ರ್ಯಾಕ್ಟರ್‌ಗಳನ್ನು ಒಬ್ಬ ದೊಡ್ಡ ರೈತನೇ ತೆಗೆದುಕೊಳ್ಳುತ್ತಾನೆ ಎಂಬ ಭಾವನೆ ಇದೆ. ಆದರೂ ಕೂಡ ನಾವು ಟ್ರ್ಯಾಕ್ಟರ್‌ಗಳನ್ನು ಕೂಡ ಕೊಟ್ಟಿದ್ದೇವೆ. ಪವರ್ ಟಿಲ್ಲರ್‌ಗಳಿಗೆ ಆದ್ಯತೆ ನೀಡಿದ್ದೇವೆ. ಏಕೆಂದರೆ ಇವತ್ತು ಎತ್ತುಗಳನ್ನು ಸಾಕಿ ಎತ್ತುಗಳ ಮೂಲಕ ಉಳುಮೆ ಮಾಡುವ ಕಾಲ ಕಡಿಮೆಯಾಗಿಬಿಟ್ಟಿದೆ. ಕಾರಣ ಏನು ಎಂದರೆ, ಇವತ್ತು ಅದರ ಬದಲು ಎರಡು ಹಸುಗಳನ್ನು ಇಟ್ಟುಕೊಂಡರೆ ಅದಕ್ಕಿಂತಲೂ ಚೆನ್ನಾಗಿ ಜೀವನ ಮಾಡಬಹುದು, ಒಂದು ಪವರ್ ಟಿಲ್ಲರ್‌ನ್ನು ಇಟ್ಟುಕೊಂಡರೆ ಅವನು ಉಳುಮೆ ಮಾಡಿಕೊಂಡು ಅವನು ಜೀವನ ಮಾಡುವಂಥ ಒಂದು ಅವಕಾಶ ಇದೆ, ಅದಕ್ಕೆ ಹೆಚ್ಚಿಗೆ ಆದ್ಯತೆ ಕೊಡುವಂಥ ಕೆಲಸ ಮಾಡುತ್ತಿದ್ದೇವೆ. ಈ ಸಾರಿ ಕೂಡ ಅದಕ್ಕೆ ಸಬ್ಸಿಡಿ 14 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ ಎಂದು ಹೇಳಿ, ಈ ಸಾರಿ ಕೇಂದ್ರ ಸರ್ಕಾರ ATMA (Agriculture Technology Management Agency) ಇದು ಕೃಷಿ ತಾಂತ್ರಿಕ ನಿರ್ವಹಣೆಗೆ ಅನುಕೂಲವಾಗಿದ್ದು ನಮಗೆ 2005-06ನೇ ಸಾಲಿನಲ್ಲಿ 9 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಕೈಗೊಂಡಿದೆ. ಇದು ಕೋಲಾರ, ಹಾಸನ, ಚಾಮರಾಜನಗರ, ಹಾವೇರಿ, ಗುಲ್ಬರ್ಗಾ, ಶಿವಮೊಗ್ಗ, ಬೀದರ್, ಬಿಜಾಪುರ, ಕೊಪ್ಪಳಗಳಲ್ಲಿ ಈ ATMA ಕಾರ್ಯಕ್ರಮವನ್ನು ತೆಗೆದುಕೊಳ್ಳುವಂಥ ಕೆಲಸವಾಗುತ್ತಿದೆ ಎನ್ನುವ ಮಾತನ್ನೂ ಕೂಡ ನಾನು ಹೇಳಲು ಇಚ್ಛೆಪಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಸಾವಯವ ಕೃಷಿಗೆ ನಾವು ಹೆಚ್ಚಿಗೆ ಆದ್ಯತೆಗಳನ್ನು ಕೊಡುತ್ತಿದ್ದೇವೆ. 27 ಜಿಲ್ಲೆಗಳಲ್ಲಿ 100 ಹೆಕ್ಟೇರ್‌ಗೆ ಒಂದು ಯೂನಿಟ್ ಅನ್ನು ಮಾಡಿ,

ಸಾವಯವ ಗೊಬ್ಬರಗಳ ಬಳಕೆ ಬಗ್ಗೆ Voluntary organisation ಮೂಲಕ ಪ್ರಚಾರ ಮಾಡುವುದು ಮತ್ತು ಸ್ತ್ರೀ ಶಕ್ತಿ ಗುಂಪುಗಳನ್ನು ಬಳಸಿಕೊಂಡು ಅವರ ಮೂಲಕ ಈ ಕೆಲಸಗಳನ್ನು ಮಾಡುತ್ತಿದ್ದೇವೆ. ಅಗ್ರಿ ಗೋಲ್ಡ್. ಹಿಂದೆ Agro industries ನಿಂದ ಇತ್ತು, ಈಗ ರಾಜ್ಯ ಸಹಕಾರ ಮಾರಾಟ ಮಂಡಳಿಯಲ್ಲಿ ಅದನ್ನು ಲೀಸ್‌ಗೆ ತೆಗೆದುಕೊಂಡು, ಅದರ ಮೂಲಕ 2 ಕೋಟಿ ರೂಪಾಯಿಗಳವರೆಗೆ ಸಬ್ಸಿಡಿ ಕೊಟ್ಟು, ಅದನ್ನೂ ಬರಪೀಡಿತ ಜಿಲ್ಲೆಗಳಿಗೆ ಆ ಅಗ್ರಿ ಗೋಲ್ಡ್ ಗೊಬ್ಬರವನ್ನೂ ಕೂಡ ಕೊಡುತ್ತಿದ್ದೇವೆ ಎನ್ನುವುದನ್ನು ನಾನು ತಮ್ಮ ಮೂಲಕ ಈ ಸಭೆಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ನಿನ್ನೆ ಮಾನ್ಯ ರಮೇಶ್ ಕುಮಾರ್ ಅವರು ಮಾತನಾಡುತ್ತಾ, ಯೂನಿವರ್ಸಿಟಿಗಳು ಏನೂ ಮಾಡುತ್ತಿಲ್ಲ, ಅವುಗಳು ಏನು ಮಾಡುತ್ತಿವೆ ಎಂದು ಕೇಳಿದರು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಕಳೆದ 2–3 ವರ್ಷಗಳಿಂದ 7 ಬೆಳೆಗಳಲ್ಲಿ 18 ಹೊಸ ತಳಿಗಳನ್ನು ಬಿಡುಗಡೆ ಮಾಡಿದೆ. ವಿವಿಧ ಬೆಳೆಗಳ ಬೇಸಾಯ ಕ್ರಮಗಳಲ್ಲಿ 26 ಹೊಸ ತಾಂತ್ರಿಕಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದೆ. ಸಸ್ಯ ಸಂರಕ್ಷಣಾ ಕ್ರಮಗಳಲ್ಲಿ 16 ಹೊಸ ತಾಂತ್ರಿಕಗಳನ್ನು ವಿವಿಧ ಬೆಳೆಗಳಲ್ಲಿ ಕಂಡು ಹಿಡಿದು ಬಿಡುಗಡೆ ಮಾಡಿರುತ್ತದೆ. ಧಾರವಾಡದ ಕೃಷಿ ವಿಶ್ವವಿದ್ಯಾನಿಲಯ ಕಳೆದ ವರ್ಷ ಒಟ್ಟು 20 ಹೊಸ ತಾಂತ್ರಿಕಗಳನ್ನು ಅಭಿವೃದ್ಧಿ ಪಡಿಸಿ ಬಿಡುಗಡೆ ಮಾಡಿರುತ್ತದೆ. BT ಹತ್ತಿ ಸಂಶೋಧನೆ ಅಂತಿಮ ಟ್ರಯಲ್ ಹಂತ ತಲುಪಿದ್ದು, 2006ರ ಪ್ಲೊತ್ತಿಗೆ ಬಿಟಿ ಹತ್ತಿ ತಳಿ ಬಿಡುಗಡೆ ಮಾಡುವ ಸಾಧ್ಯತೆ ಇದೆ. ಇವು ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳು ತೆಗೆದುಕೊಂಡಂತಹ ದಿಟ್ಟ ಕ್ರಮಗಳು ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದವರು ಬಯೋ ಟೆಕ್ನಾಲಜಿ ಮೂಲಕ ವಿಶಿಷ್ಟ ಕಡ್ಲಾಕಾಯಿಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಡಯಾಬಿಟಿಕ್ ಪೇಷೆಂಟ್ಸ್‌ಗಳು ಈ ಕಡ್ಲೇಕಾಯಿಯನ್ನು ತಿಂದರೆ, insulin ತೆಗೆದುಕೊಂಡಂತಾಗುತ್ತದೆ. ಆ ರೀತಿಯಲ್ಲಿ ಅದನ್ನು ನಾವು ಅಭಿವೃದ್ಧಿ ಪಡಿಸುತ್ತಿದ್ದೇವೆ. ಇನ್ನು ಕೇವಲ ಒಂದೆರಡು ವರ್ಷಗಳಲ್ಲಿ ನಾವು ಅದನ್ನು ಮಾರುಕಟ್ಟೆಗೆ ತರುವಂತಹ ಕೆಲಸ ನಮ್ಮ ವಿಶ್ವವಿದ್ಯಾನಿಲಯ ಮಾಡುತ್ತಿದೆ. ಹುಚ್ಚು ನಾಯಿ ಕಡಿತಕ್ಕೆ ಈಗ ಏಳು ಇಂಜೆಕ್ಷನ್‌ಗಳನ್ನು ಕೊಡಿಸಬೇಕಾಗುತ್ತದೆ. ಅದರ ಬದಲು ನಾವು ಅಭಿವೃದ್ಧಿ ಪಡಿಸುತ್ತಿರುವ ಕಲ್ಲಂಗಡಿ ಹಣ್ಣನ್ನು ತಿಂದರೆ ಆ ಇಂಜೆಕ್ಷನ್‌ಗಳು ಬೇಕಾಗುವುದಿಲ್ಲ. ಅದನ್ನೂ ಸಹಿತ ಒಂದೆರಡು ವರ್ಷಗಳಲ್ಲಿ ನಾವು ಬಯೋ ಟೆಕ್ನಾಲಜಿ ಮೂಲಕ ಬಿಡುಗಡೆ ಮಾಡುವಂತಹ ಕೆಲಸ ಮಾಡುತ್ತೇವೆ. ನಮ್ಮ ಸಂಶೋಧನೆ ಒಳ್ಳೆಯ ಗತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಇವುಗಳು ಉದಾಹರಣೆಗಳಾಗಿವೆ ಎನ್ನುವಂತಹ ಮಾತನ್ನು ನಾನು ಈ ಸಮಯದಲ್ಲಿ ಈ ಮನೆಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಜಲಾನಯನ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಐದು ವರ್ಷಕ್ಕೆ 677 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಆದರೆ ಮೊದಲಿಗೆ....

ಶ್ರೀ ಬಸವರಾಜ ರಾಯರೆಡ್ಡಿ :– ಜಲಾನಯನ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎಷ್ಟೆಷ್ಟು ಖರ್ಚು ಮಾಡುತ್ತಿದೆ? ಎಂಬುದನ್ನು ಹೇಳಿ.

ಶ್ರೀ ಕೆ. ಶ್ರೀನಿವಾಸಗೌಡ :– ಜಲಾನಯನ ಯೋಜನೆಯಲ್ಲಿ ಸಿಬ್ಬಂದಿ ವೇತನಗಳಿಗಾಗಿ 687 ಲಕ್ಷ ರೂ.ಗಳು ಹೋಗುತ್ತದೆ. ರಾಜ್ಯ ವಲಯದಲ್ಲಿ 2777 ಲಕ್ಷ ರೂಪಾಯಿಗಳ ಹಣವನ್ನು ಕೊಡುತ್ತಿದ್ದೇವೆ. ಜಿಲ್ಲಾ ವಲಯದಲ್ಲಿ 7901 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಹೊರ ನೆರವಿನ ಯೋಜನೆಗಳು, RIDF ಇವೆಲ್ಲಾ ಸೇರಿ, ಅಂದರೆ ಇವು ಕೇಂದ್ರ ಸರ್ಕಾರದ್ದು, ಒಟ್ಟು 34968 ಲಕ್ಷ ರೂಪಾಯಿಗಳನ್ನು ಇವತ್ತು ನಾವು ಆ ಹೆಡ್‌ಗಳಲ್ಲಿ ಖರ್ಚು ಮಾಡುತ್ತಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ :– ಅದರ ಬಗ್ಗೆ ನಾನು ಆಗಲೇ ಹೇಳಿದೆ. ದಯವಿಟ್ಟು ನಂತರ ಸ್ಪಷ್ಟೀಕರಣ ಕೇಳಿ. ಇವತ್ತು ಸುಜಲ ಮತ್ತು ಜಲಾನಯನ ಯೋಜನೆಗಳು ಇಡೀ ರಾಜ್ಯದಲ್ಲಿ ಬಹಳ ಚೆನ್ನಾಗಿ ಆಗುತ್ತಿವೆ. ನಾವು ಇವತ್ತು water management, water harvesting ಗೆ ಆದ್ಯತೆ ಕೊಡಬೇಕಾದಂತಹ ದಿನಗಳು ಬಂದಿವೆ. ಆ ಬಗ್ಗೆ ಅಣ್ಣಾ ಹಜಾರೆ ಮತ್ತು ಇತರರು ಮಾಡಿರುವ ಕೆಲಸಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ನೀರಿನ ಕೊರತೆಯನ್ನು ನಾವು ನೀಗಿಸಬೇಕು. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಕ್ಷೇತ್ರದ ಶಾಸಕರಾದ ಗೋವಿಂದಪ್ಪರವರು ಒಬ್ಬ ಶಾಸಕರಾಗಿ ಆದ ತಾಲ್ಲೂಕಿನಲ್ಲಿ ಮಾಡಿದಂಥ ಒಳ್ಳೆಯ ಕೆಲಸ ಬಹಳ ಶ್ಲಾಘನೀಯವಾದುದು. ಅವರ ಊರಿನಲ್ಲಿ ನೀರಿಗೆ ಬಹಳ ಕೊರತೆ ಇತ್ತು, ಇವರು ಶಾಸಕರಾದ ಮೇಲೆ ಅಲ್ಲಿ ಚೆಕ್ ಡ್ಯಾಂಗಳನ್ನು ನೀರು ಹರಿಯುವಂತಹ ಜಾಗಗಳಲ್ಲೆಲ್ಲಾ ಹಾಕಿ, ನೀರನ್ನು ನಿಲ್ಲಿಸಿದ್ದರಿಂದ, ಇವತ್ತು ಆ ಹೊಸದುರ್ಗ ಊರಿಗೆ ನೀರಿನ ಕೊರತೆಯೇ ಇಲ್ಲದಂತಾಗಿದೆ. ಈ ತರಹ elected representatives ಆದಂತಹ ನಾವುಗಳೂ ಕೂಡ ಮಾಡಬೇಕು. ನಾವು ಮನಸ್ಸು ಮಾಡಿದರೆ ಮಾನ್ಯ ಗೋವಿಂದಪ್ಪನವರ ಉದಾಹರಣೆಯಂತೆ ನಾವೂ ಸಹ ಮಾಡಬಹುದು. ಮಾನ್ಯ ಸದಸ್ಯರು ಕೆಲವರು ಹೊಂಡಗಳನ್ನು ಹೊಡೆಯುವುದಕ್ಕೆ JCB ಗಳನ್ನು ಉಪಯೋಗಿಸುತ್ತಿದ್ದಾರೆ ಎಂದು ಹೇಳಿದರು. ನಾನು ಅದನ್ನು ಒಪ್ಪುತ್ತೇನೆ. ನಾನು ಯಾವುದನ್ನೂ ಸಹ ನೇರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಇದನ್ನು ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗುತ್ತೇನೆ. ಬಹಳಷ್ಟು ಊರುಗಳಲ್ಲಿ ಇವತ್ತು ಕೂಲಿಗೆ ಸಿಗುವಂತಹ ಜನರು ಕಡಿಮೆ ಆಗಿದ್ದಾರೆ. ಏಕೆಂದರೆ, ಕೆ.ಜಿ.ಗೆ 3 ರೂಪಾಯಿ ಅಕ್ಕಿ ಸಿಗುತ್ತದೆ. ವಾಸ್ತವಾಂಶವನ್ನು ನಾವೂ ಕೂಡ ಅರಿಯಬೇಕಾಗುತ್ತದೆ. ನಾವು ಅದಕ್ಕೆ 22 ಸಾವಿರ ಚಿಲ್ಲರೆ ಕೊಡುತ್ತಿದ್ದೇವೆ. ಅದನ್ನು 6–7 ಸಾವಿರ ರೂಪಾಯಿಗಳಲ್ಲಿ JCB ನಲ್ಲಿ ಕೆಲಸ ಮಾಡಬಹುದು. ಇದು ಮುಂದಿನ ದಿನಗಳಲ್ಲಿ ಆಗುತ್ತದೆ. ಈ ಬಗ್ಗೆ

ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಇನ್ನು ಮುಂದೆ ಎಲ್ಲಿ ಲೇಬರರ್ಸ್ ಇಲ್ಲವೋ ಅಂತಹ ಕಡೆಗಳಲ್ಲಿ JCB ಯಂತ್ರಗಳನ್ನು ಉಪಯೋಗಿಸಿ ಹೊಂಡಗಳನ್ನು ಮಾಡುವಂತಹ ಕೆಲಸ ಮಾಡಿ, ಎಲ್ಲಿ ರೈತರು ವಾಲಂಟರಿಯಾಗಿ ಬಂದು ಕೂಲಿ ಕೆಲಸ ಮಾಡುತ್ತಾರೋ, ಅವರಿಗೆ ಅಂತಹ ಕಡೆ ಕೂಲಿ ಕೊಡಿ ಎನ್ನುವಂತಹ ಮಾತನ್ನು ಇಲ್ಲಿ ಹೇಳುತ್ತೇನೆ. ಸುಜಲದಲ್ಲಂತೂ ಬಹಳ ಚೆನ್ನಾಗಿ ಕೆಲಸ ಆಗುತ್ತಿದೆ. ನಾನು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಸಾಧ್ಯವಾದರೆ ಆಯಾಯ ಜಿಲ್ಲೆಯ ಶಾಸಕರನ್ನು ಎಲ್ಲಿ ಸುಜಲ ಚೆನ್ನಾಗಿ ನಡೆಯುತ್ತಿದೆಯೋ, ಅಲ್ಲಿಗೆ ಅವರನ್ನು ಕರೆದುಕೊಂಡು ಹೋಗಿ ತೋರಿಸುವಂತಹ ಕೆಲಸ ಆಗಬೇಕು. ಇದು ಬರೀ ನಮಗೆ ಮತ್ತು ನಮ್ಮ ಅಧಿಕಾರಿಗಳಿಗೆ ಮಾತ್ರ ಗೊತ್ತಾದರೆ ಸಾಲದು. ಇಡೀ elected body ಗೂ ಕೂಡ ಗೊತ್ತಾದರೆ, ಇದನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರಚಾರ ಮಾಡಿ, ಇದಕ್ಕೆ ಒಳ್ಳೆಯ ಅವಕಾಶಗಳನ್ನು ಕೊಡುವಂತಹ ಕೆಲಸವಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಒಂದು ಮಾತು ಹೇಳಿದರು. ಮಾನ್ಯ ಬೈರೇಗೌಡರ ಹೆಸರಿನಲ್ಲಿ ಒಂದು ತಾಂತ್ರಿಕ ಕೃಷಿ ಭವನ ಕಟ್ಟಿ, ರೈತರಿಗೆ ಅದರಲ್ಲಿ ಎಲ್ಲಾ ಮಾಹಿತಿಗಳೂ ಕೂಡ ಸಿಗುವಂತಹ ಕೆಲಸ ಮಾಡಿ ಎನ್ನುವಂತಹ ಎಂದು ಒಳ್ಳೆಯ ಸಲಹೆಯೊಂದನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಕೊಟ್ಟಿದ್ದಾರೆ. ಈಗಾಗಲೇ ಕೃಷಿಕ ಸಮಾಜದವರು ಯಾವ ರೈತರಿಗೆ ಕೃಷಿ ಪ್ರಶಸ್ತಿ ಸಿಗುತ್ತದೋ, ಅದನ್ನು ಬೈರೇಗೌಡರ ಹೆಸರಿನಲ್ಲಿ ಕೊಡಬೇಕು ಎನ್ನುವಂತಹ resolution ಮಾಡಿ ಈಗಾಗಲೇ ನನ್ನನ್ನು ಕೇಳಿದ್ದಾರೆ. ಅದಕ್ಕೆ ನಾನು ನನ್ನ ಒಪ್ಪಿಗೆ ಕೊಡುತ್ತೇನೆ. ಅದರ ಜೊತೆಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಸಲಹೆ ನೀಡಿದಂತೆ, ಬೈರೇಗೌಡರ ಹೆಸರಿನಲ್ಲಿ ಕೃಷಿ ಆಧಾರಿತ ಭವನವೊಂದನ್ನು ಬೆಂಗಳೂರಿನಲ್ಲಿ ಕಟ್ಟುತ್ತೇವೆ ಎಂದು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಗೆ ಅದರ ಬಗ್ಗೆ ಮಾತನಾಡಿ, ಅದನ್ನು ಮಾಡಿಸುತ್ತೇನೆ ಎನ್ನುವಂತಹ ಮಾತನ್ನೂ ಕೂಡ ನಾನು ಈ ಸಮಯದಲ್ಲಿ ಹೇಳುತ್ತೇನೆ. ಈ ಆಯವ್ಯಯದಲ್ಲಿ ಏನೊಂದು ಹಣವನ್ನು ನಾವು ಕೇಳಿದ್ದೇವೋ, ಅದನ್ನು ನೀವು ಪಾಸ್ ಮಾಡಿ ಕೊಡಬೇಕು ಎಂದು ಕೋರುತ್ತೇನೆ. ಇವತ್ತು ಮಾನ್ಯ ಪ್ರಧಾನ ಮಂತ್ರಿಗಳೂ ಕೂಡ ಕೃಷಿಗೆ ಮೊದಲ ಆದ್ಯತೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಕೂಡ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪಿಸಿದರು. 57 ವರ್ಷಗಳಿಂದ ಇದನ್ನು ಯಾರೂ ಮಾಡಿಲ್ಲವೆಂದೂ ಸಹ ಅವರು ಹೇಳಿದರು. ಇವತ್ತು ಬಡತನ ರೇಖೆಗಿಂತ ಕೆಳಮಟ್ಟಕ್ಕೆ ಇವತ್ತು ಜೀವನ ಮಾಡುತ್ತಿರುವಂತಹ ರೈತರ ವರ್ಗಕ್ಕೆ ಆದ್ಯತೆ ಕೊಡುವಂತಹ ಕೆಲಸವನ್ನು ಮಾನ್ಯ ಪ್ರಧಾನ

ಮಂತ್ರಿಗಳೂ ಮಾಡಬೇಕು, ಮಾನ್ಯ ಮುಖ್ಯಮಂತ್ರಿಗಳೂ ಮಾಡಬೇಕು, ನಾವೆಲ್ಲಾ ಶಾಸಕರೂ ಸಹ ಮಾಡಬೇಕು. ಎಲ್ಲರೂ ಆ ಕೆಲಸ ಮಾಡಿದರೆ ಮಾತ್ರ ಈ ರೈತ ವರ್ಗಕ್ಕೆ ಅಷ್ಟೋ ಇಷ್ಟೋ ಕಾಯಕಲ್ಪ ಮಾಡಬಹುದು ಎಂದು ಹೇಳುತ್ತೇನೆ. ಮಾನ್ಯ ರಾಯರೆಡ್ಡಿಯವರು ಪ್ರೌಢಶಾಲೆಗಳನ್ನು ಮಾಡಬೇಕಾಗಿತ್ತು, ಅವುಗಳು ಇದ್ದವು, ಅವುಗಳೆಲ್ಲಾ ಮುಚ್ಚಿವೆ ಎಂದು ಹೇಳಿದರು. ಅವನ್ನು training institute ಎಂದು convert ಮಾಡಿದ್ದೇವೆ. ಕೆಲವು ಮುಚ್ಚಿವೆ, ಕೆಲವು ಈಗಲೂ ನಡೆಯುತ್ತಿವೆ. ಮಾನ್ಯ ರಾಯರೆಡ್ಡಿಯವರು ಹೇಳಿದಂತಹ ಒಳ್ಳೆಯ ಸಲಹೆಯೊಂದನ್ನು ನಾನು ಒಪ್ಪುತ್ತೇನೆ. ಮಾನ್ಯ ಬಿ.ಆರ್. ಪಾಟೀಲ್‌ರು ಹೇಳಿದ್ದನ್ನೂ ಸಹ ನಾನು ಒಪ್ಪುತ್ತೇನೆ. ನಾವೆಲ್ಲಾ middle school ನಲ್ಲಿ ಓದುತ್ತಿದ್ದಾಗ, ನಮಗೆ ತೋಟಗಾರಿಕೆ ಬಗ್ಗೆಯೇ subject ವೊಂದು ಇತ್ತು. ನಾವು ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ಕೂಡ ತೋಟಗಾರಿಕೆ ಒಂದು subject ಆಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅದು ಏಕೋ ಮಾಯವಾಗುತ್ತಿದೆ. ಕೃಷಿ ಆಧಾರಿತ subjectವೊಂದನ್ನು ವಿದ್ಯಾರ್ಥಿಗಳು ಕಲಿಯುವಂತೆ ಮಾಡಬೇಕು. ಇಲ್ಲಿ ಶಿಕ್ಷಣ ಸಚಿವರಾದ ಮಾನ್ಯ ರಾಮಲಿಂಗಾರೆಡ್ಡಿಯವರು ಮತ್ತು ಮಾನ್ಯ ಮಂಜುನಾಥ್‌ರವರು ಇದ್ದಾರೆ. ಇದನ್ನು ಕಾಲೇಜು ಮಟ್ಟಕ್ಕೆ ತೆಗೆದುಕೊಂಡು ಹೋದರೂ ತಪ್ಪಿಲ್ಲ. ಇವತ್ತು ಕಾಲೇಜಿನಲ್ಲಿ ವಿದ್ಯಾರ್ಥಿಗಳು BA, BSc., ಮಾಡಿಕೊಂಡಿದ್ದರೂ ಕೂಡ ಅವರಿಗೆ ಎಲ್ಲೂ ಕೂಡ ಕೆಲಸ ಸಿಕ್ಕುವಂತಹ ಪರಿಸ್ಥಿತಿ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರು ಅಟ್‌ಲೀಸ್ಟ್ ಆಧುನಿಕ ಕೃಷಿ ಬಗ್ಗೆ ತಿಳಿದುಕೊಂಡಿದ್ದರೆ, ಅವರು ಹೋಗಿ ತಮ್ಮ ಹೊಲದಲ್ಲೋ ಅಥವಾ ತೋಟದಲ್ಲೋ ಕೆಲಸ ಮಾಡಿಕೊಂಡು ಜೀವನ ಮಾಡಬಹುದು ಎನ್ನುವಂತಹ ಮಾತನ್ನು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಇದರ ಬಗ್ಗೆ ಮಾತನಾಡಿ, ಈ ಬಗ್ಗೆ ಕ್ರಮವನ್ನು ಜರುಗಿಸುತ್ತೇನೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಮಾನ್ಯ ಬೈರೇಗೌಡರು ಇದ್ದಾಗ ಕೃಷಿ ನೀತಿಯೊಂದನ್ನು ಈ ರಾಜ್ಯದಲ್ಲಿ ತಂದರು. ಇಡೀ ದೇಶದಲ್ಲಿ ಎಲ್ಲಿಯೂ ಕೂಡ ತಂದಿರದಂತಹ ಒಳ್ಳೆಯ ಕೃಷಿ ನೀತಿಯೊಂದನ್ನು ಅವರು ತಂದಿದ್ದರು. ಆ ನೀತಿಯಲ್ಲಿ ಬಹಳ ಮುಖ್ಯವಾಗಿ ನೀರು ನಿರ್ವಹಣೆ, ಒಣ ಬೇಸಾಯ, ತೋಟಗಾರಿಕೆ, ಪುಷ್ಪ ಕೃಷಿ, ಮಾರುಕಟ್ಟೆ ವಿಸ್ತರಣೆ ಮುಂತಾದವುಗಳ ಬಗ್ಗೆ ಒತ್ತು ನೀಡಿದ್ದರು. ಇದಲ್ಲದೆ ನಾವು ಬೆಳೆದಂತಹ ಬೆಳೆಗಳನ್ನು, ಸರ್ಕಾರಿ ಸ್ವಾಮ್ಯದಲ್ಲಿ ಕೆಪೆಕ್ ಎನ್ನುವ ಕಂಪೆನಿಯನ್ನು ಹುಟ್ಟು ಹಾಕಿ, ಅದರ ಮೂಲಕ ಹೊರ ದೇಶಗಳಿಗೆ ಕಳುಹಿಸುವಂತಹ ಕೆಲಸವನ್ನೂ ಕೂಡ ಮಾನ್ಯ ಬೈರೇಗೌಡರು ಮಾಡಿಕೊಟ್ಟರು. ಆ ನೀತಿಯಲ್ಲಿ ಇನ್ನೂ ಕೆಲವು ಆಗಬೇಕಾದುದು ಇದೆ. ಮುಂದಿನ ದಿನಗಳಲ್ಲಿ ಆ ನೀತಿಯನ್ನು ಕಟ್ಟುನಿಟ್ಟಾಗಿ ಈ ರಾಜ್ಯದಲ್ಲಿ ಜಾರಿಗೆ ತರುವಂತಹ ಕೆಲಸವನ್ನು ಮಾಡುತ್ತೇವೆ. ಅದು ಜೈವಿಕ ಇಂಧನ

ಬರಬಹುದು, ಕಾಂಟ್ರ್ಯಾಕ್ಟ್ ಫಾರ್ಮಿಂಗ್ ಇರಬಹುದು, ಶ್ರೀ ಪದ್ಧತಿ ಇರಬಹುದು, ಇವುಗಳ ಯಾಂತ್ರೀಕರಣ ಕಾರ್ಯಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. 'ಆತ್ಮ' ಈಗಾಗಲೇ ತೆಗೆದುಕೊಂಡಿದ್ದೇವೆ. ಈ ತರಹ ಅನೇಕ ಕಾರ್ಯಕ್ರಮಗಳು ಆ ಕೃಷಿ ನೀತಿಯಲ್ಲಿ ಬರುವುದರಿಂದ ಇದನ್ನು ಕೂಡ ತೆಗೆದುಕೊಳ್ಳುವುದರ ಜೊತೆಗೆ ಕೆಲವು ಮಂಡಳಿಗಳನ್ನು ಕಡಿಮೆ ಮಾಡುತ್ತಿದ್ದೇವೆ ಏಕೆಂದರೆ ಇವತ್ತು ತೊಗರಿ ಮಂಡಳಿಯನ್ನು ನಾವು ಮಾಡಿದ್ದೇವೆ. ತೊಗರಿ ಮಂಡಳಿ ಮಾಡಿ ಇವತ್ತು ಏನಾಗಿದೆ ಎಂದರೆ ತೊಗರಿ ಬೆಳೆ ಕಡಿಮೆ ಆದಾಗ ಪರ್ಚೇಸ್ ಮಾಡುವುದು ಬಿಟ್ಟರೆ ಆ ಮಂಡಳಿಯ ಕೆಲಸ ನಾವು ಅಂದುಕೊಂಡ ಹಾಗೆ ಏನೂ ಆಗಿಲ್ಲ. ತೊಗರೆ ಬೆಳೆಯುವ ರೈತರಿಗೆ ಜಮೀನಿನ ಎಷ್ಟು ಆದ್ಯತೆಗಳ ಮೇಲೆ ಗೊಬ್ಬರಗಳನ್ನು ಹಾಕಬೇಕು. ಯಾವ ರೀತಿ ಒಳ್ಳೆಯ ಬೆಳೆಗಳನ್ನು ಬೆಳೆಯಬಹುದು ಈ ಆದ್ಯತೆ ಕೊಡಬೇಕೆನ್ನುವ ಸೂಚನೆಗಳನ್ನು ನಾವು ನಮ್ಮ ಅಧಿಕಾರಿಗಳಿಗೆ ಈಗಾಗಲೇ ಕೊಟ್ಟಿದ್ದೇನೆ. ಬೇರೆ ಬೇರೆ ಒಂದೊಂದು ಗ್ರಾಮಗಳಿಗೆ ಕೂಡ ಮಂಡಳಿಗಳನ್ನು ಮಾಡುವುದು ವೈಯಕ್ತಿಕವಾಗಿ ನನಗೆ ಅಷ್ಟು ಸರಿ ಹೋಗುವುದಿಲ್ಲ. ಕೃಷಿ ಆಧಾರದ ಮೇಲೆ ಹಿಡಿತ ಇರಬೇಕು. ನಾಳೆ ಕಡಲೆಕಾಯಿಗೆ ಒಂದು ಮಂಡಳಿ ಮಾಡಿ ರಾಗಿಗೆ ಒಂದು ಮಂಡಳಿ ಮಾಡಿ, ಭತ್ತಕ್ಕೆ ಒಂದು ಮಂಡಳಿ ಮಾಡಿ ಎಂದು ಹೇಳಿದರೆ ಇದು ಕಷ್ಟದ ಕೆಲಸವಾಗುತ್ತದೆ. ಸರ್ಕಾರ ನಡೆಸುವವರಿಗೆ ಕೂಡ ಕಷ್ಟವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೃಷಿ ಆಧಾರಿತ ಅನೇಕ ಸಬ್ಸಿಡಿಗಳು ನೀರಾವರಿ ಇರಬಹುದು, ಸಣ್ಣ ನೀರಾವರಿ ಇರಬಹುದು, ಐಪಿ ಸೆಟ್‌ಗಳಿಗೆ ಸಬ್ಸಿಡಿ ಇರಬಹುದು, ಪವರ್ ಸಬ್ಸಿಡಿ ಇರಬಹುದು, ಇಂಟರೆಸ್ಟ್ ಸಬ್ಸಿಡಿ ಇರಬಹುದು, ಕೃಷಿ ಸಂಶೋಧನೆ ಇರಬಹುದು, ಕೃಷಿ ಇಲಾಖೆಯ ಯೋಜನೆಗಳು ಇರಬಹುದು, ಬಡ್ಡಿ ಮನ್ನಾ ಇರಬಹುದು, ಸುಮಾರು 7,000 ಕೋಟಿ ರೂಪಾಯಿ ಈ ರಾಜ್ಯದಲ್ಲಿ ನಾವು ರೈತರಿಗೆ ಸಬ್ಸಿಡಿ ಕೊಡುತ್ತಿದ್ದೇವೆ. ಇದು ಒಂದೇ ಕೃಷಿಗೆ ಆಧಾರವಾದುದು, ಕೃಷಿ ಬರೀ ಕೃಷಿ ಇಲಾಖೆ ಅಲ್ಲ, ಎಲ್ಲಾ ಇಲಾಖೆಗಳನ್ನು ಸೇರಿಸಿಕೊಂಡರೆ ರಾಜ್ಯದಲ್ಲಿ ನಾವು ಕೃಷಿಕರಿಗೆ ಸುಮಾರು 7,000 ಕೋಟಿ ರೂಪಾಯಿಗಳ ಸಬ್ಸಿಡಿಗಳನ್ನು ಕೊಡುತ್ತಿದ್ದೇವೆಂದು ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಈ ಮನೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಇತ್ತೀಚಿನ ದಿನಗಳಲ್ಲಿ ಮಾನ್ಯ ಬೈರೇಗೌಡರು ಇದ್ದಾಗ ಸಾಯಿಲ್ ಕನ್ಸರ್ವೇಷನ್ ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಇವೆರಡನ್ನು ಒಂದು ಮಾಡಿದ್ದರು. ನಾನೂ ಕೂಡ ಈ ದಿಕ್ಕಿನಲ್ಲಿ ಚಿಂತನೆ ಮಾಡುತ್ತಿದ್ದೇನೆ. ಈಗಾಗಲೇ ಮಹಾರಾಷ್ಟ್ರದಲ್ಲಿ ಇದನ್ನು ಜಾರಿಗೆ ತಂದಿದ್ದಾರೆ. ಅದರ ಪೇಪರ್‌ಗಳನ್ನು ತರಿಸಿಕೊಂಡಿದ್ದೇನೆ. ಅದರ ಮಾಹಿತಿಗಳನ್ನು ತರಿಸಿಕೊಂಡು ಅದನ್ನು ಇಲ್ಲಿ ನಮ್ಮ ಈ ಜಲಾನಯನ ಮತ್ತು ಕೃಷಿ ಏಕೆ ಒಂದು ಮಾಡಿ

ಎಂದು ವಿಚಾರ ಮಾಡುತ್ತಿದ್ದೇನೆ. ಮಾಡಬಾರದು ಎಂದು ಆಡಳಿತದಲ್ಲಿ ಕೆಲವಾರು ತೊಂದರೆಗಳು ಇವೆ. ಇಂಪ್ಲಿಮೆಂಟೇಷನ್‌ನಲ್ಲಿ ಒಬ್ಬ ಅಧಿಕಾರಿ ಇದ್ದರೆ ಪ್ರತಿಯೊಂದು ಕೂಡ ಇವತ್ತು ಕೃಷಿಗೆ ಅನುಕೂಲವಾಗುತ್ತದೆ. ಬಹುಶಃ ಮಾನ್ಯ ಹೆಗಡೆಯವರು ಹೇಳಿದ್ದು ಎಂದು ಕಾಣುತ್ತದೆ. ಒಬ್ಬ ರೈತ ಒಬ್ಬ ಕೃಷಿ ಅಧಿಕಾರಿಯನ್ನು ಭತ್ತದ ಗದ್ದೆಗೆ ಕರೆದುಕೊಂಡು ಹೋಗಿ ಇದು ನನ್ನ ಡಿಪಾರ್ಟ್‌ಮೆಂಟ್‌ಗೆ ಸೇರುವುದಿಲ್ಲವೆಂದು ಹೇಳುವ ಭಾವನೆಗಳು ಕಲ್ಪಿತ ಆಗಿವೆ. ಅದೆಲ್ಲವನ್ನು ಕೂಡ ಒಬ್ಬ ಕೃಷಿ ಅಧಿಕಾರಿಯಾಗಿ ಅದು ಜಲಾನಯನ ಇರಬಹುದು, ತೋಟಗಾರಿಕೆ ಇರಬಹುದು, ಅಥವಾ ಅನಿಮಲ್ ಹಸ್ಬೆಂಡರಿ ಇರಬಹುದು, ಅಥವಾ ಸಿರಿಕಲ್ಚರ್ ಇರಬಹುದು, ಈ ಎಲ್ಲಾ ಮಾಹಿತಿಗಳನ್ನು ಯಾರು ಗ್ರಾಸ್ ರೂಟ್ ಲೆವಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಕೊಡಬೇಕೆಂದು ಹೇಳುತ್ತಾ, ಇವತ್ತು ನಾನು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ವಾರಕ್ಕೆ ಐದು ದಿನ ನೀವು ಈ ಬಿತ್ತನೆ ಕಾಲದಲ್ಲಿ ಫೀಲ್ಡ್‌ನಲ್ಲಿ ಇರಬೇಕು ಎಂದು ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ನನಗೆ ಇದನ್ನು ಒತ್ತಿ ಒತ್ತಿ ಹೇಳಿದರು. ನೀವು ಅದು ಮಾಡಿದ್ದೀರಿ ಆದರೆ ಕಾರ್ಯರೂಪಕ್ಕೆ ಬಂದಿಲ್ಲವೆಂದು. ನಾನು ಮತ್ತೊಮ್ಮೆ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮುಂದೆ ಈ ತರಹ ಯಾರಾದರೂ ಸರಿಯಾಗಿ ಹೋಗದೆ ಇದ್ದರೆ ಅವರ ಮೇಲೆ ಕ್ರಮ ಜರುಗಿಸುತ್ತೇನೆ ಎನ್ನುವ ಮಾತನ್ನು ಈ ಸಮಯದಲ್ಲಿ ತಮಗೆ ಹೇಳುತ್ತಾ, ಇವತ್ತು ನಮ್ಮ ಬೇಡಿಕೆಗಳ ಮೇಲೆ ಚರ್ಚೆ ನಡೆಸಿದಂತಹ ತಮಗೆ ಹೇಳುತ್ತಾ, ಇವತ್ತು ನಮ್ಮ ಬೇಡಿಕೆಗಳ ಮೇಲೆ ಚರ್ಚೆ ನಡೆಸಿದಂತಹ ನಮ್ಮ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ನನ್ನ ಉತ್ತರ ಸಾಕು ಎಂದು ಅನ್ನಿಸುತ್ತದೆ. ಇನ್ನೂ ಹೆಚ್ಚಿಗೆ ಮಾಹಿತಿ ಕೇಳಿದರೆ ಹೇಳುವುದಕ್ಕೆ ಇಷ್ಟಪಡುತ್ತೇನೆ ಎಂದು ಹೇಳಿ ನನಗೆ ಈ ಮಾಹಿತಿಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಹನಿ ನೀರಾವರಿಗೆ 75 ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಹೇಳಿದಿರಿ, ಹನಿ ನೀರಾವರಿಗೆ ಏಳು ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿದಿರಿ.

ಶ್ರೀ ಕೆ. ಶ್ರೀನಿವಾಸಗೌಡ :- ಯಾವ್ಯಾವುದಕ್ಕೆ ಎಷ್ಟು ಇದೆ ಎಂದು ಹೇಳಿ ಎಂದರೆ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಬೇಡ ನನಗೆ ಇಷ್ಟೇ ಬೇಕು, ಅವರು ಕೊಡುತ್ತಾರೋ, ನೀವು ಕೊಡುತ್ತೀರೋ ಅದು ಬೇರೆ. ಹನಿ ನೀರಾವರಿಗೆ 2004-05ಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ, ಎಷ್ಟು

ಖರ್ಚಾಯಿತು? ಅವರು ತೋಟಗಾರಿಕೆ ಇಲಾಖೆ ಸಚಿವರು ಉತ್ತರ ಕೊಡುತ್ತಾರೆ. ನೀವು ಏನೋ ಲೇಬಲ್ ಪ್ರಾಬ್ಲಮ ಇದೆ, ಜೆಸಿಬಿ ಯಂತ್ರದಿಂದ ಹೂಳು ತೆಗೆಸುವುದಕ್ಕೆ ಆದೇಶ ಕೊಡುತ್ತಿದ್ದೇನೆ ಎಂದು ಹೇಳಿದಿರಿ, ಬಹುಶಃ ಎರಡು ದಿನ ಜೆಸಿಬಿಯಿಂದ ಕೆಲಸ ಮಾಡಿಸಿ ಐದು ಲಕ್ಷ ರೂಪಾಯಿ ಕೊಡಿ, 10 ಲಕ್ಷ ರೂಪಾಯಿ ಕೊಡಿ ಎಂದು ಬಿಲ್ ಮಾಡಿಕೊಂಡು ತೆಗೆದುಕೊಂಡು ಹೊರಟು ಹೋಗುತ್ತಾರೆ. ಇದು ಒಂದು, ಎರಡನೆಯದು ನೀವು ಈ ಕೆಲಸ ಮಾಡಿಸಬೇಕಾಗಿರುವುದು ಬೇಸಿಗೆ ಕಾಲದಲ್ಲಿ. ಇನ್ನೂ ನಾಲ್ಕು ದಿನ ನೋಡೋಣ. ಈ ಸಂದರ್ಭದಲ್ಲಿ ನೀವು ಏನಾದರೂ ಅಲ್ಪಸ್ವಲ್ಪ ಕೊಟ್ಟ ಹಣದಲ್ಲಿ ಜೆಸಿಬಿ ಮೂಲಕ ಮಣ್ಣು ತೆಗೆಸಬಹುದು ಎಂದು ಹೇಳಿದರೆ, ನಾವು ಕೊಟ್ಟ ಹಣ ಒಂದು ರೀತಿ ಹಗಲು ದರೋಡೆಗೆ ಅವಕಾಶವಾಗುತ್ತದೆ. ಜೆಸಿಬಿ ಬಾಡಿಗೆ ಫಿಕ್ಸ್ ಮಾಡಿ, ಅದರ ಸೂಪರ್‌ವಿಷನ್‌ಗೆ ವ್ಯವಸ್ಥೆ ಮಾಡಿ ಅದಕ್ಕೆ ಏನಾದರೂ ಕಟ್ಟುನಿಟ್ಟಿನ ನಿಯಮಗಳನ್ನು ಅನುಸರಿಸದೆ ಇದ್ದರೆ ಇದುವರೆಗೆ ಏನು ನಡೆದಿದೆ ಅದೇ ರೀತಿ ಹಗರಣಗಳು ನಡೆದು ಹೋಗುತ್ತವೆ. ಅದಕ್ಕೆ ನೀವು ಅವಕಾಶ ಕೊಡಕೂಡದು. ನಿಮ್ಮ ಇಲಾಖೆಯಲ್ಲಿ ಇಷ್ಟೊಂದು ಜ್ವಲಂತ ಸಮಸ್ಯೆ ಇದೆ. ನಾನು ಈಗತಾನೇ ಅಂಕಿ ಅಂಶಗಳನ್ನು ತರಿಸಿದೆ, ಇಡೀ ನಮ್ಮ ರಾಜ್ಯದಲ್ಲಿ ಕಬಿನಿ, ಹಾರಂಗಿ ಎರಡು ಜಲಾಶಯಗಳನ್ನು ಬಿಟ್ಟರೆ ಈ ಭಾಗದಲ್ಲಿ ಯಾವುದೇ ಜಲಾಶಯದಲ್ಲಿ ನೀರು ಇಲ್ಲ. ನನಗೆ ಆತಂಕ ತರುವ ಸಂಗತಿ ಎಂದರೆ ನಮ್ಮ ಕಾರವಾರ ಜಿಲ್ಲೆಯಲ್ಲಿ, ಶಿವಮೊಗ್ಗ ಜಿಲ್ಲೆಯಲ್ಲಿ, ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿತ್ತನೆ ಮಾಡಿದ್ದು ಎಲ್ಲಿ ಒಣಗಿ ಹೋಗುತ್ತದೆಯೋ ಎನ್ನುವ ಭಯ ಅವರಿಗೆ ಕಾಡುತ್ತಿರುವ ವಾತಾವರಣ ಇವತ್ತು ಮೂಡಿದೆ. ಈ ಸಂದರ್ಭದಲ್ಲಿ ತಾವು ಏನು ಬಿತ್ತನೆ ಬೀಜ ಕೊಡುವ ಬಗ್ಗೆ ವಿಶೇಷವಾದ ಕ್ರಮ ತೆಗೆದುಕೊಂಡಿದ್ದೀರಿ, ಈ ಬಗ್ಗೆ ನಿಮಗೆ ನೀವು ಸಮಾಧಾನ ಮಾಡಿಕೊಳ್ಳಬೇಡಿ. ನೀವು 32 ಕೋಟಿ ರೂಪಾಯಿಗಳನ್ನು ಕೊಟ್ಟೆ, ಆಗಲೇ 20 ಕೋಟಿ ರೂಪಾಯಿಗಳನ್ನು ಕೊಟ್ಟರು, ಅದು 52 ಕೋಟಿ ರೂಪಾಯಿ ಆಯಿತು, 25 ಪರ್ಸೆಂಟ್ ಸಬ್ಸಿಡಿ ಎಂದು ಮಾಡಿದ್ದೇ ಅಪರಾಧ. ಅದಾದ ಮೇಲೆ 50 ಪರ್ಸೆಂಟ್ ಎಂದು ಹೇಳಿದಿರಿ, ಅದನ್ನು ವಾಪಸ್ ಕೊಡುತ್ತೇವೆಂದು ಹೇಳಿದಿರಿ, ಅದಕ್ಕೆ ಅವರು ಬಿಲ್ ತಂದು ಕೊಡಬೇಕು. ಇಲ್ಲದಿದ್ದರೆ, ತಕರಾರು ಆಗುತ್ತದೆ. ಕೊಡುವ ಟೈಮ್‌ನಲ್ಲಿ 50 ಪರ್ಸೆಂಟ್ ಸಬ್ಸಿಡಿ ಎಂದರೆ ಪಾಪ ರೈತ ಉಪಯೋಗಿಸಿಕೊಳ್ಳುತ್ತಾನೆ ನಮ್ಮ ರೈತ ಬಿಲ್ ಇಟ್ಟುಕೊಂಡಿರುತ್ತಾನೆಯೇ ಇನ್ನು ಮುಂದೆ ಈ ರೀತಿ ಅನಾಹುತ ಆಗುವುದಕ್ಕೆ ಬಿಡದೆ, ನೀವು ಏನು ಇವತ್ತು, ನಾಳೆ ಆಕಸ್ಮಾತ್ ಬಿತ್ತನೆ ಬೀಜ ನಿಮಗೆ ಗೊತ್ತಿರುವ ಹಾಗೆ ನಾವು ಎಷ್ಟು ಬಿತ್ತನೆ ಆಗಿದೆ ಎಂದು ನೀವೇ ಅಂಕಿ ಅಂಶಗಳನ್ನು ಹೇಳಿದ್ದೀರಿ. ಗಾಬರಿ ತರುವಂತಹ ಅಂಕಿ ಅಂಶಗಳನ್ನು ನೀವು ಹೇಳಿದ್ದೀರಿ. ಅಂದರೆ ಹೋದ ಸಾರಿ ಯಾವ ಪ್ರಮಾಣದಲ್ಲಿ ಬಿತ್ತನೆ ಆಗಿತ್ತು, ಈ

ಬಾರಿ ಯಾವ ಪ್ರಮಾಣದಲ್ಲಿ ಬಿತ್ತನೆ ಆಗಿದೆ, ಎಷ್ಟು ಪ್ರಮಾಣದಲ್ಲಿ ಬಿತ್ತನೆ ಬೀಜದ ಕೊರತೆ ಇರುತ್ತದೆ ಎಂದು ನೀವು ಯೋಚನೆ ಮಾಡಿ ಬಿತ್ತನೆ ಬೀಜವನ್ನು ಸಂಗ್ರಹ ಮಾಡಿಕೊಂಡು ಆಕಸ್ಮಾತ್ ನಾಳೆ ಮರು ಬಿತ್ತನೆ ಮಾಡುವಂತಹ ಸಂದರ್ಭ ಅಥವಾ ಬಿತ್ತನೆ ಆಗದೆ ಇರುವ ಕಡೆ, ಬಿತ್ತನೆ ಮಾಡುವುದರ ಕಡೆ ನೀವು ನೋಡಬೇಕು. ಶೇಂಗಾ ಬೀಜಕ್ಕೂ ಬೇರೆ ಬಿತ್ತನೆ ಬೀಜಕ್ಕೂ ಏನು ವ್ಯತ್ಯಾಸ ಇದೆ? ಶೇಂಗಾ ಶ್ರೀಮಂತರ ಬೆಳೆಯೇ? ಶೇಂಗಾಕ್ಕೆ ಸಬ್ಸಿಡಿ ಬಹಳ ಕಡಿಮೆ ಇದೆ. ಶೇಂಗಾಕ್ಕೆ 50 ಪರ್ಸೆಂಟ್ ಸಬ್ಸಿಡಿ ಕೊಟ್ಟರೆ ಏನಾಗುತ್ತದೆ? ಅವನೂ ಕೂಡ ರೈತ ತಾನೆ? ಇದನ್ನು ಮರುಪರಿಶೀಲನೆ ಮಾಡಿ ಶೇಂಗಾಕ್ಕೆ ಕೂಡ 50 ಪರ್ಸೆಂಟ್ ಸಬ್ಸಿಡಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಅಂದರೆ ಮಾನ್ಯ ಶ್ರೀನಿವಾಸ ಗೌಡರು ಈ ಭಾಗದಲ್ಲಿ ಕುಳಿತು ಮಾತನಾಡಿದ್ದೂ ಕೂಡ ನಾನು ಕೇಳಿದ್ದೇನೆ. ಬಹುಶಃ ಶ್ರೀಮಾನ್ ಬೈರೇಗೌಡರು ಮತ್ತು ಶ್ರೀಮಾನ್ ಶ್ರೀನಿವಾಸಗೌಡರು ಕೃಷಿ ಬಗ್ಗೆ ಮಾತನಾಡುವುದಕ್ಕೆ ನಿಂತರೆ ಇಡೀ ದಿನದ ಸಮಯವನ್ನು ಅವರಿಬ್ಬರೇ ತೆಗೆದುಕೊಳ್ಳುತ್ತಿದ್ದರು. ಆದರೆ ಇವತ್ತು ಮಂತ್ರಿಗಳಾಗಿ ಅವರೇ ಮಾತನಾಡುವುದನ್ನು ನೋಡಿದಾಗ ತುಂಬಾ ಅಸಹಾಯಕ ಸ್ಥಿತಿ ನನಗೆ ಕಾಣುತ್ತದೆ. ಅವರ ಖಾತೆಗೆ ಮೊದಲೇ ಹಣ ಜಾಸ್ತಿ ಇಲ್ಲ. ಕೇಂದ್ರ ಸರ್ಕಾರದ್ದೂ ಬಹಳಷ್ಟು ಹಣ ಬರುತ್ತಿದೆ. ಅದು ಕೂಡ ಅವರ ಇಲಾಖೆಯಲ್ಲಿ ಸಿಬ್ಬಂದಿ ನೇಮಕಾತಿ ಇತ್ತೀಚೆಗೆ ಇಲ್ಲವೇ ಇಲ್ಲ; ನಿಂತು ಹೋಗಿದೆ. ಈ ಸಿಬ್ಬಂದಿ ನೇಮಕಾತಿ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ದಯವಿಟ್ಟು ಹೇಳಬೇಕು. ರೈತರ ಜಮೀನಿಗೆ ಹೋಗಿ ನೋಡದೇ ಇದ್ದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಒಬ್ಬ ಸಿಬ್ಬಂದಿ, ಒಬ್ಬ ಕೃಷಿ ಸಹಾಯಕ ಎಷ್ಟು ಏರಿಯಾ ಸುತ್ತಾಡಬಹುದು, ಅದನ್ನೂ ಕೂಡ ನಾವು ನೀವು ಯೋಚನೆ ಮಾಡಬೇಕು. ಅದಕ್ಕೆ ಸರಿಯಾದ ಸಿಬ್ಬಂದಿ ನೇಮಕ ಮಾಡಿಕೊಡಬೇಕು. ರೈತ ಸಂಪರ್ಕ ಕೇಂದ್ರದಲ್ಲಿ ಕೂಡ ಕೆಲವು ಕಡೆ ಒಬ್ಬ ಅಟೆಂಡರ್ ಇದ್ದಾರೆ, ಯಾರೋ ಕೃಷಿ ಸಹಾಯಕ ಇದ್ದಾನೆ. ಎರಡು ಪಂಚಾಯಿತಿಗಳಿಗೆ ಅಥವಾ ಮೂರು ಪಂಚಾಯಿತಿಗಳಿಗೆ ಒಂದು ಕೃಷಿ ಕೇಂದ್ರ ನಡೆಯುತ್ತಿರುವ ಪರಿಸ್ಥಿತಿ ಇದೆ. ಇದಕ್ಕೆ ಏನು ಮಾಡುತ್ತೀರಿ ಎಂಬ ಬಗ್ಗೆ ಹೇಳಲಿಲ್ಲ. ಹೀಗೆ ಇವು ಶಕ್ತಿಯುತವಾಗಿ ನಡೆಯುವುದರ ಬಗ್ಗೆ ಹಿಂದಿನ ಸರ್ಕಾರವು ಸಹ ಹೇಳಿತ್ತು ರೈತ ಸಂಪರ್ಕ ಕೇಂದ್ರಗಳು ಮತ್ತು ನಮ್ಮ ಎ.ಪಿ.ಎಂ.ಸಿ.ಗಳು ಲಿಂಕ್ ಆಗಿ ರೈತರಿಗೆ ಸಲಹೆ ಕೊಡುತ್ತಾರೆ, ಮುಂದೆ ತಮ್ಮ ಬೆಳೆಗಳಿಗೆ ಯಾವ ಬೆಲೆ ಬರುತ್ತದೆ, ಯಾವುದನ್ನು ಬಿತ್ತನೆ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತಾರೆ ಎಂದು ಹೇಳುವುದನ್ನು ಕಳೆದ ಹಲವಾರು ವರ್ಷಗಳಿಂದ ಹೇಳುತ್ತಾ ಬಂದಿದ್ದಾರೆ. ನೀವು ಆಗ ಈ ಕಡೆ ಕುಳಿತಿದ್ದಿರಿ, ಆದರೆ ನೀವು ಇದರ ಬಗ್ಗೆ ಏನೂ

ಹೇಳಲಿಲ್ಲ. ಇವತ್ತಿನ ದಿವಸ ಪವರ್ ಟಿಲ್ಲರ್ ಮತ್ತು ಬೇರೆ ಬೇರೆ ಕೃಷಿ ಉಪಕರಣಗಳಿಗೆ ಇವತ್ತಿಗೂ ಅಗಾಧವಾದ ಬೇಡಿಕೆ ಇದೆ. ಮೆಕ್ಯಾನೈಸ್ಡ್ ಮಾಡುವಂತಹ ದೃಷ್ಟಿಯಿಂದ ಏನು ಯೋಜನೆಗಳನ್ನು ಕೇಂದ್ರದವರು ಮತ್ತು ನೀವು ಜಾರಿಗೆ ತಂದಿದ್ದೀರಿ ಇದರ ಬಗ್ಗೆ ಬಹಳ ಬೇಡಿಕೆ ಇದೆ. ಇದನ್ನು ಜಾಸ್ತಿ ಮಾಡುವ ನಿಟ್ಟಿನಲ್ಲಿ ಈ ಬೇಡಿಕೆಗೆ ಅನುಗುಣವಾಗಿ ನೀವು ಏನನ್ನು ಮಾಡಲಿಕ್ಕೆ ಹಣವನ್ನು ಯಾವ ರೀತಿ ಒದಗಿಸುತ್ತೀರಿ ಹೇಳಲಿಲ್ಲ. ದಯವಿಟ್ಟು ಈಗಲಾದರೂ ಹೇಳಬೇಕೆಂದು ವಿನಂತಿ ಮಾಡುತ್ತೇನೆ. ನೀರು ಇಂಗಿಸುವ ಬಗ್ಗೆ ವಿಶೇಷವಾಗಿ ಆದ್ಯತೆ ಕೊಡಬೇಕೆಂದು ಕೃಷಿ ಇಲಾಖೆಯಲ್ಲಿ ಇದ್ದರೂ ಕೂಡ ಇದಕ್ಕೆ ಹಣ ಇಲ್ಲ. ಎಲ್ಲಕ್ಕಿಂತ ಹೆಚ್ಚಿಗೆ ಕೃಷಿ ವಿಶ್ವವಿದ್ಯಾನಿಲಯ ಸೊರಗುತ್ತಿದೆ. ನೀವು ಏನೇ ಹೇಳಿ, ಎಷ್ಟೋ ತಳಿಗಳು ನಮಗೆ ಎಷ್ಟು ದೊಡ್ಡ ಟೊಮ್ಯಾಟೋ ಬರುತ್ತಿದೆ, ಎಷ್ಟೋ ಹೈಬ್ರಿಡ್ ತಳಿಗಳನ್ನು ತಂದಿದ್ದೇವೆ ಎಂದರೆ ಅದು ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನೆಯ ಫಲ. ಅದನ್ನು ಇವತ್ತು ಸೊರಗುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದೇವೆ. ಕೃಷಿ ವಿಶ್ವವಿದ್ಯಾನಿಲಯದ ನಮ್ಮ ವೈಸ್ ಛಾನ್ಸಲರ್ ಜೊತೆ ಮಾತನಾಡುವಾಗ ಹೇಳಿದರು, ಒಂದು ಗೊಬ್ಬರದ ಚೀಲಕ್ಕೆ 5 ಪೈಸೆ ವಿಶ್ವವಿದ್ಯಾನಿಲಯದ ತೆರಿಗೆ ಎಂದು ವಸೂಲಿ ಮಾಡಿದರೆ ವಿಶ್ವವಿದ್ಯಾನಿಲಯಕ್ಕೆ ಅಷ್ಟು ಹಣ ಬರುತ್ತದೆ, ನಮಗೆ ಏನೂ ಹಣ ಕೊಡದೆ ಇದ್ದರೆ ನಾವು ವಿಶ್ವವಿದ್ಯಾನಿಲಯಗಳನ್ನು ನಡೆಸುವುದು ಹೇಗೆ? ನಾವು ಯಾವ ರೀತಿ ಸಂಶೋಧನೆಗಳನ್ನು ಮಾಡಬಹುದು? ಇದನ್ನು ಅವರು ಒಂದು ತರಹ ಹತಾಶರಾಗಿ ಯೋಚನೆ ಮಾಡುತ್ತಾರೆ. ಆ ವಿಶ್ವವಿದ್ಯಾನಿಲಯಗಳನ್ನು ಸ್ಟ್ರೆಂಥನ್ ಮಾಡುವುದಕ್ಕೆ ಇಲಾಖೆ ವತಿಯಿಂದ ಏನು ಕೊಡುತ್ತೀರಿ? ಸರ್ಕಾರ ವಿಶೇಷ ಆದ್ಯತೆ ಕೊಡುತ್ತದೆಯೇ? ಲ್ಯಾಬ್‌ನಲ್ಲಿ ಏನು ಕಂಡುಹಿಡಿಯುತ್ತಾರೆ ಅದು ಲ್ಯಾಂಡ್‌ಗೆ ಹೋಗಿ ಮುಟ್ಟಬೇಕು. ಅದರ ನಡುವಿನ ಕೊಂಡಿ ನೀವು ಆಗಬೇಕು. ಆ ನಿಟ್ಟಿನಲ್ಲಿ ವಿಶೇಷವಾದ ಪ್ರಯತ್ನ ಆಗಬೇಕೆಂದು ಹೇಳಿ ನಮ್ಮ ಪಾಟೀಲರು ಹೇಳಿದರು. ಸಾಯಿಲ್ ಟೆಸ್ಟ್ ಮತ್ತು ವಾಟರ್ ಟೆಸ್ಟ್ ಲ್ಯಾಬೋರೇಟರೀಸ್ ಸರ್ಕಾರದ್ದು ಇವೆ. ಇವು ಸಂಪೂರ್ಣವಾಗಿ ಸ್ಥಗಿತ ಆಗಿವೆ. ಒಳ್ಳೆಯ ರಿಸಲ್ಟ್ ಕೊಡುತ್ತಾ ಇಲ್ಲ, ಅದರಲ್ಲಿ ಈಗ ಸಿಬ್ಬಂದಿ ಇಲ್ಲ, ಅದಕ್ಕೆ ಬೇಕಾದಂಥ ಕೆಮಿಕಲ್ಸ್ ಇಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ಎಲ್ಲೋ ಜಿಲ್ಲೆಗೊಂದು ಲ್ಯಾಬ್ ಇದ್ದದ್ದೂ ಕೂಡ ಈಗ ಹಾಳುಬಿದ್ದಿದೆ. ಇದನ್ನು ಸರಿಪಡಿಸುವುದಕ್ಕೆ ಇಲಾಖೆಯ ವತಿಯಿಂದ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಹೇಳಿದರೆ ಬಹುಶಃ ನಿಮ್ಮ ಇಲಾಖೆ ಒಂದಷ್ಟು ಶಕ್ತಿಯುತವಾಗಿ ಕೆಲಸ ಮಾಡಬಹುದು. ರೈತರ ಶಕ್ತಿಯನ್ನು ಜಾಸ್ತಿ ಮಾಡಬಹುದು ಎಂದು ನನಗನ್ನಿಸುತ್ತದೆ.

ಶ್ರೀ ಸಿ.ಸಿ. ಪಾಟೀಲ್ :- ಮಾನ್ಯ ಸಚಿವರೆ, ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಹೇಳಿದ ಹಾಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ

ಸರ್ಕಾರದ ಹಣ ಕ್ರಮವಾಗಿ 7 ಸಾವಿರ ಕೋಟಿ ರೂ.ಗಳು ಮತ್ತು 70 ಸಾವಿರ ಕೋಟಿ ರೂ.ಗಳು ಎಂದು ಹೇಳಿದಿರಿ. ಇದನ್ನು ಜಿಲ್ಲಾವಾರು ಶಾಸಕರಿಗೆ ಕೊಡತಕ್ಕಂಥ ಒಂದು ವ್ಯವಸ್ಥೆ ಮಾಡಿ. ಇವೊತ್ತು ಸ್ವಜಲ ಜಲಾನಯನ ಯೋಜನೆ ಬಗ್ಗೆ ಹೇಳಿದಿರಿ. ಆದರೆ ಇವೊತ್ತು ಸ್ವಜಲ ಜಲಾನಯನ ಯೋಜನೆಯೊಳಗೆ ಅಭಿವೃದ್ಧಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆಯೋ ಅದು ಬಹಳ ಕಡಿಮೆ ಇದೆ. ಕೋಟಿ ಗಟ್ಟಲೆ ಹಣ ಇದ್ದರೂ ಸಹಿತ ತರಬೇತಿಗೆ ಹೆಚ್ಚು ಖರ್ಚು ಮಾಡುತ್ತಾರೆ. ಆದರೆ ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಹಣ ಇಲ್ಲ. ಇವೊತ್ತು ತರಬೇತಿಗೆ ಹೆಚ್ಚು ಹಣ ಖರ್ಚು ಮಾಡುತ್ತಾರೆ. ಅಭಿವೃದ್ಧಿಗೆ ಸ್ವಲ್ಪ ಹಣ ಖರ್ಚು ಮಾಡುತ್ತಾರೆ. ಆದರೆ ಅವರು ಕೆಲಸ ಮಾಡುವಾಗ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಆಗಲಿ, ಜಿಲ್ಲಾ ಪಂಚಾಯತಿ ಸದಸ್ಯರಿಗೆ ಆಗಲಿ, ಯಾರಿಗೂ ಮಾಹಿತಿ ಕೊಡುವುದಿಲ್ಲ. ಇವೊತ್ತು ರೈತರಿಗೂ ಮತ್ತು ಯಾವುದೋ ಎನ್.ಜಿ.ಓ. ಗಳಿಗೆ ಕೊಟ್ಟಿದ್ದೀರಿ, ಆ ಹಣ ಎಷ್ಟರಮಟ್ಟಿಗೆ ಅಲ್ಲಿ ಉಪಯೋಗ ಆಗಬೇಕು ಎನ್ನುವುದನ್ನು ನೀವು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಅದು ಸರಿಯಾಗಿ ವಿನಿಯೋಗ ಆಗತಕ್ಕಂಥ ಕೆಲಸವನ್ನು ಮಾಡಬೇಕು.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ :- ಮಾನ್ಯ ಅಧ್ಯಕ್ಷರೆ, ಹೋಬಳಿಗೆ ಒಂದು ಎಂದು ಹೇಳಿ ಕೃಷಿ ಕೇಂದ್ರಗಳನ್ನು ತೆರೆದಿದ್ದಾರೆ. ಅಂದರೆ 126 ಹಳ್ಳಿಯೊಳಗೆ ಮೂರು ಹೋಬಳಿ ಬರುತ್ತವೆ. ಮೂರು ಹೋಬಳಿಯೊಳಗೆ ಏನೂ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಕೇಂದ್ರಗಳನ್ನು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಟ್ರ್ಯಾಕ್ಟರ್‌ಗೆ ಸಬ್ಸಿಡಿ ಕೊಡುವ ವಿಚಾರದ ಬಗ್ಗೆ ಹೇಳುವುದೇನೆಂದರೆ ಮೊದಲು ರೈತರು ಕಡಿಮೆ ಪ್ರಮಾಣದಲ್ಲಿ ಟ್ರ್ಯಾಕ್ಟರನ್ನು ಕೊಂಡುಕೊಳ್ಳುತ್ತಿದ್ದರು. ಆದರೆ ಈಗ ಬಹಳ ಎಂದರೂ ಒಂದು ತಾಲ್ಲೂಕಿಗೆ ಎರಡು ಅಥವಾ ಮೂರು ಟ್ರ್ಯಾಕ್ಟರ್‌ಗಳಿಗೆ ಸಬ್ಸಿಡಿ ಕೊಡುತ್ತಿದ್ದಾರೆ. ಆದರೆ ಇವೊತ್ತು ಒಂದು ತಾಲ್ಲೂಕಿಗೆ 30 ರಿಂದ 40 ಟ್ರ್ಯಾಕ್ಟರ್‌ಗಳನ್ನು ಒಂದು ವರ್ಷಕ್ಕೆ ರೈತರು ಖರೀದಿ ಮಾಡುತ್ತಿದ್ದಾರೆಯಾದ ಕಾರಣ ಇನ್ನೂ ಹೆಚ್ಚಿನ ಟ್ರ್ಯಾಕ್ಟರ್‌ಗಳಿಗೆ ಸಬ್ಸಿಡಿಯನ್ನು ಕೊಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ) :- ಮಾನ್ಯ ಅಧ್ಯಕ್ಷರೆ, ನಾನು ಆಗಲಿ ಮಾತನಾಡುವಾಗ ಸಚಿವರು ಹೊರಗೆ ಹೋಗಿದ್ದರು. ನಾನು ಈಗ ಮಾನ್ಯ ಕೃಷಿ ಸಚಿವರನ್ನು ಒಂದು ವಿಷಯ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಿಮಗೆ ಗೊತ್ತಿದೆ 105 ಪರ್ಸೆಂಟ್ ಬಿತ್ತನೆಯನ್ನು ಮುಂಗಾರಿನಲ್ಲಿ ಮಾಡಲಾಗಿದೆ. ಬಹುತೇಕ 70 ಪರ್ಸೆಂಟ್ ಬಿತ್ತನೆ ಮುಂಗಾರಿನದೇ ಇರುತ್ತದೆ. ಹಿಂಗಾರಿನದು ಹಾರ್ಡ್‌ಲಿ 30 ಪರ್ಸೆಂಟ್ ಇದೆ. ನಿಮ್ಮ ಎಕನಾಮಿಕ್ ಸರ್ವೆ ರಿಪೋರ್ಟ್‌ನಲ್ಲಿ ತಾವೇ ಒಪ್ಪಿಕೊಂಡಿದ್ದೀರಿ. 70 ಲಕ್ಷ

ಹೆಕ್ಟೇರ್‌ನಲ್ಲಿ ಈಗಾಗಲೇ 15 ಲಕ್ಷ ಹೆಕ್ಟೇರ್ ತೇವಾಂಶ ಇಲ್ಲದೇ ಇರುವುದಕ್ಕೆ, ಒಣಗಿಹೋಗಿದೆ ಎಂದು ತಾವೇ ಹೇಳುತ್ತೀರಿ. ಹಾಗಾದರೆ ಈ ಸಾರಿ ಬರಗಾಲ ಇದೆಯೋ ಇಲ್ಲವೋ ಎಂಬ ಬಗ್ಗೆ ತಾವೇ ಸ್ಪಷ್ಟಪಡಿಸಬೇಕು. ಅದಕ್ಕೆ ನೀವು ಹೇಳಬಹುದು, ಇದನ್ನು ರೆವಿನ್ಯೂ ಇಲಾಖೆಯವರು ಮಾಡಬೇಕು, ನಾನು ಮಾಡುವುದಕ್ಕೆ ಆಗುವುದಿಲ್ಲ ಎಂದು. ನೀವು ಜಾಯಿಂಟ್ ಆಗಿ ಕುಳಿತು ಏಕೆ ವಿಚಾರ ಮಾಡುವುದಿಲ್ಲ? ಈಗ ನೀವು ಹೇಳಿದಿರಿ, ಸೀಡ್ಸ್‌ದು 9 ಲಕ್ಷ ಟನ್ ಡಿಮ್ಯಾಂಡ್ ಇತ್ತು ಎಂದು, ನಿಮ್ಮ ಸಪ್ಲೈ ಎಷ್ಟಾಗಿದೆ ಎಂಬ ಬಗ್ಗೆ ನಿಮಗೇ ಬಿಡುತ್ತೇನೆ, ನನಗೆ ಗೊತ್ತಿಲ್ಲ. ಆದರೆ ಇಷ್ಟೊಂದು ಜನ ರೈತರು ಬಿತ್ತನೆ ಮಾಡಿದ ಮೇಲೆ ಇವೊತ್ತು ತೇವಾಂಶ ಇಲ್ಲದೇ ಇರುವುದಕ್ಕೆ ಅರ್ಧದಷ್ಟು ಬೆಳೆ ಹಾನಿ ಆಗಿದೆ ಎಂದು ಹೇಳಿ ಒಂದು ವಿಚಾರ ಇದೆ. ಈ ವಿಚಾರದ ಬಗ್ಗೆ ತಮ್ಮ ಅನಿಸಿಕೆ ಏನು ಎಂದು ತಾವು ಸ್ಪಷ್ಟಪಡಿಸಬೇಕು. ಇನ್ನು ಎರಡನೆಯದಾಗಿ ಎಣ್ಣೆಕಾಳುಗಳ ಬಿತ್ತನೆಯಲ್ಲಿ ನಿಮಗೆ ಗೊತ್ತಿದೆ, ಕಳೆದ 2003–2004ರಲ್ಲಿ ತಮ್ಮ ಟಾರ್ಗೆಟ್‌ನ್ನು ತಾವು ರೀಚ್ ಆಗಿಲ್ಲ. 2003ರಲ್ಲಿ 17 ಲಕ್ಷ ಟನ್ ಎಣ್ಣೆಕಾಳುಗಳ ಈಲ್ಡ್ ಎಕ್ಸ್‌ಪೆಕ್ಟ್ ಮಾಡಿದ್ದಿರಿ, ಆದರೆ ಬಂದದ್ದು 11 ಲಕ್ಷ ಟನ್. ಇನ್ನು ಹತ್ತಿ ಕೂಡ 10 ಲಕ್ಷ ಟನ್ ಮೇಲೆ ನೀವು ಎಕ್ಸ್‌ಪೆಕ್ಟ್ ಮಾಡಿದ್ದಿರಿ, ಆದರೆ ಬಂದಿರುವುದು ಮೂರು ಲಕ್ಷ ಟನ್ ಮಾತ್ರ. ಈ ತರಹ ಈ ವರ್ಷ ಕೂಡ ನೀವು ಹಿಂಗಾರು ಮತ್ತು ಮುಂಗಾರು ಸೇರಿ ಒಂದು ಲಕ್ಷ ಎರಡು ಟನ್ ಅಥವಾ ಒಂದು ಲಕ್ಷದ ಎರಡು ಸಾವಿರ ಟನ್ ಎಕ್ಸ್‌ಪೆಕ್ಟ್ ಮಾಡಬಹುದು. ಈ ಸಾರಿಯಾದರೂ ತಾವು ರೀಚ್ ಆಗ್ತೀರಾ ಎಂಬ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು. ಮಾನ್ಯ ಬೈರೇಗೌಡರ ವಿಚಾರದಲ್ಲಿ ತಾವೂ ಕೂಡ ಬಹಳ ಆಸಕ್ತಿಯಿಂದ ಕಾರ್ಯ ನಿರ್ವಹಿಸಿದ್ದೀರಿ. ಈಗಾಗಲೇ ತಾವು ಉತ್ತರ ಕೊಡುವಾಗ ಹೇಳಿದಿರಿ, ನಾನು 700 ಜನ ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್‌ನ್ನು ಅಪಾಯಿಂಟ್ ಮಾಡಿದ್ದೇನೆ ಎಂದು ಅಗ್ರಿಕಲ್ಚರ್ ಅಸಿಸ್ಟೆಂಟ್ಸ್ ಬಿ.ಎಸ್ಸಿ (ಅಗ್ರಿ) ಆದವರನ್ನು ನೇಮಕ ಮಾಡಬೇಕು ಎನತಕ್ಕಂಥದ್ದು ಇತ್ತು. ಈಗ ನೀವು ಯಾರನ್ನೋ ಒಬ್ಬ ಗ್ರಾಮ ಸೇವಕನನ್ನು ನೇಮಕಾತಿ ಮಾಡಿದರೆ ಅವನಿಗೆ ಮಣ್ಣು ಅಂದರೆ ಗೊತ್ತಿರುವುದಿಲ್ಲ, ನೀರು ಅಂದರೆ ಗೊತ್ತಿರುವುದಿಲ್ಲ, ಸೀಡ್ಸ್ ಬಗ್ಗೆಯೂ ಕೂಡ ಗೊತ್ತಿರುವುದಿಲ್ಲ, ಪೆಸ್ಟಿಸೈಡ್ಸ್ ಬಗ್ಗೆ ಕೂಡ ಗೊತ್ತಿರುವುದಿಲ್ಲ. ನೀವು ಈ ಬಗ್ಗೆ ಈಗಲಾದರೂ ನಿಮ್ಮ ಇಲಾಖೆಯಲ್ಲಿ ಬದಲಾವಣೆಯನ್ನು ತರತಕ್ಕಂಥ ಪ್ರಯತ್ನವನ್ನು ಮಾಡುತ್ತೀರಾ? ಇನ್ನು ಮಾನ್ಯ ಬೈರೇಗೌಡರ ಕೃಷಿ ನೀತಿ ಏನಾಯಿತು?

ಶ್ರೀ ಕೆ. ಶ್ರೀನಿವಾಸ ಗೌಡ (ಕೃಷಿ ಸಚಿವರು) :– ಹೇಳಿದ್ದೇವಲ್ಲಾ.

ಶ್ರೀ ಶಿವಾನಂದ. ಪಾಟೀಲ್ :– ತಾವು ಅದರ ಬಗ್ಗೆ ಏನೂ ಹೇಳಿಲ್ಲ. ಕೃಷಿ ನೀತಿ ಬಗ್ಗೆ ತಮ್ಮ ಅಭಿಪ್ರಾಯ, ಅಲ್ಲಿಗೆ ತಾವೇನು ಇವೊತ್ತು ಸಾವಯವ ಕೃಷಿ ಪರ ಇದ್ದೀರೋ

ಅಥವಾ ಫರ್ಟಿಲೈಸರ್ ಪರ ಇದ್ದೀರೋ? ಏಕೆಂದರೆ ತಾವು ಎರಡನ್ನೂ ನಿರ್ವಹಿಸುತ್ತಿದ್ದೀರಿ. ಇವೊತ್ತು ಒಂದು ಕಡೆ ತಾವು ಇಫ್ಕೋ ಅಧ್ಯಕ್ಷರು, ಇನ್ನೊಂದು ಕಡೆ ಸಾವಯವ ಕೃಷಿ ಬಗ್ಗೆ ಮಾತನಾಡುತ್ತಿದ್ದೀರಿ. ಅದಕ್ಕಾಗಿ ತಮ್ಮ ಸ್ಪಷ್ಟ ನಿರ್ಧಾರವೇನು? ಇವೊತ್ತು ಆರ್ಗ್ಯಾನಿಕ್ ಮೆನ್ಯೂರ್ ಬಗ್ಗೆ ಕೂಡ ಹೇಳಬೇಕಾಗುತ್ತದೆ. 10 ಲಕ್ಷ ಟನ್ ಕನ್ಸ್‌ಷನ್ ಆಗಬೇಕಾಗಿತ್ತು. ಅದರ against ಬಹಳ ಎಂದರೂ ಆರು ಲಕ್ಷ ಟನ್ ಆಗಿದೆ. ಅದಕ್ಕಾಗಿ ಈ ನಾಲ್ಕು ವಿಚಾರಗಳಲ್ಲಿ ತಮ್ಮ ಸ್ಪಷ್ಟ ವಿಚಾರವೇನು ಎಂದು ಹೇಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಅಧ್ಯಕ್ಷರೆ, ಇವರು ಡ್ರಿಪ್ ಇರಿಗೇಶನ್‌ಗೆ 70 ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಹೇಳಿದರು. ರೈತರು ಎಲ್ಲಿ ಪರ್ಚೇಸ್ ಮಾಡುತ್ತಾರೆ ಆ ಪರ್ಚೇಸ್ ಮಾಡಿದ ಏಜೆನ್ಸಿ ಅಥವಾ ಕಂಪನಿ ಮುಖಾಂತರ ಅಲ್ಲಿಗೆ ಇವರು ಕೊಡಬೇಕು. ಇವರು ಆ ರೀತಿ ಮಾಡುವುದಿಲ್ಲ. ಇವರ ಡಿಪಾರ್ಟ್‌ಮೆಂಟನವರು ಯಾವ ಏಜೆನ್ಸಿ ಮುಖಾಂತರ ಪರ್ಚೇಸ್ ಮಾಡಬೇಕು ಎಂದು ಹೇಳುತ್ತಾರೆ. ಇಲ್ಲಿನಾಗುತ್ತದೆಂದರೆ ಈ ಪೈಪ್‌ಗಳದ್ದು ಹಾಗೂ ಇನ್ನುಳಿದ ಮಟೀರಿಯಲ್ಸ್‌ಗಳ ಗುಣಮಟ್ಟ ಸರಿಯಾಗುವುದಿಲ್ಲ. ಇದಲ್ಲದೇ ಮಾರುಕಟ್ಟೆ ಬೆಲೆಗಿಂತಲೂ ಬೆಲೆ ಹೆಚ್ಚಾಗಿರುತ್ತದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಏನು ಒತ್ತಾಯ ಮಾಡುತ್ತೇನೆಂದರೆ, ರೈತ ಎಲ್ಲಿ ಪರ್ಚೇಸ್ ಮಾಡಿರುತ್ತಾನೋ ಅಲ್ಲಿ ಸಬ್ಸಿಡಿ ಕೊಡುವಂಥ ವ್ಯವಸ್ಥೆ ಮಾಡಬೇಕು.

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ :– ಮಾನ್ಯ ಅಧ್ಯಕ್ಷರೆ, ರೈತರು ಬೆಳೆಯತಕ್ಕಂಥ ಎಲ್ಲಾ ಬೆಳೆಗಳ ಮೇಲೆ ಸಾಮಾನ್ಯವಾಗಿ ರೋಗ ಜಾಸ್ತಿ ಇದೆ ಎನ್ನತಕ್ಕಂಥ ಮಾತನ್ನು ಸಾಕಷ್ಟು ಹೇಳಿದರು. ಇವೊತ್ತಿನ ದಿನಗಳಲ್ಲಿ 8 ಚೀಲ ಬೆಳೆಯತಕ್ಕಂಥ ರೈತ ಇಂದು 40 ಚೀಲ ಬೆಳೆಯನ್ನು ಬೆಳೆಯುತ್ತಿದ್ದಾನೆ. 25 ಟನ್ ಬೆಳೆಯತಕ್ಕಂಥ ರೈತರು ಇವೊತ್ತು 100 ಟನ್‌ವರೆಗೆ ಕಬ್ಬನ್ನು ಬೆಳೆಯುವಂಥ ಕೃಷಿ ಬೀಜನ್ನು ಸಂಶೋಧಕರು ಕಂಡುಹಿಡಿದು ಇವೊತ್ತು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ರೋಗ ನಿರೋಧಕ ಶಕ್ತಿ ಉಳ್ಳಂಥ ಬೀಜಗಳನ್ನು ತಯಾರು ಮಾಡುವ ಹಿನ್ನಲೆಯಲ್ಲಿ ರೋಗ ನಿರೋಧಕ ಶಕ್ತಿ ಉಳ್ಳಂಥ ಬೀಜಗಳನ್ನು ತಯಾರು ಮಾಡುವ ಹಿನ್ನೆಲೆಯಲ್ಲಿ ಕೃಷಿ ಮಂತ್ರಿಗಳು ಇವೊತ್ತು ಹೇಳಿಲ್ಲ ಎನ್ನುವುದನ್ನು ಅವರ ಗಮನಕ್ಕೆ ತರುತ್ತೇನೆ.

ಶ್ರೀ ಶಿವರಾಜ ಸಜ್ಜನರ್ :– ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವಂಥ ಸಮಯದಲ್ಲಿ ಚಮತ್ಕಾರ ಹತ್ತಿ ಪರಿಹಾರದ ಬಗ್ಗೆ ಮಾತನಾಡಿದ್ದೆ. ಅದರ ಬಗ್ಗೆ ಮಾನ್ಯ ಸಚಿವರು ಏನೂ ಹೇಳಲಿಲ್ಲ. ಇವೊತ್ತು ಹಾವೇರಿ ತಾಲ್ಲೂಕಿನಲ್ಲಿರುವಂಥ ಮೆಣಸಿನಕಾಯಿ

ಸಂಶೋಧನಾ ಕೇಂದ್ರಕ್ಕೆ ಹೆಚ್ಚಿನ ಹಣಕಾಸಿನ ನೆರವನ್ನು ಕೊಡಬೇಕು ಎನ್ನುವುದರ ಬಗ್ಗೆಯೂ ನಾನು ಮಾತನಾಡಿದ್ದೆ. ಅದರ ಬಗ್ಗೆಯೂ ಸನ್ಮಾನ್ಯ ಸಚಿವರು ಏನೂ ಪ್ರಸ್ತಾವವನ್ನೇ ಮಾಡಿಲ್ಲ.

ಶ್ರೀ ವಿಶ್ವನಾಥ ಕರಿಬಸಪ್ಪ ಮಾಮನಿ :– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಕೃಷಿ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ, ನಾನು ಕೃಷಿ ವಿಮೆ ಬಗ್ಗೆ ಪ್ರಸ್ತಾವನೆ ಮಾಡಿದ್ದೆ. ನನಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ, ಆದರೂ ಕೂಡ ಅವರಿಗೆ ಹೋಗಿ ನಾನು ಹೇಳಿದ್ದೆ; ಉದಾಹರಣೆಗಾಗಿ ನನ್ನ ತಾಲ್ಲೂಕಿನಲ್ಲಿ ಆದಂಥ ವ್ಯತ್ಯಾಸವೆಂದರೆ ಕೃಷಿ ವಿಮೆಯಲ್ಲಿ ಪಕ್ಕದಲ್ಲಿ ಇರುವಂಥ ತಾಲ್ಲೂಕಿಗೆ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಹಾರ ಸಿಕ್ಕಿದೆ. ಆದರೆ ನನ್ನ ತಾಲ್ಲೂಕಿಗೆ ಬಹಳಷ್ಟು ಕಡಿಮೆ ಪರಿಹಾರ ಸಿಕ್ಕಿದೆ. ಅಲ್ಲಿ ಭೌಗೋಳಿಕವಾಗಿ ಹತ್ತಿರ ಇದ್ದರೂ ಕೂಡ ಒಂದೇ ತೆರನಾದ ನೆಲ ಇದ್ದರೂ, ಭೂಮಿ ಇದ್ದರೂ ಕೂಡ, ಅಷ್ಟೇ ಪ್ರಮಾಣದಲ್ಲಿ ಮಳೆ ಆದರೂ ಕೂಡ ಪರಿಹಾರದ ವಿಚಾರದಲ್ಲಿ ಬಹಳಷ್ಟು ಪ್ರಮಾಣದಲ್ಲಿ ವ್ಯತ್ಯಾಸವಾಗಿದೆ. ವಿಶೇಷವಾಗಿ ನನ್ನ ತಾಲ್ಲೂಕಿನ ಪಕ್ಕದಲ್ಲಿಯೇ ಇರತಕ್ಕಂಥ ಧಾರವಾಡ ಗ್ರಾಮೀಣ ಪ್ರದೇಶಕ್ಕೆ ಹೋಲಿಸಿದರೆ, ನಮ್ಮಲ್ಲಿ ಸುಮಾರು ಒಂದು ಸಾವಿರ ರೂಪಾಯಿ ಕಾಂಪನ್‌ಸೇಶನ್ ಸಿಕ್ಕಿದರೆ ಅಲ್ಲಿ ಹತ್ತು ಸಾವಿರ ರೂಪಾಯಿಗಳಷ್ಟು ಕಾಂಪನ್‌ಸೇಶನ್ ಸಿಕ್ಕುತ್ತದೆ. ಬಹಳಷ್ಟು ವ್ಯತ್ಯಾಸವಾಗುತ್ತಿದೆ. ನಾನು ಈ ಬಗ್ಗೆ ಕೃಷಿ ಅಧಿಕಾರಿಗಳನ್ನು ಕೇಳಿದರೆ ಅವರು ಸಮರ್ಥನೆಯನ್ನು ಮಾಡಿಕೊಳ್ಳುತ್ತಾರೆ. ನಾವು ಮಾಡಿರುವುದು ಸರಿ ಇದೆಯೆಂದು ಸಮರ್ಥನೆಯನ್ನು ಮಾಡಿಕೊಳ್ಳುತ್ತಾರೆ. ನಮ್ಮ ಕಡೆಯಲ್ಲಿರತಕ್ಕಂಥ ಕೃಷಿಕರು ಏನು ಹೇಳುತ್ತಿದ್ದಾರೆಂದರೆ ನೀವು ಶಾಸಕರಾಗಿ ಏನುಕೆಲಸವನ್ನು ಮಾಡುತ್ತಿದ್ದೀರಿ. ಆ ಕೃಷಿಯ ವಿಮೆ ಬಗ್ಗೆ ನಮ್ಮದೇನೂ ಹಸ್ತಕ್ಷೇಪ ವಿರುವುದಿಲ್ಲವೆಂದು ಅವರಿಗೆ ಹೇಳಿದರೂ ಕೂಡ ಅವರ್ಯಾರು ಕೇಳುವುದಿಲ್ಲ. ಪಕ್ಕದಲ್ಲಿಯೇ ಇರತಕ್ಕಂಥ ಭೂಮಿಗೆ; ಅಂದರೆ ನಮ್ಮ ಕಡೆಯ ಭೂಮಿಗೆ ಒಂದು ಸಾವಿರ ರೂಪಾಯಿ ಸಿಗುವಾಗ ಆ ಭೂಮಿಗೆ ಹತ್ತು ಸಾವಿರ ರೂಪಾಯಿ ಕಾಂಪನ್‌ಸೇಶನ್ ಸಿಗುತ್ತದೆ ಈ ಬಗ್ಗೆ ಏನಾದರೂ ಒಂದು ಸಮಗ್ರವಾದ ಚಿಂತನೆಯನ್ನು ಮಾಡಿ ಕೃಷಿ ವಿಮೆ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕೊಡುವಂಥ ವ್ಯವಸ್ಥೆಯನ್ನು ಮೊದಲು ಶಾಸಕರಿಗೆ ಕೊಡಿ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್ :– ಮಾನ್ಯ ಹಣಕಾಸು ಸಚಿವರೆ ಎಣ್ಣೆಕಾಳು ಬೀಜದ ಮೇಲೆ ಪುನಃ ಸೇಲ್ಸ್ ಟ್ಯಾಕ್ಸ್ (ವ್ಯಾಟ್) ಹಾಕಿದ್ದೀರಿ ಮೊದಲು ಇರಲಿಲ್ಲ. ದಯವಿಟ್ಟು ಮಾನ್ಯ ಉಪಮುಖ್ಯಮಂತ್ರಿಗಳು ಇಮ್ಮೀಡಿಯೆಟ್ ಆಗಿ ಅದನ್ನು ಎಕ್ಸ್‌ಂಪ್ಟ್ ಮಾಡಿಸಬೇಕು. ಎಣ್ಣೆಕಳು ಬೀಜದ ಮೇಲೆ 4 ಪರ್ಸೆಂಟ್ ಟ್ಯಾಕ್ಸ್ ರೀ–ಇಂಟ್ರಡ್ಯೂಸ್ ಮಾಡಿದ್ದಾರೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಈ ಬಿತ್ತನೆ ಬೀಜ ಇದೆಯಲ್ಲಾ ಎಣ್ಣೆಕಾಳುಗಳದ್ದು ಅದಕ್ಕೆ ಟ್ಯಾಕ್ಸ್ ಇಲ್ಲ, ಎಕ್ಸ್‌ಂಪಶನ್ ಇದೆ.

ಶ್ರೀ ಡಿ.ಆರ್. ಪಾಟೀಲ್ :– ಟ್ಯಾಕ್ಸ್ ಹಾಕಿದ್ದೀರಿ ಸಾರ್ ಮೊದಲು ಇರಲಿಲ್ಲ.

ಶ್ರೀ ಸಿದ್ಧರಾಮಯ್ಯ :– ಡಿ.ಆರ್. ಪಾಟೀಲರೆ, ತಾವು ಕುಳಿತುಕೊಳ್ಳಿ. ನಾನು ಅದರ ಬಗ್ಗೆ ಹೇಳುತ್ತೇನೆ. ಈಗ ಬಿತ್ತನೆ ಬೀಜ ಇದೆಯಲ್ಲಾ, ಸೋಯಿಂಗ್ ಪರ್ಪಸ್‌ಗೆ ಉಪಯೋಗ ಮಾಡತಕ್ಕಂಥ ಬೀಜಕ್ಕೆ ನೋ ಟ್ಯಾಕ್ಸ್; ಅದಕ್ಕೆ ಎಕ್ಸ್‌ಂಪಶನ್ ಇದೆ. ಆಯಿಲ್ ಮಾಡುವುದಕ್ಕೆ 4 ಪರ್ಸೆಂಟ್ ಟ್ಯಾಕ್ಸ್ ಇದೆ. ಆಯಿಲ್ ಪರ್ಪಸ್‌ಗೆ ಉಪಯೋಗಿಸುವುದಕ್ಕೆ 4 ಪರ್ಸೆಂಟ್ ಟ್ಯಾಕ್ಸ್. ಸೋಯಿಂಗ್ ಪರ್ಪಸ್‌ಗೆ ಉಪಯೋಗಿಸತಕ್ಕಂಥ ಆಯಿಲ್ ಸೀಡ್‌ಗೆ ನೋ ಟ್ಯಾಕ್ಸ್, ಇದಕ್ಕೆ ಎಕ್ಸಂಪಶನ್ ಇದೆ.

ಶ್ರೀ ಶಿವಾನಂದ ಪಾಟೀಲ್ :– ತಾವು ಒಣ ದ್ರಾಕ್ಷಿಗಳ ಮೇಲೆ ಮತ್ತೆ ಟ್ಯಾಕ್ಸ್ ಹಾಕಿದ್ದೀರಿ.

ಅಧ್ಯಕ್ಷರು :– ಈಗಾಗಲೇ ಒಂದು ಗಂಟೆಯಾಗಿದೆ. ಇದರ ಬಗ್ಗೆಯೇ ಮಾತನಾಡುತ್ತಾ ಹೋದರೆ ಇದಕ್ಕೆ ಎಂಡ್ ಎನ್ನುವುದೇ ಇಲ್ಲ. ಆಯಿತು ಈಗ ಇಲ್ಲಿಗೆ ನಿಲ್ಲಿಸೋಣ.

ಮಾನ್ಯ ಸದಸ್ಯರು :– ಮಾನ್ಯ ಅಧ್ಯಕ್ಷರೆ........

ಅಧ್ಯಕ್ಷರು :– ಈಗ ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಈಗ ಮಾನ್ಯ ಸಚಿವರು ಕ್ಲಾರಿಫಿಕೇಷನ್‌ಗೆ ಉತ್ತರ ಕೊಡಿ, ಇದಕ್ಕೆ ಎಂಡ್‌ಇಲ್ಲ. ಇನ್ನೂ 4 ಜನ ಮಂತ್ರಿಗಳು ಉತ್ತರ ಕೊಡಬೇಕು. ನೀವು ರಾತ್ರಿ ಎಂಟು ಗಂಟೆಯವರೆಗೂ ಹೀಗೆ ಕೈಯನ್ನು ಎತ್ತುತ್ತಲೇ ಇರುತ್ತೀರಿ. ಇನ್ನು ನಾಲ್ಕು ಜನ ಸಚಿವರು ಉತ್ತರ ಕೊಡಬೇಕು. ಇದಲ್ಲದೆ, ಇನ್ನೂ ಪ್ರಶ್ನೋತ್ತರ ಇದೆ, ದಯಮಾಡಿ ಅರ್ಥಮಾಡಿಕೊಳ್ಳಿ. ಈಗಾಗಲೇ ಬಹಳಷ್ಟು ಕ್ಲಾರಿಫಿಕೇಷನ್ ಕೇಳಿಯಾಗಿದೆ. ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

ಮಾನ್ಯ ಸದಸ್ಯರು :– ಮಾನ್ಯ ಅಧ್ಯಕ್ಷರೆ, ಒಂದು ಸಣ್ಣ ಕ್ಲಾರಿಫಿಕೇಷನ್ ಕೇಳಬೇಕು.

ಅಧ್ಯಕ್ಷರು :– ದಯಮಾಡಿ, ಗೌಡರೆ ನೀವು ಕ್ಲಾರಿಫಿಕೇಷನ್‌ಗೆ ಉತ್ತರ ಕೊಡಿ.

ಶ್ರೀ ಕೆ. ಶ್ರೀನಿವಾಸ ಗೌಡ :– ಈಗ ಕ್ಲಾರಿಫಿಕೇಷನ್‌ಗೆ ಉತ್ತರ ಹೇಳಿಬಿಡುತ್ತೇನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಬಿತ್ತನೆ ಬೀಜದ ವಿಚಾರದಲ್ಲಿ ಹೇಳಿದರು, ಅದರ ಬಗ್ಗೆ ಯಾವ ರೀತಿ ಸರಿ ಮಾಡಬೇಕು ಎಂದು ನೋಡಿ ಸರಿಮಾಡುವಂತಹ

ಕೆಲಸವನ್ನು ಮಾಡುತ್ತೇವೆ. ಮಾನ್ಯ ಅರಗ ಜ್ಞಾನೇಂದ್ರರವರು ಕೂಡ ನೀವು ಅಲ್ಲಿ ನೇಮಕಾತಿಗಳನ್ನು ಮಾಡಿ ಎಂದು ಹೇಳುತ್ತಿದ್ದರು. ಅಲ್ಲದೆ ಮಾನ್ಯ ಶಿವಾನಂದ ಪಾಟೀಲ್‌ರವರೂ ಕೂಡ ಹೇಳುತ್ತಿದ್ದರು. ನಾನು ಈಗಾಗಲೇ ನೇಮಕಾತಿಗಳ ಬಗ್ಗೆ ಫೈನಾನ್ಸ್ ಮಿನಿಸ್ಟರ್ ಆದ ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿದ್ದೇನೆ. ಈ ಸಾರಿ ಬಿಎಸ್ಸಿ (ಎಜಿ) ಆದವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಒಂದಷ್ಟು ಜನರನ್ನು ಕೊಟ್ಟೆವು. ನಾವು ಅವರನ್ನು ಹಿಂದೆ ಗ್ರಾಮಸೇವಕರು ಏನು ಕೆಲಸ ಮಾಡುತ್ತಿದ್ದರು, ಅದೇರೀತಿ ಬಿಎಸ್ಸಿ (ಎಜಿ) ಗ್ರಾಜ್ಯುಯೇಟ್ಸ್ ಹತ್ತಿರ ಅಗ್ರಿಮೆಂಟ್ ಮಾಡಿಸುತ್ತೇವೆ. ಅವರು ಹಳ್ಳಿಯಲ್ಲೇ ಬದುಕಬೇಕು. ಈಗ ಹಳ್ಳಿಗಳಲ್ಲಿ ಗ್ರಾಮಸೇವಕರ ಮನೆಗಳು ಇವೆ. ನನ್ನ ಹಳ್ಳಿಯಲ್ಲಿ ಕೂಡ ಒಂದು ಮನೆ ಇದೆ. ಅದುದರಿಂದ ಅಗ್ರಿಮೆಂಟ್‌ನಲ್ಲಿ , ಅವರು ಕನಿಷ್ಟ ಐದು ವರ್ಷ ಹಳ್ಳಿಯಲ್ಲೇ ಇರಬೇಕು. ಆ ಕಂಡೀಷನ್ ಒಪ್ಪಿಕೊಂಡರೆ ಕಂಟ್ರಾಕ್ಟ್‌ನಲ್ಲಿ ತೆಗೆದುಕೊಳ್ಳುವುದು, ಹಾಗೂ ರೋಸ್ಟರ್ ಪದ್ಧತಿಯಲ್ಲಿ ಮಾಡಬೇಕೆಂದು ಹೇಳಿ ಈಗಾಗಲೇ ಅದರ ಬಗ್ಗೆ ರೂಪರೇಷೆಗಳನ್ನು ಮಾಡಬೇಕೆಂದು ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಆ ವಿಚಾರವನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತಾ, ಟ್ರ್ಯಾಕ್ಟರ್ ಹಾಗೂ ಪವರ್‌ಟೆಲ್ಲರ್‌ಗಳ ಬಗ್ಗೆ ಹೇಳುವುದಾದರೆ, ಪವರ್ ಟೆಲ್ಲರ್‌ಗೆ ನಾನು ಹೆಚ್ಚಿಗೆ ಹಣ ಕೊಟ್ಟಿದ್ದೇವೆ. ಮಾನ್ಯ ಅರಗ ಜ್ಞಾನೇಂದ್ರ ಅವರು ನನ್ನನ್ನು ಅಪ್ರೀಷಿಯೇಟ್ ಮಾಡಬೇಕಾಗಿತ್ತು, ಏಕೆಂದರೆ ಈ ಸಾರಿ ಜಾಸ್ತಿ ಹಣ ಕೊಟ್ಟಿದ್ದೇವೆ. ಮಾನ್ಯ ಯಡಿಯೂರಪ್ಪನವರು, ಮಾನ್ಯ ಅರಗ ಜ್ಞಾನೇಂದ್ರ ಅವರಿಗೆ ಹೇಳುವುದಾದರೆ ಶಿವಮೊಗ್ಗ, ನಾರ್ತ್ ಕೆನರಾ, ಸೌತ್ ಕೆನರಾ ಈ ಭಾಗಗಳಲ್ಲಿ ಹೆಚ್ಚಿಗೆ ಅದಕ್ಕೆ ಬೇಡಿಕೆ ಇದೆ. ನಮ್ಮ ಭಾಗಗಳಲ್ಲಿ ಅದಕ್ಕೆ ಬೇಡಿಕೆ ಕಡಿಮೆ ಇದೆ. ಆದುದರಿಂದ ಹೆಚ್ಚಿಗೆ ಆ ಕಡೆ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಈ ಸಾರಿಯೂ ಕೂಡ ಹೆಚ್ಚಿಗೆ ಅದಕ್ಕೆ ಹಣ ಕೊಡಬೇಕೆನ್ನುವ ಚಿಂತನೆ ಇದೆ. ಇದರ ಬಗ್ಗೆ ಕೇಂದ್ರದ ಮಾನ್ಯ ಮಂತ್ರಿಗಳು ಮತ್ತು ಮಾನ್ಯ ಉಪಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ, ಅದಕ್ಕೆ ಹೆಚ್ಚಿಗೆ ಹಣ ಕೊಡುವಂತಹ ಕೆಲಸ ಮಾಡುತ್ತೇವೆ. ಇನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ನೀವು ಹಣವನ್ನೇ ಕೊಟ್ಟಿಲ್ಲವೆಂದು ಮಾನ್ಯ ಅರಗ ಜ್ಞಾನೇಂದ್ರ ಅವರು ಹೇಳಿದರು. ನಾವು 27 ಕೋಟಿ ರೂಪಾಯಿಗಳನ್ನು ಈ ಸಾರಿ ಇಟ್ಟಿದ್ದೇವೆಂದು ಮಾನ್ಯ ಉಪಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಅನೌನ್ಸ್ ಮಾಡಿದರು. ಈ ಸಾರಿ ನಮಗೆ ಹಣದ ಕೊರತೆ ಇಲ್ಲ. ಮತ್ತು ಬೆಳೆಗಳಿಗೆ ಏನು ರೋಗ ಬರುತ್ತದೆ ಪ್ಯಾರಲಲ್ಲಾಗಿ ಕಬ್ಬು, ಕಬ್ಬಿಗೆ ಬಿಳಿ ಹೇನು ರೋಗ ಬರುತ್ತಿತ್ತು. ನಾನು ಮಂಡ್ಯದಲ್ಲಿ ವಿ.ಸಿ. ಫಾರಂಗೆ ವಿಸಿಟ್ ಮಾಡಿದ್ದೆ. ಅಲ್ಲಿ 42 ವರೈಟಿನಲ್ಲಿ ಕಬ್ಬನ್ನು ಹಾಕಿದ್ದಾರೆ. 41 ವರೈಟಿಗೆ ಬಿಳಿ ಹೇನು ರೋಗ ಬಂದಿದೆ. ಒಂದು ವರೈಟಿಗೆ ಏನೂ ಬಂದಿಲ್ಲ. ಅದನ್ನು ನಾವು ಈಗ ಮಲ್ಟಿಪ್ಲಿಕೇಷನ್ ಮಾಡಿ

ಅಥವಾ ಟಿಶ್ಯೂ ಕಲ್ಚರ್ ಮಾಡಿ, ಅದರ ಬಗ್ಗೆ ಪ್ರಚಾರ ಮಾಡಿ ಹೆಚ್ಚಿಗೆ ಮಲ್ಟಿಪ್ಲಿಕೇಷನ್ ಮಾಡಿ ಇಡೀ ರಾಜ್ಯಕ್ಕೆ ಕೊಡಬೇಕೆಂದು ಎರಡೂ ಯೂನಿವರ್ಸಿಟಿಗಳಿಗೆ ಕೂಡ ಸೂಚನೆ ಕೊಟ್ಟಿದ್ದೇವೆ. ಏಕೆಂದರೆ 30 ರಿಂದ 40 ಪರ್ಸೆಂಟ್‌ವರೆಗೆ ರಸವನ್ನು ಹೀರಿ ಕಬ್ಬಿನ ಶಕ್ತಿಯನ್ನು ಕಳೆಯುತ್ತಿದೆ. ಈಗ ಅದ್ಕಕೂ ಕೂಡ ನಮ್ಮ ಕೃಷಿ ವಿಶ್ವವಿದ್ಯಾನಿಲಯ ಕೆಲಸ ಮಾಡುತ್ತಿದೆ. ಇನ್ನು ಸಾಯಿಲ್ ಟೆಸ್ಟ್‌ಗೆ ನಾನು ಒಪ್ಪುತ್ತೇನೆ. ಹಿಂದೆ ನಾವೆಲ್ಲಾ ಹುಡುಗರು ಇದ್ದಾಗ ಹಳ್ಳಿಗಳಿಗೆ ಬಂದು, ಕೃಷಿ ಇಲಾಖೆಯವರು ನಮ್ಮ ಹೊಲಗಳಿಗೆ ಬಂದು ಸಾಯಿಲ್ ಟೆಸ್ಟ್ ಮಾಡುತ್ತಿದ್ದು, ನಾನೂ ಕೂಡ ನಮ್ಮ ಹೊಲದಲ್ಲಿ ಸಾಯಿಲ್ ಟೆಸ್ಟ್ ಮಾಡಿಸಿದೆ. ಇತ್ತೀಚಿನ ದಿನಗಳಲ್ಲಿ ಅದು ಕಡಿಮೆಯಾಗಿದೆ, ಅದಕ್ಕೆ ಹೆಚ್ಚು ಒತ್ತು ಕೊಡಬೇಕಾದಂತಹ ಅವಶ್ಯಕತೆಗಳಿವೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಫರ್ಟಿಲೈಸರ್ ಬಂದಮೇಲೆ ಯಾರೂ ಕೂಡ ಸಾಯಿಲ್ ಟೆಸ್ಟ್ ಮಾಡುವ ವಿಚಾರಕ್ಕೆ ಹೋಗಲ್ಲ. ಕಾರಣವೇನೆಂದರೆ, ಡಿಎಪಿ ಅಥವಾ ಯೂರಿಯಾ ಹಾಕುವುದು, ಆಗ ಬೆಳೆ ಚೆನ್ನಾಗಿ ಬರುತ್ತಿತ್ತು. ಮೊದಲಿಗೆ ನಾವು ಸಾವಯವ ಗೊಬ್ಬರ, ಕೊಟ್ಟಿಗೆ ಗೊಬ್ಬರ ಇಂಥಾದ್ದನ್ನು ಹಾಕಿದಾಗ ಏಕೆ ಬೆಳೆ ಬರಲಿಲ್ಲವೆಂದು ರೈತ ಚಿಂತನೆ ಮಾಡುತ್ತಿದ್ದ. ಈಗ ಆ ರೀತಿ ಚಿಂತನೆ ಮಾಡುವುದಕ್ಕೆ ಫರ್ಟಿಲೈಸರ್‌ಗಳು ಅಡ್ಡ ಬಂದು, ಇತ್ತೀಚಿನ ದಿನಗಳಲ್ಲಿ ಅದನ್ನು ಹಾಕಿದರೂ ಕೂಡ ಬೆಳೆಯ ಇಳುವರಿ ಕಡಿಮೆಯಾಗಿದ್ದು, ಅದರ ಬಗ್ಗೆ ಕೂಡ ಗಮನ ಹರಿಸುತ್ತೇವೆ. ಸುಜಲ ತರಬೇತಿ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಅಕ್ಕಿಯವರು ಹೇಳುತ್ತಿದ್ದರು. ಆ ತರಬೇತಿ ವಿಚಾರದಲ್ಲಿ ನಾವು ನಬಾರ್ಡ್‌ನ ಗೈಡ್‌ಲೈನ್ಸ್ ಬಿಟ್ಟು ಹೋಗುವುದಕ್ಕೆ ಬರುವುದಿಲ್ಲ. ನಮಗೆ ನಬಾರ್ಡ್‌ನವರು ಏನು ಗೈಡ್‌ಲೆನ್ಸ್ ಕೊಟ್ಟಿದ್ದಾರೆ, ಆ ಗೈಡ್‌ಲೈನ್ಸ್ ಪ್ರಕಾರವೇ ನಾವು ಕೆಲಸ ಮಾಡಬೇಕಾಗುತ್ತದೆ; ಮತ್ತು ಅದರ ಮೇಲೆ ಕ್ರಮ ಜರುಗಿಸಬೇಕಾಗುತ್ತದೆ. ಇನ್ನು ಮಾನ್ಯ ಶಿವಾನಂದ ಪಾಟೀಲರು ಇನ್ನೊಂದು ವಿಚಾರ ಹೇಳಿದರು, ಮುಂಗಾರು ಬೆಳೆಯಲ್ಲಿ ಸುಮಾರು 70 ಭಾಗದಷ್ಟು ಬಿತ್ತನೆಯಾಗಿದೆ ಹಾಗೂ ಒಣಗುತ್ತಿದೆ ಎಂದು. ಮಳೆ ಕಡಿಮೆ ಆಗಿದ್ದು, ಈಗಲೂ ಮಳೆ ಬಂದರೆ ಅವು ಉಳಿಯುತ್ತವೆ, ಇಲ್ಲವೆಂದರೆ, ಅದಕ್ಕೆ ವಿಮೆ ಮಾಡಿಸಿರುತ್ತೇವೆ. ಆ ವಿಮೆಯಲ್ಲಿ ದುಡ್ಡು ಕೊಡುವಂತಹ ಕೆಲಸ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಶಿವಾನಂದ ಪಾಟೀಲ್ :- ವಿಮೆಯನ್ನು ಎಲ್ಲರೂ ಕಟ್ಟಿರುವುದಿಲ್ಲ, ನಾನು ನಿಮ್ಮನ್ನು ಇಷ್ಟೇ ಕೇಳುತ್ತೇನೆ ಡ್ರಾಟ್ ಎಂದು ಡಿಕ್ಲೇರ್ ಮಾಡುತ್ತೀರಾ?

ಶ್ರೀ ಕೆ. ಶ್ರೀನಿವಾಸ ಗೌಡ :- ಅದನ್ನು ನಾನು ಮಾನ್ಯ ಕಂದಾಯ ಇಲಾಖೆಯವರ ಜೊತೆ ಮಾತನಾಡಿ, ಅದರ ಮೇಲೆ ನಾನು ಕ್ರಮವನ್ನು ಜರುಗಿಸುತ್ತೇನೆ.

ಶ್ರೀ ಶಿವಾನಂದ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಿಂಕ್ರನೈಸೇಷನ್ ಬೇಕು. ಡಿಪಾರ್ಟ್‌ಮೆಂಟ್ ಗೂ ಡಿಪಾರ್ಟ್‌ಮೆಂಟ್ ಗೂ ಹೊಂದಾಣಿಕೆ ಇರುವುದರಿಂದ ಇವರು ಮಾಡುತ್ತಾರೆ. ಇದರಿಂದ ನಮಗೆ ಬಹಳ ಹಾನಿಯಾಗುತ್ತದೆ. ಏಕೆಂದರೆ ಡ್ರಾಟ್ ಡಿಕ್ಲೇರ್ ಮಾಡುವವರು ರವಿನ್ಯೂ ಇಲಾಖೆಯವರು. ಅಗ್ರಿಕಲ್ಚರ್ ಮಿನಿಸ್ಟರ್ ಅವರ ಮೇಲೆ ಹೇಳಿ ಕುಳಿತರೆ ಆಗುವುದಿಲ್ಲ. ಈಗ ಅವರ ಎಕಾನಾಮಿಕ್ ಸರ್ವೇ ರಿಪೋರ್ಟ್‌ನಲ್ಲಿ 15 ರಿಂದ 20 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಒಣಗಿದೆ ಎಂದು ಹೇಳುತ್ತಿದೆ. ಅವರೇ ಹೇಳುತ್ತಿದ್ದಾರೆ. ಅದು 2005 ಎಕನಾಮಿಕ್ ಸರ್ವೇ ರಿಪೋರ್ಟ್, ಅದು ನನ್ನ ಕೈಯಲ್ಲಿ ಇದೆ. ನೀವು ಬರಗಾಲ ಎಲ್ಲೆಲ್ಲಿ ಇದೆ ಎಂದು ಡಿಕ್ಲೇರ್ ಮಾಡುತ್ತೇನೆಂದು ಹೇಳಿ.

ಶ್ರೀ ಕೆ. ಶ್ರೀನಿವಾಸ ಗೌಡ :- ಈಗ ಬರ ಪರಿಹಾರ ಕಮಿಟಿಯಲ್ಲಿ ಮಾಣ್ಯ ರೆವಿನ್ಯೂ ಮಂತ್ರಿಗಳು ಅಧ್ಯಕ್ಷರಿದ್ದಾರೆ, ನಾನೂ ಒಬ್ಬ ಸದಸ್ಯನಿದ್ದೇನೆ.

ಶ್ರೀ ಶಿವಾನಂದ ಪಾಟೀಲ್ :- ಅಲ್ಲ ನಿಮಗೆ ಗೊತ್ತಿದೆ, ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಆಗಬೇಕು, ಡ್ರಾಟ್ ಬಗ್ಗೆ ಡಿಸಿಯವರು ಡಿಕ್ಲೇರ್ ಮಾಡಬೇಕು. ಇಲ್ಲದೆ ಇದ್ದರೆ ನಮಗೆ ಇನ್ಶೂರೆನ್ಸ್ ಸಿಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ :- ಅದಕ್ಕೆ ನಾನೂ ಒಬ್ಬ ಸದಸ್ಯನಿದ್ದೇನೆ ಎಂದು ಹೇಳುತ್ತಿರುವುದು. ಅದನ್ನು ಮಡುವಂತಹ ಕೆಲಸವನ್ನು ಮಾಡುತ್ತೇವೆ. ಅದರ ಜೊತೆಗೆ ಇವತ್ತು ಚಮತ್ಕಾರ ಈ ಬಿತ್ತನೆ ಬೀಜದ ಬಗ್ಗೆ ಹೇಳುವುದಾದರೆ, ಹೋದವರ್ಷ ನಮ್ಮ ಮಾನ್ಯ ಸಜ್ಜನರವರಿಗೂ ಗೊತ್ತು, ಹಾವೇರಿ ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆದು, ಆ ಕಂಪನಿಯವರನ್ನು ಬ್ಲಾಕ್‌ಲಿಸ್ಟ್ ಮಾಡಿ ಓಡಿಸಬೇಕು ಎಂದು ತೀರ್ಮಾನ ಮಾಡಿದ್ದೆ. ಆದರೆ ಇವರೇ ಬಂದು ಇಲ್ಲಿ ರೈತರಿಗೆ ತೊಂದರೆ ಆಗುತ್ತದೆ ಎಂದು ಹೇಳಿದ್ದರಿಂದ ಅವರಿಗೆ ಒಂದು ಎಕರೆಗೆ 2500 ರೂಪಾಯಿ ಲಾಸ್‌ಏನಾಗಿದೆ ಅದನ್ನು ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅವರು ಈಗಾಗಲೇ ಒಂದು ಕೋಟಿ ರೂಪಾಯಿ ಹಣ ಕೊಟ್ಟಿದ್ದಾರೆ. ನಮ್ಮಲ್ಲಿ ಇಎಂಡಿ 60 ಲಕ್ಷ ರೂಪಾಯಿ ಇದೆ. ಇದನ್ನು ನಮ್ಮ ಸಂಬಂಧಪಟ್ಟ ಅಧಿಕಾರಿಗಳಿಗೆ ನಿನ್ನೆಯಿಂದಲೇ ಕೊಡುವುದಕ್ಕೆ ಹೇಳಿದ್ದೇನೆ. ಜಿಲ್ಲಾಧಿಕಾರಿಗಳ ಹತ್ತಿರ ನಾನೇ ಸ್ವತಃ ಮಾತನಾಡಿದೆ. ಅದರ ಮುಂದಾಳತ್ವ ವಹಿಸಿದಂತಹ ಹಿರೇಮಠರವರು ಮೊನ್ನೆ ಬಂದಿದ್ದರು. ಅವರೂ ಕೂಡ ಅವರ ಹತ್ತಿರ ಮಾತನಾಡಿದ್ದಾರೆ. ನಿನ್ನೆಯಿಂದಲೇ ಆ ಹಣವನ್ನು ಬಿಡುಗಡೆ ಮಾಡುವಂತಹ ಸೂಚನೆಯನ್ನು ಕೊಟ್ಟಿದ್ದೇವೆ. ಅವರು ಮಾಡದೆ ಇದ್ದರೆ ಅದನ್ನು ಮಾಡಿಸಿಕೊಡುವಂತಹ ವ್ಯವಸ್ಥೆ ಮಾಡುತ್ತೇನೆ ಅಂದು ನಾವು ಹೇಳಿದ್ದು 2 ಕೋಟಿ ರೂಪಾಯಿಗಳು ಎಂದು ನಾನೇನು ಹೇಳಿದೆ ಅದರ ಮೇಲೆ ಅವರು

ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. ಅವರು ಬ್ಯಾಕೌಟ್ ಆಗಲಿಲ್ಲ. ಇಲ್ಲದೇ ಇದ್ದರೆ ಅಷ್ಟು ದುಡ್ಡು ಕೊಡುವುದಕ್ಕೆ ಹೋಗುತ್ತಿರಲಿಲ್ಲ. ಅದು ಬ್ಯಾಕೌಟ್ ಆಗದೆ ಇರುವುದರಿಂದ ಆ ಹಣದ ವಿಚಾರದಲ್ಲಿ ಎಲ್ಲೂ ತೊಂದರೆಯಾಗುವುದಿಲ್ಲ. ದಯವಿಟ್ಟು ನೀವು ಸಂಬಂಧಪಟ್ಟ ರೈತರಿಗೆ ಕೊಡಿಸಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತಾ, ಇನ್ನು ಮಾನ್ಯ ಡಿ.ಆರ್. ಪಾಟೀಲ್‌ರವರು ಎಣ್ಣೆಕಾಳುಗಳ ವಿಚಾರದಲ್ಲಿ ಹೇಳಿದರು. ಅದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ನಾಲ್ಕು ಪರ್ಸೆಂಟ್ ಎಂದು ಹೇಳಿರುವುದರಿಂದ ಅದರ ಜೊತೆಗೆ ಡ್ರಿಪ್ ಇರಿಗೇಷನ್ ಬಗ್ಗೆ ಕೂಡ ಮಾನ್ಯ ಉಪ ಮುಖ್ಯಮಂತ್ರಿಗಲು ಹೇಳಿದ್ದಾರೆ. ಡ್ರಿಪ್ ಇರಿಗೇಷನ್ ಇಂಪ್ಲಿಮೆಂಟ್ಸ್‌ಗೆ 12 1/2 ಪರ್ಸೆಂಟ್ ಟ್ಯಾಕ್ಸ್ ಇದೆ. ಬೇರೆ ರಾಜ್ಯಗಳಲ್ಲಿ ಜೀರೋ ಪರ್ಸೆಂಟ್ ಇದೆ. ಅದನ್ನು ಮಾಡಬೇಕೆಂದು ನಮ್ಮ ಮಾನ್ಯ ಸದಸ್ಯರುಗಳು ಕೆಲವರು ಕೇಳಿದ್ದಾರೆ. ಅದರ ಬಗ್ಗೆ ತಾವು ಹೇಳಬೇಕು, ಅವರು ಮಾತನಾಡುತ್ತಾರೆಂದು ಭಾವಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಅಧ್ಯಕ್ಷರೆ, ಆಂಧ್ರದವರು ಎಲ್ಲಾ ಕೃಷಿ ಉಪಕರಣಗಳಿಗೆ ಝಿರೋ ಪರ್ಸೆಂಟ್ ಮಾಡಿಕೊಂಡಿದ್ದಾರೆ. ನಮ್ಮ ಕರ್ನಾಟಕದಲ್ಲಿ ಹನ್ನೆರಡೂವರೆ ಪರ್ಸೆಂಟ್ ಆಗುತ್ತಿದೆ ಆದ್ದರಿಂದ ತೊಂದರೆಯಾಗುತ್ತಿದೆ ಎಂದು ಹೇಳುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ :– ಮಾನ್ಯ ಅಧ್ಯಕ್ಷರೆ, ಕೃಷಿ ಉಪಕರಣಗಳಿಗೆ ನಮ್ಮಲ್ಲೂ ಕೂಡ ಜೀರೋ ಪರ್ಸೆಂಟ್ ಮಾಡುತ್ತಿದ್ದೇವೆ. ಅದು ಏನಾಗಿದೆ ಎಂದರೆ ಯಾವ್ಯಾವುದು ಸ್ಪೆಸಿಫಿಕ್ ಆಗಿ ಶೆಡ್ಯೂಲ್‌ನಲ್ಲಿ ಸೇರಿಸಿದ್ದೇವೋ ಅದಕ್ಕೆ 4 ಪರ್ಸೆಂಟ್, 1 ಪರ್ಸೆಂಟ್ ಈ ತರಹ ಎಲ್ಲಾ ಇದೆ. 20 ಪರ್ಸೆಂಟ್‌ನಲ್ಲಿ ಯಾವುದು ಸೇರಿಲ್ಲ, ಅದೆಲ್ಲಾ ಹನ್ನೆರಡೂವರೆ ಪರ್ಸೆಂಟ್‌ಗೆ ಹೋಗಿಬಿಡುತ್ತವೆ. ಅದನ್ನು ಶೆಡ್ಯೂಲ್‌ನಲ್ಲಿ ಬರೆದಿದ್ದಾರೆ. ಹಾಗಾಗಿ ಅದರ ಬಗ್ಗೆ ಮತ್ತೆ ಹೇಳಿದ್ದೇವೆ. ಅದನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು :– ಈಗ ತೋಟಗಾರಿಕಾ ಸಚಿವರು ಉತ್ತರ ಕೊಡಿ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಒಂದು ವಿಚಾರ ಕೇಳುತ್ತೇನೆ, ಈಗ ಕೇಳಿರುವಂತಹ ಯಾವುದೇ ವಿಚಾರವನ್ನು ಕೇಳುವುದಿಲ್ಲ. ಬಹುಶಃ ಬಯಲುಸೀಮೆ ಬಗ್ಗೆ ಯಾರೂ ಮಾತನಾಡಲಿಲ್ಲ. ಬಯಲುಸೀಮೆಯವರು ಸುಮಾರು 76 ಜನ ಕುಳಿತಿದ್ದೇವೆ. ಬಯಲುಸೀಮೆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನೂ ಕೊಡಲಿಲ್ಲ, ಯಾರೂ ಕೂಡ ಮಾತನಾಡಲಿಲ್ಲ. ಇಡೀ ರೈತಾಪಿವರ್ಗ ಕಷ್ಟದಲ್ಲಿರುವ ನಮಗೆ ರಾಜ್ಯದಲ್ಲಿ

ಕೃಷಿ ಅಭಿವೃದ್ಧಿಯಾಗಬೇಕೆಂದರೆ, ಬಯಲು ಸೀಮೆ ಅಭಿವೃದ್ಧಿಯಾದರೆ ಆಗುತ್ತದೆ. ಆ ಕಾರಣದಿಂದ ಅದರ ಬಗ್ಗೆ ಇವರು ಏನೂ ಕ್ರಮ ಕೈಗೊಳ್ಳಲಿಲ್ಲ. ಈ ಸಲ ಅಲ್ಲಿ ಹಣ ಬಿಡುಗಡೆ ಮಾಡಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರ ಕಡೆ ಖಾತೆ ಇರುವುದರಿಂದ ಅದಕ್ಕೆ ಇವರು ಹೇಳಲಿಲ್ಲ. ಅಲ್ಲಿ ಹಿಂದಿನ ಕೆಲಸಗಳಿಗೆ ಸಾಕಾಗದೆ ಇರುವಷ್ಟು ಹಣ ಬಿಡುಗಡೆ ಮಾಡಿದ್ದಾರೆ ಏನೇನೂ ಇಲ್ಲ, ಖಾಲಿ ನಾವು 76 ಜನ ಇದ್ದೇವೆ, ಅಲ್ಲಿ 57 ತಾಲ್ಲೂಕುಗಳು ಬರುತ್ತವೆ. 1 : 3 ಭಾಗ ಈ ರಾಜ್ಯದಲ್ಲಿ ಬಯಲುಸೀಮೆ ಇದೆ. ಆ ಬಯಲುಸೀಮೆ ಆಭಿವೃದ್ಧಿ ಆಗದೇ ಇದ್ದರೆ, ಇವರೇನು ಆಗ್ರಿಕಲ್ಚರ್ ಬಗ್ಗೆ ಏನು ಯೋಜನೆ ಹಾಕಿಕೊಂಡಿದ್ದಾರೆ ಅದೆಲ್ಲಾ ಸುಳ್ಳಾಗುತ್ತದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ, ಇಬ್ಬರೂ ಮಂತ್ರಿಗಳು ಇದ್ದಾರೆ. ದಯವಿಟ್ಟು ಆ ಬಯಲುಸೀಮೆ ಬಗ್ಗೆ ಹೇಳಬೇಕು. ಇನ್ನು ಇನ್‌ಷ್ಯೂರೆನ್ಸ್ ಬಗ್ಗೆ ಇವರು ಹೇಳಿದರು, ಅದು ರೈತರಿಗೆ ಉಪಯೋಗವಿಲ್ಲದಂತಹ ಇನ್ಸೂರೆನ್ಸ್. ಆ ಇನ್‌ಷ್ಯೂರೆನ್ಸ್ ಬಗ್ಗೆ ಇಲ್ಲಿ ಒಂದು ಉತ್ತರ ಕೊಟ್ಟಿದ್ದಾರೆ. ಮೊದಲೇ ಆ ಥ್ರೆಶೋಲ್ಡ್ ಯೀಲ್ಡ್ ಹೇಳುವ ಹಾಗೆ ಇಲ್ಲವಂತೆ. ಇಲ್ಲಿ ಉತ್ತರ ಕೊಟ್ಟಿದ್ದಾರೆ ಥ್ರೆಶೋಲ್ಡ್ ಯೀಲ್ಡ್ ಮೊದಲೆ ಹೇಳುವುದಕ್ಕೆ ಬರುವುದಿಲ್ಲ, ಅದಕ್ಕೆ ಅದನ್ನು ನಾವು ಪಂಚಾಯತಿಯಲ್ಲಿ ಹಚ್ಚುತ್ತೇವೆ ಎಂದು ಹಿಂದೆ ನಮಗೆ ಉತ್ತರ ಕೊಟ್ಟಿದ್ದರು. ಬಹುಶಃ ಬರ ಇರುವ ಪ್ರದೇಶಕ್ಕೆ ಆ ಇನ್ಸೂರೆನ್ಸ್ ಸಿಗುವುದಿಲ್ಲ. ಉದಾಹರಣೆಗೆ ಹೇಳುತ್ತೇನೆ, ಶೇಂಗಾ ಬೆಳೆಯ ಇನ್‌ಷ್ಯೂರೆನ್ಸ್, ಬೆಟಗೇರಿ ಎನ್ನುವ ಹೋಬಳಿಗೆ 205 ಕಿಲೋ ಉತ್ಪನ್ನ ಬಂದಿದೆ, ಅದಕ್ಕೆ ಇನ್‌ಷ್ಯೂರೆನ್ಸ್ ಸಿಕ್ಕಿದೆ. ಮುಂಡರಗಿಯಲ್ಲಿ ಡಂಬಳ ಎಂಬಲ್ಲಿ 90 ಕೆ.ಜಿ ಉತ್ಪನ್ನ ಬಂದಿದೆ. ಇದಕ್ಕೆ ಇನ್‌ಷ್ಯೂರೆನ್ಸ್ ಸಿಕ್ಕಿಲ್ಲ. ಇಲ್ಲಿ 200 ಕೆ.ಜಿ ಬಂದಿರುವಂಥದ್ದಕ್ಕೆ ಇನ್‌ಷ್ಯೂರೆನ್ಸ್ ಸಿಗುತ್ತದೆ, 90 ಕೆ.ಜಿ ಬಂದಿರುವಂಥದ್ದಕ್ಕೆ ಇನ್‌ಷ್ಯೂರೆನ್ಸ್ ಬಂದಿಲ್ಲ. ಇದು ಥ್ರೆಶೋಲ್ಡ್ ಯೀಲ್ಡ್ ಎಂದು ಇವರು ಹೇಳುತ್ತಾರೆ. ಈ ರೀತಿಯಾಗಿ ಇನ್‌ಷ್ಯೂರೆನ್ಸ್ ಏನು ನಿರುಪಯೋಗವಾಗಿದೆ, ಆ ಕಾರಣದಿಂದ ಅದನ್ನು ಬದಲಾವಣೆ ಮಾಡಿ, ಅದಕ್ಕೆ ಏನಾದರೂ ವಿನಿಮಯ ಈಲ್ಡ್ ತಂದು, ಅದಕ್ಕಿಂತ ಕಡಿಮೆ ಬಂದಿರುವಂಥಾದ್ದಕ್ಕೆ ಮಾಡತಕ್ಕಂಥ ವಿಚಾರವನ್ನು ಕೇಂದ್ರ ಸರ್ಕಾರದೊಡನೆ ಮಾತನಾಡಿ, ಮಾಡುತ್ತೀರಾ? ಈ ಎರಡು ವಿಚಾರಗಳಿಗೆ ತಾವು ಉತ್ತರವನ್ನು ಕೊಡಬೇಕಂದು ನಾನು ಕೇಳುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ....

ಅಧ್ಯಕ್ಷರು :– ತಾವು ಆಗಲೇ ಅರ್ಧ ಗಂಟೆ ಕಾಲ ಮಾತನಾಡಿದ್ದೀರಿ. ಈಗ ಯಾರಿಗೂ ಮಾತನಾಡುವುದಕ್ಕೆ ಅವಕಾಶವಿಲ್ಲ. ಅವರಿಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶವನ್ನು ಮಾಡಿಕೊಡಿ.

ಶ್ರೀ ಬಸವರಾಜರಾಯರೆಡ್ಡಿ :- ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಿರುವಂಥಾದ್ದಕ್ಕೆ ಕ್ಲಾರಿಫಿಕೇಷನ್ ಕೇಳುತ್ತೇನೆ. ನೀರಿನ ನಿರ್ವಹಣೆಯ ಬಗ್ಗೆ ಮಾನ್ಯ ಸಚಿವರು ಸಾಕಷ್ಟು ಹೇಳಿದ್ದೀರಿ. ತಾವು ಆ್ಯಕ್ಷನ್ ಪ್ಲಾನ್‌ನಲ್ಲಿ ಈ ವರ್ಷ ನೀರಿನ ನಿರ್ವಹಣೆಯ ಬಗ್ಗೆ ಒಂದು ಡಿಪ್ಲೋಮಾ ಕೋರ್ಸ್ ಅನ್ನು ಪ್ರಾರಂಭ ಮಾಡುತ್ತೇವೆಂಬ ವಿಷಯವನ್ನು ಹೇಳಿದ್ದೀರಿ. ಆದರೆ ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರೆಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ, ಇದನ್ನು ಎಲ್ಲಿ ಮಾಡುತ್ತೀರೆಂಬುದನ್ನು ಹೇಳಿ. ಇದನ್ನು ಭೀಮರಾಯನಗುಡಿಯಲ್ಲಿ ಮಾಡಿದರೆ ಪ್ರಯೋಜನವಾಗುವುದಿಲ್ಲ. ನೀವು ಇದನ್ನು ಮಾಡಬೇಕಾದ್ದು ರಾಯಚೂರು ಅಥವಾ ಕೊಪ್ಪಳ ಜಿಲ್ಲೆಯಲ್ಲಿ ಮಾಡಿ, ಏಕೆಂದರೆ ಇಲ್ಲಿ ತುಂಗಭದ್ರ ಲಿಫ್ಟ್‌ಬ್ಯಾಂಕ್ ಕೆನಾಲ್‌ನಲ್ಲಿ ಹೈಯೆಸ್ಟ್ ನೀರನ್ನು ಪೋಲ್ ಮಾಡಿ, ಆ ನೀರನ್ನು ಆಂಧ್ರಪ್ರದೇಶಕ್ಕೆ ಕಳುಹಿಸುತ್ತಾರೆ. ಅಲ್ಲಿ ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆ ಸರಿಯಾದಂತಹ ಮಾಹಿತಿ ಇಲ್ಲ. ಅದಕ್ಕೆ ಇದನ್ನು ರಾಯಚೂರು ಅಥವಾ ಕೊಪ್ಪಳ ಜಿಲ್ಲೆಯಲ್ಲಿ ಈ ನೀರಿನ ನಿರ್ವಹಣೆಯ ಡಿಪ್ಲೋಮಾ ಕಾಲೇಜ್ ಅನ್ನು ಪ್ರಾರಂಭ ಮಾಡಿ, ಮತ್ತೆ ಬೇರೆ ಕಡೆಗಳಲ್ಲಿ ಎಲ್ಲೆಲ್ಲಿ ಪ್ರಾರಂಭ ಮಾಡಬೇಕೆಂಬುದನ್ನು ತಾವು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜ ರಾಯರೆಡ್ಡಿಯವರು ಪ್ರಸ್ತಾಪ ಮಾಡಿರುವಂತಹ ವಿಚಾರದ ಬಗ್ಗೆ ಅವರ ಸಾಧಕಬಾಧಕಗಳನ್ನು ನೋಡಿ, ಪರಿಶೀಲಿಸುತ್ತೇವೆ. ಇನ್ನು ಮಾನ್ಯ ಎಸ್.ಎಸ್. ಪಾಟೀಲ್‌ರವರು ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ಥ್ರೆಶೋಲ್ಡ್ ಯೀಲ್ಡ್ ಬಗ್ಗೆ ಅವರಿಗೂ ಚೆನ್ನಾಗಿ ಗೊತ್ತಿದೆ. ಈಗ ಹೋಬಳಿ ಮಟ್ಟದಲ್ಲಿ ನಾವು ಈಗ ಥ್ರೆಶೋಲ್ಡ್ ಯೀಲ್ಡ್ ಅನ್ನು 12 ಸರ್ವೇ ನಂಬರ್‌ಗಳಲ್ಲಿ ಮಾಡುವಂಥಾದ್ದು, ಇದು ನನಗಿಂತಲೂ ಅವರಿಗೆ ಚೆನ್ನಾಗಿ ಗೊತ್ತಿದೆ. ಅವರು ಎಲ್ಲಿ ಥ್ರೆಶೋಲ್ಡ್ ಯೀಲ್ಡ್ ಸರಿಯಾಗಿ ಮಾಡಿಲ್ಲ, ಅಲ್ಲಿ ನಾವು ಏನೂ ಮಾಡುವುದಕ್ಕೆ ಆಗುತ್ತುಲ್ಲ. ಇನ್ನು ಮುಂದಿನ ದಿವಸಗಳಲ್ಲಿ ಆ ರೀತಿ ಏನಾದರೂ ಆದರೆ, ಅದನ್ನು ನನ್ನ ಗಮನಕ್ಕೆ ತಂದರೆ, ಅವರ ಮೇಲೆ ನಾನು ಕ್ರಮವನ್ನು ಜರುಗಿಸುತ್ತೇನೆಂಬ ಮಾತನ್ನು ಹೇಳುತ್ತೇನೆ. ಕಳೆದ ಸಾರಿ ಮಾನ್ಯ ಉಪ ಮುಖ್ಯಮಂತ್ರಿಯವರು ಬಜೆಟ್ ಮಂಡನೆ ಮಾಡುವಾಗ , ನಾವು ಆ ಥ್ರೆಶೋಲ್ಡ್ ಯೀಲ್ಡ್ ಅನ್ನು ಹೋಬಳಿ ಮಟ್ಟದಲ್ಲೂ ಮಾಡುವಂಥಾದ್ದಕ್ಕೆ, ವಾಟರ್ ಮೀಟರ್‌ಗೇಜ್‌ಗಳನ್ನು ಇಡುವಂತಹ ಕೆಲಸವನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದರ ಜೊತೆಗೆ ಥ್ರೆಶೋಲ್ಡ್ ಯೀಲ್ಡ್‌ನ್ನು ಪಂಚಾಯತ್ ಮಟ್ಟಕ್ಕೆ ತಂದರೆ, ಆಗ ಇದರ ಸಾಧಕಬಾಧಕಗಳು ಕಡಿಮೆಯಾಗುತ್ತದೆ; ಇಲ್ಲದಿದ್ದರೆ ಹೋಬಳಿ ಅಂದಮೇಲೆ ಇಲ್ಲಿ ನಾವು 3–4 ಹಳ್ಳಿಗಳನ್ನು ಕೊಟ್ಟಿರುತ್ತೇವೆ. ಇತ್ತೀಚಿನ ದಿವಸಗಳಲ್ಲಿ ಮೊದಲು ಬರುವಹಾಗೆ ಮಳೆ ಬರುತ್ತಾ ಇಲ್ಲ. ಎಲ್ಲೂ ವೈಟ್‌ಸ್ಪ್ರೆಡ್ ಇಲ್ಲ, ಒಂದು ಹಳ್ಳಿಯ ಹತ್ತಿರ

ಹೋದಾಗ ಮಳೆ ಇರುತ್ತದೆ, ಅದೇ ಇನ್ನು ಅರ್ಧ ಕಿ.ಮೀ. ದೂರ ಹೋದರೆ, ಅಲ್ಲಿ ಮಳೆ ಇರುವುದಿಲ್ಲ. ಈ ಪರಿಸ್ಥಿತಿ ಇರುವುದರಿಂದ ಇದು ಪಂಚಾಯತ್ ಮಟ್ಟದಲ್ಲಿ ಬಂದರೆ, ಇದು ನಡೆಯುತ್ತದೆಂಬ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಿಲಿಚ್ಛಿಸುತ್ತೇನೆ.

ಆ) ತೋಟಗಾರಿಕೆ ಸಚಿವರಿಂದ ಉತ್ತರ

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು) :- ಮಾನ್ಯ ಅಧ್ಯಕ್ಷರೇ, ತೋಟಗಾರಿಕೆಯ ಇಲಾಖೆಯ ಬಗ್ಗೆ ನಮ್ಮ ಅನೇಕ ಸಹ ಸದಸ್ಯರುಗಳು ಮತ್ತು ವಿರೋಧ ಪಕ್ಷದ ಸದಸ್ಯರುಗಳು ಮಾತನಾಡಿ ಬಹುತೇಕ ಸದಸ್ಯರು ಕೆಲವು ಸಲಹೆಗಳನ್ನು ಮತ್ತು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಬಹುಶಃ ತೋಟಗಾರಿಕೆ ಇಲಾಖೆಯೆಂದರೆ, ಇದು ಮುಖ್ಯವಾದಂತಹ ಉದ್ದಿಮೆಯಾಗಿದೆ. ಆದರೆ ಈ ಡಿಪಾರ್ಟ್‌ಮೆಂಟ್ ಅಂದರೆ ಎಲ್ಲರಿಗೂ ಉದಾಸೀನವಾಗಿರುವಂಥಾದ್ದು ಕೂಡ, ಕಂಡುಬರುತ್ತದೆ. ನಮ್ಮ ಹಣಕಾಸಿನ ಮಂತ್ರಿಗಳಲ್ಲೂ ಕೂಡ, ಹಿಂದಿನ ಹಣಕಾಸಿನ ಮಂತ್ರಿಗಳು ಮಂಡಿಸಿರುವಂತಹ ಅನೇಕ ರೀತಿಯ ಆಯವ್ಯಯಗಳನ್ನು ನೋಡಿದಾಗ ನಮ್ಮ ಪಾಟೀಲರವರು ಹೇಳಿದ ಹಾಗೆ ಇದಕ್ಕೆ ಕ್ರಮೇಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬಂದಿರುವಂತಹ ವ್ಯವಸ್ಥೆ ಇರುವುದರಿಂದ, ಈಗ ನಮ್ಮ ಹಣಕಾಸಿನ ಮಂತ್ರಿಗಳು ಅದು ಎಷ್ಟೇ ಆಗಲೀ ಕೇಂದ್ರ ಸರ್ಕಾರದಿಂದ ಬರುವಂತಹ ಹಣಕ್ಕೆ ಶೇ. 10 ರಷ್ಟು ಹಣವನ್ನು ಕೊಡುವುದಕ್ಕೆ ನಾನು ಸಿದ್ಧವಾಗಿದ್ದೇನೆಂದು ಈ ಯೋಜನೆಗಳನ್ನು ತಯಾರಿಸಿರುವಂಥಾದ್ದಕ್ಕೆ ಹಣದ ಕೊರತೆ ಇಲ್ಲವೆಂಬ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆ ದೃಷ್ಟಿಯಲ್ಲಿ ಇವತ್ತು ಈ ಉದ್ದಿಮೆಯನ್ನು ನೋಡಿದಾಗ ರೈತ ಯಾವ ರೀತಿಯಲ್ಲಿ ಮೂಲತಃ ಕೃಷಿಕನಾಗಿದ್ದಮ ಆನಂತರ ಯಾವ ರೀತಿಯಾಗಿ ತೋಟಗಾರಿಕೆಗೆ ಪರಿವರ್ತನೆಯಾದ ಎಂಬುದು ಗೊತ್ತಾಗುತ್ತದೆ. ಇವತ್ತು 15 ಲಕ್ಷದ 60 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಇವತತು ನಮ್ಮ ರಾಜ್ಯದಲ್ಲಿ ಇದೆ. ಇನ್ನು ಶೇ. 13 ರಷ್ಟು ಪ್ರದೇಶದಲ್ಲಿ ಸುಮಾರು ಶೇ. 45 ರಷ್ಟು ಆದಾಯ ಬರುವಂತಹ ಕೃಷಿಯೆಂದರೆ, ಇದು ಒಂದೇ ಲಾಭದಾಯಕವಾದಂತಹ ಉದ್ದಿಮೆಯಾಗಿದೆ. ಇಂತಹ ಉದ್ದಿಮೆಯಲ್ಲಿ ಇವತ್ತು ರೈತನಿಗೆ ಬೇಕಾಗಿರುವಂಥಾದ್ದು ಉತ್ತಮವಾದ ತಂತ್ರಜ್ಞಾನ, ಆತನು ಏನು ಬೆಳೆಯನ್ನು ಬೆಳೆಯುತ್ತಾನೋ ಆ ಬೆಳೆಗೆ ಸೂಕ್ತವಾದಂತಹ ಬೆಲೆ ಮತ್ತು ಸಾಗಾಣಿಕೆಗೆಬೇಕಾದ ವ್ಯವಸ್ಥೆ ಒಳ್ಳೆಯ ಇಳುವರಿಯನ್ನು ಕೊಡುವಂತಹ ತಳಿಗಳು ಬೇಕು. ಬೆಳೆಗಳಿಗೆ ಬರತಕ್ಕ ರೋಗಗಳನ್ನು ಯಾವ ರೀತಿಯಲ್ಲಿ ಹತೋಟಿ ಮಾಡಬೇಕು; ಮತ್ತು ನೀರಿನ ಸಮಸ್ಯೆಯನ್ನು ಹೇಗೆ ನಿವಾರಿಸಬೇಕು ಎಂಬುದರ ಜೊತೆಗೆ ಇದರಲ್ಲಿ ಬಹುಮುಖ್ಯವಾದದ್ದು ಮಾರುಕಟ್ಟೆಯ ಸಮಸ್ಯೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ ಈಗ ತೋಟಗಾರಿಕೆ ಏನಾದರೂ ಕೈಗಾರಿಕೆಯಾಗಿದೆಯಾ?

ಶ್ರೀ ಆರ್. ಶ್ರೀನಿವಾಸ :- ಇಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮತ್ತೆ ಉದ್ದಿಮೆ ಎಂದು ಹೇಳುತ್ತಿದ್ದೀರಿ.

ಶ್ರೀ ಆರ್. ಶ್ರೀನಿವಾಸ :- ಕೃಷಿ ಉದ್ದಿಮೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಉದ್ದಿಮೆ ಎಂದರೆ ಏನು?

ಶ್ರೀ ವಾಟಾಳ್ ನಾಗರಾಜ್ :- ಉದ್ದಿಮೆ ಎಂದರೆ ಕೈಗಾರಿಕೆ.

ಶ್ರೀ ಆರ್. ಶ್ರೀನಿವಾಸ್ :- ಕೃಷಿ ಉದ್ದಿಮೆ ಎಂದರೆ ಅದು ಒಂದು ಉದ್ದಿಮೆ ರೀತಿಯೇ ಆಗಿದೆ.

ಅಧ್ಯಕ್ಷರು :- ಮಾನ್ಯ ಸಚಿವರು ಅದು ಒಂದು ಉದ್ಯೋಗವೆನ್ನುವ ಅರ್ಥದಲ್ಲಿ ಹೇಳುತ್ತಿದ್ದಾರೆ.

ಶ್ರೀ ಆರ್. ಶ್ರೀನಿವಾಸ :- ಕೃಷಿ ಕೂಡ ಒಂದು ಉದ್ಯೋಗ, ತೋಟಗಾರಿಕೆಯೂ ಕೂಡ.....

ಶ್ರೀ ವಾಟಾಳ್ ನಾಗರಾಜ್ :- ಅದು ಉದ್ದಿಮೆಯಾಗುವುದಿಲ್ಲ. ಇಲ್ಲಿ ಉದ್ಯೋಗ ಬೇರೆ, ಉದ್ದಿಮೆ ಬೇರೆ.

ಶ್ರೀ ಶ್ರೀನಿವಾಸ :- ಬಹುಶಃ ಅವರಿಗೆ ತೋಟಗಾರಿಕೆಯ ಬಗ್ಗೆ ಹೆಚ್ಚಿನ ಮಾಹಿತಿ ಗೊತ್ತಿರುವ ಹಾಗೆ ಕಾಣುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಾನು ನನ್ನ ಕ್ಷೇತ್ರದಲ್ಲಿ ತೋಟಗಾರಿಕೆಯ ಬಗ್ಗೆ ತಿಳಿದುಕೊಂಡಿರುವ ವಿಚಾರ. ಅದು ಉದ್ದಿಮೆ ಎಂದು ಯಾವಾಗ ಆಯಿತು ಎಂದು ನನಗೆ ಅನುಮಾನ ಬಂತು ಅದಕ್ಕೇ ಕೇಳಿದೆ; ಉದ್ದಿಮೆ ಎನ್ನುವುದು ಕೈಗಾರಿಕೆ.

ಶ್ರೀ ಆರ್. ಶ್ರೀನಿವಾಸ್ :- ಮಾನ್ಯ ಅಧ್ಯಕ್ಷರೆ, ನಾನು 1967 ರಲ್ಲಿ ವಿದ್ಯಾಭ್ಯಾಸ ಮಾಡುವಂತಹ ಸಮಯದಲ್ಲಿ ನಾನು ಯಾವುದೋ ಸೈನ್‌ಗಾಗಿ ಚಿಕ್ಕಪೇಟೆಗೆ ಅವರ ಹತ್ತಿರ ಹೋಗಿದ್ದೆ. ಆಗಿನಿಂದಲೂ (ಶ್ರೀ ವಾಟಾಳ್ ನಾಗರಾಜ್‌ರವರನ್ನು ಉದ್ದೇಶಿಸಿ) ನನಗೆ ಅವರ ಪರಿಚಯವಿದೆ. ಈ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇದೆ. ಈ ಸಿಬ್ಬಂದಿಗಳ ಕೊರತೆಯಿಂದ ಕೂಡ ರೈತರಿಗೆ ತಲುಪಬೇಕಾದಂತಹ ರೀತಿಯಲ್ಲಿ

ತಲುಪುವುದಿಲ್ಲ. ಅದು ತರಬೇತಿ ಆಗಬಹುದು, ಇನ್‌ಫರ್ಮೇಷನ್ ಆಗಬಹುದು. ಇವೆಲ್ಲವನ್ನೂ ತೆಗೆದುಕೊಂಡಾಗ ಸರಿಯಾದ ರೀತಿಯಲ್ಲಿ ಯಾವ್ಯಾವ ತಳಿಗಳು ಎಲ್ಲೆಲ್ಲಿ ಸಿಗುತ್ತವೆ, ಯಾವಾಗ ಸಿಗುತ್ತವೆ, ಏನು ಮಾಡಬೇಕೆಂಬ ಬಗ್ಗೆಯೂ ಕೂಡ ಚಿಂತನೆಯನ್ನು ಮಾಡಬೇಕಾಗುತ್ತದೆ. ಇದಕ್ಕೆ ಸಿಬ್ಬಂದಿ ಕೊರತೆ ಇರುವುದರಿಂದ, ಇಲ್ಲಿ 4,598 ಒಟ್ಟು ಸಿಬದಿ ಇತ್ತು. ಈಗ 3,891 ಸಿಬ್ಬಂದಿ ಇರತಕ್ಕಂಥಾದ್ದು, ಇನ್ನು ಸಾವಿರ ಚಿಲ್ಲರೆ ಸಿಬ್ಬಂದಿಗಳ ಕೊರತೆ ಇದೆ. ಈಗ ಇರತಕ್ಕಂಥ ಶೇ. 40 ರಷ್ಟು ಸಿಬ್ಬಂದಿಗಳಲ್ಲಿ ಕೆಲವರು ಡಿ.ಎಲ್.ಡಿ.ಟಿ. ಗೆ ಹೋಗಿದ್ದಾರೆ. ಕೆಲವರು ಜಲಾನಯನ ಪ್ರದೇಶದ ಕಡೆ ಹೋಗಿದ್ದಾರೆ. ಕೆಲವರು ರೂರಲ್ ಡೆವಲಪ್‌ಮೆಂಟ್ ಇಲಾಖೆಗೆ ಹೋಗಿದ್ದಾರೆ. ಅನೇಕ ತಾಲ್ಲೂಕುಗಳಲ್ಲಿ ನೋಡಿದಾಗ ಕೆಲವು ಕಡೆಗಳಲ್ಲಿ ಜವಾನ ಇರುತ್ತಾನೆ, ಕೆಲವು ಕಡೆ ಗುಮಾಸ್ತನಿರುತ್ತಾನೆ, ಕೆಲವು ಕಡೆಗಳಲ್ಲಿ ಬೀಗ ಹಾಕಿರುತ್ತಾರೆ. ಇದನ್ನು ನಾನು ಆರು ತಿಂಗಳುಗಳ ಹಿಂದೆ ಅಧಿಕಾರವನ್ನು ಸ್ವೀಕರಿಸಿದಂತಹ ಸಮಯದಲ್ಲಿ ಅನೇಕ ಸಂಸ್ಥೆಗಳಿಗೆ ಭೇಟಿಯನ್ನು ಕೊಟ್ಟಂತಹ ಸಂದರ್ಭದಲ್ಲಿ ಇಲ್ಲಿ ನಾನು ಇರುವುದು, ಒಬ್ಬನೇ ಎಂದು ಹೇಳಿದ್ದಾರೆ. ತಮಗೆಲ್ಲರಿಗೂ ಇದರ ಅನುಭವವಿದೆ. ಈ ಒಂದು ದಿಕ್ಕಿನಲ್ಲಿ ಹೋದಾಗ ಈ ಲಾಭದಾಯಕವಾದಂತಹ ಬೆಳೆಯನ್ನು ಬೆಳೆಯಬೇಕೆಂಬ ಆಸಕ್ತಿ ಇದ್ದರೂ ಕೂಡ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಮಾಹಿತಿ ಸಿಗುತ್ತಿಲ್ಲ. ಇದಕ್ಕೋಸ್ಕರ ನಾನು ಏನು ಮಾಡಿದ್ದೇನೆಂದರೆ, ಇಲ್ಲಿ ಮಾನ್ಯ ಮಾಧುಸ್ವಾಮಿಯವರು ನಗುವುದನ್ನು ಕಡಿಮೆಮಾಡಬೇಕು. ಈಗ ಏನು ಮಾಡಿದ್ದೇವೆಂದರೆ ಒಂದೊಂದು ಇಲಾಖೆಗೂ ನಿಯೋಜನೆಯ ಮೇಲೆ ಹೋಗಿರುವಂಥಾದ್ದು......

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಶ್ರೀನಿವಾಸರವರೇ, ತಾವು ಉತ್ತರವನ್ನು ಹೇಳಬೇಕಾದರೆ ಒಂದು ಆಫೀಸಿನಲ್ಲಿ ಜವಾನ ಇರುತ್ತಾನೆ, ಒಂದು ಆಫೀಸಿನಲ್ಲಿ ಅಟೆಂಡರ್ ಇರುತ್ತಾನೆಂದು, ಖಾತೆಯ ಸಚಿವರು ಹೇಳಿದರೆ, ಇಲ್ಲಿ ನಾವು ನಗಬೇಕೋ, ಅಳಬೇಕೋ ಹೇಳಿ. ಇಲ್ಲಿ ಮಾನ್ಯ ಅಧ್ಯಕ್ಷರು, ನಮಗೆ ಮಾರ್ಗದರ್ಶನವನ್ನು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಸಚಿವರು ಇರುವ ಸತ್ಯವನ್ನು ಹೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಹೌದು ಅವರು ಸತ್ಯವನ್ನು ಹೇಳುತ್ತಿದ್ದಾರೆ. ಈಗ ನಾವು ಏನು ಮಾಡಬೇಕೆಂದು ಅಧ್ಯಕ್ಷರು ಮಾರ್ಗದರ್ಶನ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ :- ಇಲ್ಲಿ ಮಾಧುಸ್ವಾಮಿಯವರು ಸತ್ಯವನ್ನು ಹೇಳುವುದಕ್ಕೆ ಬಿಡುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾನು ಏನೂ ಮಾಡಲಿಲ್ಲ, ನಾನು ನಗದೇ ಏನು ಮಾಡಲಿ? ಇಲ್ಲಿ ಮಾನ್ಯ ಸಚಿವರ ಬಾಯಲ್ಲೇ ಬರುತ್ತಿದೆ. ಒಂದು ಆಫೀಸಿಗೆ ಹೋಗಿದ್ದೆ ಅಲ್ಲಿ ಅಟೆಂಡರ್ ಒಬ್ಬನೇ ಇದ್ದ, ಇನ್ನೊಂದು ಆಫೀಸ್‌ಗೆ ಹೋಗಿದ್ದೆ ಅಲ್ಲಿ ಪ್ಯೂನ್ ಒಬ್ಬನೇ ಇದ್ದ ಎಂದು ಹೇಳುತ್ತಿದ್ದಾರೆ.

ಶ್ರೀ ಅರಗಜ್ಞಾನೇಂದ್ರ :– ಮಾನ್ಯ ಅಧ್ಯಕ್ಷರೇ, ಆ ಕಡೆಯವರು ಹಾಗೆ ಹೇಳುವುದು, ಈ ಕಡೆಯಿಂದ ನಾವು ಹೀಗೆ ಹೇಳವುಥು, ಒಟ್ಟಾರೆ ಇದನ್ನು ಸರಿ ಮಾಡುವವರು ಯಾರು ಎಂಬುದನ್ನು ನೋಡಬೇಕಾಗುತ್ತದೆ. ಅಲ್ಲಿ ಏನಾದರೂ ದೇವರುಗಳನ್ನು ಪ್ರತಿಷ್ಠಾಪನೆ ಮಾಡಬೇಕಾ?...

ಶ್ರೀ ಆರ್. ಶ್ರೀನಿವಾಸ್ :– ಮಾನ್ಯ ಅಧ್ಯಕ್ಷರೇ, ರೈತ ಇವತ್ತು ಜೀವನ ಮಾಡುತ್ತಿದ್ದಾನೆಂದರೆ, ಆರ್ಥಿಕವಾಗಿ ಅವನು ಮೇಲೆ ಬರುತ್ತಿದ್ದಾನೆಂದರೆ ಅದು ತೋಟಗಾರಿಕೆಯ ಬೆಳೆಯಿಂದಲೇ, ಎಂದು ನಾವೆಲ್ಲಾ ಹೇಳುವುದಕ್ಕೆ ಇಚ್ಛಿಸುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೇ ಇಲಾಖೆಯವರು ಏನೂ ಮಾಡಲಿಲ್ಲ, ರೈತರು ಅವನಷ್ಟಕ್ಕೆ ಬೆಳೆ ಬೆಳೆದಿದ್ದಾನೆ, ತೋಟಗಾರಿಕೆಯನ್ನು ಅಭಿವೃದ್ಧಿ ಮಾಡಿದ್ದಾನೆಂದು ಆಯಿತು. ತಾವು ಒಂದು ಕೆಲಸವನ್ನು ಮಾಡಿ, ತಾವು ಎಲ್ಲಾ ಡೆಪ್ಯುಟೇಶನ್ ಮೇಲೆ ಬೇರೆ ಬೇರೆ ಇಲಾಖೆಗಳಿಗೆ ಹೋಗಿದ್ದಾರೆಂದು ಹೇಳಿದ್ದೀರಿ. ತಾವು ಒಂದು ಸಾರಿ ಈ ಡೆಪ್ಯುಟೇಶನ್ ಅನ್ನು ವಿತ್‌ಡ್ರಾ ಮಾಡಿ. ಆಗ ಅವರು ಹೇಗೆ ಇರುತ್ತಾರೆಂಬುದನ್ನು ನೋಡೋಣ. ನೀವು ಡೆಪ್ಯುಟೇಶನ್ ಹೋಗುವುದಕ್ಕೆ ಬಿಟ್ಟುಕೊಂಡು ಅವರು ಹೋಗಿದ್ದಾರೆಂದು ಹೇಳಿದರೆ ಹೇಗೆ?

ಶ್ರೀ ಆರ್. ಶ್ರೀನಿವಾಸ್:– ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ, ನಾನು ಇನ್ನೂ ಮಾತನಾಡುತ್ತಿದ್ದೇನೆ, ಆ ವಿಷಯದ ಬಗ್ಗೆ ಹೇಳುತ್ತೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ

ಶ್ರೀ ಎಸ್.ಎಸ್. ಪಾಟೀಲ್ :– ನೀವು ಅವರ ಉತ್ತರ ಮುಗಿದ ಮೇಲೆ ಕೇಳಿ. ನೀವು ಅವರಿಗೆ ಉತ್ತರವನ್ನು ಕೊಡುವುದಕ್ಕೆ ಬಿಡುತ್ತಿಲ್ಲವಲ್ಲ...

ಅಧ್ಯಕ್ಷರು :– ಆಯಿತು ದಯಮಾಡಿ ಕುಳಿತುಕೊಳ್ಳಿ ಅವರು ಉತ್ತರ ಹೇಳುತ್ತಾರೆ.

ಶ್ರೀ ಆರ್. ಶ್ರೀನಿವಾಸ್ :– ನಾನು ಎಲ್ಲಾ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತಿದ್ದೇನೆ, ತಾವೆಲ್ಲರೂ ಸುದೀರ್ಘವಾಗಿ ಕೇಳಿ. ನನ್ನ ಉತ್ತರ ಪೂರ್ತಿಯಾದ ನಂತರ ತಾವು ಎಲ್ಲೆಲ್ಲಿ ನ್ಯೂನತೆ ಇದೆ, ಹೇಗೆ ಸರಿಪಡಿಸಬೇಕು, ಯಾವ ರೀತಿ ಮಾಡಬೇಕು ಎಂಬುದನ್ನೂ ಹೇಳಿ. ಆ ವಿಚಾರದಲ್ಲಿ ಎಲ್ಲಾ ಒಟ್ಟಾಗಿ ಸೇರೋಣ. ನಾವೆಲ್ಲರೂ ಚಿಂತನೆ ಮಾಡುವುದು,

ಹಳ್ಳಿಗಳಲ್ಲಿರತಕ್ಕಂಥವರ ಆರ್ಥಿಕ ಪರಿಸ್ಥಿತಿಯನ್ನು ಯಾವ ರೀತಿ ಉತ್ತಮ ಮಟ್ಟಕ್ಕೆ ಏರಿಸಬೇಕು ಎನ್ನುವುದಾಗಿದೆ. ಎಲ್ಲರೂ ಒಟ್ಟಾಗಿ ಸೇರಿ ಅವರ ಬಗ್ಗೆ ಕಳಕಳಿಯಿಂದ ನಡೆದುಕೊಳ್ಳಬೇಕಾದುದು ನಮ್ಮ ಮುಖ್ಯವಾದ ಗುರಿ. ಇಂಥ ಸಂದರ್ಭದಲ್ಲಿ ನಾನು ಈಗಾಗಲೇ ಇಲಾಖೆಯ ಸಿಬ್ಬಂದಿ ಬಗ್ಗೆ ಕ್ರಮ ತೆಗೆದುಕೊಂಡಿದ್ದೇನೆ. ಡಿ.ಎಲ್.ಡಿ.ಬಿ.ಗೆ ಜಲಾನಯನ ಯೋಜನೆಗಳಿಗೆ ಡೆಪ್ಯುಟೇಶನ್ ಮೇಲೆ ಹೋಗಿದ್ದಂಥವರನ್ನು ವಾಪಸ್ಸು ತೆಗೆದುಕೊಂಡು ಪುನಃ ಪ್ರತಿಯೊಂದು ತಾಲ್ಲೂಕು, ಪ್ರತಿಯೊಂದು ಜಿಲ್ಲೆಗಳಿಗೆ ಭರ್ತಿ ಮಾಡುವುದಕ್ಕೋಸ್ಕರ ಕ್ರಮ ತೆಗೆದುಕೊಂಡಿದ್ದು, ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿ ಡೆಪ್ಯುಟಿ ಡೈರೆಕ್ಟರ್ ಫಾರ್ ಹಾರ್ಟಿಕಲ್ಚರ್ ಎಂದು ಇದ್ದಾರೆ. ಅದೇ ರೀತಿಯಲ್ಲಿ ತಾಲ್ಲೂಕುಗಳಲ್ಲಿ ಸೀನಿಯರ್ ಅಸಿಸ್ಟಂಟ್ ಡೈರೆಕ್ಟರ್ ಫಾರ್ ಹಾರ್ಟಿಕಲ್ಚರ್ ಎಂದು ಇದ್ದಾರೆ. 206 ಹುದ್ದೆಗಳಲ್ಲಿ ಕೇವಲ 56 ಜನ ಮಾತ್ರ ಇದ್ದಾರೆ. ಇದ್ದು ನಾನು ಏನು ಮಾಡುತ್ತಿದ್ದೇವೆಂದರೆ, ಎ.ಡಿ ಹೆಚ್ ಗಳೆಂದುವೆನಿದೆ ಇದನ್ನು ಅಪ್‌ಗ್ರೇಡ್ ಮಾಡಿ, ಆ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಅದೇ ರೀತಿ 130 ಎ ಡಿ ಹೆಚ್ ಗಳಲ್ಲಿ 80 ಹುದ್ದೆಗಳನ್ನು ಮಾತ್ರ ತುಂಬಲು ಸಾಧ್ಯವಾಗಿದೆ. ಅಲ್ಲಿರತಕ್ಕಂಥ ಸಿಬ್ಬಂದಿಯನ್ನು ಅಪ್‌ಗ್ರೇಡ್ ಮಾಡಿ ಪ್ರತಿಯೊಂದು ತಾಲ್ಲೂಕಿಗೂ ಸುಮಾರು 4 ರಿಂದ 6 ರವರೆಗೆ ಸಿಬ್ಬಂದಿಯನ್ನು ಭರ್ತಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಲು ಈಗಾಗಲೇ ತೀರ್ಮಾನ ತೆಗೆದುಕೊಂಡು, ಮುಖ್ಯಮಂತ್ರಿಗಳಿಗೆ ಅನುಮೋದನೆಗೆ ಕಳುಹಿಸಿದ್ದೇನೆ. ಅದು ಬಂದ ತಕ್ಷಣ ಪ್ರತಿಯೊಂದು ತಾಲ್ಲೂಕಿಗೂ ಎಸ್.ಎ.ಡಿ.ಹೆಚ್, ಎ.ಡಿ.ಹೆಚ್‌ಗಳನ್ನು ಕೊಡುತ್ತೇನೆ. 4 ರಿಂದ 5 ಜನ ತೋಟಗಾರಿಕಾ ಸಹಾಯಕರು ಇರುತ್ತಾರೆ. ಈ ತೋಟಗಾರಿಕಾ ಸಹಾಯಕರು ಎಲ್ಲಿಂದ ಬಂದರು ಎಂದು ನೀವು ಪ್ರಶ್ನೆ ಕೇಳಬಹುದು. 786 ಜನ ತೋಟದ ಸಹಾಯಕರು ಇದ್ದರು. ಉದಾಹರಣೆಗೆ, ಕೃಷ್ಣರಾಜಸಾಗರಲ್ಲಿ 120 ಜನ ಇದ್ದಾರೆ. ಇನ್ನೊಂದು ಕಡೆ 20 ಜನ ಇದ್ದಾರೆ. ಇಂಥ ತೋಟಗಾರಿಕಾ ಸಹಾಯಕರಿಗೆ ತರಬೇತಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಪ್ರತಿ ಹೋಬಳಿಗೆ ಒಬ್ಬೊಬ್ಬರನ್ನು ನೇಮಕ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇದರ ಮೂಲ ಉದ್ದೇಶವೇನೆಂದರೆ, ತೋಟಗಾರಿಕೆಯ ಬಗ್ಗೆ ತಿಳುವಳಿಕೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುವುದು, ಸರ್ಕಾರದಿಂದ ಬರತಕ್ಕಂಥ ಸೌಲಭ್ಯಗಳ ಬಗ್ಗೆ ತಿಳುವಳಿಕೆ ಕೊಡತಕ್ಕಂಥಾದ್ದನ್ನು ಮಾಡುವುದು, ಉತ್ತಮವಾದ ತಳಿಗಳು ಎಲ್ಲೆಲ್ಲಿ ಸಿಗುತ್ತವೆ, ಅದನ್ನು ಯಾವ ರೀತಿ ಒದಗಿಸಬೇಕು ಎನ್ನುವ ಮಾಹಿತಿ ಕೊಡತಕ್ಕಂಥ ವ್ಯವಸ್ಥೆ ಮಾಡುವುದು, ಈ ರೀತಿಯಾಗಿ ಉತ್ತಮವಾದ ರೀತಿಯಲ್ಲಿ ......

ಶ್ರೀ ಜೆ.ಸಿ. ಮಾಧುಸ್ವಾಮಿ :– ಇದಕ್ಕೇ ನಾವು ಪದೇ ಪದೇ ಹೇಳಿದ್ದು, ನಾವು ಮಾತನಾಡುವಾಗ ಆ ಖಾತೆಯ ಸಚಿವರು ಇಲ್ಲಿ ಕುಳಿತುಕೊಳ್ಳಬೇಕು ಎಂದು. ಈ

ಇಲಾಖೆ ನಾಶವಾಗಿದೆ, ನಶಿಸಿ ಹೋಗಿದೆ ಎನ್ನುವುದೆಲ್ಲಾ ನಮಗೆ ಗೊತ್ತಿದ್ದರೂ, ಈ ಯಾವ ವಿಷಯವನ್ನೂ ನಾವ್ಯಾರು ಇಲ್ಲಿ ಮಾತನಾಡಲಿಲ್ಲ. ತಾವು ಕಡತ ತರಿಸಿ ನೋಡಿ. ಆದರೆ ರಿಪ್ಲೈ ಮಾಡುವಾಗ ಇವರು ಅದನ್ನೆಲ್ಲಾ ಹೇಳುತ್ತಾ ಹೋದರೆ, ಕ್ಲಾರಿಫಿಕೇಷನ್ ಕೇಳುವುದಕ್ಕೆ ನೀವು ನಮಗೆ ಒಂದೂವರೆ ಗಂಟೆಗೂ ಮೇಲೆಯೇ ಅವಕಾಶ ಮಾಡಿಕೊಡಬೇಕಾಗುತ್ತದೆ. ಅದನ್ನು ತಾವು ಒಪ್ಪುವುದಾದರೆ, ಇಲಾಖೆ ಆಡಳಿತಾತ್ಮಕ ಸಮಸ್ಯೆಗಳನ್ನೆಲ್ಲಾ ಮಂತ್ರಿಗಳು ಅಸೆಂಬ್ಲಿಯಲ್ಲಿ ನಿಂತುಕೊಂಡು ಹೇಳಲಿ.

ಅಧ್ಯಕ್ಷರು :– ಏನೇನು ಸುಧಾರಣೆ ಮಾಡಿದ್ದೇವೆ ಎಂದು ಹೇಳವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ.

ಶ್ರೀ ಆರ್. ಶ್ರೀನಿವಾಸ್ :– ಇಲಾಖೆಯ ಬಗ್ಗೆ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಎಲ್ಲಾ ಸದಸ್ಯರಿಗೂ ತಿಳಿಸತಕ್ಕಂಥಾದ್ದಕ್ಕೆ ಇವುಗಳನ್ನು ಹೇಳುತ್ತಿದ್ದೇನೆ. ಇಲಾಖೆಯ ಬಗ್ಗೆ ಮಾತನಾಡುವಾಗ ಮಾನ್ಯ ವಿಶ್ವೇಶ್ವರ ಹೆಗಡೆಯವರು ಮತ್ತು ಇತರ ಕೆಲವೇ ಕೆಲವು ಜನರು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಆ ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಡಬೇಕೆಂದರೆ ನನಗೆ 10 ನಿಮಿಷ ಸಾಕು. 10 ನಿಮಿಷಗಳಲ್ಲಿ ಅವರ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ ಆದರೆ ಇಲಾಖೆಯಲ್ಲಿ ಏನು ಕ್ರಮ ತೆಗೆದುಕೊಂಡಿದ್ದೇವೆ, ಏನು ಕ್ರಮ ತೆಗೆದುಕೊಳ್ಳಬೇಕು, ಯಾವ ಕ್ರಮಗಳನ್ನು ತೆಗೆದುಕೊಂಡರೆ ಇಲಾಖೆಯನ್ನು ಚುರುಕುಗೊಳಿಸಬಹುದು ಎನ್ನುವ ಬಗ್ಗೆ ತಾವೆಲ್ಲಾ ತಿಳುವಳಿಕೆ ಕೊಡಬೇಕೆನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :– ಕೃಷ್ಣರಾಜಸಾಗರದಲ್ಲಿ ಕೆಲಸ ಮಾಡುತ್ತಿರುವವರನ್ನೆಲ್ಲಾ ಹಿಂದಕ್ಕೆ ಕರೆಸಿಕೊಳ್ಳುತ್ತೇವೆ ಎಂದು ಹೇಳಿದಿರಲ್ಲಾ, ಅಲ್ಲಿ ನೀರು ಹಾಕುವವರು ಯಾರು? ಯಾರ ಕೈಯಲ್ಲಿ ನೀರು ಹಾಕಿಸುತ್ತೀರಿ? ಇರತಕ್ಕಂಥ ಸಿಬ್ಬಂದಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುತ್ತೇವೆ ಎಂದು ಹೇಳಿದರಿ. ಹಾಗಾದರೆ ನಮ್ಮ ಕೃಷ್ಣರಾಜದಾಗರದ ಗತಿ ಏನು?

ಅಧ್ಯಕ್ಷರು :– ವಾಟಾಳ್ ನಾಗರಾಜ್‌ರವರೇ, ಅವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ಈ ರೀತಿ ಒಬ್ಬರಾದ ಮೇಲೆ ಒಬ್ಬರು ನಿಂತುಕೊಂಡರೆ ಅವರು ಉತ್ತರ ಕೊಡುವುದು ಹೇಗೆ? ತಮ್ಮ ಎಲ್ಲಾ ಪ್ರಶ್ನೆಗಳಿಗೂ ಕೊನೆಯಲ್ಲಿ ಕ್ಲಾರಿಫಿಕೇಷನ್ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಅಲ್ಲಿ ನೀರು ಹಾಕುವವರು ಯಾರು? ಗೊಬ್ಬರ ಹಾಕುವವರು ಯಾರು?

ಶ್ರೀ ಎಂ.ಪಿ. ವೆಂಕಟೇಶ್ :– ಇವರು ಮಂತ್ರಿಗಳನ್ನು ಬೇರೆ ವಿಚಾರವಾಗಿ ಉತ್ತರ ಕೊಡಿ ಎಂದು ಹೇಳುತ್ತಾರೆ. ಮಂತ್ರಿಗಳು ಒಳ್ಳೆಯ ವಿಚಾರವನ್ನು ಹೇಳುತ್ತಿದ್ದರೆ ಇವರು ಬೇಡ ಎಂದು ಹೇಳಿದರೆ ಹೇಗೆ? ಅವರು ಒಳ್ಳೆಯ ವಿಚಾರವನ್ನು ಹೇಳುತ್ತಿದ್ದಾರೆ, ಇಲಾಖೆಯ ಸಮಸ್ಯೆಗಳ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಆರ್. ಶ್ರೀನಿವಾಸ್ :– ಎಲ್ಲಾ ಹಿರಿಯ ಸದಸ್ಯರಿಗೆ ನಾನು ಹೇಳುವುದು ಇಷ್ಟೇ, ಅವರು ಏನೇ ಕೇಳಲಿ; ಅದಕ್ಕೆ ಉತ್ತರ ಕೊಡಲು ನಾನು ಸಿದ್ಧನಾಗಿದ್ದೇನೆ. ಆದರೆ ಅದಕ್ಕೆ ಸ್ವಲ್ಪ ಕಾಲಾವಕಾಶ ಕೊಡಿ. ಇದಕ್ಕೆ ಏನು ಪರ್ಯಾಯವಾದಂಥ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನುವುದರ ಬಗ್ಗೆಯೂ ಕೂಡ ನಾನು ಹೇಳುತ್ತೇನೆ. ಪರ್ಯಾಯವಾದಂಥ ವ್ಯವಸ್ಥೆಯನ್ನು ಹುಡುಕಿಯೇ ನಾವು ಈ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದ್ದೇವೆಯೇ ಹೊರತು ಕೃಷ್ಣರಾಜಸಾಗರದಲ್ಲಿ ಕೆಲಸ ಮಾಡುತ್ತಿರುವಂಥ 120 ಜನರನ್ನು ಸುಮ್ಮನೆ ವಾಪಸ್ಸು ಕರೆಯಿಸಿಕೊಳ್ಳುತ್ತಿಲ್ಲ. ಆ ರೀತಿಮಾಡಿದರೆ, ವಿಶ್ವಪ್ರಸಿದ್ಧಿಯಾದಂಥ ಆ ಉದ್ಯಾನವನದ ಗತಿಯೇನು? ಅದರ ಬಗ್ಗೆ ಇದುವರೆಗೂ ಯಾರು ಕೂಡ ಚಿಂತನೆ ಮಾಡಿಲ್ಲ. ಮುಂದೆ, ಅದರ ಬಗ್ಗೆ ಚಿಂತನೆಗೆ ಕೂಡ ಬರುತ್ತಿದ್ದೇನೆ. ಏನು ಕ್ರಮ ತೆಗೆದುಕೊಂಡಿದ್ದೇವೆ, ವಿಶ್ವೇಶ್ವರಯ್ಯನವರು ಕಟ್ಟಿರತಕ್ಕಂಥ ಸುಂದರವಾದಂಥ ಆ ಒಂದು ಉದ್ಯಾನವನವನ್ನು ಹೇಗೆ ತೆಗೆದುಕೊಂಡು ಹೋಗಬೇಕೆನ್ನುವುದಕ್ಕೆ ಮುಂದೆ ಬರುತ್ತೇನೆ. ಸಿಬ್ಬಂದಿಯ ಬಗ್ಗೆ ನಮ್ಮ ಇಲಾಖೆಯಿಂದ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಲು ಇಚ್ಛೆಪಡುತ್ತಿದ್ದೇನೆ.

ಇನ್ನು ಇಲಾಖೆಯ ಯೋಜನೆಗಳ ಬಗ್ಗೆ ಹೇಳುವುದಾದರೆ, ಯೋಜನೆಗಳಿಗೆ ಇಟ್ಟಿರುವ ಹಣವನ್ನು ನೋಡಿದಾಗ ಬಹುಶಃ ಇಡೀ ಸದನ ನಗುತ್ತದೆ. 7 ಕೋಟಿ 35 ಲಕ್ಷ ರೂಪಾಯಿಗಳು ನನ್ನ ಇಲಾಖೆಯ ಆಯವ್ಯಯ. ಈಗಲಾದರೂ ನೀವು ನನಗೆ ಸಪೋರ್ಟ್‌ಮಾಡುತ್ತೀರಾ? ಈಗಲಾದರೂ ನನ್ನ ಕಡೆ ಬರುತ್ತೀರಾ? ಸಾಮೂಹಿಕವಾಗಿ ಬರುತ್ತಿದ್ದೀರಿ ತಾನೇ?

ಶ್ರೀ ವಾಟಾಳ್ ನಾಗರಾಜ್ :– ಖಂಡಿತವಾಗಿ, ನೀವು ರಾಜೀನಾಮೆ ಕೊಟ್ಟರೆ ನಾನು ನಿಮಗೆ ಸಂಪೂರ್ಣವಾಗಿ ಬೆಂಬಲ ಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಿಮಗೆ ಸ್ವಾಭಿಮಾನವಿದ್ದರೆ ನೀವು ಸರ್ಕಾರದಲ್ಲಿ ಇರಬಾರದು. 7 ಕೋಟಿ ರೂಪಾಯಿಗಳಿಗೆ ಒಬ್ಬ ಮಂತ್ರಿ ಎಂದರೆ ಹೇಗೆ? ಕನಿಷ್ಟ ನವಕೋಟಿ ನಾರಾಯಣ ಆದರೂ ಆಗಬೇಡವೇ? ಅವರನ್ನು ನವಕೋಟಿ ನಾರಾಯಣ ನನ್ನಾದರೂ ಮಾಡಿ.

ಶ್ರೀ ವಾಟಾಳ್ ನಾಗರಾಜ್ :– ನೀವು ಅಲ್ಲಿ ಇರಕೂಡದು.

ಅಧ್ಯಕ್ಷರು :– ಅವರು ಉತ್ತರ ಕೊಡಬಾರದು ಎಂದು ನೀವು ತೀರ್ಮಾನ ಮಾಡಿರುವ ಹಾಗೆ ಇದೆ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ :– ತೋಟಗಾರಿಕೆ ಇಲಾಖೆಗೆ ಜಾಸ್ತಿ ಹಣ ಕೊಡಿ ಎಂದಾದರೂ ಹೇಳಬೇಕಲ್ಲವೇ? ಬಾಕಿ ವಿಚಾರದಲ್ಲಿ ವಿರೋಧ ಪಕ್ಷದವರು ವಿರೋಧ ಪಕ್ಷದವರು ಅದು ಇಲ್ಲ, ಇದು ಇಲ್ಲ ಎಂದು ಹೇಳುತ್ತಿರುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅವರನ್ನು ನವಕೋಟಿ ನಾರಾಯಣನನ್ನಾದರೂ ಮಾಡಿ.

ಶ್ರೀ ವಾಟಾಳ್ ನಾಗರಾಜ್ :– ನಮ್ಮ ಇಲಾಖೆಯನ್ನು ಕಡೆಗಣಿಸಿದ್ದಾರೆ ಎಂದು ಹೇಳುತ್ತಿದ್ದಾರೆ, ನಮ್ಮ ಕಡೆ ಬನ್ನಿ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು :– ಏನಿದು? ಒಬ್ಬ ಮಂತ್ರಿ ಉತ್ತರ ಕೊಡುವಾಗ ಪದೇ ಪದೇ ಹೀಗೆ ಎದ್ದು ನಿಂತುಕೊಂಡರೆ ಅವರ ಗತಿಯೇನು?

ಶ್ರೀ ಎಂ.ಪಿ. ವೆಂಕಟೇಶ್ :– ತೋಟಗಾರಿಕೆ ಇಲಾಖೆಗೆ ಹೆಚ್ಚು ಹಣ ಕೊಡಿ ಎಂದು ಅವರು ಹೇಳಲಿ.

ಅಧ್ಯಕ್ಷರು :– ತಾವು ಆಮೇಲೆ ಕ್ಲಾರಿಫಿಕೇಷನ್ ಕೇಳಿ ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಳ್ ನಾಗರಾಜ್ :– ನಮ್ಮ ಕಡೆಗೆ ಬನ್ನಿ ಎಂದು ಹೇಳಿದವರು ಅವರು.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಮಗೆ ಸಹಾಯ ಮಾಡಿ, ನಮ್ಮ ಕಡೆ ಬನ್ನಿ, ನಮ್ಮ ಇಲಾಖೆಗೆ ಬರೀ 7 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಅವರು ಕೇಳಿದರೆ ನಾವು ಏನು ಮಾಡಬೇಕೆಂದು ಹೇಳಿ.

ಅಧ್ಯಕ್ಷರು :– ನನ್ನ ವಿನಂತಿ ಏನೆಂದರೆ, ಎಲ್ಲರೂ ಸ್ವಲ್ಪ ಬಾಯಿ ಮುಚ್ಚಿಕೊಂಡು ಕುಳಿತುಕೊಂಡರೆ ಒಳ್ಳೆಯದು. ಅವರು ಉತ್ತರ ಕೊಟ್ಟಮೇಲೆ ಬಾಯಿಬಿಡಿ.

ಶ್ರೀ ಅರಗ ಜ್ಞಾನೇಂದ್ರ :– ಯಾವುದನ್ನು ಮುಚ್ಚಿಕೊಳ್ಳಬೇಕು ಎಂದು ಹೇಳಿ. ಬಾಯಿ ಮುಚ್ಚಿಕೊಳ್ಳಬೇಕೋ, ಕಿವಿ ಮುಚ್ಚಿಕೊಳ್ಳಬೇಕೋ, ಕಣ್ಣು ಮುಚ್ಚಿಕೊಳ್ಳಬೇಕೋ ಎಂದು ಹೇಳಿ. ನಿಜವಾಗಿಯೂ ಅವರಿಗೆ ಅಸಹಾಯಕತೆ ಇದೆ.

ಅಧ್ಯಕ್ಷರು :– ಎಲ್ಲವನ್ನೂ ಮುಚ್ಚಿಕೊಂಡು ಬಿಡಿ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ :– ನಮ್ಮ ಕಡೆ ಬನ್ನಿ, ಸಹಾಯ ಮಾಡಿ ಎಂದರೆ ನಾವು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳೋಣವೇ?

ಅಧ್ಯಕ್ಷರು :– ಅವರು ಮಾತನಾಡಲಿ. ಅವರು ರಿಪ್ಲೈ ಮಾಡಲಿ, ಏಕೆ ಹೀಗೆ ಮಾಡುತ್ತೀರಿ? ರಿಪ್ಲೈ ಮಾಡಲು ಅವಕಾಶ ಮಾಡಿಕೊಡಿ.

ಶ್ರೀ ಆರ್. ಶ್ರೀನಿವಾಸ್ :– 7 ಕೋಟಿ 25 ಲಕ್ಷ ರೂಪಾಯಿಗಳಲ್ಲಿ ಏನೇನು ಯೋಜನೆಗಳನ್ನು ತಯಾರು ಮಾಡಿದ್ದೇವೆ ಎನ್ನುವ ಬಗ್ಗೆ ವಿವರಗಳನ್ನು ಹೇಳುತ್ತೇನೆ ಕೇಳಿ. ಸಿಬ್ಬಂದಿ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಂಡಿದ್ದೇವೆ ಎಂದು ಈಗಾಗಲೇ ಹೇಳಿದೆ. ಇಟ್ಟಿರತಕ್ಕಂಥ ಈ ಒಂದು ಸಣ್ಣ ಹಣದಲ್ಲಿ.....

ಅಧ್ಯಕ್ಷರು :– ಶ್ರೀನಿವಾಸ್ ಅವರೇ ಆ ಕಡೆ ನೋಡಿಕೊಂಡು ಉತ್ತರ ಹೇಳಬೇಡಿ. ನನ್ನ ಕಡೆ ನೋಡಿಕೊಂಡು ಹೇಳಿ. ನೀವು ಅವರ ಮುಖ ನೋಡುತ್ತೀರಿ, ಅವರು ಎದ್ದು ನಿಲ್ಲುತ್ತಾರೆ.

ಶ್ರೀ ಆರ್. ಶ್ರೀನಿವಾಸ್ :– ಇರತಕ್ಕಂಥ ಹಣದಲ್ಲಿ ಇಸ್ರೇಲ್ ಟೆಕ್ನಾಲಜಿಗೆ 5 ಕೋಟಿ ರೂ.ಗಳನ್ನು ಇಟ್ಟಿದ್ದೇವೆ.

ಅಧ್ಯಕ್ಷರು :– ಮತ್ತೆ ಮತ್ತೆ ಅವರ ಕಡೆ ಏಕೆ ನೋಡುತ್ತೀರಿ?

ಶ್ರೀ ಆರ್. ಶ್ರೀನಿವಾಸ್ :– ಇರಲಿ ಬಿಡಿ. ಅವರೆಲ್ಲರೂ ನಮ್ಮ ಸ್ನೇಹಿತರು. ಇಸ್ರೇಲ್ ಟೈಪ್ ಆಫ್ ಟೆಕ್ನಾಲಜಿಗೆ 5 ಕೋಟಿ ರೂಪಾಯಿಗಳನ್ನು 10 ತಾಲ್ಲೂಕುಗಳಿಗೆ ಇಟ್ಟಿದ್ದು, ಒಂದೊಂದು ತಾಲ್ಲೂಕಿಗೆ 50 ಲಕ್ಷ ರೂಪಾಯಿಗಳು ಎಂದು ಇಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :– ಆ 10 ತಾಲ್ಲೂಕುಗಳು ಯಾವುವು ?

ಶ್ರೀ ಆರ್. ಶ್ರೀನಿವಾಸ್ :– ಅದರಲ್ಲಿ ತಮ್ಮ ಚಾಮರಾಜನಗರವೂ ಸೇರಿದೆ. ಅದರ ವಿವರಗಳನ್ನು ನಂತರ ನಿಮಗೆ ಕೊಡುತ್ತೇನೆ.

ಅಧ್ಯಕ್ಷರು :– ಶ್ರೀನಿವಾಸರವರೇ, ಉತ್ತರ ಹೇಳಿ ಎಂದರೆ ನೀವೇನು ಈ ರೀತಿ ಮಾಡುತ್ತಿದ್ದೀರಿ? ಈ ರೀತಿ ಅವರು ಮಧ್ಯದಲ್ಲಿ ಕೇಳಿದುದ್ದಕ್ಕೆಲ್ಲಾ ಉತ್ತರ ಹೇಳುತ್ತಾ ನಿಂತುಕೊಂಡರೆ ಆಗುವುದಿಲ್ಲ.

ಶ್ರೀ ಆರ್. ಶ್ರೀನಿವಾಸ್ :– ಇರಲಿ ಬಿಡಿ ಸ್ವಾಮಿ. ಚರ್ಚೆ ಯಾವತ್ತೂ ಹೀಗೆ ಇರಬೇಕು; ಚರ್ಚೆ ಯಾವತ್ತೂ ಓಪನ್ ಆಗಿ ಇರಬೇಕು. ನೋಡಿ. Israel

Type - Development of Farms and Nurseries 50 ಲಕ್ಷ ರೂಪಾಯಿಗಳು, Development of Laboratories -40 ಲಕ್ಷ ರೂಪಾಯಿಗಳು, Schemes of Integrated Control of Pests & diseases - 30 ಲಕ್ಷ ರೂಪಾಯಿಗಳು, Horticulture buildings repair ಇದಕ್ಕೆ 50 ಲಕ್ಷ ರೂಪಾಯಿಗಳು, ನಂತರ ತರಬೇತಿಗೆ 5 ಲಕ್ಷ ರೂಪಾಯಿಗಳು, Horticulture Gardens 55 ಲಕ್ಷ ರೂಪಾಯಿಗಳು, gardens ಎಂದರೆ ಯಾವು ಯಾವುದು ಬರುತ್ತದೆಂದರೆ, ಲಾಲ್‌ಬಾಗ್, ಕಬ್ಬನ್ ಪಾರ್ಕ್, KRS, Nandi Hills, ಬಾಬಾಬುಡನಗಿರಿಯಲ್ಲಿ ಕೆಮ್ಮಣ್ಣುಗುಂಡಿ, ಇವೆಲ್ಲಾ ಸೇರಿ ಇವುಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ 55 ಲಕ್ಷ ರೂಪಾಯಿಗಳು ಎಲ್ಲಾ ಸೇರಿ 7 ಕೋಟಿ 35 ಲಕ್ಷ ರೂಪಾಯಿಗಳು. Special Allication for SC-ST; Rs, 33 lakhs for Tribal, ಮತ್ತು 84 ಲಕ್ಷ ರೂಪಾಯಿಗಳು for Special Component Plan S.C ಗೆ, ಹೀಗೆ ಇದನ್ನೆಲ್ಲಾ ಮಾಡುತ್ತಿದ್ದೇವೆ. ಮಾಡಿ ತೋರಿಸುತ್ತೇವೆ. ಇಂಥ ವ್ಯವಸ್ಥೆಯಲ್ಲಿ ಬಹುಶಃ ನಮ್ಮ ಶ್ರೀ ವಿಶ್ವೇಶ್ವರ ಹೆಗಡೆಯವರು – ಮಹಾರಾಷ್ಟ್ರದಲ್ಲಿ 250 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆಂಧ್ರಪ್ರದೇಶದಲ್ಲಿ 150 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳಿದರು. ಇಲ್ಲಿ 27 ಜಿಲ್ಲೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಕೂಡ ನನ್ನ ಇಲಾಖೆಗೆ ಸಂಬಂಧಪಟ್ಟ ಬೆಳೆ ಇದೆ. ಎಲ್ಲಿ ನೋಡಿದರೂ ಈ ಬೆಳೆ ಇಲ್ಲದಿದ್ದರೆ ಈ ರಾಜ್ಯದ ಪರಿಸ್ಥಿತಿ ಇಲ್ಲವೇ ಇಲ್ಲ. ರಾಗಿ, ಜೋಳವನ್ನು ಏನಾದರೂ ನಾವು ನಂಬಿದ್ದಿದ್ದರೆ ಬಹುಶಃ ಜೀವನ ಮಾಡುವುದಕ್ಕೆ ಕೂಡ ಕಷ್ಟವಾಗುತ್ತಿತ್ತು. ಇಂಥ ಸಂದರ್ಭದಲ್ಲಿ ತೋಟಗಾರಿಕೆ ಬೆಳೆ ಬಹಳ ಪ್ರಾಮುಖ್ಯವಾದಂಥ ಒಂದು ಬೆಳೆಯಾಗಿರುವುದರಿಂದ, ಈ ಒಂದು ನಿಟ್ಟಿನಲ್ಲಿ ಬಹುಶಃ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಕೂಡ ಈಗಾಗಲೇ ಹೇಳಿದ್ದಾರೆ. ಆದರೂ ಸುಮಾರು 150 ಕೋಟಿ ರೂಪಾಯಿಗಳಷ್ಟು ಕೂಡ ಈಗ ಈ ಇಲಾಖೆಗೆ ಮಂಜೂರು ಮಾಡಬೇಕಾಗುತ್ತದೆ. ಈಗ ಕೊಡಬೇಕು. ಕೊಟ್ಟರೆ ಮಾತ್ರ ಏನಿದ್ದರೂ ಕೂಡ ಮಾಡಿ ತೋರಿಸುತ್ತೇವೆ. ಇಂಥ ಪರಿಸ್ಥಿತಿ ಇದೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :– ಇದಕ್ಕೆ ಸಂಬಂಧಿಸಿದಂತೆ ಈಗ ಮಾನ್ಯ ಹಣಕಾಸಿನ ಸಚಿವರು ಉತ್ತರ ಹೇಳಲಿಕ್ಕೆ ಹೇಳಿ. ಅವರು ಡಿಮ್ಯಾಂಡ್‌ನ್ನು ಇಟ್ಟುಬಿಟ್ಟಿದ್ದಾರೆ.

ಶ್ರೀ ಸಿ.ಟಿ. ರವಿ :– ಮಾನ್ಯ ಸಚಿವರು ಮಾತನಾಡುತ್ತಾ ಹಣ ಕೊಡದಿದ್ದರೆ ಏನು ಮಾಡುತ್ತೀರಿ ಎನ್ನುವುದನ್ನು ಹೇಳಲಿಲ್ಲ.

ಶ್ರೀ ಆರ್. ಶ್ರೀನಿವಾಸ :– ಪರಿಸ್ಥಿತಿ ಹೀಗಾಗಿದೆ.

ಶ್ರೀ ಸಿ.ಟಿ. ರವಿ :– 150 ಕೋಟಿ ರೂಪಾಯಿಗಳನ್ನು ಕೊಡದಿದ್ದರೆ ಮಾನ್ಯ ಸಚಿವರು ಈ ಕಡೆಗೆ ಬರುತ್ತೀರಾ?

(ಗೊಂದಲ)

ಶ್ರೀ ಆರ್. ಶ್ರೀನಿವಾಸ :– ಇದು ಈ ರೀತಿ ಆದರೆ ಈ farms ಏನಾಗಿದೆ, ಸುಮಾರು 417 ಸಾವಿರ ಎಕರೆ ದಿವಂಗತ ಮರಿಗೌಡರ ಕಾಲದಲ್ಲಿ ಇವೆಲ್ಲಾ ಕೂಡ ಪ್ರಾರಂಭವಾಗಿದೆ. ಯಾವ ತಾಲ್ಲೂಕಿನಲ್ಲಿ ಕೂಡ 100 ಎಕರೆ, 150 ಎಕರೆ, 200 ಎಕರೆ, ಹೀಗೆ ಇದೆ. ನಿನ್ನೆ ನಮ್ಮ ಸ್ನೇಹಿತರೆಲ್ಲಾ ಹೇಳುವಾಗ ಈ ಸರ್ಕಾರದ farms ಗಳನ್ನು ಏನಾದರೂ ನೋಡಿಬಿಟ್ಟರೆ 'ಏನಪ್ಪ ಈ ರೀತಿ ಇದೆಯೆಂದು' ಮಾವಿನ ಗಿಡವನ್ನು ಹಾಕುವವನೂ ಕೂಡ ಹಾಕುವುದಿಲ್ಲ ಎಂದು ಹೇಳಿದರು. ನಿಜ, ನಾನು ಒಪ್ಪಿಕೊಳ್ಳುತ್ತೇನೆ. ತಾವು ಇದುವರೆಗೆ ಯಾವ ರೀತಿ ಹೇಳಿದ್ದೀರಾ, ಬಹುಶಃ ಶ್ರೀನಿವಾಸಪುರ ಚೆನ್ನಾಗಿದೆ, ನಮ್ಮ ಮಾನ್ಯ ರಮೇಶ್ ಕುಮಾರ್ ಸಾಹೇಬರ ತಾಲ್ಲೂಕಿನಲ್ಲಿ ಚೆನ್ನಾಗಿದೆ ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಒಗಳುಗೆರೆ farms ಚೆನ್ನಾಗಿದೆ. ಅವರ ತಾಲ್ಲೂಕಿನಲ್ಲಿ 800 ಎಕರೆ ಇದೆ. ಅದು ಚೆನ್ನಾಗಿದೆ. ಅದಕ್ಕೆ ಅವರು ಆ ಮಾತು ಹೇಳಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಇದನ್ನು ಯಾವ ರೀತಿ ನಾವೆಲ್ಲಾ ಕೂಡ ಅಭಿವೃದ್ಧಿಪಡಿಸುವುದು? ಇವತ್ತು ಇದರಲ್ಲಿ ಬರತಕ್ಕಂಥದ್ದು ನಿಜವಾಗಿ 100 ಎಕರೆ ತೋಟಕ್ಕೆ 6 ರಿಂದ 10 ಸಾವಿರ ರೂಪಾಯಿಗಳ ಆದಾಯ ಬಂದರೆ ಸುಮಾರು 8 ರಿಂದ 10 ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ. ಅಲ್ಲಿರತಕ್ಕಂಥ Gardeners ಗೆ ಐದ್ಯೆದು ಸಾವಿರ, ಈಗ ನನ್ನ ತಾಲ್ಲೂಕಿನಲ್ಲಿ ಮುಡಿನೂರು ಫಾರಂ ಎನ್ನುವ ಒಂದು ಫಾರಂ ಇದೆ. 1 ಲಕ್ಷದ 20 ಸಾವಿರ ರೂಪಾಯಿ ಆದಾಯ, 12 ಲಕ್ಷ ರೂಪಾಯಿ ಖರ್ಚು ಇಂಥವು ಅನೇಕ ಫಾರಂಗಳು ಇರುವುದರಿಂದ ಇವತ್ತು ಇಲಾಖೇ ಬಗ್ಗೆ ಯಾರು ಶ್ರದ್ಧೆ ತೋರಿಸುತ್ತಿಲ್ಲ. ಈ ಇಲಾಖೆ ಬಗ್ಗೆ ಕೂಡ ಏಕೆ ಉದಾಸೀನ ಆಗಿದೆ ಎಂದರೆ, ಸರ್ಕಾರಕ್ಕೆ ಯಾವುದೇ ಲಾಭ ಇಲ್ಲ, ಏಕೆ ಇವೆಲ್ಲವನ್ನೂ ಕೂಡ ನಾವು ಅಭಿವೃದ್ಧಿ ಮಾಡುವುದಕ್ಕೆ ಹಣ ಕೊಡಬೇಕು ಎನ್ನುವ ಭಾವನೆ ಬಂದಿರುವುದರಿಂದ ಇದನ್ನು ಮೇಲೆತ್ತುವುದಕ್ಕೆ ಒಂದು ಸ್ಕೀಂ ಅನ್ನು ನಾವು ಹಾಕಿದ್ದೇವೆ. ಯಾವ ರೀತಿ ಅಂದರೆ, ಈಗಾಗಲೇ ಕೂಡ ರಾಜ್ಯ ವಲಯ ಕ್ಷೇತ್ರದಲ್ಲಿ 165 farms, ರಾಜ್ಯವಲಯದ ನರ್ಸರಿ 70 ಫಾರಂಗಳು, ಜಿಲ್ಲಾ ಪಂಚಾಯತಿ 120 ಜಿಲ್ಲಾ ಮಟ್ಟದಲ್ಲಿ 415, ಇದನ್ನು ಯಾವ ರೀತಿ ಮಾಡಬೇಕೆಂದಿದ್ದೇವೆಂದರೆ, 200– ಇಲಾಖೆ ಉಳಿಸಿಕೊಳ್ಳುವ ಫಾರಂಗಳು, ಲಾಭದಾಯಕ ಕ್ಷೇತ್ರ ಸಂಖ್ಯೆ 31 ಮಾತ್ರ ಲಾಭದಾಯಕವಾಗಿತ್ತು. ಈ ಲಾಭದಾಯಕ ಕ್ಷೇತ್ರದಿಂದ ಎಲ್ಲಾ ಸೇರಿ ಸುಮಾರು 3 ಕೋಟಿ ರೂ. ಚಿಲ್ಲರೆ ಬರುತ್ತದೆ. ಇದನ್ನೆಲ್ಲಾ

ಸರ್ಕಾರಕ್ಕೆ ಇಟ್ಟುಕೊಂಡುಬಿಡುತ್ತಾರೆ. ಒಂದು ರೂಪಾಯಿ ಕೂಡ ಫಾರಂ ಕೊಡುವುದಿಲ್ಲ. ಅದು ಇದೆಯಾ ಇಲ್ಲವಾ ಎಂದು ಕೊಡುವುದಿಲ್ಲಾ. ಇವತ್ತು ಇಲಾಖೆಯ ಬಗ್ಗೆ ಸುದೀರ್ಘವಾಗಿ ಏಕೆ ಚರ್ಚೆ ಮಾಡಬೇಕೆಂದು ಹೇಳುತ್ತೇನೆಂದರೆ, ನಾನು ಈ ಕಡೆ ಆ ಕಡೆ ಎಂದು ಅಲ್ಲ, ವಾಸ್ತವಾಂಶವನ್ನು ಪ್ರತಿಯೊಬ್ಬ ಗೌರವಾನ್ವಿತ ಸದಸ್ಯರು ಕೂಡ ತಿಳಿದುಕೊಳ್ಳಬೇಕು. ಈ ಇಲಾಖೆ ಬಗ್ಗೆ ಕೂಡ ಉದಾಸೀನ ಮಾಡಿದೆ. ಇಲಾಖೆ ಹಿದುಳಿದಿದೆ ಎನ್ನುವುದರ ಬಗ್ಗೆ ಎಲ್ಲರ ಗಮನಕ್ಕೆ ತಂದರೆ, ಇದನ್ನು ಯಾವ ರೋಗಗ್ರಸ್ಥರಾಗಿರತ್ತಕಂಥ patient ಗೆ ಯಾವ್ಯಾವ ಔಷಧಿ ಯಾರ್ಯಾರು ಕೊಟ್ಟರೆ ಹೇಗೆ ಒಳ್ಳೆಯದಾಗುತ್ತದೆ. ಹೇಗೆ ನಡೆಯುತ್ತದೆ ಎನ್ನುವುದರ ಬಗ್ಗೆ ಒಂದು ಸಲಹೆ ಕೊಡುವುದಕ್ಕೆ ಸೂಕ್ತವಾದಂಥ ಸಮಯ ಇದಾಗಿರುವುದರಿಂದ ನಾನು ಉತ್ತರ ಕೊಡುವಂಥ ಸಂದರ್ಭದಲ್ಲಿ ಇದನ್ನೆಲ್ಲಾ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ "– ಕ್ಯಾನ್ಸರ್ ಬಂದುಬಿಟ್ಟಿದೆ.

SRI R. SRINIVAS :- No, no ತಪ್ಪು ತಿಳಿದುಕೊಳ್ಳಬೇಡಿ. ದಯವಿಟ್ಟು ಇಲ್ಲ, ಅದನ್ನು ವಾಪಸ್ಸು ತೆಗೆದುಕೊಳ್ಳಿ ಇಲ್ಲ. ಬಹಳ ಆರೋಗ್ಯಕರವಾಗಿದ್ದಾನೆ. ಸರಿಯಾದ ರೀತಿಯಲ್ಲಿ ಆಹಾರ ಇಲ್ಲ ಸೂಕ್ತವಾದಂಥ ವಿಟಮಿನ್ಸ್ ಕೊಟ್ಟಿಲ್ಲ. ಅದಕ್ಕೆ ಬೆಡ್‌ರೆಸ್ಟ್ ಹೋಗಿದ್ದಾನೆ. ಅಲ್ಪಸ್ವಲ್ಪ ಏನಾದರೂ ಊಟ ಕೊಟ್ಟರೆ .....

ಅಧ್ಯಕ್ಷರು :– ಏನ್ರಿ ವಾಟಾಳ್ ನಾಗರಾಜ್‌ನವರೇ, ಕುಳಿತುಕೊಂಡು ಕೇಳುತ್ತಲೇ ಇರುತ್ತೀರಿ. ನಿಮಗೆ ಉತ್ತರ ಹೇಳುತ್ತಿರುತ್ತಾರೆ. ನಿಮ್ಮಿಬ್ಬರಲ್ಲಿ ಏನೋ understanding ಇದ್ದ ಹಾಗೆ ಇದೆ.

ಶ್ರೀ ಆರ್. ಶ್ರೀನಿವಾಸ :– ಅಲ್ಪಸ್ವಲ್ಪ ಊಟ ಕೊಟ್ಟರೆ ಇವತ್ತೂ ಕೂಡ ನಡೆಯುತ್ತಾನೆ, ವ್ಯವಸಾಯ ಮಾಡುತ್ತಾನೆ, ಇವತ್ತೂ ಕೂಡ ನಮಗೆ ಆದಾಯ ತಂದುಕೊಡುತ್ತಾನೆ. ಇದನ್ನು ತಮ್ಮ ಮುಂದೆ ಘಂಟಾಘೋಷವಾಗಿ ಹೇಳುತ್ತೇನೆ. ಇಂಥ ಪರಿಸ್ಥಿತಿಯಲ್ಲಿ ಒಂದು ಯೋಜನೆ ಹಾಕಿಕೊಂಡಿದ್ದೇವೆ. ಈ ಇಲಾಖೆ ಉಳಿಸಿಕೊಳ್ಳುವಂಥ 31 ಫಾರಂಗಳು. ಈ 289 ಫಾರಂಗಳನ್ನು ಒಂದು ಕಡೆ ಇಟ್ಟುಬಿಟ್ಟು ಇದಕ್ಕೆ ಅಲ್ಪಸ್ವಲ್ಪ ಏನಾದರೂ ತಿಂಡಿ ಕೊಟ್ಟುಬಿಟ್ಟರೆ, ಇದು ಲಾಭದಾಯಕವಾದಂಥ ಫಾರಂಗಳು. ಈ 74 ಫಾರಂಗಳನ್ನು ಒಂದು ರೀತಿ ತೆಗೆದುಕೊಳ್ಳಬೇಕೆಂದಿದ್ದೇವೆ. Joint ventures ನಲ್ಲಿ ಪ್ರತಿ ತಾಲ್ಲೂಕಿನಲ್ಲಿ ಆಗಬಹುದು, ಎರಡೆರಡನ್ನು ಖಾಸಗಿಯವರು ಆಗಬಹುದು, ಕಂಪನಿಯವರಿಗೆ ಆಗಬಹುದು; ಕೊಡುವಂಥ ವ್ಯವಸ್ಥೆ ಹೇಗಿರಬೇಕು ಎಂದರೆ, ಯಾವುದೇ ಸಂದರ್ಭದಲ್ಲಿ ಆ title deeds ಅವರಿಗೆ ಇಲ್ಲ. Title deeds ಕೊಡುವುದಿಲ್ಲ. ಇದನ್ನು ತಾವೆಲ್ಲಾ ಗಮನಿಸಬೇಕು. ಆ ಮೇಲೆ ಇಲಾಖೆಯ ಸಿಬ್ಬಂದಿಯವರ ಒಂದು ಉಸ್ತುವಾರಿಯನ್ನು ಇಡುತ್ತೇವೆ. ಏಕೆ

ಹೇಳುತ್ತೇನೆಂದರೆ, ಇದನ್ನು ಯಾರ್ಯಾರು ಒಂದು project report ಮಾಡಿ, ಆ project report ಮುಖಾಂತರ ಆ ತಾಲ್ಲೂಕು ಆ ಜಿಲ್ಲೆಯಲ್ಲಿ ಕೊಟ್ಟಾಗ ತೋಟ ಒಂದೇ ಅಭಿವೃದ್ಧಿ ಪಡಿಸುವುದಿಲ್ಲ; ಅಲ್ಲಿಯ ಹವಾಗುಣಕ್ಕೆ ಅನುಗುಣವಾಗಿ ಯಾವ nursery ಗಿಡಗಳನ್ನು ಬೆಳೆಸಬೇಕು. ಯಾವ ರೀತಿ ಅಲ್ಲಿ ತಂತ್ರಜ್ಞಾನವನ್ನು ಉಪಯೋಗಿಸಬೇಕೆಂಬ ಬಗ್ಗೆ ತರಬೇತಿ ಕೊಡುವುದಕ್ಕೆ ಸಾಧ್ಯವಾಗಿರುತ್ತದೆ. ಇದಕ್ಕೆಲ್ಲಾ ಕೂಡ ಕೇಂದ್ರ processing units ಮಾಡತಕ್ಕಂಥವರು ಮುಂದೆ ಬಂದರೆ ಇದಕ್ಕೆಲ್ಲಾ ಕೂಡ ಅವಕಾಶ ಮಾಡಿಕೊಟ್ಟು ಜಿಲ್ಲೆಯಲ್ಲಿರತಕ್ಕಂಥ ಎಲ್ಲಾ ರೈತರು ಕೂಡ ಮಾದರಿಯಾದಂಥ ಒಂದು ಫಾರಂ ಮಾಡುವುದಕ್ಕೆ ಅನುಕೂವಾಗುತ್ತದೆ. ಅವರಿಗೆ ಆ ಒಂದು ಕಂಡೀಷನ್ ಪ್ರಕಾರ ನಾವು ಯಾವ title ಕೊಡುವುದಿಲ್ಲ Title Horticulture Department ಗೆ ಇರುತ್ತದೆ. ಈ ವ್ಯವಸ್ಥೆಯನ್ನು ಮಾಡಿದಾಗ ನಮ್ಮಲ್ಲಿ ಹಣ, ಸಿಬ್ಬಂದಿ ಕೊರತೆ ಇರುವುದರಿಂದ ಇದು ತಾತ್ಕಾಲಿಕವಾಗಿ ಇವನ್ನೆಲ್ಲಾ ಕೂಡ ಮುಂದೆ ಬರುವುದಕ್ಕೆ ಕೆಲವೇ ಫಾರಂನ್ನು ಕೊಡುವುದಕ್ಕೆ ಒಂದು ನಿರ್ಣಯ ತೆಗೆದುಕೊಳ್ಳಬೇಕೆಂದಿದ್ದೇವೆ. ಅದನ್ನು ಸಾಮೂಹಿಕವಾಗಿ ತೆಗೆದುಕೊಳ್ಳುವುದು ಬೇಡ ಅಂದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು 38 ಫಾರಂಗಳು ಏನಿವೆ, ಅರಣ್ಯ ಇಲಾಖೆಯಿಂದ ತೆಗೆದುಕೊಂಡಿದ್ದೇವೆ. ಅದನ್ನು ಅಭಿವೃದ್ಧಿ ಪಡಿಸಿಲ್ಲ. ಖಾತೆ ಎಲ್ಲಾ ಕೂಡ ಅವರ ಹೆಸರಿನಲ್ಲಿಯೇ ಇದೆ. ನಾವ್ಯಾರು ಇಟ್ಟುಕೊಂಡಿಲ್ಲ. ಆಗ ನಮಗೆ ಗಿಡ ಬೆಳೆಸಿ ಕೊಟ್ಟಿದ್ದನ್ನು ಬೈರೇಗೌಡರು ತೆಗೆದುಕೊಂಡಿದ್ದಾರೆ. ಅದನ್ನು ಪುನಃ ಅವರಿಗೆ ವಾಪಸ್ಸು ಕೊಟ್ಟು ಅವರು ಏನಾದರೂ ಮಾಡಿಕೊಳ್ಳಲಿ ಎಂದು ಬಿಟ್ಟಿದ್ದೇವೆ. ಈ ದೇವಸ್ಥಾನದ ಒಡೆತನಕ್ಕೆ ಕೆಲವು 3 ಎಕರೆ, 4 ಎಕರೆ ಜಮೀನು ಇರತಕ್ಕಂಥವು 6 ಫಾರಂಗಳು ಇದೆ. ಅದನ್ನು ಅವರಿಗೇ ವಾಪಸ್ಸು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. Title deeds ಅವರ ಹತ್ತಿರ ಇದೆ. possession ತೆಗೆದುಕೊಂಡು ಅದರ maintenance ಅಷ್ಟೇ ನಮ್ಮದು. ಆಮೇಲೆ Temple Trust, ವಿವಿಧ ಇಲಾಖೆಗಳಿಂದ 8 ಫಾರಂ ಇವನ್ನೆಲ್ಲಾ ಕೂಡ ಬೇಡ, 3 ಎಕರೆ, 4 ಎಕರೆ ಅವೆಲ್ಲಾ ಬೇಕಾಗಿಲ್ಲ ಅವರೇ maintain ಮಾಡಲಿ, ಎಂದು ಇದರ ಬಗ್ಗೆ ಕೂಡ ಎಲ್ಲಾ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಸುಮಾರು 9 ಕೋಟಿ ರೂಪಾಯಿಗಳು ಅಭಿವೃದ್ಧಿಪಡಿಸುವುದಕ್ಕೆ ನಮಗೆ ಬೇಕೆಂದು ಸರ್ಕಾರದ ಅನುಮತಿಗೆ ನಾವೆಲ್ಲವನ್ನೂ ಕೂಡ ಕಳುಹಿಸಿದ್ದೇವೆ. ಈ 9 ಕೋಟಿ ರೂಪಾಯಿಗಳನ್ನು ನಮಗೇನಾದರೂ ಕೊಟ್ಟ ಪಕ್ಷಕ್ಕೆ ಶೇಕಡ 50ರಷ್ಟು ಬರತಕ್ಕಂಥ ಆದಾಯ ನಮ್ಮ ಇಲಾಖೆಗೆ ಬರಬೇಕು. ಅದಕ್ಕೆ Farm Policy ಎನ್ನತಕ್ಕಂಥದ್ದು, ಈ Farm Policy ಅಡಿಯಲ್ಲಿ ಎಷ್ಟು ಹಣ ಅದರಿಂದ ಬರುತ್ತದೆ, ಅದರ ಲಾಭದಲ್ಲಿ ಶೇಕಡ 50 ಪರ್ಸೆಂಟ್ ಹಣವನ್ನು ಸರ್ಕಾರಕ್ಕೆ ಕೊಟ್ಟು 50 ಪರ್ಸೆಂಟ್ ಹಣವನ್ನು

ಸರ್ವತೋಮುಖವಾದ ಅಭಿವೃದ್ಧಿಗೆ ಬಳಸುವುದಕ್ಕೆ ಚಿಂತನೆ ಮಾಡಿ ಒಂದು Farm Policy ತರತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ ಅದೇ ರೀತಿ ಇನ್ನೊಂದು ಕಡೆ ನಾವೆಲಾ ಕೂಡ ಈ ರೀತಿ ಫಾರಂಗಳ ಬಗ್ಗೆ, ಸಿಬ್ಬಂದಿ ಬಗ್ಗೆ ಇಲಾಖೆ ಬಗ್ಗೆ ಎಲ್ಲವನ್ನೂ ಕೂಡ ಹೇಳಿದ ಮೇಲೆ ರೈತರಿಗೆ ನೀವೇನಪ್ಪ ಮಾಡಿದ್ದೀರಾ ಎನ್ನುವ ಪ್ರಶ್ನೆ ಬಂತು. ಈಗ ನಾವು ರೈತರಿಗೆ ಏನು ಮಾಡುತ್ತಿದ್ದೇವೆಂದರೆ, 16 ಲಕ್ಷ ಸಸಿಗಳನ್ನು ಕೊಡುವುದಕ್ಕೆ ಈಗಾಗಲೇ ನಾವು ಉತ್ತರ ಕನ್ನಡ, ದಕ್ಷಿಣ ಕನ್ನಡ, ಜಿಲ್ಲೆಗಳಲ್ಲಿ ನಮ್ಮ ಮಾನ್ಯ ನಾಗರಾಜ ಶೆಟ್ಟಿಯವರಿಗೆ ಎಲ್ಲಾ ಗೊತ್ತು. 3–4 ಸಭೆಗಳನ್ನು ಮಾಡಿ ಸುಮಾರು ಎರಡು, ಎರಡೂವರೆ ಲಕ್ಷ ಗಿಡಗಳನ್ನು ವಿತರಣೆ ಮಾಡುವುದಕ್ಕೆಲ್ಲಾ ಕೂಡ ಪ್ರಯತ್ನ ಮಾಡಿಬಿಟ್ಟಿದ್ದೇವೆ. ಎಲ್ಲೆಲ್ಲಿ ಮಳೆ ಬರುತ್ತಿದೆ ಅಲ್ಲಿ 14 ಲಕ್ಷ ಸಸಿಗಳನ್ನು ವಿತರಣೆ ಮಾಡಲಾಗಿದೆ. ಅವು ಯಾವ್ಯಾವ ಸಸಿಗಳು ಎಂದರೆ, ಅದರಲ್ಲಿ 11 ಲಕ್ಷ ಗೇರು ಸಸಿಗಳು. ಅದು ಗೇರು ಎಂಧರೆ ಹೈಬ್ರಿಡ್ ಗೇರು. 1 ರಿಂದ 4 ಎಂದು ಹೇಳಿ ಮಾಮೂಲಿಯದಲ್ಲ ಇವೆಲ್ಲ. 5 ವರ್ಷಗಳಾದ ಮೇಲೆ ಒಂದು ಗಿಡಕ್ಕೆ 15 ಕೆಜಿ ಯೀಲ್ಡ್ ಬರುವ ತಳಿಗಳು, ಆ ಪ್ರಾಂತ್ಯಕ್ಕೆ ಇದಾದರೆ, ನಮ್ಮ ಸ್ವಾಮಿಯವರ ಪ್ರಾಂತ್ಯಕ್ಕೆ ಅಂದರೆ ಚಿಂತಾಮಣಿಗೆ ದಾನ–1 ಎಂದು ಅದನ್ನೂ ಕೂಡ ಇವತ್ತಿನ ದಿವಸ ನಮ್ಮ ಪ್ರಾಂತ್ಯಕ್ಕೆ ಆಗತಕ್ಕಂಥ ಕಾರ್ಯಕ್ರಮ ನಡೆದಿದೆ. ಇದು ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಕೈಗೊಂಡಿರತಕ್ಕ ಕಾರ್ಯಕ್ರಮ, ಇವತ್ತು ಇಂಥ ಒಂದು ಸಂಧರ್ಭದಲ್ಲಿ ಮಾವು ಎಲ್ಲಾ ಕಡೆ ಕಡಿಮೆ ಮಾಡುತ್ತಿದ್ದೇವೆ. ಈ ಸಾರಿ ಕೊಟ್ಟುಬಿಟ್ಟು ಮುಂದಿನ ವರ್ಷ ಮಾವು ಬೇಡ, ಮಾವು ಬರಬರುತ್ತಾ ಅದರ ಲಾಭ ಕಡಿಮೆಯಾಗುತ್ತದೆ. ನಿಗದಿಯಾದಂಥ ಆದಾಯ ಬರುತ್ತಿಲ್ಲ. ಮೂರು–ಮೂರೂವರೆ ಸಾವಿರ ರೂಪಾಯಿ ಒಂದು ಟನ್‌ಗೆ ಇದೆ. ಅಲ್ಫಾನ್ಸೋ ಹಾಕಿದವನಿಗೆ, ಬಾದಾಮಿ ಹಾಕಿದವನಿಗೆ 14 ಸಾವಿರ ರೂಪಾಯಿ ಬಿತ್ತು ಏನು ಲಾಭದಾಯಕವಾದಂತಹ ತಳಿ ಏನಿವೆ ಇವೆಲ್ಲಾ ಕೂಡ ನಷ್ಟವಾಗುವ ಪರಿಸ್ಥಿತಿಯಲ್ಲಿ ಇವೆ. ಉದಾಹರಣೆಗೆ ದಾಳಿಂಬೆ, ಬಹುಶಃ ನಮ್ಮ ಚಿತ್ರದುರ್ಗಕ್ಕೆ ಬಾಗಲಕೋಟೆಯವರು, ಬಿಜಾಪುರದವರು ಇವರೆಲ್ಲಾ ಬಂದಿದ್ದಾರೆ. ಮಹಾರಾಷ್ಟ್ರದವರು 250 ಕೋಟಿ ರೂಪಾಯಿ ಹಾಕಿದರೆ ನಾವು ಭಾರತದಲ್ಲಿ ಸೆಕೆಂಡ್ ಹೈಯೆಸ್ಟ್ ಇದ್ದೇವೆ. ಅಷ್ಟು ದಾಳಿಂಬೆಯನ್ನು ನಾವು ಹೊರದೇಶಕ್ಕೆ ಇವತ್ತಿನ ದಿವಸ ಕಳುಹಿಸುತ್ತಿದ್ದೇವೆ. ನಮಗೆ ನೆಲ್ಲಿ ಬೇಕು. ಇವತ್ತು ಗೋದ್ರೆಜ್ ಕಂಪನಿಯವರು ಬೈಬ್ಯಾಕ್ ಅಗ್ರಿಮೆಂಟ್ ಕೊಡುತ್ತಿದ್ದಾರೆ. ತಮಗೆ ಹೇಳುತ್ತಿದ್ದೇನೆ, ಬೈ ಬ್ಯಾಕ್ ಅಗ್ರಿಮೆಂಟ್‌ನಲ್ಲಿ ಕೆಜಿ 35 ರೂಪಾಯಿ ಇದೆ. ಇಂಥ ಒಂದು ತಳಿಗಳನ್ನು ಮಾಡುವುದಕ್ಕೆ ಈಗಾಗಲೇ ಯೋಜನೆ ಹಾಕಿಕೊಂಡು ಕಾರ್ಯೋನ್ಮುಖರಾಗಿದ್ದೇವೆ. ಆಮೇಲೆ ಔಷಧಿ ಗಿಡಗಳು, ಅನಂತರ ಮಲ್ಲಿಗೆ, ನಿನ್ನೆ ಯಾರೋ ಬೆಳ್ತಂಗಡಿಯಲ್ಲಿ ಮಲ್ಲಿಗೆ ಎಂದು ಹೇಳಿದರು. ಉಡುಪಿ ಆಗಬಹುದು, ಬೆಳ್ತಂಗಡಿ ಆಗಬಹುದು, ಆ ಮಲ್ಲಿಗೆ ಎಂತಹ

ಮಲ್ಲಿಗೆ ಎಂದರೆ ಸುಮಾರು 200 ಗಿಡ ಹಾಕಿಕೊಂಡಿರುವ ಒಂದು ಕುಟುಂಬಕ್ಕೆ 50 ಸಾವಿರ ರೂಪಾಯಿ ಇವತ್ತಿನ ದಿವಸ ಆದಾಯ ಬರುತ್ತಿದೆ. ನಾನು ಮೊನ್ನೆ ಆ ಪ್ರಾಂತ್ಯಕ್ಕೆ ಹೋದಾಗ, ಅಲ್ಲಿ ಕುಮಟದಲ್ಲಿ ಒಂದು ಸಭೆ ಮಾಡಿದಾಗ ಅವರು ಹೇಳುತ್ತಿದ್ದರು, 200 ಗಿಡಕ್ಕೆ 50 ಸಾವಿರ ರೂಪಾಯಿ ಆದಾಯ ಬರುತ್ತದೆ ಎಂದು ಇಂಥ ಒಂದು ತಳಿಗಳನ್ನು ಇವತ್ತು ವಿತರಣೆ ಮಾಡುವುದಕ್ಕೆ ಕ್ರಮಕೈಗೊಂಡು ಈಗಾಗಲೇ ನೂರಾರು ಗಿಡಗಳನ್ನು ಆ ಪ್ರಾಂತ್ಯದಲ್ಲಿ ಕೊಡುತ್ತಿದ್ದೇವೆ. ಆದರೂ ಅದು ಸಾಕಾಗುವುದಿಲ್ಲ. ಇನ್ನೂ ಈ ವರ್ಷ ಹೆಚ್ಚಿನ ರೀತಿಯಲ್ಲಿ ಕೊಟ್ಟು ಅದು ಎಷ್ಟೇ ಬೇಡಿಕೆ ಇರಲಿ, ಅದನ್ನು ಕೊಡುವುದಕ್ಕೆ , ಗೇರು ಗಿಡಗಳನ್ನು ಇತ್ಯಾದಿ ಕೊಡುವುದಕ್ಕೆ ನಾವು ಈಗ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಗೇರು ಬಗ್ಗೆ ಹೇಳಬೇಕಾದರೆ, ಸನ್ಮಾನ್ಯ ನಾಗರಾಜಶೆಟ್ಟಿಯವರು, ನಾವು ಪ್ರೊಸೆಸಿಂಗ್ ಏಜೆಂಟ್ಸ್ ಅನ್ನು ಕರೆಸಿದ್ದೆವು. ಸುಮಾರು 256 ಪ್ರೊಸೆಸಿಂಗ್ ಯೂನಿಟ್ಸ್ ಇವೆ. ಮಾಧುಸ್ವಾಮಿಯವರೇ, ತಾವು ಕೇಳಿರಬೇಕು. ಒಂದು ಗೇರು ಅಂದರೆ.... ನಾನೊಂದು ಫ್ಯಾಕ್ಟರಿಗೆ ಹೋದಾಗ 400 ಜನ ಹೆಣ್ಣು ಮಕ್ಕಳು ಅಲ್ಲಿ ಕೆಲಸ ಮಾಡುತ್ತಿದ್ದರು. ಮಿಷನರಿ ಅಲ್ಲ. 400 ಜನ ಒಂದೇ ಒಂದು ಸಣ್ಣ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದರು ಬೇಕಾದರೆ, ಮಾನ್ಯ ನಾಗರಾಜಶೆಟ್ಟಿಯವರನ್ನು ಕೇಳಿ, ಮಿಷನರಿ ಏನೂ ಇಲ್ಲ. ಅದೂ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅವರು ಕೆಲಸ ಮಾಡುತ್ತಿದ್ದರು. ಒಂದು ಕೆಜಿಗೆ 6 ರೂಪಾಯಿಗಳಂತೆ 13 ರಿಂದ 15 ಕೆಜಿಯವರೆಗೆ ಆ ಹೆಣ್ಣು ಮಕ್ಕಳು ಕೆಲಸ ಮಾಡುತ್ತಾರೆ ಅವರಿಗೆ ಇ.ಎಸ್.ಐ ಫೆಸಿಲಿಟೀಸ್ ಕೊಡುತ್ತಿದ್ದಾರೆ, ಪ್ರಾವಿಡೆಂಟ್‌ಫಂಡ್ ಕೊಡುತ್ತಿದ್ದಾರೆ ಪರ್ಮನೆಂಟ್ ಅಲ್ಲ. ಇಂಥ 256 ಪ್ರೋಸೆಸಿಂಗ್ ಯೂನಿಟ್ಸ್ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿವೆ. ಇದನ್ನು ನಾವು ಕೋಲಾರಕ್ಕೆ ಕೂಡ ತರಿಸಬೇಕು, ಬೀದರ್‌ಗೆ ತರಿಸಬೇಕು, ಎಲ್ಲೆಲ್ಲಿ ಹವಾಗುಣಕ್ಕೆ ಅನುಗುಣವಾಗಿ ಸರಿಯಾದ ಗೇರು ಗಿಡಗಳನ್ನು ಬೆಳೆಯುವುದಕ್ಕೆ ಸೂಕ್ತವಾಗುತ್ತದೆ, ಅದನ್ನು ಮಾಡುವುದಕ್ಕೆ ಚಿಂತನೆ ಮಾಡಿ ಬರುವ ವರ್ಷ ಕೂಡ 40 ಅಲ್ಲ 50 ಲಕ್ಷ ರೂ.ಗಳ ಆಗಲಿ ಈ ಗಿಡಗಳನ್ನು ಪ್ರತಿಯೊಂದು ಪ್ರಾಂತ್ಯಕ್ಕೆ ಕೂಡ ಕೊಡುವುದಕ್ಕೆ ಒಂದು ಯೋಜನೆ ಹಾಕಿಕೊಂಡಿದ್ದೇವೆ. ಇದರಲ್ಲಿ ಈಗ ಕೇವಲ 11 ಲಕ್ಷ ರೂ.ಗಳನ್ನೂ ಮಾತ್ರ ಖರ್ಚು ಮಾಡಿ ಇನ್ನೂ 5 ಲಕ್ಷ ರೂ.ಗಳ ಬೇಡಿಕೆ ಇದೆ. ಇದನ್ನು ಕೊಡುವುದಕ್ಕೆ ಈಗ ತೀರ್ಮಾನ ತೆಗೆದುಕೊಂಡಿದ್ದೇವೆ. ಈ ಹಣವನ್ನು ಯಾವ ರೀತಿ ಸಂಗ್ರಹಣೆ ಮಾಡುವುದೆಂಬುದರ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಅದೇ ರೀತಿ ಕೋಕೋ ಆಮೇಲೆ ಮೆಣಸಿನ ಕಾಳು, ಬೆಳ್ಳುಳ್ಳಿ, ಇವುಗಳನ್ನು ಕೂಡ ಸುಮಾರು 40 ಲಕ್ಷ ಗಿಡಗಳನ್ನು ಮತ್ತು ಕೊಕ್ಕೋ ಇದೆಲ್ಲಾ ಕೊಡತಕ್ಕಂಥದ್ದಕ್ಕೆ ಈ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ಹುಳಿ ಮಾವು ಬಯೋ ಟೆಕ್ನಾಲಿಜಿ ಏನಿದೆ ಇದರಲ್ಲಿ 1 ಕೋಟಿ

20 ಲಕ್ಷ ರೂ.ಗಳು ಈ ಸಲ ಟಿಷ್ಯೂಕಲ್ಚರ್‌ನಲ್ಲಿ ವಹಿವಾಟಿದೆ. ಅದರಲ್ಲಿ ಸುಮಾರು 40 ಲಕ್ಷ ರೂ.ಗಳು ಖರ್ಚಾಗಿದೆ. 80 ಲಕ್ಷ ರೂ.ಗಳು ಆದಾಯವಾಗುವ ವ್ಯವಸ್ಥೆ ಇದೆ. ಆದುದರಿಂದ ನಾವೇನು ಮಾಡುತ್ತಿದ್ದೇಂದರೆ, ಇವತ್ತು ನಮ್ಮ ಉತ್ತರ ಕರ್ನಾಟಕದವರು, ಬೆಳಗಾಂ ನಾರ್ತ ಕರ್ನಾಟಕ ಡಿಸ್ಟ್ರಿಕ್ಟ್ಸ್ ಅವರೆಲ್ಲಾ ಆಟ್‌ಲೀಸ್ಟ್ ಸ್ವಾಗತ ಮಾಡಬೇಕು. ಅಲ್ಲಿ ಕೂಡ ಒಂದು ಬಯೋ ಟೆಕ್ನಾಲಜಿ ಸೆಂಟರ್‌ಅನ್ನು ಏರ್ಪಾಟು ಮಾಡುವುದಕ್ಕೆ ಈಗಾಗಲೇ 50 ಲಕ್ಷ ರೂ.ಗಳು ಮಂಜೂರಾಗಿದೆ. ಬೆಳಗಾಂನಲ್ಲಿ ಬಹುಶಃ ನೀವು ತಟ್ಟುತ್ತೀರಿ ಅವರು ತಟ್ಟುವುದಿಲ್ಲವಲ್ಲಾ ನಿಮ್ಮ ಪಕ್ಷದ ಕ್ಷೇತ್ರದವರು ಎಂದು ನೀವು ತಟ್ಟುತ್ತೀರಿ. ಮಾನ್ಯ ರಮೇಶ್‌ಕುಮಾರ್ ಸಾಹೇಬರು ನೀವು ತಟ್ಟುತ್ತಿದ್ದೀರಿ. ಅವರೊಬ್ಬರೂ ತಟ್ಟಲಿಲ್ಲ. ಅವರು ಸ್ವಾಗತ ಮಾಡಲಿಲ್ಲ.

ಶ್ರೀ ಸಿ.ಟಿ ರವಿ :– ಅಲ್ಲಿ 150 ಕೋಟಿ ರೂಪಾಯಿ ಕೊಟ್ಟಿಲ್ಲವೆಂದು ನಿಮ್ಮ ಗೋಳು ಹೇಳಿಕೊಂಡಿರಲ್ಲ ಅದಕ್ಕೇ ತಟ್ಟಲಿಲ್ಲ.

ಶ್ರೀ ಆರ್. ಶ್ರೀನಿವಾಸ :– ಬೆಳಗಾಂ, ಬಿಜಾಪುರ, ಧಾರವಾಡ, ಉತ್ತರ ಕನ್ನಡ, ಬೀದರ್, ಇದಕ್ಕೆಲ್ಲಾ ಅನುಕೂಲವಾಗಲಿ ಎನ್ನುವ ಪರಿಸ್ಥಿತಿಯಲ್ಲಿ ಲಕ್ಷ್ಮೀ ಟಿ. ಹಾರ್ಟಿಕಲ್ಚರ್ ಫಾರಂ ಅಟ್ ಬೆಳಗಾಂ ಇದರಲ್ಲಿ ಹಣ ಮಂಜೂರಾಗಿದೆ. ಬಹುಶಃ ಈ ಆಷಾಢ ಮಾಸವಾದ ಮೇಲೆ ಅವರಿಗೆ ಬೇಡವೇ ಹಾಗಾದರೆ? ಇಂಥ ವ್ಯವಸ್ಥೆ ಮಾಡಿರುವುದಕ್ಕೆ ಇವತ್ತು ನಮ್ಮ ಸರ್ಕಾರ.....

ಶ್ರೀ ವಾಟಾಳ್ ನಾಗರಾಜ್ :– ಆಷಾಢ ಮಾಸವಾದ ಮೇಲೆ ಎಂದು ಏಕೆ ಹೇಳಿದಿರಿ?

ಶ್ರೀ ಆರ್. ಶ್ರೀನಿವಾಸ :– ನಮ್ಮ ಏನೋ ಈ ಒಂದು ಪದ್ಧತಿ ಇದೆಯಲ್ಲ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ :– ಇದಕ್ಕೂ, ಅದಕ್ಕೂ ಸಂಬಂಧ ಎಂಥದ್ದು? ಹಾಗಾದರೆ, ಆಷಾಢ ಮಾಸ ಎಂದು ಶಾಸನ ಸಭೆಯನ್ನು ಮುಂದಕ್ಕೆ ಹಾಕಿ ಸ್ವಾಮಿ.

ಶ್ರೀ ಆರ್. ಶ್ರೀನಿವಾಸ :– ಅದೊಂದು ಸೀಸನ್. ಆದ್ದರಿಂದ; ಈ ಒಂದು ಯೋಜನೆಯನ್ನು ಇವತ್ತು ಹಾಕಿಕೊಂಡು ರೈತರಿಗೆ ಯಾವ ರೀತಿ ....

ಶ್ರೀ ಎಸ್.ಎಸ್. ಪಾಟೀಲ್ :– ವಾಟಾಳ್ ನಾಗರಾಜುರವರೆ ನಂಬುವುದಿಲ್ಲ. ಅದು ಒಪ್ಪುವ ಮಾತು. ನಿಜವಾಗಿ ಅದಕ್ಕೆ ನನ್ನ ಬೆಂಬಲ ಇದೆ. ಆದರೆ, ಇವತ್ತು ಎಲ್ಲರೂ ಕೂಡ 'ಹೂ ಈಜ್ ಹೂ' ಎಂದು ಏನೋ ಕೊಟ್ಟಿದ್ದಾರಲ್ಲಾ, ಅದರಲ್ಲಿ ಹುಡುಕಿದೆವು. ನಿಮ್ಮ ಹುಟ್ಟಿದ ದಿನಾಂಕ ಅದರಲ್ಲಿ ಕೊಟ್ಟಿಲ್ಲ.

ಶ್ರೀ ವಾಟಳ್ ನಾಗರಾಜ್ :– ನನ್ನ ಹುಟ್ಟಿದ ದಿನ ನಿಮಗೇಕೆ ಬೇಕು?

ಶ್ರೀ ಎಸ್.ಎಸ್. ಪಾಟೀಲ್ :– ಅದಕ್ಕೆ ಏಕೆ ಮೂಢ ನಂಬಿಕೆ?

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಮಹಾಪುರುಷರು ಹುಟ್ಟಿದ್ದು ನಮಗೆ ಗೊತ್ತಾಗುತ್ತದೆಯೇ? ಇದೆಲ್ಲಾ ತಮಾಷೆ ವಿಚಾರವೇ?

ಶ್ರೀ ವಾಟಾಳ್ ನಾಗರಾಜ್ :– ಕರೆಕ್ಟ್, ನಾನು ಮಹಾಪುರುಷ! ಆದ್ದರಿಂದ ಒಪ್ಪುತ್ತಿದ್ದೇನೆ. ಹುಟ್ಟಿದ ದಿನವನ್ನು ಮಹಾಪುರುಷರು ಹೇಳಬಾರದು.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಏನೋ ನಮ್ಮ ಸೌಭಾಗ್ಯ, ಅವರೂ ನಮ್ಮ ಜೊತೆಯಲ್ಲಿದ್ದಾರೆ. ಅವರು ಯಾವಾಗ ಹುಟ್ಟಿದರು? ಏಕೆ ಹುಟ್ಟಿದರು ಎಂದು ಇವರಿಗೇಕೆ ಬೇಕು?

ಶ್ರೀ ಎಸ್.ಎಸ್. ಪಾಟೀಲ್ :– ನಿಮಗೇಕೆ ಆ ಮೂಢ ನಂಬಿಕೆ?

ಶ್ರೀ ವಾಟಾಳ್ ನಾಗರಾಜ್ :– ನಾನು ಇನ್ನೊಂದು 5 ಬಾರಿ ಈ ಶಾಸನ ಸಭೆಗೆ ಬರುತ್ತೇನೆ. ಆದುದರಿಂದ, ಹುಟ್ಟಿದ ಡೇಟ್ ಕೇಳುವುದು ಬೇಡಿ.

ಶ್ರೀ ಆರ್. ಶ್ರೀನಿವಾಸ್:– ಆದುದರಿಂದ, ಇವೆಲ್ಲಕ್ಕೂ ಕೂಡ ಸರ್ಕಾರ ಯಾವ ನೀತಿ ತೆಗೆದುಕೊಳ್ಳುತ್ತದೆ, ರೈತರ ಚಿಂತನೆ ಮಾಡುತ್ತದೆ ಎನ್ನುವುದೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಇನ್ನು ಮುಂದೆ ಇದೆಲ್ಲಾ ಆಯಿತು. ಸಸಿಗಳ ವಿತರಣೆ ಬಗ್ಗೆ ಯಾಗಲಿ, ಯಾವ ರೀತಿ ಸಸಿಗಳ ಬೇಸಾಯ ಮಾಡುವ ವ್ಯವಸ್ಥೆಯಾಗಲಿ.....

ಶ್ರೀ ವಾಟಾಳ್ ನಾಗರಾಜ್ :– ಪರಂಗಿ ಹಣ್ಣು ಹೇಳಲಿಲ್ಲ.

ಶ್ರೀ ಆರ್. ಶ್ರೀನಿವಾಸ್:– ಹೇಳಲಿಲ್ಲ, ಅದು ಮಾಡಿಲ್ಲ

ಅಧ್ಯಕ್ಷರು :– ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಮಾವಿನ ತೋಟದಲ್ಲಿ ಲಾಭದಾಯಕವಿಲ್ಲವೆಂದು ಹೇಳಿದಿರಿ.

ಅಧ್ಯಕ್ಷರು :– ವಾಟಾಳ್ ನಾಗರಾಜ್‌ರವರೆ, ನಿಮಗೆ ಪರಂಗಿ ಹಣ್ಣು ಪ್ರಿಯವಾದುದು ಎಂದು ಅವರಿಗೆ ಗೊತ್ತಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಮಾವಿನ ತೋಟ ಲಾಭದಾಯಕ ಅಲ್ಲವೆಂದರು. ಇತ್ತೀಚಿನ ದಿನಗಳಲ್ಲಿ ಪರಂಗಿ (ಪಪ್ಪಾಯಿ) ಏನಿದೆ ಅದು ಲಾಭದಾಯಕ. ಅದನ್ನೇಕೆ ಹೇಳಲಿಲ್ಲ.

ಶ್ರೀ ಆರ್. ಶ್ರೀನಿವಾಸ್ :– ಅದನ್ನು ಅದರಲ್ಲಿ ಸೇರಿಸಿಕೊಂಡಿಲ್ಲ. ಸದನದಲ್ಲಿ ಸುಳ್ಳು ಹೇಳುವುದು ಸರಿಯಲ್ಲ. ನೀವು ಸಲಹೆ ಕೊಟ್ಟಿದ್ದೀರಿ ಇನ್ನು ಮುಂದೆ ಅದನ್ನು ಸೇರಿಸಿಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ :– ನಿಜವಾಗಿ ಅವರನ್ನು ಪ್ರಶಂಸೆ ಮಾಡಬೇಕು. 6 ತಿಂಗಳಲ್ಲಿ ಹಣ ಕಡಿಮೆ ಇದ್ದರೂ ಇಷ್ಟೊಂದು ವ್ಯವಸ್ಥೆ ಮಾಡಿದ್ದಾರೆ. ನಿಜವಾಗಿ ಇಡೀ ಸದನ ನೀವು ಮಂತ್ರಿಗಳನ್ನು ಪ್ರಶಂಸೆ ಮಾಡಬೇಕು. ಅವರು 6 ತಿಂಗಳಲ್ಲಿ ಮಾಡಿದ್ದಾರೆ.

ಶ್ರೀ ಆರ್. ಶ್ರೀನಿವಾಸ್ :– ನಾನು ಈಗಾಗಲೇ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ಒಂದು ಸೂಚನೆ ಕೊಟ್ಟಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್ :– ಸದನದ ಹೊರಗಡೆ ಸಚಿವರು ಏನು ಹೇಳಿದ್ದಾರೆ, ಬಹುತೇಕ ಎಲ್ಲ ಸುಳ್ಳು ಹೇಳಿದ್ದಾರೆಂದು ಕಾಣಿಸುತ್ತದೆ.

ಶ್ರೀ ಆರ್.ಶ್ರೀನಿವಾಸ :– ಗೇರು ಏನಾಗಿದೆ ಎಂದರೆ ನಾನು ಅಲ್ಲಿ ಹಳ್ಳಿಗೆ ಭೇಟಿ ಕೊಟ್ಟೆ. ನಿಜವಾಗಿ ಕೂಡ ಹಳೆ ಕಾಲದ್ದು ಹಾಕಿದ್ದಾರೆ. ಬೀಜದಿಂದ ಬಿತ್ತನೆಯಾಗಿರುವ ಒಂದು ಸಸಿ ಹಾಕಿದ್ದಾರೆ. ಅದು ಸರಿಯಾಗಿ ಯೀಲ್ಡ್ ಬರುತ್ತಿಲ್ಲ. ಬೇಕಾದರೆ ಕೇಳಿ. ಒಂದು ಹೆಕ್ಟೇರ್‌ಗೆ ಮೂರು, ಮೂರೂವರೆ ಕ್ವಿಂಟಾಲ್ ಬಂದರೆ ಜಾಸ್ತಿ. ಮರ ದೊಡ್ಡ ದೊಡ್ಡದಾಗಿದೆ, ಬೀಜ ಚಿಕ್ಕ ಚಿಕ್ಕದಾಗಿದೆ. ಈ ಒಂದು ವ್ಯವಸ್ಥೆಗೆ ಇವತ್ತಿನ ದಿವಸ.....

ಶ್ರೀ ಕೆ.ಆರ್. ರಮೇಶ್ ಕುಮಾರ್ :– ದಯಮಾಡಿ, ಬೇಸರ ಮಾಡಿಕೊಳ್ಳಬೇಡಿ ನಿಮ್ಮ ಇಲಾಖೆಯ ಕೆಲಸಕ್ಕೂ, ತೋಟಗಾರಿಕೆ ಉತ್ಪನ್ನಗಳಿಗೂ ಅರ್ಥಾತ್ ಸಂಬಂಧವಿಲ್ಲ. ತೋಟಗಾರಿಕೆ ಉತ್ಪನ್ನಗಳಿಂದ ರೈತ ಜೀವನ ಮಾಡುತ್ತಿದ್ದಾನೆ ಎನ್ನುವುದು ನಿಜ. ತೋಟಗಾರಿಕೆ ಉತ್ಪನ್ನಗಳು ಟೇಬಲ್ ವರೈಟಿ, ಪಪ್ಪಾಯಿ ಇರಬಹುದು, ಮ್ಯಾಂಗೋ ಇರಬಹುದು, ವೆನಿಲ್ಲಾ ಇರಬಹುದು, ಗೇರು ಇರಬಹುದು ಯಾವುದೇ ಇರಬಹುದು. ಇವುಗಳಿಗೆ ಮಾರ್ಕೆಟ್ ಸಿಸ್ಟಂ ಅನ್ನು ನೀವು ಸ್ಟ್ರೆಂಥನ್ ಮಾಡಿಲ್ಲ. ಎಕ್ಸ್‌ಪೋರ್ಟ್ ಮಾಡುವುದಕ್ಕೆ ನೀವು ಯಾವುದೇ ಪ್ರಯತ್ನ ಮಾಡಿಲ್ಲ. ನಮ್ಮ ಆಲ್ಫಾನ್ಸೋಗೆ ಬಹಳ ದೊಡ್ಡ ಡಿಮಾಂಡ್ ಇದೆ. ಇವತ್ತು ಮಿಡಲ್ ಈಸ್ಟ್‌ಗೆ ಹೋದರೆ, ಗಲ್ಫ್‌ಗೆ ಹೋದರೆ ಬಹಳ ದೊಡ್ಡ ಹಣ ನಮಗೆ ಸಿಗುತ್ತದೆ. ಆಲ್ಫಾನ್ಸೋವನ್ನು ಅಲ್ಲಿಗೆ ಕಳುಹಿಸುವುದಕ್ಕೆ ನೀವೇನಾದರೂ ವ್ಯವಸ್ಥೆ ಮಾಡಿದ್ದೀರಾ? ಸ್ಟೋರೇಜಸ್ ಮಾಡಿದ್ದೀರಾ? ಟೇಬಲ್ ವರೈಟಿ ಆಫ್ ಪಪ್ಪಾಯಿ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ entire world over demand ಇದೆ. ಈ ವಾಟರ್ ಮೆಲನ್‌ಗಳಲ್ಲಿ ಕೂಡ ಹಲವು ಡಿಫರೆಂಟ್ verieties, species ಬಂದು ಬಿಟ್ಟಿವೆ. ಹೊಸ ಹೊಸ ತಳಿಗಳು ಬಂದಿವೆ. ನಿಮ್ಮ ಇಲಾಖೆಯಲ್ಲಿ ಪಾಪ ಯಾರಿಗೋ

ಕೆಲವರಿಗೆ ಗೊತ್ತಿರಬಹುದು, ಉಳಿದವರಿಗೆ ಇದರ ಗಂಧ ಕೂಡ ಗೊತ್ತಿಲ್ಲ. ರೈತ ಇವತ್ತಿನ ದಿವಸ ತನ್ನಷ್ಟಕ್ಕೆ ತಾನೇ inquisitiveness ಮಾಡಿಕೊಂಡು ಎಲ್ಲಾ ಹೊಸ ಹೊಸ ವರೈಟಿಗಳನ್ನು ತಂದು ಬಿಟ್ಟಿದ್ದಾನೆ. ಬಿಜಾಪುರದಲ್ಲಿ ಬೆಳೆಯುವ ದ್ರಾಕ್ಷಿ, ಇದಕ್ಕೆ ನೀವು ರೈತನಿಗೆ ಇಂಟರ್‌ನ್ಯಾಷನಲ್ ಮಾರ್ಕೆಟ್‌ಗೆ ಪ್ರವೇಶ ಮಾಡಿ ಸೂಕ್ತ ಲಾಭ ಪಡೆದುಕೊಳ್ಳುವುದಕ್ಕೆ ಇಲಾಖೆಯ ವತಿಯಿಂದ ಏನಾದರೂ ಕಾರ್ಯಕ್ರಮ ಹಾಕುತ್ತೀರಾ? ಆಯಿಲ್ ಫಾರ್ಮ್‌ಗೆ ಏನು ಮಾಡುತ್ತೀರಿ? ಸುಮ್ಮನೆ ಆ ಸಸಿ ಕೊಟ್ಟೆ, ನೆಲ್ಲಿ ಕೊಟ್ಟೆ, ಬೇವಿನ ಗಿಡ ಕೊಟ್ಟೆ, ಅದು ಕೊಟ್ಟೆ ಇದು ಕೊಟ್ಟೆ ಎಂದರೆ ಹೇಗೆ? ಅದನ್ನು ಕೊಟ್ಟೇ ಕೊಡುತ್ತೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ರಮೇಶ್‌ಕುಮಾರ್ ಅವರೇ ತಾವು ಇರಲಿಲ್ಲ, ಅವರು ಇದನ್ನೆಲ್ಲಾ ಹೇಳಿದರು. ಅವರು ಇಲಾಖೆಗೆ ಬಂದಾಗ ಕೆಲವು ಕಡೆ ಒಬ್ಬರು ಇದ್ದರು, ಕೆಲವು ಕಡೆ ಬೀಗ ಹಾಕಿದ್ದರು, ಯಾರೂ ಇರಲಿಲ್ಲವೆಂದು ಹೇಳಿದರು. ಹೀಗಿರುವಾಗ ನೀವು ಪುನಃ ಇಲಾಖೆ ಏನೂ ಮಾಡಲಿಲ್ಲವೆಂದು ಹೇಳುವ ಅಗತ್ಯವೇ ಬರಲಿಲ್ಲ.

ಶ್ರೀ ಆರ್. ಶ್ರೀನಿವಾಸ :- ಒಟ್ಟಾರೆಯಾಗಿ ಹೇಳುತ್ತೇನೆ, ನಂತರ ಮಾರ್ಕೆಟ್ ಬಗ್ಗೆಯೂ ಹೇಳುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಅವರ ಮನಸ್ಸಿನೊಳಗೆ ದೊಡ್ಡ ಆಸೆ ಆಕಾಂಕ್ಷೆ ಇದೆ, ಇಲಾಖೆಯ ಮೂಲಕ ರೈತರಿಗೆ ನಾನು ಏನಾದರೂ ಮಾಡಬೇಕು ಎನ್ನುವುದು ಇದೆ. ಕೆಲವರಿಗೆ ಎಕ್ಸ್‌ಪ್ರೆಷನ್ ಒಂದೊಂದು ರೀತಿ ಇರುತ್ತದೆ. ನಾನು I am trying to help him. ಇದನ್ನೆಲ್ಲಾ ಸೂಚನೆ ಕೊಟ್ಟರೆ, ಅವರು ಟ್ರ್ಯಾಕ್ಟರ್ ಬರಲಿ ಎನ್ನುವ ಉದ್ದೇಶದಿಂದ ನಾನು ಎದ್ದು ನಿಂತಿದ್ದು ಅಷ್ಟೇ. ಆ ಗಿಡ ಹಂಚುವುದು, ಸಸಿ ಹಂಚುವುದು, ಅದು ಇದು ಬೇರೆ, ಎಸ್‌ಸಿಪಿ ಪ್ರೋಗ್ರಾಂನಲ್ಲಿ ಕೂಡ ಮಾಡುತ್ತೀರಿ. ವಾಟಾಳ್‌ರವರು ಹೇಳಿದರು, ಅವರಂತೆ ಎಲ್ಲರೂ ಅನುಭವಸ್ಥರು ಇರಬೇಕು ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್ :- ತಾವು ಈ ಸದನದ ಮಾಜಿ ಅಧ್ಯಕ್ಷರು, ನಾನು ಟ್ರ್ಯಾಕ್‌ಗೆ ಬರಲಿ ಎಂದು ಹೇಳುತ್ತೇನೆಂದು ಹೇಳಿದಿರಿ, ಅವರು ಈಗ ಟ್ರ್ಯಾಕ್‌ನಲ್ಲಿ ಇಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಹಾಗಾದರೆ ನೀವು ಅವರನ್ನು ಟ್ರ್ಯಾಕ್‌ಗೆ ತರುವುದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ :- ತಾವು ಅಧ್ಯಕ್ಷರಾಗಿದ್ದೀರಿ, ತಮ್ಮ ಕೆಲಸವೇ ಟ್ರ್ಯಾಕ್‌ಗೆ ತರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಹಾಗಾದರೆ ಇಬ್ಬಿಬ್ಬರು ಅಧ್ಯಕ್ಷರು, ಒಬ್ಬರು ಟ್ರ್ಯಾಕ್‌ಗೆ ತರುವವರು ಮತ್ತೊಬರು ಟ್ರ್ಯಾಕ್ ಬಿಡಿಸುವವರು, ಆ ಕಡೆ ಒಬ್ಬರು ಈ ಕಡೆ ಒಬ್ಬರು ಅಧ್ಯಕ್ಷರಾದರೆ ನಾವು ಯಾವ ಅಧ್ಯಕ್ಷರನ್ನು ನೋಡುವುದು?

ಶ್ರೀ ವಾಟಾಳ್ ನಾಗರಾಜ್ :- ನಾವು ಯಾರ ಕಡೆ ನೋಡಬೇಕು ಹೇಳಿ!

ಶ್ರೀ ಕೆ. ಆರ್. ರಮೇಶ್ ಕುಮಾರ್ :- ಈಗ ಇವರಿಬ್ಬರೂ ಸೇರಿ ನಿಮ್ಮನ್ನು ಟ್ರ್ಯಾಕ್ ತಪ್ಪಿಸುತ್ತಿದ್ದಾರೆ. ಮಾನ್ಯ ಶ್ರೀನಿವಾಸರವರೇ ತಮ್ಮಲ್ಲಿ ವಿನಂತಿ ಮಾಡುತ್ತೇನೆ ಅಂದರೆ, ಒಬ್ಬ ರೈತರಾಗಿ ಈ ತೋಟಗಾರಿಕೆ ಬೆಳೆಗಳ ವಿಷಯ ಗೊತ್ತಿದ್ದವರಾಗಿ ಒಮ್ಮೆ ಅವಕಾಶ ಸಿಕ್ಕಿದೆ ಜೀವನದಲ್ಲಿ ಒಳ್ಳೆಯ ಕೆಲಸ ಮಾಡಬೇಕು ಎನ್ನುವ ನಿಮ್ಮ ಅಂತರಂಗ ನಮಗೆ ಅರ್ಥವಾಗುತ್ತದೆ.

ಶ್ರೀ ಆರ್. ಶ್ರೀನಿವಾಸ್ :- ಆಯಿತು ನಾನು ಉತ್ತರ ಹೇಳುತ್ತೇನೆ; ಎಲ್ಲಾ ಮುಗಿದ ಮೇಲೆ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಕೆ. ಆರ್. ರಮೇಶ್‌ಕುಮಾರ್ :- ಅದು ಆ ರೀತಿ ಅಲ್ಲ. ಹೊಸ ಪಾಲಿಸಿಯ ಬಗ್ಗೆ ಬೇಡಿಕೆಗಳನ್ನು ಮಂಜೂರು ಮಾಡುವಾಗ, ನೀವು ಏನು ಮಾಡುತ್ತಿದ್ದೀರಿ ಎಂದರೆ, ಅವರೆಲ್ಲಾ ಹೇಳಬೇಕಾದ ವಿಚಾರವನ್ನು ನೀವು ಮಂತ್ರಿಯಾಗಿ ಹೇಳುತ್ತಿದ್ದೀರಿ, ನೀವು ಮಂಜೂರಾತಿ ಕೊಡಿ ಎಂದು ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್ :- ಈಗ ಅವರು ನಾವು ಹೇಳಬೇಕಾಗಿರುವುದನ್ನು ಸಚಿವರು ಹೇಳುತ್ತಾರೆಂದು ಹೇಳುತ್ತಿದ್ದಾರೆ. ಅಂದರೆ, ಇವರು ಕಾಂಗ್ರೆಸ್‌ಗೆ ಹೋದಮೇಲೆ ಆ ರೀತಿ ಹೇಳಬಾರದೆಂದು ಇವರನ್ನು ದಾರಿ ತಪ್ಪಿಸುತ್ತಿದ್ದಾರೆ. ನೀವು ಕರೆಕ್ಟಾಗಿ ಹೇಳುತ್ತಿದ್ದೀರಿ; ಅವರ ಮಾತು ಕೇಳಬೇಡಿ, ನಿಮ್ಮ ದಾರಿಯನ್ನು ಅವರು ತಪ್ಪಿಸುತ್ತಾರೆ, ತಾವು ಹುಷಾರಾಗಿರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ನನಗೆ ಕಾಂಗ್ರೆಸ್ ಯಾವುದೋ, ಜನತಾ ಯಾವುದೋ ಎಲ್ಲಿ ಸತ್ಯ ಇರುತ್ತದೆ ನಾನು ಅಲ್ಲಿ ಇರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :- ಈಗ ಮಾನ್ಯ ಸಚಿವರು ಏನು ಹೇಳಿದರು ಅದನ್ನು ನೀವು ಮಾತನಾಡಬೇಕಾಗಿತ್ತು ನೀವು ಒಬ್ಬರೂ ಅಭ್ಯಾಸ ಮಾಡಿಕೊಂಡು ಬರಲಿಲ್ಲ ಮಾತನಾಡಲಿಲ್ಲ, ಅನಿವಾರ್ಯವಾಗಿ ಮಂತ್ರಿಗಳು ಹೇಳಬೇಕಾಗುತ್ತದೆ. ನೀವು ಹೇಳಿದ್ದರೆ ಅವರಿಗೆ ಕೇವಲ ಉತ್ತರ ಕೊಡುವ ಪ್ರಸಂಗ ಬರುತ್ತಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾವು ಮಾತನಾಡಬಹುದಾಗಿತ್ತಲ್ಲವೆ? ಹೌದು ನಾವು ದಡ್ಡರು ಬಿಡಿ.

ಶ್ರೀ ವಾಟಾಳ್ ನಾಗರಾಜ್ :- ನೀವು ಗೇರು ಬಗ್ಗೆ, ದ್ರಾಕ್ಷಿ ಬಗ್ಗೆ, ಮಾತನಾಡಬಹುದಾಗಿತ್ತು , ನೀವು ಏಕೆ ಮಾತನಾಡಲಿಲ್ಲ?

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಆಯಿಲ್ ಫಾಮ್ ಬಹಳ ಲಾಭದಾಯಕವಾದ ಅಂಶ. ಇಂಥ ವಿಚಾರದಲ್ಲಿ ಹೊಸ ಪಾಲಿಸಿ ಏನಾದರೂ ಇದ್ದರೆ ದಯಮಾಡಿ ನೀವು ಈಗ ಏನು ಮಾಡಬೇಕು ನಿಮ್ಮ ಇಲಾಖೆಯ ಬೇಡಿಕೆಗಳಿಗೆ ಮಂಜೂರಾತಿ ಕೇಳುವಾಗ, ಹೊಸ ಪಾಲಿಸಿಯನ್ನು ಅನೌನ್ಸ್ ಮಾಡಿದರೆ ನಾಳೆ ಪತ್ರಿಕೆಗಳಲ್ಲಿ ದೊಡ್ಡದಾಗಿ ಬರುತ್ತದೆ. ನಮಗೂ ಹೆಮ್ಮೆ ಗೌರವ ಬರುತ್ತದೆ, ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಪಾಲಿಸಿ ಮ್ಯಾಟರ್ಸ್ ಇದ್ದರೆ ದಯಮಾಡಿ ಅನೌನ್ಸ್ ಮಾಡಿ.

ಶ್ರೀ ಆರ್. ಶ್ರೀನಿವಾಸ :- ನಮ್ಮ ಗೌರವಾನ್ವಿತ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ನಾನು ಇನ್ನೂ ಮಾರ್ಕೆಟ್ ವಿಷಯಕ್ಕೆ ಬರಲಿಲ್ಲ ಇನ್ನೂ ಮುಕ್ಕಾಲು ಗಂಟೆ ಆಗುತ್ತದೆ. ನಾನೇಕೆ ಈ ತಳಿಗಳ ಬಗ್ಗೆ ಮಾನ್ಯ ಸದಸ್ಯರಿಗೆಲ್ಲರಿಗೂ ಹೇಳುತ್ತೇನೆಂದರೆ, ಇಂಥ ಇಂಥ ಯೋಜನೆಗಳು ಇವೆ ಎಂಬುದು ಅವರಿಗೂ ಗೊತ್ತಾಗಬೇಕು, ನಾನು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಪ್ರತಿಯೊಬ್ಬ ಶಾಸಕರನ್ನು ಭೇಟಿ ಮಾಡಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಹೇಳಿದ್ದೇನೆ. ಇನ್ನು ಮುಂದೆ ನೀವು ಏನೇ ವಿತರಣೆ ಮಾಡಬೇಕಾದರೂ ಆ ಸಂಬಂಧಪಟ್ಟ ಶಾಸಕರ ಜೊತೆ ಕುಳಿತು ಇಂತಿಂಥ ಗಿಡ ಇಷ್ಟು ಸಾವಿರ ಗಿಡಗಳನ್ನು ಕೊಡುತ್ತಿದ್ದೇವೆ, ಏನು ಮಾಡಬೇಕು ಎಂಬುವುದರ ಬಗ್ಗೆ ಅವರ ಜೊತೆ ಚರ್ಚೆ ಮಾಡಿ ಅವರ ಸಹಿ ತೆಗೆದುಕೊಂಡು ನನಗೆ ಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಇನ್ನೂ ಮಾಡಿಲ್ಲ, ನಂತರ ತಾವು ಏನು ಹೇಳುತ್ತೀರೋ ಅದನ್ನು ಮಾಡುತ್ತೇವೆ. ಈ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದು ಯಾವ್ಯಾವ ಹವಾಗುಣಕ್ಕೆ ಅನುಗುಣವಾದ ಜಿಲ್ಲೆ ಇದೆ ಆ ಜಿಲ್ಲೆಗೆ ಏನೇನು ಮಾಡಬೇಕೆಂದು ಆ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ. ನಾನು ಏಕೆ ಗೇರು ಬಗ್ಗೆ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ಏತಕ್ಕೆ ಪ್ರತ್ಯೇಕವಾಗಿ ಹೇಳುತ್ತೇನೆ ಅಂದರೆ, ಇದು ಇವತ್ತು 250 ಕೋಟಿ ರೂಪಾಯಿಯಷ್ಟು ಎಕ್ಸ್‌ಪೋರ್ಟ್ ಮಾಡಿದೆ. ರೈತರಿಗೆ ನಾವು ಉತ್ತಮವದಂಥ ಸಸಿ ಕೊಟ್ಟರೆ ಅವರಿಗೆ ಸುಮಾರು 35 ರಿಂದ 40 ಸಾವಿರ ರೂಪಾಯಿಯ ಬೆಳೆ ಸಿಕ್ಕುತ್ತದೆ. ಪಾಪ, ಇವತ್ತು ಅವನಿಗೆ ಸಿಕ್ಕುತ್ತಿಲ್ಲ. ಅವನು ಹಳೆಯ ಕಾಲದ ಪದ್ಧತಿಯನ್ನು ಅಳವಡಿಸಿಕೊಂಡುಬಿಟ್ಟು ಅವನಿಗೆ ಮೂರೂವರೆ ಕ್ವಿಂಟಾಲ್ ಸಿಕ್ಕರೆ ಅವನಿಗೆ ಏನು ಲಾಭ ಸಿಗುತ್ತದೆ? ಆದುದರಿಂದ ಟ್ರಯಲ್ ಪ್ರೋಗ್ರಾಂ ಎಂದು ಇದರಲ್ಲಿ ನಾವೇ ಹಣ ಕೊಡುವುದು, ಪ್ರತಿಯೊಂದು ಹೋಬಳಿಗೊಂದು ಎಕರೆಯನ್ನು ಟ್ರಯಲ್ ತೆಗೆದುಕೊಂಡು, ಇಂಥ ರೈತ ಇಂಥ ಅನ್ನುವ ಹಾಗೆ ಇಲ್ಲ, ಯಾವುದೇ ಒಬ್ಬ ಸುಮಾರಾಗಿರುವ ರೈತನಿಗೆ 25

ಪರ್ಸೆಂಟ್ ಹಾಕಬೇಕು. 75 ಪರ್ಸೆಂಟ್ ಸರ್ಕಾರ ಕೊಡುತ್ತದೆ. ಉಳುಮೆ ಮಾಡುವುದರಿಂದ ಹಿಡಿದು ಪ್ರತಿಯೊಂದು ಗೊಬ್ಬರ ಕೊಡುವುದು, ಇದಕ್ಕೆಲ್ಲಾ ಡೆಮಾನ್‌ಸ್ಟ್ರೇಷನ್ ಪ್ಲಾಂಟ್ ಮಾಡಿ, ಈಗ ಏನು ಮೂರೂವರೆ ಕ್ವಿಂಟಾಲ್ ಬರುತ್ತದೆ ಅದನ್ನು ಎಷ್ಟಕ್ಕೆ ಏರಿಸುವುದಕ್ಕೆ ಸಾಧ್ಯವಾಗುತ್ತದೋ ಅಷ್ಟಕ್ಕೆ ಏರಿಸುವುದಕ್ಕೆ ಇಲಾಖೆಯವರೇ ಮೊದಲನೇ ಹಂತವಾಗಿ ನೀವು ಪ್ರಯತ್ನಿಸಬೇಕೆಂದು ಹೇಳಿದ್ದೇನೆ. ಅದಕ್ಕೂ ಕೂಡ ಹಣ ಕೊಟ್ಟು ಆ ಒಂದು ಫೀಲ್ಡ್ ಡೇ ಎಂದು ಮಾಡಿ ಆ ರೈತರಿಗೆ ತರಬೇತಿ ಕೊಡಿಸಬೇಕು. ಇದನ್ನು ಮೊದಲದು ಡಿಪಾರ್ಟ್‌ಮೆಂಟ್‌ನವರಲ್ಲ; ರೈತನೇ ಇತರೆ ರೈತರಿಗೆ ತರಬೇತಿ ಕೊಡುವುದು. ರೈತನೇ ನಾನು ಈ ರೀತಿ ಪದ್ಧತಿ ಮಾಡಿದೆ ಹಿಂದೆ ಮೂರು ಕ್ವಿಂಟಾಲ್ ಬರುತ್ತಿತ್ತು ಇವತ್ತು ಇಷ್ಟು ಬಂದಿದೆ ಇಷ್ಟು ಲಾಭದಾಯಕವಾಗಿದೆ ಎಂದು ಹೇಳಬೇಕು. ಹೊಸ ತಳಿಗಳು ಏನು ಇವೆ ಆ ನಾಲ್ಕರ ಮಧ್ಯಕ್ಕೆ ಒಂದು ಹೊಸ ತಳಿಯನ್ನು ನಾಟಿ ಮಾಡಬೇಕು, ಏಕೆಂದರೆ ಮೊದಲೇ ಅದನ್ನು ಹೊಡೆದುಹಾಕಿ ಬಿಟ್ಟರೆ, ಅವರಿಗೆ ಲಾಭ ಬರುವುದಿಲ್ಲ. ಕ್ರಮೇಣ ಈ ಹೊಸ ತಳಿಯ ಬೆಳೆ ಯೀಲ್ಡ್‌ಗೆ ಬಂದ ತಕ್ಷಣ ಹಳೆಯದನ್ನು ಹೊಡೆದು ಹಾಕಬಹುದಾಗಿದೆ. ಹೀಗಾಗಿ ಇದನ್ನು ಪರಿವರ್ತನೆ ಮಾಡಲಿಕ್ಕೆ ನಾವು ಈಗಾಗಲೇ ಸೂಚನೆ ಕೊಟ್ಟು, ಇದನ್ನು ನಮ್ಮ ಶಾಸಕರ ಅಧ್ಯಕ್ಷತೆಯಲ್ಲಿ ಅವರ ಸಮ್ಮುಖದಲ್ಲಿಯೇ ಮಾಡಿದ್ದೇವೆ. ಇಂಥದ್ದನ್ನು ಎಲ್ಲೆಲ್ಲಿ ಮಾಡಬೇಕು, ಅದರಲ್ಲೂ ಪ್ರಾಮುಖ್ಯವಾಗಿ ಗೇರು, ನಿಂಬೆ ಬಗ್ಗೆ ಏಕೆ ಹೇಳಿದ್ದೇನೆಂದರೆ, ಯಾವುದು ಲಾಭದಾಯಕ ಬೆಳೆ ಎಂಬುದು ತಮಗೆಲ್ಲಾ ಗೊತ್ತಿದ್ದರೆ ತಮ್ಮ ಕ್ಷೇತ್ರಗಳಿಗೆ ಹೋದಾಗ ತಾವು ರೈತರಿಗೆ, ತಳಿಇದೆ ಅದನ್ನು ತಂದು ಹಾಕಿ ಎಂದು ಹೇಳುತ್ತೀರಿ, ಒಂದು ಪಕ್ಷ ಇಲಾಖೆಯಲ್ಲಿ ಸಿಕ್ಕಲಿಲ್ಲವೆಂದರೆ ಖಾಸಗಿ ನರ್ಸರಿಯಿಂದ ತರಿಸಬಹುದಾಗಿದೆ ಇವತ್ತು ಎಲ್ಲವನ್ನೂ ಇಲಾಖೆಯಿಂದ ಕೊಡುವುದಕ್ಕೆ ಆಗುವುದಿಲ್ಲ, ಹೀಗಾಗಿ ಖಾಸಗಿಯಾಗಿ ಕೂಡ ಇವುಗಳು ಸಿಕ್ಕುತ್ತವೆ. ಆದುದರಿಂದ ಪ್ರತಿಯೊಬ್ಬ ಸದಸ್ಯರಿಗೂ ಈ ಇಲಾಖೆಯ ಬಗ್ಗೆ ಮಾಹಿತಿ ಗೊತ್ತಾಗಬೇಕು ಎನ್ನುವ ಭಾವನೆಯಿಂದ ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಹನಿ ನೀರಾವರಿಯ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದರು. ಇದರ ಬಗ್ಗೆ ತಾವು ಎಲ್ಲರೂ ಚಿಂತನೆ ಮಾಡಿದಿರಿ. ಮೊದಲು ಇದು ಕೋಲಾರ ಹಾಗೂ ಬಿಜಾಪುರಕ್ಕೆ ಸೀಮಿತ ಆಗಿತ್ತು. ಏಕೆ ಅವರಿಗೆ ಕೊಡಬೇಕು? ಇನ್ನುಳಿದ 25 ಜಿಲ್ಲೆಯ ರೈತರು ಯಾರು ಇರಲಿಲ್ಲವೇ? ಬಡವರು ಇರಲಿಲ್ಲವೇ? ಎನ್ನುವ ಪ್ರಶ್ನೆ ಬಂತು. ಅದಕ್ಕಾಗಿ ಪ್ರತಿ ಜಿಲ್ಲೆಯಲ್ಲೂ ಕೂಡ ಶೇಕಡ 70 ಪರ್ಸೆಂಟ್ ಸಬ್ಸಿಡಿಯಲ್ಲಿ ಕೊಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಯಾವುದೇ ಕ್ಷೇತ್ರದಲ್ಲಿ ಆಗಲಿ ಶೇಕಡ 70ರಷ್ಟು ಸಬ್ಸಿಡಿ ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ. ಇದಕ್ಕೆ ಅರ್ಜಿಗಳು ಬಹಳ ಇವೆ. ಹಳೆಯ ಬಾಕಿ ಸುಮಾರು 22 ಕೋಟಿ ರೂಪಾಯಿ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅಪ್ಲಿಕೇಷನ್ ತೆಗೆದುಕೊಳ್ಳಬೇಡಿ ಎಂದು ನೀವು ಡೈರೆಕ್ಷನ್ ಕೊಟ್ಟಿದ್ದೀರಿ, ಈಗ 70 ಪರ್ಸೆಂಟ್ ರೈಸ್ ಮಾಡಿದ್ದೇವೆಂದು ಹೇಳಿದಿರಿ, ನಾವು ಏನು ಮಾಡಬೇಕು? ತಾವು ಈ ವರ್ಷ ಯಾವುದೂ ಅರ್ಜಿ ತೆಗೆದುಕೊಳ್ಳಬೇಡಿ ಎಂದು ಹೇಳಿರುವುದು ನಿಜ ತಾನೆ?

ಶ್ರೀ ಆರ್. ಶ್ರೀನಿವಾಸ :– ಹೌದು. ಈಗ 22 ಕೋಟಿ ರೂಪಾಯಿ ಬೇಕು.

ಶ್ರೀ ಜೆ.ಸಿ ಮಾಧುಸ್ವಾಮಿ :– ನೋಡಿ ಸಾರ್, ನೀವು ನಮಗೆ ಕುಳಿತುಕೊಳ್ಳಿ ಎಂದು ಹೇಳುತ್ತೀರಿ ಹೀಗಾದರೆ ಹೇಗೆ? ಅವರು ಈಗ ಅಪ್ಲಿಕೇಷನ್ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಸಿ.ಎಂ. ಉದಾಸಿ :– ಹಾವೇರಿ ಜಿಲ್ಲೆಯೊಂದರಲ್ಲಿ ಎರಡು ವರ್ಷದಿಂದ 50 ಲಕ್ಷ ರೂಪಾಯಿ ಸಬ್ಸಿಡಿ ಬಾಕಿ ಇದೆ. ಹಾನಗಲ್ ತಾಲ್ಲೂಕಿನಲ್ಲಿ ಕೂಡ ಎರಡು ವರ್ಷದಿಂದ ಸುಮಾರು 12 ಲಕ್ಷ ರೂಪಾಯಿ ಸಬ್ಸಿಡಿ ಉಳಿದಿದೆ. ಇದು ಯಾವ ಲೆಕ್ಕ ಎಂದು ನಾನು ಕೇಳುತ್ತಿದ್ದೇನೆ. ಸಬ್ಸಿಡಿ ಕೊಡುತ್ತೇನೆಂದು ಹೇಳುವುದು ಯಾವ ಲೆಕ್ಕ ?

ಶ್ರೀ ಆರ್. ಶ್ರೀನಿವಾಸ್ :– ಅವರು ಹೇಳುತ್ತಿರುವುದರಲ್ಲಿ ಕೂಡ ಸತ್ಯಾಂಶ ಇದೆ. 22 ಕೋಟಿ ರೂಪಾಯಿ ಇವತ್ತು ಬೇಕಾಗಿದೆ. ಈ ಹಳೆಯ ಬಾಕಿಯನ್ನು ನಾವು ಪೂರ್ತಿ ಮಾಡಬೇಕು ಎನ್ನುವುದಾದರೆ ಅದಕ್ಕೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಈಗ ನೀಡಿರುವ ಅನುದಾನ ಕೇವಲ 6 ಕೋಟಿ ರೂ.ಗಳು ಆರ್‌ಐಡಿಎಫ್ ಯೋಜನೆಯಲ್ಲಿ 6 ಕೋಟಿ 70 ಲಕ್ಷ ರೂ.ಗಳ ಅನುದಾನ ನೀಡಲು ಸಂಪುಟದ ಉಪ ಸಮಿತಿ ಶಿಫಾರಸ್ಸು ಮಾಡಿದೆ. ಇದಕ್ಕೆ ನಾನು ನಮ್ಮ ಹಣಕಾಸಿನ ಸಚಿವರ ಗಮನಕ್ಕೆ ತರುವುದು ಆದಷ್ಟು ಬೇಗ ಹಳೆಯದನ್ನೆಲ್ಲಾ ಪಾವತಿ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು ಎಂಬುವುದರ ಬಗ್ಗೆ ಕೂಡ ಒತ್ತಾಯ ಮಾಡುತ್ತೇನೆ. ತಾವು ಕೂಡ ಒತ್ತಾಯ ತನ್ನಿ. ಇದರಲ್ಲಿ ಎರಡನೇ ಮಾತಿಲ್ಲ. ಈಗ ತಮ್ಮ ಮುಂದೆ ಒಂದು ಸಲ ಹೇಳಿದ್ದಾರೆ. ನಂತರ ಇದನ್ನು ಯಾವ ರೀತಿ ವಿವರಣೆ ಮಾಡುತ್ತೀರಿ ಎಂದು ಕೇಳಿದರು, ಮಾನ್ಯ ಸದಸ್ಯರು ಇದನ್ನು ಏಜೆನ್ಸಿಗೆ ಕೊಡೋಣ ಎಂದರು. ಬರೀ ಏಜೆನ್ಸಿಗೆ ಕೊಟ್ಟರೆ ಆಗುವುದಿಲ್ಲ. ನಾವು ರೈತನ ಒಪ್ಪಿಗೆ ಪಡೆದು, ರೈತ ಯಾವ ಏಜೆನ್ಸಿಗೆ ಕೊಡಬೇಕೆಂದು ಹೇಳುತ್ತಾನೆಯೋ ಆ ಏಜೆನ್ಸಿಗೆ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. 100 ಪರ್ಸೆಂಟ್ ಸಬ್ಸಿಡಿಯನ್ನು ಏಕೆ ಕ್ಯಾನ್ಸಲ್ ಮಾಡಿದೆ ಎಂದರೆ, ಒಂದು ಸಲ ನಾನು ಕೋಲಾರದ ಒಂದು ಹಳ್ಳಿಗೆ ಭೇಟಿ ಕೊಟ್ಟಿದ್ದೆ. ಅಲ್ಲಿ 100 ಪರ್ಸೆಂಟ್ ಸಬ್ಸಿಡಿಯಿಂದ ಕೊಟ್ಟಿರತಕ್ಕಂಥ ಪೈಪನ್ನು ನೋಡಬೇಕಾಗಿತ್ತು. ಕಾರಣ ಏನೆಂದರೆ, ರೈತ ಇದಕ್ಕೆ ದುಡ್ಡು ಕೊಡುವುದಿಲ್ಲ. ಇದು ಆರು ತಿಂಗಳು ಅಥವಾ ಒಂದು ವರ್ಷ ಬರುತ್ತದೆ ಅಷ್ಟೆ. ಇಂಥ ಸಂದರ್ಭದಲ್ಲಿ ರೈತ ಅದರ ಗುಣಮಟ್ಟವನ್ನು ಕೇಳುವ ಹಾಗಿಲ್ಲ. ಇದರಲ್ಲಿ ಅವ್ಯವಹಾರ

ಏನು ನಡೆಯುತ್ತದೆ ಎಂದರೆ, ಯಾವುದಾದರೊಂದು ಎರಡು ಎಕರೆ ಜಮೀನಿನ ಪಹಣಿ ತೆಗೆದುಕೊಂಡು ಬನ್ನಿ, ನಿಮಗೆ ಸಬ್ಸಿಡಿಯಲ್ಲಿ ಮಾಡಿಕೊಡುತ್ತೇವೆಂದು ಹೇಳುತ್ತಾರೆ. ಏಕೆಂದರೆ ಇಲ್ಲಿ ರೈತ ಹಣ ಪಾವತಿ ಮಾಡುವ ಹಾಗಿಲ್ಲ. ಆದ್ದರಿಂದ ಈಗ 30 ಪರ್ಸೆಂಟ್ ಸ್ವಂತ ಹಣವನ್ನು ರೈತ ಹಾಕಿದರೆ ಆತ ತನಗೆ ಕೊಡತಕ್ಕಂಥ ವಸ್ತುಗಳ ಗುಣಮಟ್ಟವನ್ನು ನೋಡುತ್ತಾನೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆ ಹೇಳುವುದಾದರೆ, ಯಾರೋ ಒಬ್ಬರು ಒಂದು ಪೈಪನ್ನು ಗಿಫ್ಟ್ ಕೊಡುತ್ತಾರೆ. ಗಿಫ್ಟ್ ಕೊಟ್ಟಿದ್ದನ್ನು ನಾವೇನೂ ನೋಡುವುದಕ್ಕೆ ಹೋಗುವುದಿಲ್ಲ. ಆದರೆ, ಮಾರ್ಕೆಟ್‌ಗೆ ಹೋಗಿ ಎರಡು ರೂಪಾಯಿ ಕೊಟ್ಟು ಒಂದು ಡಾಟ್ ಪೆನ್ ತೆಗೆದುಕೊಡರೆ ಅದರ ಕಲರ್ ಮತ್ತು ಬರೆದು ನೋಡುತ್ತೇವೆ. ಅಂದರೆ ಪ್ರತಿಯೊಂದನ್ನು ನೋಡಿ ತೆಗೆದುಕೊಳ್ಳುತ್ತೇವೆ. ಆದ್ದರಿಂದ ಇದರಲ್ಲಿ ಕೊಡುಗೆ ಕೂಡ ಇರಬೇಕೆಂಬ ಉದ್ದೇಶದಿಂದ 30 ಪರ್ಸೆಂಟ್ ಇರಬೇಕೆಂಬ ವ್ಯವಸ್ಥೆಯನ್ನು ಮಾಡಿದ್ದೇವೆ. 20 ಕೋಟಿ ರೂಪಾಯಿ ಇರತಕ್ಕಂಥ ಸಬ್ಸಿಡಿ ಹಣಕ್ಕೆ 70 ಪರ್ಸೆಂಟ್ ಸಬ್ಸಿಡಿ ಹಣ ಕೊಟ್ಟು ಇದನ್ನು ಆದಷ್ಟು ಬೇಗ ಮಾಡುವುದಕ್ಕೆ ಒತ್ತಡ ತಂದು ಮಾಡಬೇಕೆಂದು ಇದ್ದೇವೆ. ಸಚಿವಸಂಪುಟ ಸಭೆಯಲ್ಲಿ ಇದರ ಬಗ್ಗೆ......

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಮಾನ್ಯ ಉಪಾಧ್ಯಕ್ಷರೆ, ಈ ರೀತಿ ಮಾನ್ಯ ಸಚಿವರು ಹೇಳತಕ್ಕಂಥದ್ದು ಬಹಳ ತೊಂದರೆಯಾಗುತ್ತದೆ. ಅವರು ಹೇಳುತ್ತಿದ್ದರೆ ಆವೂ ಕೂಡ ಸುಮ್ಮನೆ ಕುಳಿತುಕೊಂಡಿದ್ದೀರಿ. It is a problem. Minister in charge of the portfolio, ಸದನದ ಎಲ್ಲಾ ಸದಸ್ಯರ ಅಭಿಪ್ರಾಯಗಳನ್ನು ಕೇಳಿ ತಾವು ತಮ್ಮ ಇಲಾಖೆಯ ಬೇಡಿಕೆಯ ಬಗ್ಗೆ ಉತ್ತರ ಕೊಡುತ್ತಿದ್ದಾರೆ. ಅವರು ಇವತ್ತು ಇಲ್ಲಿ ಇಲಾಖೆಯ ಪರವಾಗಿ ಏನು ಹೇಳುತ್ತಿದ್ದಾಎ it becomes policy statement. 70 ಪರ್ಸೆಂಟ್‌ನಷ್ಟು ನಾನು ಏರಿಸುತ್ತೇನೆ ಎಂಬ ಮಾತನ್ನು ಹೇಳಿದರೆ ಅದಕ್ಕೆ ಫೈನಾನ್ಷಿಯಲ್ ಬ್ಯಾಕ್‌ಗ್ರೌಂಡ್ಸ್, ಸಪೋರ್ಟ್ ಇದೆಯೇ? Has he taken the consent of the Finance Minister?

ಶ್ರೀ ಆರ್. ಶ್ರೀನಿವಾಸ್ :- ಖಂಡಿತವಾಗಿ ತೆಗೆದುಕೊಂಡು ಇದಕ್ಕೆ ರೆಕಮೆಂಡ್ ಮಾಡಿದ್ದೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಮಾನ್ಯ ಆಲಂಗೂರು ಶ್ರೀನಿವಾಸರವರೆ, ಒಂದು ನಿಮಿಷ ನಾನು ಹೇಳತಕ್ಕಂಥದ್ದನ್ನು ಸ್ವಲ್ಪ ಕೇಳಿ. Adequate financial mobilisation ಮಾಡಿಕೊಂಡು ಡಿಕ್ಲೇರ್ ಮಾಡಿದರೆ ಪರವಾಗಿಲ್ಲ. ಆದರೆ, ಇವರು ಯಾವುದೋ ಆತುರದಲ್ಲಿ, ಆವೇಶದಲ್ಲಿ ಹೇಳುತ್ತಿದ್ದಾರೆ. ಏಕೆಂದರೆ ಕೋಲಾರ ಮತ್ತು ಬೇರೆ ಕಡೆ ಅರ್ಜಿಗಳನ್ನು ತೆಗೆದುಕೊಳ್ಳಬೇಡಿ ಎಂದು ಆದೇಶ ಕೊಟ್ಟಿದ್ದಾರೆ.

ಶ್ರೀ ಆರ್. ಶ್ರೀನಿವಾಸ್ :– ನನ್ನ ಹತ್ತಿರ ಮಾಹಿತಿ ಇದೆ... ನನಗೆ ಗೊತ್ತಿದೆ....

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಮಾನ್ಯ ಶ್ರೀನಿವಾಸ್‌ರವರೆ ಒಂದು ನಿಮಿಷ, ನಾನು ಹೇಳುವುದನ್ನು ಕೇಳಿ. ಈಗಾಗಲೇ, ಡ್ರಿಪ್ ಇರಿಗೇಷನ್‌ಗೆ ಸಂಬಂಧಪಟ್ಟಹಾಗೆ ಸಬ್ಸಿಡಿಗೆ ಅರ್ಜಿಗಳನ್ನು ರಿಸೀವ್ ಮಾಡಬೇಡಿ ಎಂದು ರಿಟನ್ ಇನ್‌ಸ್ಟ್ರಕ್ಷನ್ ಬೆಂಗಳೂರಿನಿಂದ ಎಲ್ಲಾ ಕಡೆಗೆ ಬಂದಿದೆ. ಇವತ್ತಿನ ದಿವಸ ಕೊಡಬೇಕಾಗಿರತಕ್ಕಂಥ ಹಣವೇ ಒಂದು ದೊಡ್ಡ ಗಂಟಿನಷ್ಟು ಬಾಕಿಇದೆ. ಆದರೆ, ಇವರು ಆಶಾದಾಯಕವಾಗಿ ಇಷ್ಟು ದೊಡ್ಡ ಪ್ರೋಗ್ರ್ಯಾಂನ್ನು ಅನೌನ್ಸ್ ಮಾಡುತ್ತಿದ್ದಾರೆ. ಇದಕ್ಕೆ ಬಜೆಟ್‌ರಿ backing ಇದ್ದರೆ, I will salute him. ಅವರು ಉತ್ಸಾಹದಲ್ಲಿ ಪಾಪ ಡಿಕ್ಲೇರ್ ಮಾಡಿದರೆ ನಾಳೆ ನಿಮ್ಮ ಉದ್ದೇಶ ನನಗೆ ಗೊತ್ತು. he will be hauled up by the House. you want to land him in trouble. I am his well - wisher.

SRI J.C. MADHUSWAMY :- I am sorry. ನಾವು ಅವರಿಗೆ ಟ್ರಬಲ್ ತಂದಿಲ್ಲ. ನಾವು ಕೇಳಿರುವಂಥದ್ದು ಏನೆಂದರೆ, ಅರ್ಜಿಗಳನ್ನು ತೆಗೆದುಕೊಳ್ಳಬೇಡಿ ಎಂದು ಹೇಳಿದ್ದೀರಿ. ಮತ್ತೆ ನಿಮಗೆ 20 ರಿಂದ 24 ಕೋಟಿ ರೂಪಾಯಿಗಳಷ್ಟು ಬಾಕಿ ಇದೆ. 6 ಮತ್ತು 5 ಕೋಟಿ ರೂ.ಗಳನ್ನು ಸೇರಿಸಿ ಅಂದರೆ ಒಟ್ಟು 11 ಕೋಟಿ ರೂಪಾಯಿಗಳಷ್ಟು ಬಜೆಟ್ ಪ್ರಾವಿಜನ್ ಇದೆ ಎನ್ನತಕ್ಕಂಥದ್ದು ನಮಗೆ ಗೊತ್ತಿದೆ. ಇದನ್ನು ನಾವು ಗೈಡ್ ಮಾಡುತ್ತಿದ್ದರೂ ಕೂಡ ಅವರು ಎಲ್ಲವನ್ನೂ ಹೇಳಿಕೊಂಡು ಹೋಗುತ್ತಿದ್ದರೆ ನಾವು ಏನು ಮಾಡಬಹುದು?

SRI K.R. RAMESH KUMAR :- Alright, through the Chair, ಅಕೆಡೆಮಿಕ್ ಇಂಟ್ರಸ್ಟ್‌ನಿಂದ ನಾನು ತಮಗೆ ಕೇಳುವುದೇನೆಂದರೆ, he makes the statements and it is not substantiated by the budgetary backing, what will happen to - morrow if you haul him up for comtempt ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಅದಕ್ಕೆ ಅವರು ಭಾಷಣ ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿಯೇ ನಾವು ತಮ್ಮ ಮೂಲಕ ಹೇಳಿದ್ದೇವೆ. ಅರ್ಜಿಗಳನ್ನು ತೆಗೆದುಕೊಳ್ಳಬೇಡಿ ಎಂದು, ನೀವೇ ಹೇಳಿದ್ದೀರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಮಾನ್ಯ ಮಾಧುಸ್ವಾಮಿಯವರೆ, ನಿಮ್ಮ ಉದ್ದೇಶ ನನಗೆ ಗೊತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಮ್ಮ ಉದ್ದೇಶ ಬೇಡ. ಈಗ ನಿಮ್ಮ ಉದ್ದೇಶದ ಬಗ್ಗೆ ನಾವು ಡೌಟ್ ಮಾಡಬೇಕಾಗುತ್ತದೆ. ನೀವು ಕೋಲಾರದದ್ದೆಲ್ಲವನ್ನು ಆ ಮನುಷ್ಯನ ಮೇಲೆ ತೀರಿಸಿಕೊಳ್ಳಬಾರದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನಾನು ಮತ್ತು ಅವರು ಅತ್ಯಂತ ಆತ್ಮೀಯ ಸ್ನೇಹಿತರಾಗಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾನೂ ಕೂಡ ಅತ್ಯಂತ ಆತ್ಮೀಯ ಸ್ನೇಹಿತ ಆಗಿದ್ದೇನೆ. ನಮ್ಮಿಬ್ಬರಲ್ಲಿ ಯಾರು ಅತ್ಯಂತ ಆತ್ಮೀಯರು ಎಂದು ಮಾನ್ಯ ಮಂತ್ರಿಗಳನ್ನೇ ಕೇಳಿ?

ಶ್ರೀ ವಾಟಾಳ್ ನಾಗರಾಜ್ :–ನಾವು ಇದುವರೆಗೂ ಹೇಳಬಾರದೆಂದು ಇದ್ದೆವು. ಆದರೆ ಮಾನ್ಯ ಮಾಧುಸ್ವಾಮಿಯವರು ಹೇಳಿ ಬಿಟ್ಟರು. ಆದ್ದರಿಂದ ಈ ರೀತಿಯಾದ ರಾಜಕೀಯ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾವು ಅವರನ್ನು ಸರಿಯಾದ ಟ್ರ್ಯಾಕ್‌ಗೆ ತೆಗೆದುಕೊಂಡು ಹೋಗುತ್ತಿದ್ದೇವೆಂದು ಹೇಳಿ ಅವರು ಏನು ಮಾಡುತ್ತಿದ್ದಾರೆ ನೋಡಿ?

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನೀವೆಲ್ಲಾ ನನಗೆ ಮಾಡತಕ್ಕಂಥ ಕೆಲಸವನ್ನು ಅವರಿಗೂ ಕೂಡ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅವರ ಬಗ್ಗೆ ನಮಗೆ ಒಳ್ಳೆಯ ಪ್ರೀತಿ ಇದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನಾನು ಅವರ ಸ್ನೇಹಿತ ಮತ್ತು ಅವರ ವಿಶ್ವಾಸಿ. ಯಾವ ಕಾರಣಕ್ಕೂ ನಾನು ಅವರಿಗೆ ಒಳ್ಳೆಯದಾಗಬೇಕೆಂದು ಬಯಸುತ್ತೇನೆ. ಆದರೆ, ಪಾಪ ಅವರು ಆತುರದಿಂದ ಹೆಜ್ಜೆ ಇಡುತ್ತಿದ್ದಾರೆ ಎನ್ನತಕ್ಕಂಥ ಭಯ ಅಷ್ಟೆ ನನಗೆ. ಆದರೆ, ಅವರ ಹಣೆಬರಹ ಇಷ್ಟೇ ಅಂದರೆ ನಾವೇನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಅವರೊಬ್ಬರು ಕ್ಯಾಬಿನೆಟ್ ಮಂತ್ರಿಯಾಗಿದ್ದು, ಆ ಖಾತೆಯ ಜವಾಬ್ದಾರಿ ಹೊತ್ತುಕೊಂಡಿರತಕ್ಕಂಥವರು ಹೇಳಿದರೆ ನೀವು ಜವಾಬ್ದಾರಿ ಇಲ್ಲವೆಂದು ಹೇಳಿದರೆ ಹೇಗೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ :– ಮಾನ್ಯ ಉಪಾಧ್ಯಕ್ಷರೆ, ನಾವು ಈ ತರಹದ ಪ್ರಶ್ನೆ ಕೇಳುತ್ತೇವೆ. ಅದೇನೆಂದರೆ, ಈಗ ಇಷ್ಟು ಪ್ರೋಗ್ರಾಮ್ ಹಾಕಿದ್ದಾರೆ, ಅದಕ್ಕೆ ಬಜೆಟ್ ಸಪೋರ್ಟ್ ಎಷ್ಟಿದೆ?

ಶ್ರೀ ಆರ್. ಶ್ರೀನಿವಾಸ್ :– ನಾನು ಅನಂತರ ಹೇಳುತ್ತೇನೆ, ತಾವು ಕೇಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಕೇವಲ 7 ಕೋಟಿ 35 ಲಕ್ಷ ರೂಪಾಯಿಗಳಷ್ಟು ಬಜೆಟ್‌ನಲ್ಲಿ ನಮ್ಮ ಇಡೀ ಇಲಾಖೆಗೆ ಅನುದಾನ ನೀಡಲಾಗಿದೆ ಎಂದು ಹೇಳಿದ್ದೀರಿ.

ಮತ್ತೆ ನಾಲ್ಕು ತಾಲ್ಲೂಕುಗಳಿಗೆ 5 ಕೋಟಿ ರೂಪಾಯಿ ವೆಚ್ಚದಲ್ಲಿ ಇಸ್ರೇಲ್ ತಂತ್ರಜ್ಞಾನದ ಒಂದು ಪ್ರೋಗ್ರಾಮ್ ಬಗ್ಗೆ ಕೂಡ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ಇದನ್ನು ಹಣಕಾಸಿನ ಸಚಿವರಿಗೆ ನಾನು ಕಳುಹಿಸಿದ್ದೇವೆ. ಅವರು ಹಣ ಕೊಡುತ್ತೇವೆಂದು ಭರವಸೆಯನ್ನು ಕೊಡುತ್ತಾರೆಂದು ಮಾನ್ಯ ಹಣಕಾಸಿನ ಸಚಿವರ ಮೇಲೆ ಅವರು ಹೇಳುತ್ತಿದ್ದಾರಷ್ಟೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಈ ರೀತಿ ಹೇಳಿದರೆ ಆಗುವುದಿಲ್ಲ. ಮತ್ತೆ ಅದೊಂದು ಕಾರ್ಯಕ್ರಮ ಕೂಡ ಆಗುವುದಿಲ್ಲ.

ಶ್ರೀ ಆರ್. ಶ್ರೀನಿವಾಸ್ :- ನಾನು ಒಬ್ಬ ಸದಸ್ಯನಾಗಿ ಈ ಮಾತನ್ನು ಹೇಳುತ್ತಿಲ್ಲ ನಾನೊಬ್ಬ ಸಂಪುಟ ದರ್ಜೆ ಮಂತ್ರಿಯಾಗಿ ನಾನು ಬೇಜವಾಬ್ದಾರಿಯಿಂದ ಭಾಷಣ ಮಾಡುತ್ತಿಲ್ಲ. ನಾನು ಈ ಸದನದ ಗೌರವ ಘನತೆ ಕಾಪಾಡುವುದಕ್ಕೆ ಭಾಷಣ ಮಾಡುವಾಗ ಹೇಳಬಹುದು......

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ನೀವು ಜವಾಬ್ದಾರಿಯಿಂದ ಹೇಳುತ್ತಿದ್ದೀರಿ ನಾವು ಕೇಳುತ್ತಿದ್ದೇವೆ.

ಶ್ರೀ ಆರ್. ಶ್ರೀನಿವಾಸ್ :- ನಾನು ಇವತ್ತು ಹೇಳತಕ್ಕಂಥ ಅಂಕಿ-ಅಂಶಗಳ ಬಗ್ಗೆ ಮತ್ತೆ ಸದನ ಸೇರಿದಾಗ ಇದರ ಬಗ್ಗೆ ಕೇಳತಕ್ಕಂಥ ಹಕ್ಕು ನಿಮಗೆ ಇದೆ. ಇದರ ಬಗ್ಗೆ ಏಕೆ ಚಿಂತೆ ಮಾಡುತ್ತಿದ್ದೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ನಮಗೆ ಭಾರಿ ಸಂತೋಷವಾಗುತ್ತದೆ. ಮತ್ತೆ ನಿಮ್ಮನ್ನು ನಾವು ಅಪ್ರೀಷಿಯೆಟ್ ಮಾಡುತ್ತೇವೆ. ಈಗ ನೀವು ಏನು ಕಾರ್ಯಕ್ರಮಗಳನ್ನು ಅನೌನ್ಸ್ ಮಾಡಿರತಕ್ಕಂಥದ್ದು, ಅದೆಲ್ಲಾ ಜಾರಿಗೆ ಬಂದರೆ ಮುಂದಿನ ಅಧಿವೇಶನದಲ್ಲಿ ನಿಮಗೆ ಅಭಿನಂದನೆ ಸಲ್ಲಿಸುತ್ತೇವೆ.

ಶ್ರೀ ಆರ್. ಶ್ರೀನಿವಾಸ್ :- ಜಾರಿಗೆ ಬಂದಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದರ ಬಗ್ಗೆ ಮತ್ತು ಎಷ್ಟು ವಿತರಣೆ ಮಾಡಿದ್ದೇವೆ ಎನ್ನತಕ್ಕಂಥದ್ದನ್ನು ಇಲ್ಲಿರತಕ್ಕಂಥ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಮಾನ್ಯ ಸದಸ್ಯರುಗಳೇ ಹೇಳಬಹುದು.

ಶ್ರೀ ಅರಗಜ್ಞಾನೇಂದ್ರ :- ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಈಗಾಗಲೇ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಕೇಳಿದ ಹಾಗೆ, ಇದಕ್ಕೆ ಈಗಾಗಲೇ ಹಣಕಾಸಿನ

ಇಲಾಖೆಯವರು ನಿಮಗೆ ಮಂಜೂರಾತಿ ಕೊಟ್ಟಿದ್ದಾರೆಯೇ ಎಂಬುವುದನ್ನು ತಾವು ದಯವಿಟ್ಟು ಹೇಳಬೇಕು.

ಶ್ರೀ ಆರ್. ಶ್ರೀನಿವಾಸ್ :- ತಾವು ಯಾವುದರ ಬಗ್ಗೆ ಹೇಳುತ್ತಿದ್ದೀರಿ ?

ಶ್ರೀ ಅರಗಜ್ಞಾನೇಂದ್ರ :- ಡ್ರಿಪ್ ಇರಿಗೇಶನ್‌ಗೆ 70 ಪರ್ಸೆಂಟ್ ಸಬ್ಸಿಡಿ ವಿತರಣೆ ಮಾಡಿದ್ದೇವೆಂದು ನೀವು ಅವರ ಭರವಸೆಯ ಮೇಲೆ ಇಲ್ಲಿ ಹೇಳುತ್ತಿದ್ದೀರಾ ಅಥವಾ ನೀವು ಸ್ಪಷ್ಟವಾಗಿ ಇದನ್ನು ಹೇಳುತ್ತಿದ್ದೀರಾ ಎನ್ನತಕ್ಕಂಥದ್ದು ನಮಗೆ ಗೊತ್ತಾಗಬೇಕು.

ಶ್ರೀ ಆರ್. ಶ್ರೀನಿವಾಸ್ :- ನಾನು ಸದನದಲ್ಲಿ ಏನಾದರೂ ಕಮಿಟ್ ಆಗಬೇಕಾದರೆ ಅಷ್ಟು ಸುಲಭವಾಗಿ ಹೇಳುವುದಕ್ಕೆ ಆಗುವುದಿಲ್ಲ. ಈ ಸದನಕ್ಕೆ ನಾನೇನು ಹೊಸಬನೇ? ಈ ಸಾರಿ ಬಂದಿದ್ದೇನೆಯೇ? ಮತ್ತೆ ಈ ಸದನದ ನಿಯಮಾವಳಿಗಳು ಏನು ಎನ್ನತಕ್ಕಂಥದ್ದು ನನಗೆ ಗೊತ್ತಿಲ್ಲವೆ?

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅರಗಜ್ಞಾನೇಂದ್ರ ಅವರೆ, ನಾನು ಹೇಳತಕ್ಕಂಥದ್ದನ್ನು ತಾವು ಕೇಳಿ. 70 ಪರ್ಸೆಂಟ್‌ನಷ್ಟು ಸಬ್ಸಿಡಿ ಕೊಡುತ್ತೇವೆಂದರೆ, 100 ಪರ್ಸೆಂಟ್ ಎಲ್ಲಾ ರೈತರಿಗೆ ಕೊಡುತ್ತೇವೆ ಎಂದು ಹೇಳಿದ ಹಾಗೆಯೇ ಅದು? ಬಜೆಟ್‌ನಲ್ಲಿ ಇದಕ್ಕಾಗಿ ಎಷ್ಟು ಹಣ ನಿಗದಿ ಮಾಡಲಾಗಿದೆಯೋ ಅಷ್ಟು ಹಣದಲ್ಲಿ ಎಷ್ಟು ಮಂದಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು ಮಂದಿಗೆ ಮಾತ್ರ ಕೊಡಲಾಗುತ್ತದೆ.

ಶ್ರೀ ಅರಗಜ್ಞಾನೇಂದ್ರ :- ನಮ್ಮ ಇಲಾಖೆಗೆ 7 ಕೋಟು ರೂಪಾಯಿಗಳಷ್ಟು ಅನುದಾನ ನೀಡಲಾಗಿದೆ ಎಂದು ಅವರು ಪ್ರಾರಂಭದಲ್ಲಿಯೇ ಹೇಳಿದ್ದಾರೆ. ಮತ್ತೆ ಪರಿಸ್ಥಿತಿ ಈ ರೀತಿ ಇದೆ ಎಂದೂ ಕೂಡ ಹೇಳಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ಎಲ್ಲಾ ರೈತರಿಗೆ ಒಂದು ವರ್ಷದಲ್ಲಿ ಕೊಟ್ಟು ಬಿಡುತ್ತೇವೆಂದು ಹೇಳಿದ ಹಾಗೆ ಇದು ಆಗುತ್ತದೆಯೇ? ನೀವು ಏನು ಮಾತನಾಡುತ್ತೀರಿ?

SRI K. JAYAPRAKASH HEGDE :- We will accept it as it is.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :- ನಾವು ಒಪ್ಪಿಕೊಂಡಿದ್ದೇವೆ. ಮತ್ತೆ ಇದಕ್ಕೆ ನಮ್ಮ ಬೆಂಬಲ ಕೂಡ ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಅವರು ಹೇಳತಕ್ಕಂಥ ಸ್ಟೇಟ್‌ಮೆಂಟ್‌ನ್ನು ನಾವು ಸ್ವೀಕಾರ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ :– ಬಜೆಟ್‌ನಲ್ಲಿ ಎಷ್ಟು ಹಣ ಇದೆಯೋ ಅದಕ್ಕೆ ಅನುಗುಣವಾಗಿ 70 ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಅರಗಜ್ಞಾನೇಂದ್ರ :– ನಂಬರ್ ಆಫ್ ಫಲಾನುಭವಿಗಳ ಬಗ್ಗೆ ಅವರು ಎಲ್ಲಯೂ ರೆಸ್ಟ್ರಿಕ್ಟ್ ಮಾಡಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :– ಸುಮ್ಮನೆ ಇದರ ಬಗ್ಗೆ ವಿನೋದ ರೀತಿಯಲ್ಲಿ ಮಾತನಾಡುವುದಕ್ಕೆ ಹೋಗಬೇಡಿ. ಅವರು ಒಳ್ಳೆಯದನ್ನು ಮಾಡುವುದಕ್ಕೆ ಹೊರಟಿದ್ದಾರೆ. ಅಭಿಮಾನದಿಂದ, ಆತ್ಮವಿಶ್ವಾಸದಿಂದ ಆ ಒಂದು ಇಲಾಖೆಯನ್ನು ಬೆಳೆಸಬೇಕೆಂಬ ದೃಷ್ಟಿಯಿಂದ ಮಾಡಿರತಕ್ಕಂಥ ಕೆಲಸವನ್ನು ನೀವೆಲ್ಲಾ ಅಪ್ರೀಷಿಯೇಟ್ ಮಾಡಬೇಕಾಗುತ್ತದೆ.

ಅಧ್ಯಕ್ಷರು :– ಮಾನ್ಯ ಆಲಂಗೂರು ಶ್ರೀನಿವಾಸರವರೆ, ತಾವು ಬೇಗ ಮುಗಿಸಿ. ಬೇರೆಯವರು ಏನೇನು ಹೇಳುತ್ತಾರೆ ಎನ್ನತಕ್ಕಂಥದ್ದನ್ನು ತಾವು ಕೇಳುವುದಕ್ಕೆ ಹೋಗಬೇಡಿ. ಈಗಾಗಲೇ 5:30 ಗಂಟೆ ಆಗಿದೆ. ತಾವು ಬೇಗ ಮುಗಿಸಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :– ಅವರ ವಿಶ್ವಾಸಕ್ಕೆ ನಾವು ತಣ್ಣೀರು ಹಾಕತಕ್ಕಂಥ ಕೆಲಸವನ್ನು ನಾವು ಮಾಡುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :– ಈ ಇಲಾಖೆಯ ಡಿಮ್ಯಾಂಡ್ ಬಗ್ಗೆ ನೀವ್ಯಾರೂ ಮಾತನಾಡಿಲ್ಲ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಸ್.ಎಸ್. ಪಾಟೀಲ್ :– ಇವರ ಇಲಾಖೆಯ ಬೇಡಿಕೆ ಮೇಲೆ ಯಾರೊಬ್ಬರೂ ಕೂಡ ಮಾತನಾಡಿಲ್ಲ. ಆದರೆ ಈಗ ಎಲ್ಲವನ್ನೂ ಕೇಳುವುದಕ್ಕೆ ಪ್ರಾರಂಭ ಮಾಡಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಅಧ್ಯಕ್ಷರು, ಒಂದು ಕಡೆ ಮಾನ್ಯ ಎಸ್.ಎಸ್. ಪಾಟೀಲ್‌ರವರು, ಇನ್ನೊಂದು ಕಡೆ ಮಾನ್ಯ ರಮೇಶ್ ಕುಮಾರ್‌ರವರು ಅವರನ್ನು ಎಳೆಯುತ್ತಿದ್ದಾರೆ. ಮಾನ್ಯ ಸಚಿವರು ಸ್ವತಂತ್ರವಾಗಿ ಹೇಳುವುದಕ್ಕೆ ದಯವಿಟ್ಟು ಬಿಟ್ಟುಬಿಡಿ.

ಅವರು ತೋಟಗಾರಿಕೆ ಸಚಿವರಾಗಿ, ಈ ರಾಜ್ಯದ ತೋಟಗಾರಿಕೆಯ ಪರವಾಗಿ ಅವರು ಮಾತನಾಡುತ್ತಿದ್ದಾರೆ. ಆದ್ದರಿಂದ ಅವರು ಮುಕ್ತವಾಗಿ ಮಾತನಾಡುವುದಕ್ಕೆ ತಾವು ಬಿಡಿ.

ಶ್ರೀ ಎಸ್.ಎಸ್. ಪಾಟೀಲ್ :- ಸಣ್ಣ ಹುಡುಗರನ್ನು ಕೇಳುವ ಹಾಗೆ ನೀವು ಕೇಳುತ್ತಿದ್ದೀರಿ? 70 ಪರ್ಸೆಂಟ್ ಅಂದರೆ, 100 ಪರ್ಸೆಂಟ್ ಎಲ್ಲಾ ರೈತರಿಗೆ ಕೊಡಲಾಗುತ್ತದೆ ಎನ್ನತಕ್ಕಂಥ ಅರ್ಥವೇ? ಬಜೆಟ್‌ನಲ್ಲಿ ಎಷ್ಟು ಇದೆಯೋ ಅಷ್ಟನ್ನು ಮಾತ್ರ ಕೊಡಲಾಗುತ್ತದೆ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಸಚಿವರು ಬೇಗ ಹೇಳಿ ಮುಗಿಸಬೇಕು. ತಾವು ಬೇರೆ ಕಡೆಗೆ ಗಮನ ಕೊಡುವುದಕ್ಕೆ ಹೋಗಬೇಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ :- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶ ಕೊಡಿ. ಕಳೆದ ಸರ್ಕಾರದಲ್ಲಿ ಘನತೆವೆತ್ತ ಮಾನ್ಯ ಮುಖ್ಯಮಂತ್ರಿಗಳು ಬಳ್ಳಾರಿ ಜಿಲ್ಲೆಗೆ ಸಾವಿರಾರು ಕೋಟಿ ರೂಪಾಯಿಗಳ ಪ್ಯಾಕೇಜ್ ಅನೌನ್ಸ್ ಮಾಡಿದ್ದರು. ಈಗ ಮಾನ್ಯ ಆಲಂಗೂರು ಶ್ರೀನಿವಾಸರವರು ಹೊಸದಾಗಿ ಮಂತ್ರಿಗಳಾಗಿದ್ದಾರೆ. ಆದ್ದರಿಂದ, ಇವರು ಕೂಡ ಒಂದು ಸಲ ಅನೌನ್ಸ್ ಮಾಡಲಿ ಬಿಡಿ ನೋಡೋಣ. ಈಗ ನೀವೆಲ್ಲಾ ಏಕೆ ಈ ರೀತಿ ಮಾಡುತ್ತಿದ್ದೀರಿ? ಅವರು ಅನುಭವಿಗಳಾಗಿದ್ದಾರೆ. ಅವರು ಮೊದಲ ಸಲ ಮಂತ್ರಿಗಳಾಗಿದ್ದಾರೆ. ಅವರು ಅನನುಭವಿಗಳಾಗಿದ್ದಾರೆ. ಅವರು ಮೊದಲ ಸಲ ಮಂತ್ರಿಗಳಾಗಿದ್ದಾರೆ. ಈ ರಾಜ್ಯದಲ್ಲಿ ಹಿಂದೆ ಮಿಂಚಿದವರು ಎಂಥೆಂಥ ಪ್ಯಾಕೇಜ್ ಅನೌನ್ಸ್ ಮಾಡಿದ್ದಾರೆಂಬುದನ್ನು ನಾವು ಕೇಳಿದ್ದೇವೆ. ಇದನ್ನೂ ಕೂಡ ನಾವು ತಿಳಿದುಕೊಳ್ಳೋಣ. ಪ್ರಾರಂಭದಲ್ಲಿಯೇ ಈ ರೀತಿಯಾಗಿ ಏಕೆ ಮಾಡುತ್ತಿದ್ದೀರಿ?

ಶ್ರೀ ಅರಗಜ್ಞಾನೇಂದ್ರ :- ಹಾಗಿದ್ದರೆ ಇದೊಂದು ಪ್ಯಾಕೇಜ್ ಆಗಬಾರದು. ಒಂದು ವೇಳೆ ಇದು ಪ್ಯಾಕೇಜ್ ಆಗಿದ್ದರೆ ನಮ್ಮ ದುರಾದೃಷ್ಟ ಎಂದು ಹೇಳಬೇಕಾಗುತ್ತದೆ. ಎಲ್ಲಾ ಮಂತ್ರಿಗಳು ಇಲ್ಲಿ ಚಟಕ್ಕೆ ಮಾತನಾಡಬಾರದು.

ಶ್ರೀ ಸಿ.ಎಸ್. ಪುಟ್ಟೇಗೌಡ :- ನುರಿತವರಿಗೆ ಒಂದು ನ್ಯಾಯ ಇವರಿಗೊಂದು ನ್ಯಾಯವೇ?

ಶ್ರೀ ಹೆಚ್.ಡಿ. ಬಸವರಾಜ್ :- ಮಾನ್ಯ ಅಧ್ಯಕ್ಷರೆ, ಅವರು ಈ ರೀತಿಯಾಗಿ ಅನೌನ್ಸ್ ಮಾಡಿದ್ದಾರೆ. ಈ ಸದನದಲ್ಲಿ ಮಾನ್ಯ ಶ್ರೀನಿವಾಸಗೌಡರು ಮತ್ತು ಇವರಿಬ್ಬರೂ ಸಹಕಾರ ಆಗಿರತಕ್ಕಂಥದ್ದು ನಿಜವಾಗಿಯೂ ಕೂಡ ಆಶ್ಚರ್ಯ. ಏಕೆಂದರೆ ಈ ಪ್ಯಾಕೇಜ್ ಕಾರ್ಯಗತವಾಗುವುದಿಲ್ಲವೆಂದು ಬಹುಶಃ ಅವರಿಗೂ ಸಹ ಗೊತ್ತಿದೆ. ಇದರಲ್ಲಿ ಇಬ್ಬರೂ

ಕೂಡ ಅವರಿಗೆ ಸಹಕಾರ ಕೊಟ್ಟು ಈ ರೀತಿ ಅನೌನ್ಸ್ ಮಾಡುತ್ತಿದ್ದಾರೆ. ಆದ್ದರಿಂದ ನಾವು ಯಾವ ರೀತಿಯಾಗಿ ಪ್ರಶಂಸಿಸಬೇಕೋ ಗೊತ್ತಾಗುತ್ತಿಲ್ಲ.

ಶ್ರೀ ಆರ್. ಶ್ರೀನಿವಾಸ :– ನಾನೇಕೆ ಮೈಮೇಲೆ ಹಾಕಿಕೊಳ್ಳಲಿ? ನಾನು ಭಾಷಣ ಮಾಡಿದರೆ ನೀವೇನು ವೋಟು ಹಾಕುತ್ತೀರಾ? ಇದನ್ನು ದಯವಿಟ್ಟು ತಿಳಿದುಕೊಳ್ಳಬೇಕು. ನೀವೇನಾದರೂ ಪಬ್ಲಿಕ್‌ನಲ್ಲಿ ವೋಟು ಹಾಕತಕ್ಕಂಥ ಜನರಾಗಿದ್ದರೆ ನಿಮಗೆ ಸುಳ್ಳು ಹೇಳಿ ವೋಟು ಹಾಕಿಸಿಕೊಳ್ಳಬಹುದಾಗಿತ್ತು. ಮತ್ತೆ ನೀವ್ಯಾರೂ ನನಗೆ ವೋಟು ಹಾಕುವವರಲ್ಲ. ನಾನೇನು ಮುಖ್ಯಮಂತ್ರಿ ಆಗಬೇಕೆಂದು ಹೊರಟಿದ್ದೇನೆಯೇ?

ಶ್ರೀ ಅರಗ ಜ್ಞಾನೇಂದ್ರ :– ಈಗ ನಿಮಗೆ ನಾವು ವೋಟು ಕೊಡಬೇಕಲ್ಲವೇ?

ಶ್ರೀ ಎ.ಟಿ. ರಾಮಸ್ವಾಮಿ :– ಮಾನ್ಯ ಅಧ್ಯಕ್ಷರೆ, ಅವರ ಬೇಡಿಕೆಗೆ ನಾವು ಒಪ್ಪಿಗೆ ಕೊಡಬೇಕು.

ಶ್ರೀ ಆರ್. ಶ್ರೀನಿವಾಸ್ :– ಆ ವೋಟನ್ನು ನಾನು ಕೇಳುತ್ತಿಲ್ಲ.

ಅಧ್ಯಕ್ಷರು :– ಮಾನ್ಯ ಆಲಂಗೂರು ಶ್ರೀನಿವಾಸರವರೆ ಮಧ್ಯೆ ಮಧ್ಯೆ ಸದಸ್ಯರು ಏನೇನು ಪ್ರಸ್ತಾಪ ಮಾಡುತ್ತಾರೆ ಅದಕ್ಕೆ ಮತ್ತು ಪ್ರತಿಯೊಬ್ಬರಿಗೂ ನೀವು ಉತ್ತರ ಕೊಡುತ್ತಾ ಹೋದರೆ ಇಲಾಖೆಯ ಮೇಲೆ ಉತ್ತರ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ನಾನು ಹೇಳತಕ್ಕಂಥದ್ದನ್ನು ತಾವು ಕೇಳಿ.

ಶ್ರೀ ಆರ್. ಶ್ರೀನಿವಾಸ್ :– ಡಿಮಾಂಡ್ ಮೇಲೆ ವೋಟು ಅಲ್ಲ ಎಂದು.

ಅಧ್ಯಕ್ಷರು :– ದಯಮಾಡಿ ನಾನು ಹೇಳತಕ್ಕಂಥದ್ದನ್ನು ಕೇಳಿ. ದಯವಿಟ್ಟು ಬೇಡಿಕೆಗೆ ಸಂಬಂಧಪಟ್ಟಂತೆ ಉತ್ತರ ಕೊಡಿ. ನಿಂತುಕೊಂಡಿರತಕ್ಕಂಥ ಪ್ರತಿಯೊಬ್ಬ ಸದಸ್ಯರಿಗೆ ತಾವು ಉತ್ತರ ಕೊಡುವುದಕ್ಕೆ ಹೋಗಬೇಡಿ. ದಯಮಾಡಿ ತಾವು ಉತ್ತರ ಕೊಡಿ.

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಆದ್ದರಿಂದ ನೀವು ಸಾವಧಾನವಾಗಿ ಕೇಳಿ, ಈ ಇಲಾಖೆಯ ಬಗ್ಗೆ ಚಿಂತನೆ ಮಾಡಿ, ಸುಮ್ಮನೆ ಕೇಳಬೇಕೆಂದು ಕೇಳಿದರೆ ನಾನು 5 ನಿಮಿಷದಲ್ಲಿ ನಿಲ್ಲಿಸಿಬಿಡುತ್ತೇನೆ. ಆಯಿತು ಎಂದು ಹೋಗಿಬಿಡುತ್ತೇನೆ. ನನ್ನದೇನು ಹೋಗುತ್ತದೆ? ಆದ್ದರಿಂದ ಈ 70 ಪರ್ಸೆಂಟ್ ಹಣದ ಬಗ್ಗೆ ನಿನ್ನೆ ದಿವಸ ಹಣಕಾಸಿನ ಮಂತ್ರಿಗಳ ಹತ್ತಿರ ಡಿಸ್ಕಸ್ ಮಾಡಿ 50 ಪರ್ಸೆಂಟ್ ಇರುವುದನ್ನು ಬೇರೆ ಬೇರೆ ಜಿಲ್ಲೆಗಳಿಗೆ 70 ಪರ್ಸೆಂಟ್ ಏರಿಕೆ ಮಾಡುವುದಕ್ಕೆ ಇವತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಪ್ರಪೋಸಲ್ ಕಳುಹಿಸಿದ್ದೇವೆ. 30 ಪರ್ಸೆಂಟ್‌ನ್ನು ಲಾಸ್ಟ್ ಇಯರ್‌ಗೆ ಕೊಟ್ಟು ಬಿಟ್ಟು ಈ

ವರ್ಷದಿಂದ 70 ಪರ್ಸೆಂಟ್ ಮಾಡುವುದಕ್ಕೆ ಎಲ್ಲಾ ಜಿಲ್ಲೆಗಳಿಗೆ ವ್ಯವಸ್ಥೆ ಮಾಡಿದ್ದೇವೆ. ಇದರ ಬಗ್ಗೆ ತಾವೆಲ್ಲಾ ನನಗೆ ಸಹಾಯ ಮಾಡಬೇಕು. ನಾನೊಬ್ಬನೇ ಮಾಡುವುದಕ್ಕಾಗುತ್ತದೆಯೇ? ತಮಗೆಲ್ಲಾ ಹೀಗೆ ಇದೆ ಎಂದು ನಾನು ಎಲ್ಲವನ್ನೂ ತಮ್ಮ ಮುಂದೆ ಇಟ್ಟಿದ್ದೇನೆ. ಬೇರೆಯದ್ದಕ್ಕೆಲ್ಲಾ ನಾನು ಕೇಳುವುದಿಲ್ಲ. ಬೇರೆಯದ್ದಕ್ಕೆ ಹೇಗೆ ದುಡ್ಡು ಬರುತ್ತದೆಂದು ಹೇಳುತ್ತೇನೆ, ಆಮೇಲೆ ಕೊಡುತ್ತೇನೆ ಈ ಒಂದು ಡ್ರಿಪ್ ಇರಿಗೇಷನ್ ಆಗಲಿ ಫಾರಂ ಪಾಲಿಸಿ ಬಗ್ಗೆಯಾಗಲಿ ತಾವು ನನ್ನ ಸಹಾಯಕ್ಕೆ ಬಂದಾಗ ಖಂಡಿತವಾಗಿ ನಾನು ಹೇಳಿದಂತೆ ಮಾಡುವುದಕ್ಕೆ ಹೋಗುತ್ತೇನೆ. ಆ ಒಂದು ದೃಷ್ಟಿಯಿಂದ ಮಾಡುತ್ತಿದ್ದೇವೆ. ಮೂರನೆಯದಾಗಿ ಕೋಕೊನಟ್ ಬೋರ್ಡ್ ಇದು ನಮ್ಮಲ್ಲಿ ಇಲ್ಲ. ಇಲ್ಲಿ ಒಬ್ಬ ಡೈರೆಕ್ಟರ್ ಇದ್ದಾರೆ ಅಷ್ಟೆ. ನಮ್ಮ ಪ್ರಿನ್ಸಿಪಾಲ್ ಸೆಕ್ರಟರಿಯವರು ಡೈರೆಕ್ಟರಾಗಿದ್ದಾರೆ ಅಷ್ಟೆ. 1.40 ಕೋಟಿ ರೂ.ಗಳು ಕೋಕೊನಟ್ ಬೋರ್ಡ್‌ನಿಂದ ಬಂದಿದೆ. ಇದನ್ನು ಯಾವ ರೀತಿ ವಿತರಣೆ ಮಾಡಬೇಕು. ಈ ನುಸಿ ರೋಗದ ಬಗ್ಗೆ ನನ್ನ ಅನೇಕ ಸ್ನೇಹಿತರು ಮಾತನಾಡಿದರು. ಬಹುಶಃ ಈ ಔಷಧಿಯಿಂದ ಹೋಗುತ್ತದೆ ಎನ್ನುವುದು ಸುಳ್ಳು. ನೀವು ಏನಾದರೂ ತಿಳಿದುಕೊಳ್ಳಿ. ಔಷಧಿಗಿಂತ ಮುಖ್ಯವಾಗಿ ಬೇವಿನ ಹಿಂಡಿ, ಬೇವಿನ ಎಣ್ಣೆ, ಒಳ್ಳೆಯ ನೀರು ಎಲ್ಲಾ ಕೊಟ್ಟಾಗ ಬಹುಶಃ ಹೋದವರ್ಷದಿಂದ ಈ ರೋಗ ಸ್ವಲ್ಪ ಕ್ರಮೇಣ ಕಡಿಮೆಯಾಗಿದೆ. ಆ ಮೂರು ವರ್ಷಗಳಲ್ಲಿ ಮಳೆಯೇ ಇಲ್ಲದೆ ಅಭಾವ ಇದ್ದುದರಿಂದ ಈ ರೋಗ ಜಾಸ್ತಿ ಇತ್ತು. ಈಗ ಕ್ರಮೇಣ ಸ್ವಲ್ಪ ಕಡಿಮೆಯಾಗುತ್ತಾ ಬರುತ್ತಿದೆ. ಬಹಳ ಕಡಿಮೆಯಾಗಿದೆ ಎಂದು ನಾನು ಹೇಳಲಿಲ್ಲ. ಈಗ ನನ್ನ ತೋಟಕ್ಕೆ ನಾನು ಔಷಧಿಯನ್ನೇ ಹಾಕಿಸಿಲ್ಲ. ಮಾಮೂಲಿ ನಾಟಿ ಗೊಬ್ಬರವನ್ನು ಎಲ್ಲಾ ಕೊಟ್ಟಾಗ ನೀರು ಚೆನ್ನಾಗಿ ಕೊಟ್ಟಾಗ ಸ್ವಲ್ಪ ಕಡಿಮೆಯಾಗಿದೆ. ಅದ್ದಕಾಗಿ ನಾನು ಹೆಚ್ಚಿಗೆ ಬಳಸುವುದಕ್ಕೆ ಹೋಗಲಿಲ್ಲ. ಒಟ್ಟು ಸಾವಿರ ಜನ ಫಲಾನುಭವಿಗಳಿಗೆ ಪ್ರತಿ ಹೆಕ್ಟೇರ್‌ಗೆ 17500 ರೂ. ಗಳಂತೆ ಅನುದಾನವನ್ನು ಕೊಡುವ ಕಾರ್ಯಕ್ರಮ ಸಾವಿರ ಜನ ಒಂದೇ ಕಡೆ ತೆಗೆದುಕೊಳ್ಳುವುದಿಲ್ಲ. ಚಿಕ್ಕನಾಯಕನಹಳ್ಳಿ ಮತ್ತು ಹೆಚ್ಚಿನ ಬೆಳೆ ಎಲ್ಲೆಲ್ಲಿ ಇದೆಯೋ ಅಂತಹ ಕಡೆ ಒಂದೊಂದು ತಾಲ್ಲೂಕುಗಳಿಗೆ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿ ಯಾವ ರೀತಿ ಕೊಡಬೇಕು ಎನ್ನುವುದನ್ನು ಮಾಡಿದ್ದೇವೆ ಬೇವಿನಹಿಂಡಿ ಪ್ರತಿ ಮರಕ್ಕೆ ಎರಡು ಕೆಜಿ ಬರ್ನಿಂಗ್ ವರ್ಮಿಕಾಂಪೋಸ್ಟ್ ಗೊಬ್ಬರ ಕೊಡತಕ್ಕಂಥದ್ದಕ್ಕೆ ಈ ಒಂದು ಡೆಮಾಸ್ಟ್ರೇಷನ್‌ದಲ್ಲಿ ಮಾಡಬೇಕು. ಎಂದು ಬೋರ್ಡಿನವರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಇದನ್ನು ನಾವು ಮಾಡುವಂತಿಲ್ಲ. ಬೋರ್ಡಿನವರೇ ಒಂದು ಸರ್ಕುಲರ್ ಕಳುಹಿಸಿದ್ದಾರೆ. ಅದರ ಪ್ರಕಾರ ಇದು ನಮ್ಮ ರಾಜ್ಯವಲಯದ್ದು ಏನೂ ಇಲ್ಲ, ಇದನ್ನು ಕೋಕೊನಟ್ ಬೋರ್ಡಿನಿಂದ ತೆಗೆದುಕೊಳ್ಳುವುದಕ್ಕೆ ಆ ಒಂದು ವ್ಯವಸ್ಥೆ ಇದೆ. ಅದಕ್ಕಾಗಿ ಈ ಒಂದು ಯೋಜನೆಯನ್ನು ಹಾಕಿಕೊಂಡಿರುತ್ತೇವೆ.

ಪುನಃ ಆ ದುಡ್ಡು ಎಲ್ಲಿಂದ ಬಂತು ಎನ್ನುವುದಕ್ಕೆ ಇವತ್ತು ಹೇಳುತ್ತೇನೆ. ಕೇಂದ್ರ ಸರ್ಕಾರದಲ್ಲಿ ಒಂದು ಯೋಜನೆ ಇದೆ, ಹಿಂದೆ ಇದನ್ನು ಎಲ್ಲಾ ಬಿಟ್ಟು ಬಿಟ್ಟಿದ್ದರು. 21 ಕೋಟಿ ರೂ.ಗಳು ಇತ್ತು. ಅಧಿಕಾರಿಗಳಿಗೊಂದಿಗೆ ಆ ದುಡ್ಡು ಎಲ್ಲಿದೆ ಎಂದು ಹುಡುಕಿದೆ, ಇದು ಮಂಜೂರಾತಿಯಾಗಿ ಇಂಪ್ಲಿಮೆಂಟ್ ಆಗಿರಲಿಲ್ಲ. ಲಾಸ್ಟ್ ಇಯರ್ ಇದನ್ನು ಯಾರು ನೋಡಿಯೇ ಇರಲಿಲ್ಲ. ಆ ಹಣವನ್ನು ತೆಗೆದುಕೊಂಡು 7 ಕೋಟಿ ರೂ. ಜೊತೆಗೆ ಈ 21 ಕೋಟಿ ರೂ.ಗಳ ಹಣದಲ್ಲಿ ಗಿಡಗಳನ್ನು ಕೊಡತಕ್ಕಂಥದ್ದು ಈ ಡ್ರಿಪ್ ಬಿಟ್ಟರೆ ಬೇರೆ ವ್ಯವಸ್ಥೆ ಏನು ಅಂದರೆ 40 ಲಕ್ಷ ಗಿಡಗಳನ್ನು ವಿತರಣೆ ಮಾಡತಕ್ಕಂಥದ್ದು; ಈ 21 ಕೋಟಿ ರೂ. ಗಳಲ್ಲಿ ಈ ಒಂದು ಯೋಜನೆಯನ್ನು ಹಾಕಿಕೊಂಡು ಮಾಡುತ್ತಿದ್ದೇವೆ. ಆ ಒಂದೇ ಯೋಜನೆ ಅಲ್ಲ, ಸುಮಾರು 12 ಕೋಟಿ ರೂ.ಗಳಿಂದ 21 ಕೋಟಿ ರೂ.ಗಳ ವರೆಗೆ ಗಿಡಗಳನ್ನು ಕೊಟ್ಟು ಇದರಲ್ಲಿ ಇನ್ನೂ ಅನೇಕ ಸ್ಕೀಂಗಳನ್ನು ತೆಗೆದುಕೊಂಡು ಯಾವ ರೀತಿ ಮಾಡಬೇಕೆಂಬುದನ್ನು ಹೇಳುತ್ತೇನೆ. ಬೆಳೆ ವಿಸ್ತರಣೆಯಾಯಿತು. ಔಷಧಿ ಹಾಗೂ ಸುಗಂಧದ್ರವ್ಯ ಸಸಿಗಳಿಗೆ ಕೊಟ್ಟಿದ್ದು ಅದು ಎಲ್ಲಾ ಬೇಡ ಸಾವಯವ ಗೊಬ್ಬರ, ಇದರ ಬಗ್ಗೆ ಟ್ರೈನಿಂಗ್ ಹೇಗೆ ಕೊಡಬೇಕು. ಇದರ ಬಗ್ಗೆ ಡೆಮಾನ್‌ಸ್ಟ್ರೇಷನ್ ಕ್ಲಾಸ್ ಹೇಗೆ ತೆಗೆದುಕೊಳ್ಳಬೇಕು, ಸಹಾಯಧನ ಹೇಗೆ ಬಿಡಬೇಕೆಂಬ ಉದ್ದೇಶದಿಂದ ಎರೆಹುಳು ಗೊಬ್ಬರ, ವರ್ಮಿಕಾಂಪೋಸ್ಟ್‌ಗೆ 3 ಲಕ್ಷ ರೂಪಾಯಿಗಳು ಪ್ರತಿ ಹೆಕ್ಟೇರ್‌ಗೆ 2500 ರೂಪಾಯಿಗಳಂತೆ 60 ರಿಂದ 120 ಯೂನಿಟ್‌ಗಳು ಒಬ್ಬ ರೈತನಿಗೆ 2 ಹೆಕ್ಟೇರ್‌ವರೆಗೆ ಕೊಡಬೇಕು. ಸಹಾಯಧನ ಕೊಡುವ ಬಗ್ಗೆ 2500 ರೂಪಾಯಿಗಳ ಪ್ರಕಾರ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿ ಸಾವಯವ ಗೊಬ್ಬರದಿಂದ ಬೆಳೆದಿರುವ ಬೆಳೆಗೆ ದೃಢೀಕರಣ ಬೇಕು. ಇದು ಏನಾಗಿದೆ ಎಂದರೆ ಈ ಗೊಬ್ಬರದಿಂದ ನಾವು ಬೆಳೆಯನ್ನು ಬೆಳೆಯುತ್ತೇವೆ, ಇದಕ್ಕೆ ಒಂದು ಸರ್ಟಿಫಿಕೇಟ್ ಬೇಕು. ಇದೆಲ್ಲವನ್ನೂ ಗ್ರೂಪ್ಸ್‌ಗೆ ಕೊಡುವುದು, ಒಂದೊಂದು ಗ್ರೂಪ್ಸ್‌ಗೆ ಇಂತಿಷ್ಟು ಎಂದು ಕೊಡುವುದು. ಆ ರೀತಿಯಾಗಿ ಗ್ರೂಪ್ಸ್‌ಗೆ ಕೊಟ್ಟಾಗ ಆ ಒಂದು ಬೆಳೆಯನ್ನು ಬೆಳೆಯುತ್ತಾರೆ. ಅದಕ್ಕೆ ಸರ್ಟಿಫೈ ಆದರೆ ಶೇಕಡ 25 ರಿಂದ 30 ಪರ್ಸೆಂಟ್ ಬೆಲೆ ಜಾಸ್ತಿಯಾಗುತ್ತದೆ. ಇನಾರ್ಗ್ಯಾನಿಕ್ ಮೇಲೆ ಬೆಳೆಯತಕ್ಕಂತಹ ಒಂದು ಬೆಳೆಗೂ ಆರ್ಗ್ಯಾನಿಕ್ ಆಗಿರುವಂತಹ ಬೆಳೆಗೂ ಕೂಡ ಈಗ ರೇಟ್ ಜಾಸ್ತಿ ಇದೆ. ನಾವು 'ಬರಬರುತ್ತಾ ಹಿಂದಿನ ಪದ್ಧತಿಗೆ ಬಂದಿದ್ದೇವೆ. ನಾವು ನಮ್ಮ ತಾತನ ಕಾಲದ ಪದ್ಧತಿಗೆ ಬರುತ್ತಿದ್ದೇವೆ. ನಾವು ಚಿಕ್ಕ ಹುಡುಗರಾಗಿದ್ದಾಗ ರೋಗ ಬಂದರೆ ಕೆರೋಸಿನ್ ಬಟ್ಟೆಯಲ್ಲವನ್ನೂ ಹಾಕಿಬಿಟ್ಟು ನೀರು ಹೋಗುವಂತಹ ಮಡುವಿನಲ್ಲಿ ಇಡುತ್ತಿದ್ದರು. ಅವರಿಗೆ ಗೊಬ್ಬರವೇ ಗೊತ್ತಿರಲಿಲ್ಲ. ಆಗ ನಾನು ಚಿಕ್ಕ ಹುಡುಗನಾಗಿದ್ದಾಗ ಮನೆಯಲ್ಲಿ ಸಲ್ಫೇಟ್‌ನ್ನು ತಂದು ಇಟ್ಟಿದ್ದರು. ಪಾಪ ಅಷ್ಟನ್ನು ಜನ ತಿಂದುಹಾಕಿಬಿಟ್ಟಿದ್ದರು. ಅದನ್ನು ತಿಂದ ಮೇಲೆ ಅದು ಹುಳಿ ಎಂದು ಗೊತ್ತಾಯಿತು. ಅದು ಒಳ್ಳೆಯ ಸಕ್ಕರೆ ಇದ್ದಹಾಗೆ ಇದೆ ಎಂದು ನಂತರ

ಗೊತ್ತಾಯಿತು. ಈ ಒಂದು ಇನಾರ್ಗ್ಯಾನಿಕ್ ಕೆಮಿಕಲ್ ಫರ್ಟಿಲೈಜರ್ಸ್ ಉಪಯೋಗಿಸುವುದರಿಂದ ಇವತ್ತು 30 ವರ್ಷಕ್ಕೆ ಹೃದಯರೋಗ ಬರುತ್ತಿದೆ. ಬಿ.ಪಿ.ಗಳು ಹಾಗೂ ಶುಗರ್‌ಗಳು ಬರುತ್ತಿವೆ. ಇವು ಎಲ್ಲಿಂದ ಬರುತ್ತದೆ ಎಂದರೆ ಇಲ್ಲಿ ಬೀಜವನ್ನು ನೆಟ್ಟ ತಕ್ಷಣ ಅಲ್ಲಿಂದ ಶುರುವಾಗುತ್ತದೆ ನಮ್ಮ ಕ್ರಿಮಿನಾಶಕ ಟ್ರೀಟ್‌ಮೆಂಟ್ ಅಲ್ಲಿಂದ ಶುರುವಾದರೆ ಬೆಳೆ ಹಾರ್ವೆಸ್ಟ್ ಮಾತುತ್ತೇವೆ ನೋಡಿ ಅಲ್ಲಿಯವರೆಗೂ ಇದು ಹೋಗುತ್ತದೆ. ಈ ಟೋಮ್ಯಾಟೋ ಅಂತೂ ಬೇಡ ಅನ್ನಿಸುತ್ತದೆ.

ಯಾವ ತರಕಾರಿ ಬೆಳೆಗೂ ಕೂಡ ಶೇಕಡ 60 ಪರ್ಸೆಂಟ್ ನೀರಿಗಿಂತ ಕ್ರಿಮಿನಾಶಕ ಗೊಬ್ಬರ ಇದ್ದೇ ಇರುತ್ತದೆ. ಇವತ್ತಿನ ಬೀಜಗಳಿಗೆ ಡೀಸಿಸ್ ಬರದೇ ಎಲ್ಲಿ ಹೋಗುತ್ತದೆ? ಹಿಂದೆ 80 ವರ್ಷಕ್ಕೂ 39 ವರ್ಷಕ್ಕೂ ಬೀಜದ ಬಗ್ಗೆ ಹೇಳಿದರೆ.......

ಶ್ರೀ ಜೆ.ಸಿ. ಮಾಧುಸ್ವಾಮಿ :– ಯಾರಾದರೂ ಇದನ್ನು ತಿನ್ನುತ್ತಾರಾ? ಇವೆಲ್ಲಾ ರಿಪೋರ್ಟ್ ಆಗಿ ಪೇಪರ್‌ನಲ್ಲಿ ಬಂದರೆ ಟೋಮ್ಯಾಟೋ ಆಲೂಗಡ್ಡೆ ತಿನ್ನುವವರನ್ನು ನಾವು ಹುಡುಕಬೇಕಾಗುತ್ತದೆ. ಮಂತ್ರಿಗಳು ಹೀಗೆ ಹೇಳಿಬಿಟ್ಟರೆ.

ಶ್ರೀ ಆರ್. ಶ್ರೀನಿವಾಸ :– ನಾನು ವಾಸ್ತವಾಂಶವನ್ನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :– ಅವರು ವಾಸ್ತವಾಂಶವನ್ನು ಹೇಳುತ್ತಿದ್ದಾರೆ. ಅದು ಕರೆಕ್ಟ್ ಆಗಿ ಹೇಳುತ್ತಿದ್ದಾರೆ. ತರಕಾರಿ ಇರಬಹುದು, ಹಣ್ಣು ಇರಬಹುದು ಈಗ ನಾವು ಮಾವಿನ ಹಣ್ಣನ್ನು ತೆಗೆದುಕೊಂಡು ಬಂದು ಏನು ಮಾಡುತ್ತೇವೆ ಅವೆಲ್ಲವನ್ನು ಕರೆಕ್ಟ್ ಆಗಿ ಹೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಬೇರೆಯವರ ಗತಿ ಏನು ಸಾರ್ ನಾಳೆ?

ಮಾನ್ಯ ಸದಸ್ಯರು :– ಸನ್ಮಾನ್ಯ ಸಚಿವರು ಹೇಳುತ್ತಿರುವುದು ಸರಿಯಾಗಿದೆ.

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರ ಕೊಡುವವರೆಗೆ ತಾವುಗಳು ಬಿಡಿ.

ಮಾನ್ಯ ಸದಸ್ಯರು :– ಕೀಟನಾಶಕ ರಸಾಯನಿಕ ಗೊಬ್ಬರಗಳನ್ನು ಉಪಯೋಗಿಸದೇ ಬೆಳೆಯತಕ್ಕಂತಹ ತೋಟಗಾರಿಕಾ ಬೆಳೆಗಳು ಯಾವುದು ಇದೆ ಎಂದು ಹೇಳಿ ನೋಡೋಣ.

(ಗೊಂದಲ)

ಅವರು ಹೇಳುವುದು ಸರಿಯಾಗಿದೆ. ಅದರಿಂದ ನಾವು ಸಾವಯವ ಗೊಬ್ಬರದ ಕಡೆಗೆ ಹೋಗಬೇಕಾಗುತ್ತದೆ. ಇದರಿಂದ ನಾವುಗಳು ಪರಿವರ್ತನೆಯಾಗಬೇಕು. ಇವತ್ತು ನಾವು ಕ್ರಿಮಿನಾಶಕ ಗೊಬ್ಬರಗಳಿಲ್ಲದೆ, ರಾಸಾಯನಿಕ ಗೊಬ್ಬರಗಳನ್ನು ಬೆಳೆಯನ್ನು ಬೆಳೆಯುವುದಕ್ಕಾಗುತ್ತದೆಯೇ?

ಶ್ರೀ ಆರ್. ಶ್ರೀನಿವಾಸ :- ನಾವು ಒಂದು ಎಕರೆಗೆ 40 ರಿಂದ 50 ಟನ್ ಟೋಮ್ಯಾಟೋ ಬೆಳೆ ಬೆಳೆಯುತ್ತಿದ್ದೇವೆ. ನಾಟಿಗೊಬ್ಬರ ಹಾಕಿದರೆ ಅರ್ಧದಷ್ಟು ಬೆಳೆಯುವುದಿಲ್ಲ. ಇವತ್ತು ನಾವು ಬದುವಿನಲ್ಲಿ ಓಡಾಡುತ್ತಿರುತ್ತೇವೆ ನಾಟಿ ಗೊಬ್ಬರವನ್ನು ಹಾಕದಿದ್ದರೆ ನಮ್ಮ ಕಣ್ಣಿಗೆ ಅದು ಕೆಂಪಗೆ ಕಾಣುತ್ತದೆ. ಮಾರನೆಯ ದಿವಸ ಯೂರಿಯಾ ಸ್ವಲ್ಪ ಚೆಲ್ಲಿಬಿಡಲಿ ಒಂದು ತರಹ ಹಸಿರಾಗಿ ಕಾಣುತ್ತದೆ ಏಕೆಂದರೆ ಕಣ್ಣು ಹಾಗೆ ಆಗಿಬಿಟ್ಟಿದೆ. ಸೊಸೈಟಿ ಆ ರೀತಿ ಪರಿವರ್ತನೆಯಾಗಿಬಿಟ್ಟಿದೆ. ಅದನ್ನು ಸ್ವಲ್ಪ ತಪ್ಪಿಸುವ ಬಗ್ಗೆ ಈ ಇಳುವರಿಯ ಬಗ್ಗೆ ಗುಣಮಟ್ಟವನ್ನು ಬೆಳೆಸುವ ಬಗ್ಗೆ ಹಾಗೂ ಆರೋಗ್ಯದ ದೃಷ್ಟಿಯಿಂದ ಸರ್ಕಾರ ಇದನ್ನು ಟ್ರಯಲ್ ಬೇಸಿಸ್ ಪ್ರಕಾರ ಅದಕ್ಕೆಲ್ಲಾ ಗಮನ ಕೊಡುವ ಬಗ್ಗೆ ಕ್ರಮತೆಗೆದುಕೊಳ್ಳಬೇಕು. ಯಾವ ರೀತಿಯಾಗಿ ಎರೆಹುಳು ಗೊಬ್ಬರವನ್ನು ತಯಾರು ಮಾಡಬೇಕು, ಅದಕ್ಕೆ ಸಹಾಯಧನ ಕೊಡುವುದು ಮತ್ತು ಕೆಲವರನ್ನು ಟ್ರಯಲ್ ಬೇಸಿಸ್ ಮೇಲೆ ಆಯ್ಕೆ ಮಾಡಿಕೊಂಡು ತಾನು ಬೆಳೆಯುತ್ತಿರುವಂತಹ ವೇಸ್ಟ ಮಟೇರಿಯಲ್ಸ್ ಇವೆ ಅದರಿಂದ ಉತ್ಪತ್ತಿಯಾಗುವ ಗೊಬ್ಬರದಿಂದಾಗಿ ರೈತನಿಗೆ ಖರ್ಚು ಕಡಿಮೆಯಾಗುತ್ತದೆ. ಇವತ್ತು ಡಿಎಪಿ ಗೆ 450 ರೂಪಾಯಿಗಳ ಬೆಲೆ ಇದೆ. 270 ರೂಪಾಯಿಗಳು ಯೂರಿಯಾಕ್ಕೆ ಇವತ್ತು ನಾನು ಹುಳುಮಾವಿಗೆ ಹೋದಾಗ ನೋಡಿದ್ದೇವೆ ತಾವು ಎಲ್ಲರೂ ಕೂಡ ಅಲ್ಲಿಗೆ ಬಂದು ಒಂದು ಸಾರಿ ವಿಸಿಟ್ ಕೊಡಿ ಎಲ್ಲರನ್ನೂ ಹೇಳುತ್ತೇನೆ. ಅಲ್ಲಿ 40 ಎಕರೆ ತೋಟವಿದೆ. ತಾವೆಲ್ಲರೂ ಕೂಡ ತೋಟವನ್ನು ಇಟ್ಟುಕೊಂಡಿದ್ದೀರಿ, ಅಲ್ಲಿ ಒಂದು ರೂಪಾಯಿಯನ್ನೂ ಕೂಡ ಖರ್ಚು ಮಾಡಿರುವುದಿಲ್ಲ. ಅದನ್ನು ನಾನು ನಂಬಲಿಲ್ಲ. ಹುಳುಮಾವು ಬಯೋಟೆಕ್ನಾಲಜಿಯಲ್ಲಿ ಈ ಒಂದು ಕೆಮಿಕಲ್ ಫರ್ಟಿಲೈಕರ್ಸ್‌ಗೆ ಒಂದು ರೂಪಾಯಿ ಖರ್ಚು ಮಾಡಿರುವುದಿಲ್ಲ. ನಾನು ಅಲ್ಲಿಗೆ ಇನ್ಸ್‌ಪೆಕ್ಷನ್ ಹೋದೆ, ತೆಗೆದುಕೊಂಡು ಲೆಡ್ಜರ್‌ನ್ನು ನೋಡಿದಾಗ ಯಾರನ್ನೂ ತೆಗೆದುಕೊಂಡಿರುವುದಿಲ್ಲ. ಕಾರಣ ಏನು ಅಲ್ಲಿ? ಅಲ್ಲಿ ಅಧಿಕಾರಿಗಳನ್ನು ಕೇಳಿದಾಗ ಇಲ್ಲಾ, ನಾವು ಏನು ಯೂಸ್ ಮಾಡುವುದಿಲ್ಲ ಈ ಪಂಚಗವಿ ಎಂದು ಏನು ಹೇಳುತ್ತಾರೆ, ಇದನ್ನು ಗಂಜಲದಲ್ಲಿ ಉತ್ಪತ್ತಿ ಮಾಡಿ ಸ್ಪ್ರೇ ಮಾಡುತ್ತಾರೆ ಈ ಒಂದು ಗೊಬ್ಬರವನ್ನು ಅಲ್ಲಿ ತಯಾರು ಮಾಡುತ್ತಾರೆ. ಅದನ್ನು ಹಾಕುತ್ತಾರೆ. ಏನು ಖರ್ಚು ಆಗುವುದಿಲ್ಲವಂತೆ ಆ ಒಂದು ವ್ಯವಸ್ಥೆಗಾಗಿ ಹಾಕುವುದಕ್ಕೆ ಈ ಒಂದು ಡೆಮಾನ್‌ಸ್ಟ್ರೇಷನ್ ಪ್ಲಾಟ್ ಮಾಡುವುದಕ್ಕೆ ಇವತ್ತು ಆಧುನಿಕವಾಗಿ ಖರ್ಚು ಮಾಡುವುದಕ್ಕೆ ಹಣವನ್ನು ಮೈಕ್ರೋ ಮಾಡರ್ನ್ ಮಾಡತಕ್ಕಂತಹ ಒಂದು ಯೋಜನೆಯನ್ನು ಮಾಡಿದ್ದೇವೆ. ಮಾರುಕಟ್ಟೆಯ ಬಗ್ಗೆ ಗೌರವಾನ್ವಿತ ಸದಸ್ಯರು ಹೇಳಿರುವುದು ನಿಜ. ಇವತ್ತು ರೈತ ಮಾರುಕಟ್ಟೆಯ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದಾನೆ. ಇವತ್ತು ಅಡಿಕೆ ಬೆಲೆ ಕಡಿಮೆಯಾಯಿತು. 10 ಕೋಟಿ ರೂಪಾಯಿಗಳ ಸಪೋರ್ಟ್ ಪ್ರೈಸ್ ಕೊಟ್ಟಿದ್ದೇವೆ.

ಟೋಮ್ಯಾಟೋ ಬೆಲೆ ಕಡಿಮೆಯಾಯಿತು. ಅದಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು :– ಮಾನ್ಯ ಸಚಿವರೆ ಇದರ ಬಗ್ಗೆ ತಾವು ಸಂಕ್ಷಿಪ್ತವಾಗಿ ಹೇಳಬೇಕು. ಇನ್ನೂ ಮೂರು ಮಂತ್ರಿಗಳು ಮಾತನಾಡುವವರು ಇದ್ದಾರೆ.

ಶ್ರೀ ಆರ್. ಶ್ರೀನಿವಾಸ್ :– ಇದು ರೈತರಿಗೆ ಶಾಶ್ವತವಾದಂತಹ ಪರಿಹಾರವಲ್ಲ. ಇದು ತಾತ್ಕಾಲಿಕವಾದ ಪರಿಹಾರವಾಗಿದೆ. ಅವರಿಗೆ ಏನಾದರೂ ತಲೆ ತಿರುಗಿದಾಗ ಗ್ಲೂಕೋಸ್ ಕೊಡುವುದು ಅಷ್ಟೆ. ಅವನು ತನ್ನ ಕಾಲ ಮೇಲೆ ನಿಂತುಕೊಳ್ಳಬೇಕಾದರೆ ಇದಕ್ಕೆ ಬೈ ಪ್ರಾಡಕ್ಟ್ಸ್ ಬೇಕು. ಪ್ರೋಸೆಸಿಂಗ್ ಯೂನಿಟ್ಸ್ ಬೇಕು, ಎಲ್ಲೆಲ್ಲಿ ಹೆಚ್ಚಿನ ಉತ್ಪತ್ತಿಯಾಗಿದೆ ಎಂಬುದನ್ನು ಹುಡುಕಬೇಕು ಯಾವ ಮಾರ್ಕೆಟ್‌ನಲ್ಲಿ ಹೆಚ್ಚಿನ ಬೆಲೆ ಇದೆಯೋ ಅಲ್ಲಿಗೆ ಸಾಗಾಣಿಕೆ ಮಾಡುವುದಕ್ಕೆ ಟ್ರಾನ್ಸ್‌ಪೋರ್ಟ್ ಫೆಸಲಿಟೀಸ್ ಕೊಡಬೇಕು. ಈವತ್ತೂ ಟ್ರಾನ್ಸ್‌ಪೋರ್ಟ್ ಫೆಸಲಿಟೀಸ್ ಏನಿದೆ? ಕಸ ತುಂಬಿದ ಹಾಗೆ ತುಂಬಿ ಕಳುಹಿಸಿದರೆ ದೆಹಲಿಯಲ್ಲಿರುವ ಜನರು ತೆಗೆದುಕೊಳ್ಳುತ್ತಾರೆಯೇ? ಅವರಿಗೆ ತೆಗೆದುಕೊಳ್ಳುವುದಕ್ಕೆ ಏನು ಗ್ರಹಚಾರ? ಅಲ್ಲಿರುವವರು ಬೆಲೆ ಜಾಸ್ತಿಯಾದರೂ ಪರವಾಗಿಲ್ಲ ಹಣ ಜಾಸ್ತಿಯಾದರೂ ಪರವಾಗಿಲ್ಲ ಶುದ್ಧವಾದಂತಹ ಫ್ರೆಷ್ ತರಕಾರಿ ಬೇಕೆಂಬ ಸಂಗತಿ ಇರುವಾಗ ಈ ವ್ಯವಸ್ಥೆಯ ಬಗ್ಗೆ ನಾವು ಏನೂ ಮಾಡಿಲ್ಲ. ನಾವು ಲಾರಿಗಳಲ್ಲಿ ತರಕಾರಿಯನ್ನು ಬುಟ್ಟಿಯಲ್ಲಿ ತುಂಬಿ ಕಳುಹಿಸಿಕೊಡುತ್ತೇವೆ. ಇದಕ್ಕೆ ರೆಫ್ರಿಜರೇಟರ್ ವ್ಯಾನ್ಸ್ ಎಂದು ಮಾಡುವ ಬಗ್ಗೆ ಒಂದು ಚಿಂತನೆ ಇದೆ. ಇದನ್ನೆಲ್ಲಾ ಸರ್ಕಾರ ಮಾಡುತ್ತದೆ ಎಂದು ಹೇಳುವುದಿಲ್ಲ. ಇದಕ್ಕೆ ಖಾಸಗಿಯವರು ಇನ್‌ವಾಲ್ವ್‌ಮೆಂಟ್ ಕೂಡ ಬೇಕಾಗುತ್ತದೆ. ಹಾಪ್‌ಕಾಮ್ಸ್ ಅನ್ನು ಸ್ಟ್ರೇಂಥನ್ ಮಾಡುವುದಕ್ಕೆ ಸುಮಾರು 100 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಈ ವ್ಯವಸ್ಥೆಯನ್ನು ಮಾಡುವುದಕ್ಕೆ ಕಳುಹಿಸಿದ್ದೇವೆ. ಬೆಂಗಳೂರು ಸುತ್ತಮುತ್ತ ಇರುವಂತಹ ತರಕಾರಿಯನ್ನು ಅಷ್ಟೇ ನಮ್ಮ ಜನ ಕೊಡುತ್ತಾರೆಯೇ ಹೊರತು ಹಳ್ಳಿಯಲ್ಲಿರುವ ಒಬ್ಬರೂ ತರಕಾರಿಯನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. 3–4 ಕ್ವಿಂಟಾಲ್ ಆದರೆ ಜಾಸ್ತಿ ಎಂದು ಹೇಳುತ್ತಾರೆ. 2 ಕ್ವಿಂಟಾಲ್ ಆದರೆ ಕಡಿಮೆ ಎಂದು ಹೇಳುತ್ತಾರೆ. ಇದು ನನ್ನ ಅನುಭವವಾಗಿದೆ. ನಾನು ಎಷ್ಟೋ ಸಾರಿ 5 ಕ್ವಿಂಟಾಲ್ ಸಪೋಟ ಕಳುಹಿಸಿದಾಗ ಅದರಲ್ಲಿ 3 ಕ್ವಿಂಟಾಲ್ ತೆಗೆದುಕೊಂಡರೆ 2 ಕ್ವಿಂಟಾಲ್ ಸಪೋಟ ಮಾರುಕಟ್ಟೆಗೆ ಕಳುಹಿಸುತ್ತಾರೆ. ಈ ವ್ಯವಸ್ಥೆಯನ್ನು ತಪ್ಪಿಸುವುದಕ್ಕೆ ಇದನ್ನು ಸ್ಟ್ರೇಂಥನ್ ಮಾಡುವುದಕ್ಕೆ 100 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಇದರ ಬಗ್ಗೆ ಅನುಮತಿ ಪಡೆದ ಮೇಲೆ ಅದನ್ನು ಯಾವ ರೀತಿಯಾಗಿ ಸಂಗ್ರಹಣೆ ಮಾಡಬೇಕು, ಸಂಗ್ರಹಣೆ ಮಾಡುವುದು ತರಕಾರಿಯಾಗಬಹುದು,

ಹಣ್ಣಾಗಬಹುದು, ಇದನ್ನು ಯಾವ ಯಾವ ಭಾಗಕ್ಕೆ ಕಳುಹಿಸಿದರೆ ಅನುಕೂಲವಾಗುತ್ತದೆ; ಎಂಬ ಉದ್ದೇಶದಿಂದ ಇದನ್ನು ತೆಗೆದುಕೊಳ್ಳುತ್ತಿದ್ದೇವೆ. ಇವತ್ತು ಬಿಜಾಪುರದಲ್ಲಿ ಆಗಬಹುದು, ನಿಮ್ಮ ವೈನ್ ಪಾಲಿಸಿ ಎಲ್ಲಿದೆ? ಇವತ್ತು ಮಹಾರಾಷ್ಟ್ರದಲ್ಲಿ ಎಕ್ಸೈಜ್ ಡ್ಯೂಟಿಯಿಂದ ವಿನಾಯತಿ ಕೊಟ್ಟಿದ್ದಾರೆ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ಪಾಲಿಸಿಯನ್ನು ಮಾಡಿಫೈ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೂ ಕೂಡ ಮಾಡುತ್ತಿದ್ದೇವೆ. ವೈನ್ ಪಾಲಿಸಿಯ ಬಗ್ಗೆ ಬಿಜಾಪುರಕ್ಕೆ ಹೋದಾಗ ಹೇಳಿದ್ದೇನೆ. ನಾನು ಮಾನ್ಯ ಸಭಾಧ್ಯಕ್ಷರ ಮುಖೇನ ಮಾನ್ಯ ಮಾಧುಸ್ವಾಮಿಯವರ ಹಾಗೂ ನಮ್ಮ ಹಿರಿಯ ಸದಸ್ಯ ಮಿತ್ರರ ಗಮನಕ್ಕೆ ತರಬಯಸುವುದೇನೆಂದರೆ ಇವೆಲ್ಲಾ ನಾವು ಉತ್ಪತ್ತಿ ಮಾಡಿದಾಗ ಕನ್‌ಸಮಷನ್ ಜಾಸ್ತಿಯಾದರೆ ಏನಾಗುತ್ತದೆ ಎಂಬುವುದನ್ನು ಹೇಳಬಯಸುತ್ತೇನೆ. ಮಾನ್ಯ ಶಿವಾನಂದ ಪಾಟೀಲ್‌ರವರೆ, ಇದರಿಂದ ತಮಗೂ ಅನುಕೂಲ ಆಗುತ್ತದೆ. ಏನಾಗುತ್ತದೆ ಎಂದರೆ ಮಾರುಕಟ್ಟೆ ಜಾಸ್ತಿಯಾದರೆ ರೈತರಿಗೆ ಸೂಕ್ತವಾದಂತಹ ನಿಗದಿಯಾದಂತಹ ಬೆಲೆ ಬರುತ್ತದೆ. ಈ ವ್ಯವಸ್ಥೆಯನ್ನು ನಾಳೆ ಮಾಡುತ್ತೇವಪ್ಪಾ ಅನ್ನದೇ ಇದನ್ನು ಕ್ರಮಕ್ರಮೇಣವಾಗಿ ತೆಗೆದುಕೊಳ್ಳಬೇಕು. ಇದರ ಬಗ್ಗೆ ಇಂಟರ್‌ನೆಟ್ ಸಿಸ್ಟಮ್‌ನ್ನು ಮಾಡಬೇಕು. ಎಲ್ಲಿ ಯಾವ ಮಾರ್ಕೆಟ್ ಕಡಿಮೆ ಇದೆ? ಬೆಳಿಗ್ಗೆ ಎದ್ದ ತಕ್ಷಣ ಅವನು ಏನೂ ಇಲ್ಲ ಸಾಯಂಕಾಲ ತೆಗೆದುಕೊಳ್ಳಬೇಕು. ಯಾವ ಮಾರ್ಕೆಟ್‌ನಲ್ಲಿ ಬೆಲೆ ಕಡಿಮೆ ಇದೆ, ಇವೆಲ್ಲಾ ಇನ್‌ಫರ್‌ಮೇಷನ್ ಇರುವಂತಹ ಟೆಕ್ನಾಲಜಿ ಬರಬೇಕು. ಅದರ ಬಗ್ಗೆ ಗಮನವೇ ಇಲ್ಲ, ನಾವು ಐ.ಟಿ ಮತ್ತು ಬಿ.ಟಿಯ ಬಗ್ಗೆ ನೋಡುತ್ತೇವೆಯೇ ಹೊರತು ರೈತನ ಬಗ್ಗೆ ನೋಡುವಂತಹ ಚಿಂತನೆಯಿಲ್ಲ. ಇದರ ಬಗ್ಗೆ ನಾವು ಚಿಂತನೆ ಮಾಡಬೇಕು.

ಶ್ರೀ ಶಿವಾನಂದ ಪಾಟೀಲ್ :- ಇವರ ಬೇಡಿಕೆಯನ್ನು ಬೇಗ ಮುಗಿಸಿಬಿಡಿ. ಅವರ ಡಿಮ್ಯಾಂಡ್ ಪಾಸು ಮಾಡಿಕೊಡೋಣ.

ಶ್ರೀ ಆರ್. ಶ್ರೀನಿವಾಸ್ :- ಈ ಒಂದು ವ್ಯವಸ್ಥೆಯಲ್ಲಿ ಹಾಪ್‌ಕಾಮ್ಸ್‌ನ್ನು ಸ್ಟ್ರೆಂಥನ್ ಮಾಡಿ ಇದನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಬಿಜಾಪುರದಲ್ಲಿ ಕೊಡತಕ್ಕಂಥ ಕೋಲ್ಡ್ ಸ್ಟೋರೇಜ್ ಬಹಳ ಚೆನ್ನಾಗಿತ್ತು. ಈ ಕೋಲ್ಡ್ ಸ್ಟೋರೇಜ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಾವು ಸರ್ಕಾರದಿಂದ ಮಾಡುತ್ತೇವೆಂದರೆ, ಎಕ್ಸ್‌ಫ್ಟ್ ಬಿಜಾಪುರ, ಇನ್ನು ಎಲ್ಲಿಯೂ ಕೂಡ ಸಕ್ಸಸ್ ಆಗಿಲ್ಲ. ಇದನ್ನು ಪ್ರೈವೇಟ್‌ನವರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಅವರು ಸಹಕಾರ ಸಂಘದಿಂದ ಮಾಡಿದರೆ ಅದಕ್ಕೆ ಸಹಾಯಧನವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡೋಣ.

ಶ್ರೀ ಮಲ್ಲಿಕಾರ್ಜುನ ಸಹದೇವಪ್ಪ ಅಕ್ಕ :- ನಮ್ಮ ಕುಂದಗೋಳನಲ್ಲಿ ಕೋಲ್ಡ್‌ಸ್ಟೋರೇಜ್ ವ್ಯವಸ್ಥೆ ಮಾಡಬೇಕು.

ಶ್ರೀ ಆರ್. ಶ್ರೀನಿವಾಸ್ :– ಅದರ ಬಗ್ಗೆ ಹೇಳುತ್ತೇನೆ. ಇವೆಲ್ಲವೂ ಆದಮೇಲೆ ಮೊಟ್ಟ ಮೊದಲನೆಯದಾಗಿ ಕರ್ನಾಟಕ ರಾಜ್ಯದಲ್ಲಿ ನ್ಯಾಷನಲ್ ಹಾರ್ಟಿಕಲ್ಚರ್ ಮಿಷನ್ ಇದನ್ನು ಪ್ರಪ್ರಥಮವಾಗಿ ತಂದಿದ್ದೇನೆ. ನಿನ್ನೆ ರಿಜಿಸ್ಟರ್ ಮಾಡಿದ್ದೇವೆ. ಇದರ ಬಗ್ಗೆ ಸಂಪುಟ ಸಭೆಯಲ್ಲಿ ಹೋದ ಸಾರಿ ಇದು ಆಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಸಚಿವರು ಸರ್ಕಾರದ ಕಾರ್ಯಕ್ರಮಗಳು ಏನು ಎಂದು ಹೇಳಿಬಿಡಿ. ತೊಂದರೆಯಿಲ್ಲ.

ಶ್ರೀ ಆರ್. ಶ್ರೀನಿವಾಸ್ :– ಇವೆಲ್ಲಾ ಕಾರ್ಯಕ್ರಮಗಳು ಕೇಂದ್ರಸರ್ಕಾರದ್ದು ಇದು ನನ್ನದೇ? ಕೇಂದ್ರಸರ್ಕಾರದ ಅಡಿಯಲ್ಲಿ ಕೂಡ ಅಲ್ಲಿ ಹೋರಾಟ ಮಾಡಿ ತಂದಿರತಕ್ಕಂತಹ ವ್ಯವಸ್ಥೆ ಮಾಡಿ ಪ್ರಾರಂಭ ಮಾಡಿದ್ದೇವೆಂದು ಹೇಳುತ್ತಿದ್ದೇನೆ, ನಾನು ತಂದಿದ್ದೇನೆ ಎಂದರೆ ಇದು ಕೇಂದ್ರ ಸರ್ಕಾರದ್ದು.... ಇಷ್ಟು ದಿವಸ ಏತಕ್ಕಾಗಿ ಮಾಡಲಿಲ್ಲ ? ಇಷ್ಟು ದಿವಸ ಏತಕ್ಕಾಗಿ ಕ್ರಿಟಿಸೈಜ್ ಮಾಡಲಿಲ್ಲ? ನೋ, ನೋ, ಈಗ ಏತಕ್ಕೆ ಮಾಡಿದ್ದೀರಿ ನೀವು ಆವಾಗ ಏತಕ್ಕಾಗಿ ಮಾಡಲಿಲ್ಲ......

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಅದಕ್ಕೆ ಅನುಮತಿ ಸಿಕ್ಕಿರಲಿಲ್ಲ.

ಶ್ರೀ ಆರ್. ಶ್ರೀನಿವಾಸ್ :– ಇದರಿಂದಾಗಿ ಅನೇಕ ಯೋಜನೆಗಳ ಮುಖಾಂತರ ಯಾವ ರೀತಿಯಾಗಿ ಡೆವಲಪ್‌ಮೆಂಟ್ ಮಾಡಬೇಕು, ಯಾವ ಯಾವುದಕ್ಕೆ ಮಾಡಬೇಕು ಎನ್ನುವುದರ ಸಲುವಾಗಿ ಈ ಸಾರಿ 107 ಕೋಟಿ ರೂಪಾಯಿಗಳ ಹಣ ಬಂದಿದೆ. ಇದು ಬಹುಶಃ ಮುಂದಿನ ತಿಂಗಳೂ ಚಾಲ್ತಿಗೆ ಬರುತ್ತದೆ. ಕೇಂದ್ರ ಮಂತ್ರಿಗಳಾದ ಶ್ರೀ ಶರದ ಪವಾರ್‌ರವರನ್ನು ನಾವು ಭೇಟಿ ಮಾಡಿ ಅವರಿಂದ ಅನುಮತಿ ತೆಗೆದುಕೊಳ್ಳಬೇಕೆಂದು ಇದ್ದೇವೆ. ಆ ಒಂದು ದೃಷ್ಟಿಯಿಂದ ಮಾನ್ಯ ಶರದ ಪವಾರ್‌ರವರನ್ನು ಕರೆಸಿ ಇದನ್ನು ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನೊಂದು ವಿಷಯ, ಇದನ್ನು ತಾವೆಲ್ಲರೂ ಮುಖ್ಯವಾಗಿ ಗಮನಿಸಬೇಕು. ಸನ್ಮಾನ್ಯ ಮಾಧುಸ್ವಾಮಿಯವರು ಹಾಗೂ ತಾವೆಲ್ಲರೂ ಕೂಡ ಕೆಲವು ಪಾಲಿಸಿಗಳನ್ನು ತರಬೇಕಾಗುತ್ತದೆ. ಇದರ ಬಗ್ಗೆ ತಾವುಗಳು ಬಹಳ ಮುಖ್ಯವಾಗಿ ಚಿಂತನೆಯನ್ನು ಮಾಡಬೇಕು. ಈ ನೀರಾ ಪಾಲಿಸಿ ಇದೆಯಲ್ಲಾ... ಸಾರಿ,.... ಮಂಡ್ಯದವರು ಇದ್ದಾರೆ ನೋಡಿ, ನೀರಾ ಪಾಲಿಸಿ ಇದೆ ನೋಡಿ.

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ

ಶ್ರೀ ಆರ್. ಶ್ರೀನಿವಾಸ್ :– ನೀರಾ ಪಾಲಿಸಿ ಬಂದು 3 ವರ್ಷಗಳಾಯಿತು, ಆದರೆ ಅದು ಇದುವರೆಗೂ ಅನುಷ್ಠಾನಕ್ಕೆ ಬರಲಿಲ್ಲ. ನೀರಾ ತೆಗೆದುಕೊಳ್ಳಬೇಕೆಂದು ಹೇಳಿಬಿಟ್ಟಿದ್ದೀರಿ,

ನೀರಾ 2 ಗಂಟೆಯಾದ ಮೇಲೆ ಕಳ್ಳು ಆಗುತ್ತದೆ, ನಾಶ ಆಗುತ್ತದೆ ಆಗ ನೀನು ಕಳ್ಳು ಮಾರುತ್ತಿದ್ದೀಯಾ ಎಂದು ಹೇಳುತ್ತಾರೆ. ಅಬ್ಕಾರಿ ಇಲಾಖೆಯವರು ಬಂದು ಅರೆಸ್ಟ ಮಾಡಿಕೊಂಡು ಹೋಗುತ್ತಾರೆ. ಈ ವ್ಯವಸ್ಥೆ ಏನಿದೆ, ಇದರಿಂದ ಯಾವ ರೀತಿಯಾಗಿ ರೈತನಿಗೆ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ನಾವು ನೀರಾ ಪಾಲಿಸಿಯನ್ನು ತರುತ್ತೇವೆ. ಏತಕ್ಕಾಗಿ ತೆಗೆದುಕೊಳ್ಳಬೇಕೆಂದರೆ, ಈಗಾಗಲೇ 13 ಲಕ್ಷ ರೂಪಾಯಿಗಳನ್ನು ಪಿಎಫ್‌ಟಿಆರ್‌ಐ ನಲ್ಲಿ ಸಂಶೋಧನೆ ಮಾಡುವುದಕ್ಕೆ ಖರ್ಚು ಮಾಡಿದ್ದೇವೆ. ಇದನ್ನು ಮಾಡಿ ಸುಮಾರು ತಿಂಗಳು, ವರ್ಷಗಳಾಯಿತು. ಇದನ್ನು 2 ತಿಂಗಳು ಇಡಬಹುದು, 2 ತಿಂಗಳು ನೀರಾವನ್ನು ಇಟ್ಟರೂ ಕೂಡ ಅದು ನೀರಾ ಆಗಿ ಉಳಿಯುತ್ತದೆ. ಯಾವಾಗ ನೀರಾ ಆಗಿ ಉಳಿಯುತ್ತದೆಯೋ ಅದನ್ನು ಶೇಖರಣೆ ಮಾಡಿಕೊಳ್ಳುವುದಕ್ಕೂ ಕೂಡ ಅನುಕೂಲವಾಗುತ್ತದೆ. ಆ ಒಂದು ಭಾವನೆಯಿಂದ ಈ ನೀರಾ ಪಾಲಿಸಿಯ ಬಗ್ಗೆ ನಾವೆಲ್ಲರೂ ಸೇರಿಕೊಂಡು ಒಂದು ಆ್ಯಕ್ಟ್‌ನ್ನು ತರಬೇಕಾಗುತ್ತದೆ. ಆ್ಯಕ್ಟ್‌ನ್ನು ತಂದಿಲ್ಲ, ಯಾರ್‍ಯಾರಿಂದ ಎಂದು ಹೇಳಿದರೆ ಪೊಲೀಸ್ ಇಲಾಖೆ, ಅಬ್ಕಾರಿ ಇಲಾಖೆ, ಕಂದಾಯ ಇಲಾಖೆ ಇವರೆಲ್ಲರೂ ಕೂಡ ಅನುಮತಿಯನ್ನು ಕೊಟ್ಟು ಈ ಆ್ಯಕ್ಟನ್ನು ತಂದಾಗ ನೀರಾವನ್ನು ಶೇಖರಣೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಾವು ಯಾವಾಗ ನೀರಾವನ್ನು ಶೇಖರಣೆ ಮಾಡಿ 2 ತಿಂಗಳ ಕಾಲ ಇಟ್ಟುಕೊಳ್ಳುತ್ತೇವೆಯೋ, ಆಗ ತೆಂಗಿನ ಬೆಲೆ ಜಾಸ್ತಿಯಾಗುತ್ತದೆಂಬ ಉದ್ದೇಶದಿಂದ ಈ ನೀರಾ ಪಾಲಿಸಿಯನ್ನು ತರಬೇಕಾಗುತ್ತದೆ. ನೀರಾ ಪಾಲಿಸಿಯನ್ನು ತರುವ ಉದ್ದೇಶ ಇದೆ, ಅದೇ ರೀತಿಯಾಗಿ ಕ್ಯಾಷಿಯೋ ಪೆನ್ನಿ, ಬಹುಶಃ ತಾವೆಲ್ಲರೂ ಗೋವಾಕ್ಕೆ ಹೋಗಿರಬಹುದು. ಇದರ ಬಗ್ಗೆ ಬಹಳ ಜನರಿಗೆ ಅನುಭವ ಇದ್ದ ಹಾಗೆ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ನನಗೆ ಅದರ ಬಗ್ಗೆ ಅನುಭವ ಇಲ್ಲ.

ಶ್ರೀ ಆರ್. ಶ್ರೀನಿವಾಸ್ :- ನಿಮಗೆ ಇಲ್ಲ, ನಾನು ನಿಮ್ಮನ್ನು ಕೇಳಲಿಲ್ಲ, ನಾನು ನಿಮಗೆ ಹೇಳಲಿಲ್ಲ. ಅಲ್ಲಿ ಯಾವ ರೀತಿಯಾಗಿ ಆ ಸರ್ಕಾರ ಅನುಮತಿ ಕೊಟ್ಟಿದೆ ಎಂದರೆ, ಹಣ್ಣು ಇದರಿಂದ ಎಷ್ಟು ಚೆನ್ನಾಗಿ ಉತ್ಪತ್ತಿಯಾಗುತ್ತದೆಂದರೆ ಹಣ್ಣು ಚೆನ್ನಾಗಿ ಮಾಗುವವರೆಗೂ ಹಣ್ಣಾಗಿಯೇ ಇಟ್ಟಿರುತ್ತಾರೆ. ಅದರಿಂದ ಒಂದು ಕೆಜಿಗೆ ಒಂದೂವರೆ ಮತ್ತು ಎರಡು ರೂಪಾಯಿಗಳಾದರೂ ಕೂಡ ರೈತರಿಗೆ ಲಾಭ ಸಿಗುತ್ತದೆ. ಆಮೇಲೆ ಅದೊಂದೇ ಅಲ್ಲ, ಕಾಯಿಯನ್ನು ಬಲಿಯುವವರೆಗೂ ಬಿಟ್ಟರೆ ಬೀಜ ಸ್ವಲ್ಪ ದಪ್ಪವಾಗಿ ಒಳ್ಳೆಯ ಬೆಲೆಬರುತ್ತದೆ. ಈಗ 25 ಪರ್ಸೆಂಟ್ ಎಕ್ಸ್‌ಪೋರ್ಟ್ ಕ್ವಾಂಟಿಟಿ ಸಿಗುತ್ತಿರುವುದು. ಏಕೆಂದರೆ, ಈಗ ಕಾಯಿ ಬಲಿಯುವುದಿಲ್ಲ ಹಾಗೇಯೇ ಕಿತ್ತು ಬಿಡುತ್ತಾರೆ. ಕಾಯಿಗೆ ಬೆಲೆ ಇಲ್ಲವಲ್ಲಾ ಕಾಯಿಗೆ ಬೆಲೆ ಸಿಕ್ಕಿದರೆ ಅದು ಬಲಿಯುವವರೆಗೂ ಕಾಯುತ್ತಾನೆ, ಆ ಬೀಜದ

ಒಂದು ಅಂಶ ದಪ್ಪವಾದಾಗ, ಅದು ಒಳ್ಳೆಯ ಕ್ವಾಲಿಟಿ ಸಿಗುತ್ತದೆ. ಕ್ವಾಂಟಿಟಿ ಒಳ್ಳೆಯದಾದಾಗ ಎಕ್ಸಪೋರ್ಟ್ ಕ್ವಾಂಟಿಟಿಗೆ ಪರ್ಸೆಂಟೇಜ್ ಜಾಸ್ತಿಯಾಗಬಹುದು. ಆ ಒಂದು ಭಾವನೆಯಿಂದ ಕ್ಯಾಶ್ಯೂ ಪೆನ್ನಿಗೆ ಒಂದು ಎಕ್ಸೈಜ್ ಡ್ಯೂಟಿ ಇದರಲ್ಲಿ ಇದೆ. ಸಾರಾಯಿಗೆ ಏನು ರೇಟನ್ನು ಹಾಕುತ್ತಾರೋ, ಆ ರೇಟನ್ನು ಬ್ರಾಂದಿಗೆ, ವಿಸ್ಕಿಗೆ ಹಾಕುತ್ತಾರೆ. ಯಾರು ಇದನ್ನು ತೆಗೆದುಕೊಳ್ಳುತ್ತಾರೆ. ಎಕ್ಸೈಸ್ ಡ್ಯೂಟಿ ಫ್ರೀ ಮಾಡಿ ಇದನ್ನು ಕಾಟೇಜ್ ಇಂಡಸ್ಟ್ರೀ ಮಾಡಬೇಕು. ಅಂದರೆ ಇದನ್ನು ದೊಡ್ಡ ದೊಡ್ಡ ಉದ್ದಿಮೆಗಳಿಗೆ ಕೊಡುವುದು ಬೇಕಾಗಿಲ್ಲ, ಗುಡಿಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು ಹಳ್ಳಿಯಲ್ಲಿ ಉತ್ಪತ್ತಿ ಮಾಡುವ ವ್ಯವಸ್ಥೆ ಮಾಡಿದಾಗ ಹಣ್ಣಿಗೂ ಬೆಲೆ ಸಿಗುತ್ತದೆ. ಹಾಗಾಗಿ ಈ ಒಂದು ಪಾಲಿಸಿಯನ್ನು ತರಲಿಕ್ಕೆ ನಾವೆಲ್ಲಾ ಒತ್ತನ್ನು ಕೊಡುತ್ತಿದ್ದೇವೆ, ತಾವು ಕೂಡ ಇದಕ್ಕೆ ಸಹಕರಿಸಬೇಕು. ವೈನ್ ಪಾಲಿಸಿಯನ್ನೂ ಕೂಡ ತರಬೇಕು, ಇದರ ಬಗ್ಗೆ ತಮಗೆಲ್ಲಾ ಗೊತ್ತಿದೆ.

ಶ್ರೀ ಜಯಪ್ರಕಾಶ್ ಹೆಗ್ಡೆ :– ಕ್ಯಾಶ್ಯೂ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನವರು ಕ್ಯಾಷಿಯೊ ಫೆನ್ನಿ ಫ್ಯಾಕ್ಟರಿಯನ್ನು ಗಂಗಳ್ಳಿಯಲ್ಲಿ ಮಾಡಿದ್ದಾರೆ. ಆದರೆ ಅದು ಸಕ್ಸೆಸ್ ಆಗಲಿಲ್ಲ. ಕರ್ನಾಟಕದಲ್ಲಿ ಫೇಲ್ ಆಯಿತು, ಗೋವಾದಲ್ಲಿ ಮಾತ್ರ ಸಕ್ಸೆಸ್ ಆಯಿತು.

ಶ್ರೀ ಆರ್. ಶ್ರೀನಿವಾಸ್ :– ಇದನ್ನು ಸರ್ಕಾರದವರು ಮಾಡಲಿಕ್ಕೆ ಹೋಗಬಾರದು, ಆಸಕ್ತಿಯಿರುವಂತಹ ಖಾಸಗಿಯವರಿಗೆ ಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡಬೇಕೇ ಹೊರತು ನಾವು ಮಾಡುತ್ತೇವೆ ಎನ್ನುವುದು ಸುಳ್ಳು. ಇಂತಹ ಪರಿಸ್ಥಿತಿಯಲ್ಲಿ ವೈನ್ ಪಾಲಿಸಿ ಬಹಳ ಮುಖ್ಯವಾದುದು. ಇವತ್ತು ದೇವನಹಳ್ಳಿಯಿಂದ ಮಹಾರಾಷ್ಟ್ರಕ್ಕೆ ಹೋಗುತ್ತಿದೆ.

ಶ್ರೀ ಅಪ್ಪಾಜಿ ನಾಡಗೌಡ :– ಮಾನ್ಯ ಮಂತ್ರಿಗಳೇ, ತಾವು ಹೇಳಿದಂತೆ ಅದನ್ನು ಎಕ್ಸೈಸ್ ಆಕ್ಟ್‌ನಿಂದ ಹೊರಪಡಿಸಬೇಕೆಂದು ಹೇಳಿದಿರಿ, ಹಾಗಾಗಲಿಕ್ಕೆ ಸಾಧ್ಯವೇ ಇಲ್ಲ, ಏಕಂದರೆ ಅದರ ಬೈ ಪ್ರಾಡಕ್ಟ್ಸ್ ಅದರಿಂದ ಏನು ತೆಗೆಯುತ್ತಾರೆ? ಮತ್ತೆ ಆಲ್ಕೋಹಾಲ್ ಬಂದ ಮೇಲೆ ಅದರಿಂದಲೇ ಅದು ಸಾರಾಯಿ ಆಗುತ್ತದೆ. ಫೆನ್ನಿ ಆಗುತ್ತದೆ. ಆ ಟೇಸ್ಟ್ ಏನಿದೆಯಲ್ಲಾ ಅದು ಕ್ಯಾಶೋ ಟೇಸ್ಟ್ ಇರುತ್ತದೆ. ಅದರ ಬ್ಲೆಂಡ್ ಸ್ಮೆಲ್ ಇರುತ್ತದೆ. ಆದರೆ ಅದರಲ್ಲಿ ಆಲ್ಕೋಹಾಲಿನ ಬೇಸ್ ಇರುವುದು. ಹೀಗಿರುವಾಗ ಎಕ್ಸೈಸ್‌ನಿಂದ ಹೇಗೆ ಹೊರಪಡಿಸುತ್ತೀರಿ?

ಶ್ರೀ ಆರ್. ಶ್ರೀನಿವಾಸ್ :– ಅ ಅದಕ್ಕೆ ಅಟ್‌ಲೀಸ್ಟ್ ಶೇ. 50 ರಷ್ಟಾದರೂ ಮಾಡಬಹುದು.

ಶ್ರೀ ಶಿವಾನಂದ ಪಾಟೀಲ್ :– ನೀವು ಕನ್‌ಫ್ಯೂಸ್ ಮಾಡಿಕೊಳ್ಳಬೇಡಿ, ಅವರು ಕ್ಯಾಶ್ಯೋನಟ್ ಬಗ್ಗೆ ಹೇಳುತ್ತಿದ್ದಾರೆ. ವೈನ್ ಪಾಲಿಸಿ ಸರಿಯಿದೆ. ಮಹಾರಾಷ್ಟ್ರದಲ್ಲಿ ಎಕ್ಸೈಸ್‌ನಿಂದ ಎಕ್ಸೆಮ್ಟ್ ಮಾಡಿದ್ದಾರೆ. ಇಲ್ಲೂ ಮಾಡಿ.

ಶ್ರೀ ಆರ್. ಶ್ರೀನಿವಾಸ್ :– ಆ ರೀತಿಯಲ್ಲಿ ತೆಗೆದುಕೊಂಡರೆ ನಮ್ಮ ರೈತರಿಗೆ ನಷ್ಟವಾಗುತ್ತದೆ. ರೈತರೆಲ್ಲಾ ಆ ಗೇರು ಹಣ್ಣನ್ನು ಬಿಸಾಡುತ್ತಿದ್ದಾರೆ.

ಶ್ರೀ ಶಿವಾನಂದ ಪಾಟೀಲ್ :– ಶ್ರೀನಿವಾಸರವರೇ, ನೀವು ಗ್ರೇಪ್ ಜ್ಯೂಸ್ ವೈನ್ ಇಂಡಸ್ಟ್ರಿಯ ಬಗ್ಗೆ ಹೇಳುತ್ತಿದ್ದೀರೋ, ಅಥವಾ ಕ್ಯಾಶೋನಟ್ ಬಗ್ಗೆ ಹೇಳುತ್ತಿದ್ದೀರೋ?

ಶ್ರೀ ಆರ್. ಶ್ರೀನಿವಾಸ್ :–ಇವತ್ತು ಕ್ಯಾಶೋ ಇಂಡಸ್ಟ್ರೀಸ್‌ನಲ್ಲಿ ಶೇ. 50 ರಷ್ಟಾದರೂ ಕೊಡೋಣ..... ಮಧ್ಯದಲ್ಲಿ ಪ್ರಶ್ನೆಯನ್ನೂ ಕೇಳಲಿಕ್ಕೆ ಅವರಿಗೇನು ಹಕ್ಕಿಲ್ಲವೇ?..... ಡಿಬೇಟ್ ಆಗಬೇಕು. ಡಿಬೇಟ್ ಇಲ್ಲದೆ ಬರೇ ಭಾಷಣ ಮಾಡಿಕೊಂಡು ಹೋದರೆ ಏನು ಪ್ರಯೋಜನ? ಇದನ್ನು ಶೇ. 50 ರಷ್ಟಾದರೂ ಮಾಡಿ ಇದರಿಂದ ರೈತನಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು ಎನ್ನುವುದೇ ನಮ್ಮ ಉದ್ದೇಶ. ವೈನ್ ಪಾಲಿಸಿ ಮಾಡಬೇಕು. ಮುಖ್ಯವಾಗಿ

(ಶ್ರೀ ಅರಗ ಜ್ಞಾನೇಂದ್ರ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸೀಡ್ ಆಕ್ಟ್, ಇವತ್ತು ಯಾರೋ ಒಂದು ಸೀಡ್ಸ್ ತೆಗೆದುಕೊಳ್ಳುತ್ತಾನೆ. ಚಿಕ್ಕಬಳ್ಳಾಪುರದಲ್ಲಿ ಈ ಪೊಟ್ಯಾಟೋವನ್ನು ಎಲ್ಲೋ ಜಲಂದರ್‌ನಿಂದ ಬಂದು ಮಾರಿಬಿಟ್ಟು ಪತ್ತೆ ಇಲ್ಲದ ಹಾಗೆ ಹೋಗಿಬಿಡುತ್ತಾನೆ. ಅದರಲ್ಲಿ ಮೊಳಕೆಯೇ ಬಂದಿರುವುದಿಲ್ಲ. ಆಗ ರೈತ ಏನು ಮಾಡಬೇಕು? ಯಾರನ್ನು ಹಿಡಿದುಕೊಳ್ಳಬೇಕು. ಒಂದು ಎಕರೆಗೆ 15 ರಿಂದ 20 ಸಾವಿರ ರೂ.ಗಳನ್ನು ಖರ್ಚು ಮಾಡಿ ನಾಟಿ ಮಾಡಿದ ಮೇಲೆ ಮೊಳಕೆಯೇ ಬರದೇ ಕೊಳೆತು ಹೋದರೆ ಅವನ ಗತಿ ಏನಾಗಬೇಕು? ಅದಕ್ಕಾಗಿ ನಾವು ಸೀಡ್ ಆಕ್ಟ್ ತರಬೇಕು. ನರ್ಸರಿ ಆಕ್ಟ್ ತರಬೇಕು. ನರ್ಸರಿ ಆಕ್ಟ್ ತಂದಿಲ್ಲ, ಯಾರು ಬೇಕಾದರೂ ನರ್ಸರಿಯನ್ನು ಬೆಳೆಯುತ್ತಾರೆ, ಕಡಲೆಕಾಯಿ ಬೀಜವನ್ನು ಹಾಕಬಹುದು, ಅದಕ್ಕೆ ಅವರೂ ಕೂಡ ಲೈಸೆನ್ಸ್‌ಹೋಲ್ಡರ್ ಆಗಿರಬೇಕು. ಸೀಡ್ಸ್ ಅಷ್ಟೆ, ಹಾರ್ಟಿಕಲ್ಚರಲ್ ಡಿಪಾರ್ಟಮೆಂಟಿನಿಂದ ಕೃಷಿ ಇಲಾಖೆಗೆ ಸರ್ಟಿಫಿಕೇಟ್ ಮಾಡುತ್ತಾನೆ. ಹಾರ್ಟಿಕಲ್ಚರಲ್ ಪ್ರಾಡಕ್ಟ್ಸ್ ಏನಾದರೂ ನಾಳೆ ದಿವಸ ಹೆಚ್ಚು ಕಡಿಮೆಯಾದರೆ, ರೈತ ಅಲ್ಲಿಗೆ ತೆಗೆದುಕೊಂಡು ಹೋದರೆ, ನಮ್ಮ ಇಲಾಖೆಗೆ ಬರುವುದಿಲ್ಲ, ತೋಟಗಾರಿಕೆ ಇಲಾಖೆಯವರನ್ನು ಕೇಳಿ ಎಂದು ಹೇಳುತ್ತಾರೆ. ತೋಟಗಾರಿಕೆ ಇಲಾಖೆಯುವರು ನಾವು ಸರ್ಟಿಫಿಕೇಟ್ ಕೊಟ್ಟಿಲ್ಲ, ನಮಗೆ ಸಂಬಂಧವಿಲ್ಲವೆನ್ನುತ್ತಾರೆ. ಅವನು ಕೇಸ್ ಹೇಗೆ ಹಾಕುವುದು? ಅವನ ರಕ್ಷಣೆಗೆ ಯಾರು ಬರುತ್ತಾರೆ? ಆದಕಾರಣ ಯಾವ ಮಾಲೀಕ ಸೀಡ್ಸ್ ಅನ್ನು ಮಾರುತ್ತಾನೆಯೋ ಅವನು ತೋಟಗಾಕೆಯ ಇಲಾಖೆಯಿಂದ ಸರ್ಟಿಫಿಕೇಟ್ ತೆಗೆದುಕೊಂಡು ಬರಬೇಕು. ಇದನ್ನು ನಾವು ರಾಜ್ಯದಿಂದ ಕೇಂದ್ರಸರ್ಕಾರಕ್ಕೆ ಕಳುಹಿಸುತ್ತಿದ್ದೇವೆ. ಅಗ್ರಿ ಎಕ್ಸ್‌ಪೋರ್ಟ್ಸ್ ಜೋನ್ಸ್

ಎಂದು ಹೇಳಿ ಈ ಮಾವು, ದ್ರಾಕ್ಷಿ, ನಿಂಬೆ ಇವನ್ನೆಲ್ಲಾ ಹೊರದೇಶಕ್ಕೆ ಕಳುಹಿಸುವುದಕ್ಕೆ ಮಾರುಕಟ್ಟೆಗೆ ಕಳುಹಿಸಿದ್ದೇವೆ. ಎಲ್ಲೆಲ್ಲಿ ಹೆಚ್ಚಿನ ಬೆಳೆಯಾಗುತ್ತದೋ ಅಲ್ಲಿ ಎಕ್ಸ್‌ಪೋರ್ಟ್ಸ್ ಜೋನ್ಸ್‌ಗಳನ್ನು ತೆರೆಯಲಿಕ್ಕೆ ಕೇಂದ್ರ ಸರ್ಕಾರದ ಅನುಮತಿಗೆ ಕಳುಹಿಸಿದ್ದೇವೆ. ಇಂತಹ ಅನೇಕ ವ್ಯವಸ್ಥೆಗಳನ್ನು ಮಾಡಿದ್ದೇವೆ. ತಮಗೆ ಗೊತ್ತಿರುವ ಹಾಗೆ ಹಾಪ್‌ಕಾಮ್ಸ್‌ನಿಂದ ಮಾವು ಮೇಳವನ್ನು ಮಾಡಿದ್ದೇವೆ. ಅದರಲ್ಲಿ ದಿನಕ್ಕೆ ನಲವತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿಯಷ್ಟು ವಹಿವಾಟು ನಡೆಯಿತು. ಮಧ್ಯವರ್ತಿಗಳಿಲ್ಲದೆ ನೇರವಾಗಿ ರೈತರಿಂದ ವ್ಯಾಪಾರಸ್ಥರು ಬೆಳೆಗಳನ್ನು ತೆಗೆದುಕೊಂಡರು. ದ್ರಾಕ್ಷಿ ಬೆಳೆ ಕೂಡ ಮಾರಾಟವಾಯಿತು. ಇದನ್ನು ನಾವು ವಿಸ್ತರಣೆ ಮಾಡಬೇಕು. ವಿಸ್ತರಣೆ ಮಾಡಿ ಅಲ್ಲಲ್ಲಿ ಮಳಿಗೆಗಳನ್ನು ತೆಗೆದು ರೈತರೇ ನೇರವಾಗಿ ಗ್ರಾಹಕರಿಗೆ ಬೆಳೆಗಳನ್ನು ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಮಾಡುವಂತಹ ಪ್ರಯತ್ನವನ್ನು ಮಾಡಬೇಕು. ಮೈಸೂರಿನಲ್ಲಿರುವ ಐತಿಹಾಸಿಕ ಉದ್ಯಾನವನ ನಮಗೆ ಸೇರಿದ್ದು. ಬಹುಶಃ ಫ್ಲೋರಿ ಕಲ್ಚರ್ ಬಗ್ಗೆ, ಅಂತರರಾಷ್ಟ್ರೀಯ ಪುಷ್ಪ ಪ್ರದರ್ಶನವನ್ನು ನಾವು ನೋಡಿರಬಹುದು. ಮೊದಲನೆಯದಾಗಿ, ನಮ್ಮ ಭಾರತದೇಶದಲ್ಲಿ ಪ್ರಯತ್ನವನ್ನು ಮಾಡಿದೆವು. ಇದರ ಮೂಲ ಉದ್ದೇಶ ಮುನ್ನೂರು ಜನ ರೈತರು ಬಂದಿದ್ದರು. ತೋಟಗಾರಿಕೆ ಇಲಾಖೆಯಲ್ಲಿ ಹಣ್ಣು ಹಂಪಲುಗಳನ್ನು ಬಿಟ್ಟರೆ ಫ್ಲೋರಿಕಲ್ಚರ್ ಇವತ್ತು ಹೈಯೆಸ್ಟ್ ಎಕ್ಸ್‌ಪೋರ್ಟ್. ಪ್ರಪಂಚದಲ್ಲಿ ಭಾರತ ದೇಶಕ್ಕೆ ಮೊದಲನೇ ಸ್ಥಾನವಿದೆ. ಭಾರತದಲ್ಲಿ ನಮ್ಮ ಕರ್ನಾಟಕ ಫ್ಲವರ್ಸ್ ಅನ್ನು ಎಕ್ಸ್‌ಪೋರ್ಟ್ ಮಾಡುವುದರಲ್ಲಿ ಮೊದಲನೇ ಸ್ಥಾನ ಪಡೆದಿದೆ. ಈ ಕೀರ್ತಿ ರೈತರಿಗೆ ಹೋಗುತ್ತದೆ. ಹಳ್ಳಿಯಲ್ಲಿರುವ ರೈತರು ಇದನ್ನು ನೋಡುತ್ತಿಲ್ಲ, ಇವತ್ತು ಆ ರೈತರನ್ನು ತಲುಪಿಸಲಿಕ್ಕೋಸ್ಕರ ಕೆಲವು ಎಕ್ಸಿಬಿಷನ್ ಮಾಡಿ ಕೆಲವು ಪ್ರಚಾರಗಳನ್ನು ಮಾಡಲೆಂದು ಸೀಡ್ ಕಾರ್ಪೋರೇಷನ್ ಇರುವ ಹೆಬ್ಬಾಳದಲ್ಲಿ ಸುಮಾರು 5 ಎಕರೆ ಜಮೀನು ತೆಗೆದುಕೊಂಡು ಮೂರೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇಂಟರ್‌ನ್ಯಾಷನಲ್ ಎಕ್ಸ್‌ಪೋರ್ಟ್ ಮಾರ್ಕೆಟ್ ಬಿಲ್ಡಿಂಗ್ ರೆಡಿಯಾಗಿದೆ. ಬರುವ ತಿಂಗಳು ಅದನ್ನು ತೆರೆಯಲಾಗುವುದು. ಅದರ ಮುಖೇನ ಯಾವರೀತಿ ತೆಗೆದುಕೊಳ್ಳಬೇಕು, ಯಾರ್‍ಯಾರು ಎಕ್ಸ್‌ಪೋರ್ಟ್ ಇದ್ದಾರೆ, ರೆಫ್ರಿಜಿರೇಟರ್ ವ್ಯಾನ್ ತೆಗೆದುಕೊಂಡು ಬರುವುದು, ಯಾವ ರೀತಿ ಸಾಗಾಣಿಕೆಯನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಅದನ್ನು ಚಿಂತನೆಯನ್ನು ಮಾಡುತ್ತಿದ್ದೇವೆ. ಲಾಲ್‌ಬಾಗ್ ಒಂದು ಐತಿಹಾಸಿಕ ಉದ್ಯಾನವನವಾಗಿರುವುದರಿಂದ ಎರಡು ಮೂರು ಬಾರಿ ವಿಸಿಟ್ ಕೊಟ್ಟಿದ್ದೇನೆ. ಲಾಲ್‌ಬಾಗನ್ನು ನವೀಕರಣಗೊಳಿಸಲಿಕ್ಕಾಗಿ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಈಗಾಗಲೇ ಕೆಲಸ ಪ್ರಾರಂಭವಾಗಿದೆ, ಒಳ್ಳೊಳ್ಳೆಯ ಹೂವುಗಳನ್ನು ಕೊಡುವುದು, ರಸ್ತೆ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆ, ಮತ್ತು ಬಿ.ಡಿ.ಎ

ವತಿಯಿಂದ ಸಹಾಯ ಪಡೆಯುವುದು ಶೌಚಾಲಯಗಳನ್ನು ಮತ್ತು ಹೂ ಗಿಡಗಳ ಮಧ್ಯೆ ತಿಂಡಿ ತೆಗೆದುಕೊಂಡು ತಿನ್ನಲಿಕ್ಕೆ ಅಲ್ಲೊಂದು ಹೋಟೆಲ್ ರೀತಿಯಲ್ಲಿ ಕಾರ್ನರ್ ಅನ್ನು ತಾತ್ಕಾಲಿಕವಾಗಿ ನಿರ್ಮಾಣ ಮಾಡುವ ಪ್ರಯತ್ನವನ್ನು ಮಾಡುತ್ತಿದ್ದೇನೆ. ಕಬ್ಬನ್ ಪಾರ್ಕ್‌ನಲ್ಲಿ ಶೇಷಾದ್ರಿ ಮೆಮೋರಿಯಲ್ ಲೈಬ್ರರಿಯ ಹಿಂದೆ ಒಂದು ದೊಡ್ಡ ಸರ್ಕಲ್ ಇದೆ, ಅದರಲ್ಲಿ ಸುಂದರವಾದ ಒಂದು ಫೌಂಟನ್ ಮಾಡಲಿಕ್ಕೆ ಚಿಂತನೆ ಮಾಡಿದ್ದೇವೆ, ಅಲ್ಲಿ ಬಿದಿರು ಕಟ್ಟಿದ್ದಾರೆ. ಅದನ್ನು ಕಿತ್ತು ಹಾಕಿ, ಫೆನ್ಸಿಂಗ್ ಹಾಕಿಸಿ, ಸಂಜೆ ಅಲ್ಲಿ ಕುಳಿತುಕೊಳ್ಳುವುದಕ್ಕೆ, ಹೂವುಗಳನ್ನು ಬೆಳೆಸಲಿಕ್ಕೆ 90.00 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇದಕ್ಕೆಲ್ಲಾ ಎಲ್ಲಿಂದ ಹಣ ಬಂತು ಎಂದು ನೀವು ಕೇಳಬಹುದು, ಇದಕ್ಕೆ ಫಾರಂಪಾರ್ಕ್ ಎಂಬ ಒಂದು ಟ್ರಸ್ಟ್ ಇದೆ, ಈ ಟ್ರಸ್ಟ್‌ನಲ್ಲಿ, ಲಾಲ್‌ಬಾಗ್‌ನ ಪ್ರವೇಶದರವನ್ನೆಲ್ಲಾ ತೆಗೆದುಕೊಂಡಿರುವ ಹಣ ಎರಡೂವರೆ ಕೋಟಿ ರೂಪಾಯಿಗಳಿವೆ. ಎರಡೂವರೆ ಕೋಟಿ ರೂ.ಗಳ ಜೊತೆಗೆ ಸಹಾಯಧನವಾಗಿ ಲೋಕೋಪಯೋಗಿ ಇಲಾಖೆಯಿಂದ ಸ್ವಲ್ಪ ಹಣವನ್ನು ತೆಗೆದುಕೊಂಡು, ಈ ಎರಡೂವರೆ ಕೋಟಿ ರೂಪಾಯಿಗಳನ್ನು ಉಪಯೋಗಿಸಿಕೊಂಡು ಇದನ್ನು ಅಭಿವೃದ್ಧಿಪಡಿಸಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಈ ಸಾರಿ ಕೆ.ಆರ್.ಎಸ್. ಲಾಲ್‌ಬಾಗ್ ಹಾಗೂ ಕಬ್ಬನ್‌ಪಾರ್ಕ್ ಈ ಮೂರನ್ನು ತೆಗೆದುಕೊಳ್ಳಲಾಗಿದೆ, ನಂದಿ ಹಿಲ್ಸ್ ಇನ್ನೊಂದು ತೆಗೆದುಕೊಳ್ಳಲಿಕ್ಕೆ ಹೋಗುತ್ತಿಲ್ಲ, ನಮ್ಮ ಸರ್ಕಾರ ಕೂಡ 55 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದೆ. ಹಾಗಾಗಿ ಈ ಕೆ.ಆರ್.ಎಸ್.ಗೆ ತಾವು ಭೇಟಿ ಕೊಟ್ಟು ನೋಡಬಹುದು. ಅಲ್ಲಿ ರಸ್ತೆಗಳೆಲ್ಲಾ ಹಾಳಾಗಿ ಹೋಗಿತ್ತು, ಯಾವುದೋ 30–40 ವರ್ಷಗಳ ಹಿಂದೆ ಹಾಕಿದ ಗಿಡಗಳು ಹಾಗೇ ಇದ್ದವು. ಸರಿಯಾದ ವ್ಯವಸ್ಥೆಯಿರಲಿಲ್ಲ, ನೋಡಲಿಕ್ಕೆ ಅಲ್ಲಿ ಸುಂದರವಾಗಿರಲಿಲ್ಲ, ಇದನ್ನೆಲ್ಲಾ 4.00 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ನವೀಕರಿಸಲಾಗಿದೆ. ಪ್ರವೇಶ ದರದ ರೂಪದಲ್ಲಿ ದುಡ್ಡು ಮಾತ್ರ 25,000 ರೂಪಾಯಿಗಳು ಪ್ರತಿದಿನ ವಸೂಲಾಗುತ್ತದೆ. ಶನಿವಾರ ಭಾನುವಾರ 75 ಸಾವಿರದಿಂದ 1.00 ಲಕ್ಷ ರೂಪಾಯಿಗಳವರೆಗೆ ವಸೂಲು ಆಗುತ್ತಿದೆ, ಅದರಲ್ಲಿ ಖರ್ಚಿಲ್ಲ. ತಾವೆಲ್ಲಾ ಒಂದು ಬಾರಿ ಭೇಟಿ ಕೊಡಬೇಕು. ಅದರಲ್ಲಿ ಖರ್ಚಿಲ್ಲ, ಆದರೂ ಅದು ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಹೊಂದಿಲ್ಲ. ಆ ಒಂದು ದೃಷ್ಟಿಯಲ್ಲಿ ಅಲ್ಲಿರತಕ್ಕಂಥ ಲಾನ್ ಅನ್ನು ಬದಲಾವಣೆ ಮಾಡಿ ಒಳ್ಳೆಯ ಸುಂದರವಾದ ಗಿಡ ಮಾಡುವುದಕ್ಕೆ ಸುಮಾರು ನಾಲ್ಕು ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡ್ ಎಂದು ಇದೆ. ಅದು ತಮಗೆಲ್ಲಾ ಗೊತ್ತಿದೆ. ಈ ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡ್‌ನಿಂದ ಏನಿದೆ ಇದರಿಂದ ಎಷ್ಟು ಜನ ಸ್ವಾಮಿ ನಮ್ಮ ರೈತರು ರಿಯಾಯಿತಿ ತೆಗೆದುಕೊಂಡಿದ್ದಾರೆ? ಶೇಕಡ ಬೆರಳೆಣಿಕೆಯಷ್ಟು ಜನ ಇಲ್ಲ.

ಬಹುಶಃ ಇದು ಯಾರಿಗೂ ಗೊತ್ತಿಲ್ಲ. ಒಬ್ಬ ಮನುಷ್ಯನಿಗೆ 25 ಲಕ್ಷ ರೂಪಾಯಿ ರಿಯಾಯಿತಿ ಬರುತ್ತಿದೆ. ಸಬ್ಸಿಡಿ ಹಣ ಬೇಕಾದಷ್ಟು ಇದೆ. ಕ್ರೇಟ್ಸ್ ತೆಗೆದುಕೊಳ್ಳುವುದಕ್ಕೆ, ಇನ್ನೊಂದಕ್ಕೆ, ಲ್ಯಾಂಡ್ ಪರ್ಚೇಸ್ ಮಾಡುವುದಕ್ಕೆ ಫೆನ್ಸಿಂಗ್ ಹಾಕುವುದಕ್ಕೆ, ಬೋರ್‌ವೆಲ್ ಹಾಕುವುದಕ್ಕೆ, ಎಲ್ಲಾ ಟೋಟಲ್ ಪ್ರಾಜೆಕ್ಟ್‌ನಲ್ಲಿ 25 ಲಕ್ಷ ರೂ.ಗಳನ್ನು ಒಬ್ಬೊಬ್ಬರಿಗೆ ಕೊಡುವಂತಹ ವ್ಯವಸ್ಥೆ ಈಗ ಇದೆ. ಬಹುಶಃ ಇದರ ಬಗ್ಗೆ ಯಾರೂ ಚಿಂತನೆ ಮಾಡಿಲ್ಲ. ಗ್ರೀನ್ ಹೌಸ್ ಕಟ್ಟುವುದಕ್ಕೆ ಫ್ಲೋರಿಕಲ್ಚರ್‌ಗೆ ನಾವು ಇವತ್ತು ಬಳಸಿಕೊಳ್ಳುತ್ತಿಲ್ಲ. ಅದಕ್ಕೆ ನಮ್ಮ ಇಲಾಖೆಯವರಿಗೆ ನಾನು ಸೂಚನೆ ಕೊಟ್ಟಿದ್ದೇನೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಹತ್ತು ಹತ್ತು ಜನರಿಗೆ ಈ ಮಾಹಿತಿಯನ್ನು ಕೊಟ್ಟು ಅವರಿಗೆ ಬ್ಯಾಂಕಿನ ಮುಖೇನ ಲೋನ್ ಕೊಟ್ಟು ಈ ಸಬ್ಸಿಡಿ ಹಣವನ್ನು ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಶಿವಾನಂದ ಪಾಟೀಲ್ :– ಎನ್.ಹೆಚ್.ಬಿ. ಆಫೀಸ್ ಬೆಂಗಳೂರಿನಲ್ಲಿ ಎಲ್ಲಿದೆ ಹೇಳಿ ನೋಡೋಣ?

ಶ್ರೀ ಆರ್. ಶ್ರೀನಿವಾಸ್ :– ಯಶವಂತಪುರದಲ್ಲಿದೆ.

ಶ್ರೀ ಶಿವಾನಂದ ಪಾಟೀಲ್ :– ಮತ್ತೆ ಅಲ್ಲಿಗೆ ಯಾರಾದರೂ ರೈತರು ಹೋಗುತ್ತಾರಾ? ಅದನ್ನು ತಂದು ಲಾಲ್‌ಬಾಗ್‌ನಲ್ಲಿ ಹಾಕಿ ನಾಲ್ಕು ಜನ ರೈತರಿಗೆ ಗೊತ್ತಾಗುತ್ತದೆ. ಯಶವಂತಪುರಕ್ಕೆ ಹೋಗಬೇಕಾದರೆ 16 ಕಿಲೋಮೀಟರ್ ಆಗುತ್ತದೆ.

ಶ್ರೀ ಆರ್. ಶ್ರೀನಿವಾಸ್ :– ತಾವು ಹೇಳುತ್ತಿರುವುದು ಕರೆಕ್ಟ್, ನಾನೇ ನೋಡಿಲ್ಲ. ಅದಕ್ಕೆ ನಮ್ಮ ಇಲಾಖೆ ವತಿಯಿಂದ ನಮ್ಮ ಅಧಿಕಾರಿಗಳು ಸಾರ್ವಜನಿಕರಿಗೆ, ರೈತರಿಗೆ ಇದರ ಬಗ್ಗೆ ತಿಳುವಳಿಕೆ ಕೊಡುವುದಕ್ಕೆ ಫಾರಂಗಳನ್ನು ತೆಗೆದುಕೊಂಡು ನೀವೇ ತುಂಬಿಸಿ ನೀವೇ ಕೊಡಿ ಎಂದು ಹೇಳಿದ್ದೇನೆ, ಅದು ಸೆಂಟ್ರಲ್ ಗೌರ್ನಮೆಂಟ್‌ದ್ದು. ನಮ್ಮ ರೈತರ ಮುಖೇನ, ನಮ್ಮ ಅಧಿಕಾರಿಗಳ ಮುಖೇನ ತಿಳುವಳಿಕೆ ಕೊಡೋಣ. ಸೌಲಭ್ಯ ಸಿಗುತ್ತದೆಂದು ಹೇಳೋಣ. ಈ ರೀತಿ ಮಾಡಿ ಎನ್ನುವ ದೃಷ್ಟಿಯಿಂದ ಇವತ್ತು ಎನ್.ಹೆಚ್.ಬಿ. ಮುಖಾಂತರ ಅನೇಕ ಸೌಲಭ್ಯಗಳಿಗೆ ಅವಕಾಶ ಇದೆ. ಕೋಲ್ಡ್ ಸ್ಟೋರೇಜ್‌ಗೆ 50 ಲಕ್ಷ ರೂಪಾಯಿ ಸಬ್ಸಿಡಿ ಕೊಡುತ್ತಾರೆ. ಯಾರಾದರೂ ಪ್ರೈವೇಟ್‌ನವರು ಮಾಡುವ ಹಾಗಿದ್ದರೆ ಕೋಲ್ಡ್ ಸ್ಟೋರೇಜ್‌ಗೆ 50 ಲಕ್ಷ ರೂಪಾಯಿ ಸಬ್ಸಿಡಿ ಕೊಡುತ್ತಿದ್ದಾರೆ. ಈ ಒಂದು ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖೇನ ನಮ್ಮ ಎಲ್ಲಾ ಮಾನ್ಯ ಸದಸ್ಯರಿಗೂ ಕೂಡ ತಿಳುವಳಿಕೆ ಕೊಡುವುದಕ್ಕೆ ಇಚ್ಛಿಸುತ್ತೇನೆ. ಇನ್ನು ತಾಳೆ ಬೆಳೆ ಬೆಳೆಯುವುದು ಫಾಮ್ ಆಯಿಲ್, ಇದು ಕೆಲವು ದಿವಸ ಏನಾಗಿತ್ತು ಅಂದರೆ ಶಿವಮೊಗ್ಗದಲ್ಲಿ ಮುಳುಗಿ ಹೋಗಿತ್ತು, ಅನೇಕ ರೈತರು ಬೀದಿ ಪಾಲಾಗಿದ್ದರು. ಇದನ್ನು ಪುನರಾರಂಭ

ಮಾಡಿ, ಇದರ ಸೌಲಭ್ಯಗಳನ್ನು ರೈತರಿಗೆ ಕೊಡತಕ್ಕಂಥಾದ್ದು, ಆಮೇಲೆ ಯಾರು ಮಾಲೀಕರು ಇದ್ದಾರೆ ಆ ಮಾಲೀಕರಿಗೂ ಕೂಡ ಸಬ್ಸಿಡಿ ಕೊಡತಕ್ಕಂಥ ವ್ಯವಸ್ಥೆ ಮಾಡಲಾಗಿದೆ. ಕೊಳವೆ ಬಾವಿ ಏನು ಇದೆಯೋ ಅದರಿಂದ ಇವತ್ತು ಕೆಲವು ಬೆಳೆಗಳಿಗೆ ನೀರು ಬೇಕಾಗಿದೆ, ಗೊಬ್ಬರ ಕೂಡ ಬೇಕಾಗುತ್ತದೆ, ಈ ಸಬ್ಸಿಡಿ ಗೊಬ್ಬರ ಕೊಟ್ಟರೆ ಅವರಿಗೆ ಇನ್ನೂ 50 ಪರ್ಸೆಂಟ್ ಕೊಡುವುದಕ್ಕೆ ದುಡ್ಡು ಇರುವುದಿಲ್ಲ. ಆದ್ದರಿಂದ ಮಾಲೀಕರಿಗೆ ನಾನು ಏನು ಸೂಚನೆ ಕೊಟ್ಟಿದ್ದೇನೆ ಅಂದರೆ, ನಿಮ್ಮ ನಿಮ್ಮ ಅಲಾಟ್‌ಮೆಂಟ್ ವ್ಯಾಪ್ತಿ ಏನಿದೆಯೋ ಆ ರೈತರಿಗೆಲ್ಲಾ ಕೂಡ ಈ 50 ಪರ್ಸೆಂಟ್ ಸಬ್ಸಿಡಿ ಇನ್ನು 50 ಪರ್ಸೆಂಟ್ ನೀವು ಲೋನ್ ಮುಖಾಂತರ ಕೊಡಿ, ನೀವು ಕ್ರಮೇಣ ಬೇಕಾದರೆ ಇಂತಿಷ್ಟು ಎಂದು ವಾಪಸ್ಸು ತೆಗೆದುಕೊಳ್ಳಿ ಎನ್ನುವ ಉದ್ದೇಶದಿಂದ ಇವತ್ತಿನ ದಿವಸ ಆ ಒಂದು ಸೌಲಭ್ಯವನ್ನು ಕೊಟ್ಟು, ಇವತ್ತು ತಾಳೆ ಬೆಳೆಯನ್ನು ಬೆಳೆಯುವುದಕ್ಕೆ ಸಿದ್ಧ ಮಾಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಇದೇ ರೀತಿ ಇನ್ನೂ ಅನೇಕ ಯೋಜನೆಗಳನ್ನು ನಮ್ಮ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದೇವೆ. ಇವೆಲ್ಲಾ ಕೂಡ ಪೂರ್ತಿಯಾಗುತ್ತದೆ. ದಯವಿಟ್ಟು ಏನೂ ತಪ್ಪು ತಿಳಿದುಕೊಳ್ಳಬೇಡಿ. ಇದನ್ನೆಲ್ಲಾ ಕೂಡ ಈಗ ನಾನು ಏನು ಆಶ್ವಾಸನೆ ಕೊಟ್ಟಿದ್ದೇನೆ ಅದರಂತೆ ಮಾಡುತ್ತೇನೆ. ಡ್ರಿಪ್ ಒಂದೇ ಈಗ ಅನುಮತಿ ಪಡೆಯಬೇಕಾಗಿರುವುದು, ಮಿಕ್ಕ ಎಲ್ಲದಕ್ಕೆ ಕೂಡ ಹಣ ಇದೆ. ಹಣ ಇಲ್ಲದೇ ನಾನು ಈ ಸದನದಲ್ಲಿ ಯಾವತ್ತೂ ಕೂಡ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಎತ್ತರವಾದಂತಹ ತಕ್ಕಡಿ ಇದೆ. ಸ್ವಾತಂತ್ರ್ಯ ಕೊಟ್ಟಂತಹ ಮಹಾನುಭಾವರು ಇದ್ದಾರೆ. ಇಲ್ಲಿ ನಾನು ನಿಮಗೆ ಸುಳ್ಳು ಹೇಳತಕ್ಕಂಥಾದ್ದು ಆಗಲಿ, ಸುಳ್ಳು ಆಶ್ವಾಸನೆ ಕೊಡತಕ್ಕಂಥಾದ್ದು ಆಗಲಿ ಇಲ್ಲ. ಡ್ರಿಪ್‌ದ್ದು ಒಂದಕ್ಕೇ ನಾನು ಅನುಮತಿ ತೆಗೆದುಕೊಳ್ಳಬೇಕಾಗಿರುವುದು. ಮಿಕ್ಕ ಎಲ್ಲಾ ಸ್ಕೀಮ್‌ಗಳಲ್ಲಿ ಕೂಡ ಈಗಾಗಲೇ ಹಣವನ್ನು ಹೆಚ್ಚಿನ ರೀತಿಯಲ್ಲಿ ಕೊಡುವುದಕ್ಕೆ ತಾವೆಲ್ಲಾ ಕೂಡ ಸಹಾಯ ಮಾಡಬೇಕು. ಇನ್ನೂ ಹೆಚ್ಚಿನ ರೀತಿಯಲ್ಲಿ ಅಂದರೆ ಫಾರಂ ಪಾಲಿಸಿಗೆ 9 ಕೋಟಿ ರೂ.ಗಳು ಇತ್ತು, ಅದನ್ನು....

ಶ್ರೀ ವಾಟಾಳ್ ನಾಗರಾಜ್ :– ನಿಮ್ಮ ಓಟು ಬೇಡ ಎಂದು ಹೇಳಿ,....

ಶ್ರೀ ಆರ್. ಶ್ರೀನಿವಾಸ್ :– ಅದಲ್ಲ, ಆ ಓಟಲ್ಲ; ನಾನು ಹೇಳಿದ್ದು ಪಬ್ಲಿಕ್‌ನಲ್ಲಿ, ನಿಮ್ಮ ಓಟು ನನಗೆ ಬೇಕು. ನಿಮ್ಮ ಸಹಕಾರ ಬೇಕು. ನೀವೆಲ್ಲಾ ಇದ್ದರೆ ನಾನು ಇರುವುದು. ನಿಮ್ಮಗಳ ಸರ್ಕಾರ ಬೇಕು. ನಾನು ಹೇಳುತ್ತಿರುವುದು ಪಬ್ಲಿಕ್‌ನದು, ಆದ್ದರಿಂದ ಹೆಚ್ಚಿನ ಅನುದಾನ ಕೊಡುವುದಕ್ಕೆ ತಾವೆಲ್ಲಾ ಕೂಡ ನನ್ನ ಪಾಲಿಗೆ ಬರಬೇಕು, ನನ್ನ ಸಹಾಯಕ್ಕೆ ಬರಬೇಕು. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆಲ್ಲರಿಗೂ ಧನ್ಯವಾದಗಳು.

(ಗೊಂದಲ)

ಛೇರ್ಮನ್ :– ಮಾನ್ಯ ಸಚಿವರು ಇಷ್ಟು ಸವಿಸ್ತಾರವಾಗಿ ಉತ್ತರ ಹೇಳಿದ ಮೇಲೂ ಕೂಡ ಕ್ಲಾರಿಫಿಕೇಶನ್ ಅಗತ್ಯ ಇದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೇ, 2–3 ವಿಷಯಗಳ ಬಗ್ಗೆ ನಾನು ಮಾನ್ಯ ಸಚಿವರಿಗೆ ಕ್ಲಾರಿಫಿಕೇಶನ್ ಕೇಳುತ್ತೇನೆ. ಕಾಫಿ ಬೀಜಕ್ಕೆ 4 ಪರ್ಸೆಂಟ್ ಟ್ಯಾಕ್ಸ್‌ಇದೆ. ಕಾಫಿ ಪೌಡರ್‌ಗೆ ಹನ್ನೇರಡೂವರೆ ಪರ್ಸೆಂಟ್ ಹಾಕಿ ಬಿಟ್ಟು ಕಾಫಿ ಮಾರಾಟ ಮಾಡುವವರಿಗೆ ಕಷ್ಟ ಆಗಿ ಕಾಫಿ ಬೆಳೆ ಕರ್ನಾಟಕದಲ್ಲಿ ನಿರ್ನಾಮವಾಗುವಂತಹ ಸ್ಥಿತಿ ತಲುಪುತ್ತಿದೆ. ಇದು ಬಹಳ ಸೀರಿಯಸ್ ಆಗಿ ಮಾತನಾಡಬೇಕಾದ ಇಲಾಖೆ. ಆದರೆ ಇದು ಹುಡುಗಾಟ ಆಗಿದೆ. ನಾವು ಈಗ ಏನೂ ಮಾಡುವುದಕ್ಕೆ ಬರುವಂತಿಲ್ಲ. ತಾವು ಏನಾದರೂ ಬರೆದುಕೊಂಡು ಮಾನ್ಯ ಸಿದ್ಧರಾಮಯ್ಯನವರ ಹತ್ತಿರ ಮಾತನಾಡಬೇಕು. ಇಡೀ ರಾಷ್ಟ್ರದಲ್ಲಿ ಕಾಫಿ ಎಲ್ಲೂ ಬರುವುದಿಲ್ಲ. ನಿಮ್ಮ ಎಂಪವರ್ ಕಮಿಟಿ ಮುಂದೆ ಕಾಫಿ ಪೌಡರ್ ಬಗ್ಗೆ ನಾವು ಒಂದೇ ಒಂದು ಸ್ಟೇಟ್ ರೆಪ್ರಸೆಂಟ್ ಮಾಡಬೇಕಾಗಿದೆ. ವಾದ ಮಾಡಿ ಇಳಿಸಬೇಕಾಗಿದೆ, ಅದನ್ನು ಏನಾದರೂ ಮಾಡಿ ಇಳಿಸುತ್ತೀರಾ ಎಂದು ಕೇಳುತ್ತೇನೆ. ಇವರು ಈಗ ಏನು ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡ್ ಸುದ್ದಿ ಮಾತನಾಡಿದರು ಅದರಲ್ಲಿ ಕೆಲವು ಬಹಳ ಕ್ಲಿಷ್ಟವಾದ ನಿಬಂಧನೆಗಳು ಇವೆ. ನಾವೆಲ್ಲಾ ಅಪ್ಲಿಕೆಂಟ್ಸ್ ಇದ್ದೇವೆ. ಅದಕ್ಕೆ ನಮಗೆ ಗೊತ್ತಿಲ್ಲ ಎಂದು ತಾವು ತಿಳಿದುಕೊಳ್ಳಬಾರದು. ಬ್ಯಾಂಕ್ ಲೋನ್ ಇರಬೇಕು, ಮಿನಿಮಮ್ಮ ಇಷ್ಟು ಎಕರೆ ಇರಬೇಕು, ಈ ರೀತಿಯಲ್ಲೇ ಅವರು ಕ್ರಾಪ್ ಹಾಕಿರಬೇಕು ಎಂದು ಇದೆ, ಅದನ್ನು ಸರಳೀಕರಣ ಮಾಡದೇ ಹೋದರೆ ಮಧ್ಯಮ ವರ್ಗದವರಿಗೆ, ಬಡತನ ಇರುವ ರೈತರಿಗೆ ಸಿಕ್ಕುವಂತಿಲ್ಲ. 10 ಲಕ್ಷ 15 ಲಕ್ಷ 20 ಲಕ್ಷ ರೂ.ಗಳಿಗಿಂತ ಮೇಲ್ಪಟ್ಟು ನಾವು ಅಪ್ಲಿಕೇಶನ್ ಹಾಕದೇ ಹೋದರೆ ಆ ಸ್ಕೀಮ್‌ನಲ್ಲಿ ಅವರು ಸಬ್ಸಿಡಿ ಕೊಡುವುದಿಲ್ಲ. ಒಂದು ಕೋಟಿ, ಎರಡು ಕೋಟಿ ಮೂರು ಕೋಟಿ ರೂ.ಗಳು ಎಂದು ಮಾತನಾಡುತ್ತಿದ್ದಾರೆ. ಇದು ರೈತರನ್ನು ಉದ್ಧಾರ ಮಾಡಲು ಮಾಡಿರುವ ಕೆಲಸ ಅಲ್ಲ. ಮೂರನೇಯದು ತಾವು ಇಲ್ಲಿ ಕೋಕನಟ್ ಡೆವಲಪ್‌ಮೆಂಟ್ ಬೋರ್ಡ್ ಸುದ್ದಿ ಮಾತನಾಡಿದಿರಿ. ಬಹಳಷ್ಟು ಸ್ಕೀಮ್‌ಗಳಲ್ಲಿ ಅಲ್ಲಿ ಹಣ ಇದೆ. ತಾವು ಹೋಗಬೇಕು, ಕುಳಿತುಕೊಳ್ಳಬೇಕು, ಮಾತನಾಡಬೇಕು, ಹಣ ತರಬೇಕು, ನಾಲ್ಕನೆಯದು ಸ್ಪೈಸಸ್ ನಿಮ್ಮ ಕೈ ಕೆಳಗೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅವರು ಇನ್ನೂ ಹಳೇ ಮೈಸೂರಿನಲ್ಲಿಯೇ ಇದ್ದಾರೆ. ತುಮಕೂರು, ಕೋಲಾರ, ಇಲ್ಲೇ ಓಡಾಡುತ್ತಿದ್ದಾರೆ. ಇರಲಿ ಪಾಪ ದೂರು ಹೋಗಿಲ್ಲ. ಇಡೀ ರಾಜ್ಯದಲ್ಲಿ ಸ್ಪೈಸಸ್ ಕ್ರಾಪ್ಸ್ ನಿರ್ನಾಮವಾಗುತ್ತಿದೆ. ನಿಮ್ಮ ಇಲಾಖೆಗೆ ಮೊದಲನೇ ಸೂಚನೆ ಕೊಡಬೇಕು, ಯಾರು ವೆನಿಲ್ಲಾನಾ ಈ ಕಡೆ ಹಳೆ ಮೈಸೂರು ಪ್ರಾಂತ್ಯದಲ್ಲಿ ಬೆಳೆಯಿರಿ ಎಂದು ಪ್ರೊಪಗೇಟ್ ಮಾಡಿ ಬಳ್ಳಿ ಕೊಡುವವನಿಗೆ ದುಡ್ಡು ಸಿಕ್ಕಲಿ ಎಂದು ಹೇಳಿ, ಏಳು ಏಳೂವರೆ ರೂಪಾಯಿಗೆ

ಒಂದು ಕಟಿಂಗ್ ತೆಗೆದುಕೊಂಡು ಬಂದು ಮೂರು ರೂಪಾಯಿಗೆ ಕೊಟ್ಟು ಇಲ್ಲಿ ಎಲ್ಲಾ ಹಾಕಿಸಿಬಿಟ್ಟು, ವೆನಿಲ್ಲಾ ಏನಿದೆ ಅದು ಇವತ್ತು ಕೇಳುವವರು ದಿಕ್ಕಿಲ್ಲದಂತೆ ಆಗಿಬಿಟ್ಟಿದೆ. ಅಂತಹ ನಾನ್ಸೆನ್ಸ್ ಕ್ರಾಪ್‌ಗಳನ್ನು ಹ್ಯುಮಿಡಿಟಿ ಇಲ್ಲದ ಕಡೆ ತಂಪು ಇಲ್ಲದೆ ಇರುವ ಕಡೆ ಬೆಳೆಯಬೇಡಿ ಎಂದು ಹೇಳುವಷ್ಟು ದೊಡ್ಡ ತನವನ್ನು ನಿಮ್ಮ ಇಲಾಖೆ ತೋರಿಸಬೇಕು. ಇನ್ನು ಆಯಿಲ್ ಫಾಮ್ ಬಗ್ಗೆ ನಾವು ನಿಮ್ಮ ಹತ್ತಿರ ಮಾತನಾಡದೇ ಇರುವುದು ಒಳ್ಳೆಯದು. ಎಲ್ಲಾ ಆಗಿ ಹೊಸ ಹೊಸ ವರೈಟಿ ಬಂದಿದೆ. ಈಗ ನ್ಯಾಚುರಲ್ ಪ್ರಾಡಕ್ಟ್ಸ್‌ಗೆ ಬಹಳ ಡಿಮ್ಯಾಂಡ್ ಇದೆ. ವಿದೇಶಗಳಲ್ಲಿ ನೀವು ಏನು ಹೂವು ಹೇಳುತ್ತಿದ್ದೀರಿ ಇಲ್ಲಿ, ಕಲರ್‌ಗೆ, ಪಿಗ್‌ಮೆಂಟ್ಸ್‌ಗೆ, ಬಹಳ ಯಥೇಚ್ಛವಾದಂತಹ ಡಿಮ್ಯಾಂಡ್ ಇದೆ. ಚೆಂಡು ಹೂವಿನ ಪಿಗ್‌ಮೆಂಟ್, ಮೆಣಸಿನಕಾಯಿ ಪಿಗ್‌ಮೆಂಟ್, ಹಸಿರದ್ದು ಯಾವುದಾದರೂ ಪಿಗ್‌ಮೆಂಟನ್ನು ಫುಡ್‌ಗೆ ಬಳಸಲಿಕ್ಕೆ ಅವರು ನ್ಯಾಚುರಲ್ ಕಲರ್ ಎಂದು ಹೇಳಿ ಇವತ್ತು ಬಹಳ ಬೇಡಿಕೆ ಇಟ್ಟು ಇಂಪೋರ್ಟ್ ಮಾಡುತ್ತಿದ್ಧಾರೆ. ಅಂತಹ ಯಾವುದಾದರೂ ಇಂಡಸ್ಟ್ರಿಯನ್ನು ಇಲ್ಲಿ ಹಾಕಲಿಕ್ಕೆ ಆಗುತ್ತದೆಯೇ? ಅಡಿಕೆಯಂತಹ ವಸ್ತುವನ್ನು ಪ್ರೋಸೆಸ್ ಮಾಡಿ ಆ ಪಿಗ್‌ಮೆಂಟ್‌ನಲ್ಲಿ ಸೇರಿಸುವುದಕ್ಕೆ ಆಗುತ್ತದೆಯೇ? ಟ್ಯಾಮರಿಡ್ ಎಂಬ ಒಂದು ವಸ್ತುವನ್ನು ಪಿಗ್‌ಮೆಂಟ್ ಮಾಡಿ ಅದರಲ್ಲಿ ಸೇರಿಸುವುದಕ್ಕೆ ಆಗುತ್ತದೆಯೇ? 200–300 ಗ್ರೇಡ್ ಮಷಿನ್ ತಂದು ಅದನ್ನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಆಗುತ್ತದೆಯೇ? ಪಾಸಿಬಲಿಟೀಸ್‌ನ್ನು ಸ್ವಲ್ಪ ಎಕ್ಸ್‌ಪ್ಲೋರ್ ಮಾಡಬೇಕು, ಬರೇ ಇಷ್ಟಕ್ಕೆ ನಿಂತುಕೊಳ್ಳಬಾರದು ಹಾರ್ಟಿಕಲ್ಚರ್. ಮೂರನೇಯದು ಫ್ಲೋರಿಕಲ್ಚರ್. ತಾವು ಏನು ಹೇಳುತ್ತಿದ್ದೀರಿ ಅಂದರೆ 60 ರೂಪಾಯಿಗಳಿಂದ 70 ರೂಪಾಯಿಗಳವರೆಗೆ ಒಂದು ಹೂವಿಗೆ ಬರುವಂತಹ ಗಿಡಗಳು ನಮ್ಮ ಹತ್ತಿರ ಇವೆ. ಅದನ್ನೆಲ್ಲಾ ಸ್ವಲ್ಪ ಪ್ರೊಪಗೇಟ್ ಮಾಡಿ ಹಾರ್ಟಿಕಲ್ಚರ್ ಬೋರ್ಡ್ ಸುದ್ದಿ ತಾವು ಏನು ಮಾತನಾಡಿದಿರಿ, ನಾನು ಆ ಆಫೀಸ್ ನೋಡಿಲ್ಲ ಎಂದು, ಅದು ನಿಮ್ಮ ಕೈಗೆ ಎಟುಕುವಂತಹ ಸ್ಥಿತಿಯಲ್ಲಿ ಇಲ್ಲ. ಅದಕ್ಕೆ ಬಹಳ ದೊಡ್ಡವರು ಬೇಕು, ಮಲ್ಯ ಅಂತಹವರು, ಬಿರ್ಲಾ ಅಂತಹವರು ಮಾಡುವ ಫಾರಂಗಳಿಗೆ ಅವರು ಕೊಡುತ್ತಾರೆ. ಈ ರಾಜ್ಯದಲ್ಲಿ ಯಾರ್‍ಯಾರು ಅರ್ಜಿ ಹಾಕಿದ್ದಾರೆ ಎಂಬುದು ಗೊತ್ತು. ಅವರೆಲ್ಲಾ ಒಂದು ಕೋಟಿ, ಒಂದೂವರೆ ಕೋಟಿ, ಎರಡು ಕೋಟಿ ರೂ.ಗಳಿಗೆ ಅರ್ಜಿ ಹಾಕಿರುವುದು. ಯಾರೂ ಎರಡು ಲಕ್ಷ, ಮೂರು ಲಕ್ಷ ರೂ.ಗಳಿಗೆ ಹಾಕಿರುವ ರೈತರು ಇಲ್ಲ. ಅದನ್ನು ಸರಳೀಕರಣ ಮಾಡಿಸಬೇಕು. ಆ ಮಂತ್ರಿ ಹತ್ತಿರ ಹೋಗಬೇಕು. ಸೆಂಟ್ರಲ್ ಅಗ್ರಿಕಲ್ಚರ್ ಮಿನಿಸ್ಟರ್ ಹತ್ತಿರ ಕುಳಿತುಕೊಂಡು ಹೋರಾಟ ಮಾಡಿ ಮಧ್ಯಮ ದರ್ಜೆಯಲ್ಲಿರುವ ರೈತರಿಗೆ ಕೊಡಿ, 10 ಎಕರೆ 20 ಎಕರೆ 30 ಎಕರೆ ಮ್ಯಾಂಗೋ ಬೆಳೆಯುತ್ತೇವೆ ಸಪೋಟ ಬೆಳೆಯುತ್ತೇವೆ, ದಾಳಿಂಬೆ ಬೆಳೆಯುತ್ತೇವೆ, ಇದನ್ನೆಲ್ಲಾ ಇದರಲ್ಲಿ ಸೇರಿಸಿ ಕೊಡಿ ಎಂದು

ಹೋರಾಟ ಮಾಡುವಂತಹ ಒಂದು ಕಳಕಳಿಯನ್ನು ತಾವು ತೋರಿಸಬೇಕು. ಬಹಳ ಪ್ರಮುಖವಾದ ಖಾತೆಗೆ ತಾವು ಮಂತ್ರಿಯಾಗಿದ್ದೀರಿ. ದಯವಿಟ್ಟು ಇಷ್ಟು ಹುಡುಗಾಟ ಮಾಡಿ ನಮ್ಮ ಹೊಟ್ಟೆ ಮೇಲೆ ಹೊಡೆಯುವ ಕೃಪೆ ಮಾಡಬೇಡಿ. ಹುಡುಗಾಟಿಕೆಗೆ ಬೇರೆ ಕಾಲ ಇರುತ್ತದೆ. ನೀವು ಹೊಂದಿ ಇರುವುದು ಬಹಳ ಪ್ರಮುಖವಾದ ಖಾತೆ. ಕರ್ನಾಟಕ ರಾಜ್ಯ ಹಾರ್ಟಿಕಲ್ಚರ್‌ನಲ್ಲಿ ಫೈನೆಸ್ಟ್ ಸ್ಟೇಟ್ ಇವತ್ತು ಇದು ಬಹಳ ಕ್ಷೀಣಿಸುತ್ತಿದೆ. ನಿಮ್ಮನ್ನು ಎಲ್ಲಾ ದಿಕ್ಕಿನಲ್ಲಿ ಇವತ್ತು ಮಹಾರಾಷ್ಟ್ರ ಓವರ್ ಟೇಕ್ ಮಾಡಿಕೊಂಡು ಹೋಗುತ್ತಿದೆ. ನೀವು ಏನು ಮ್ಯಾಂಗೋ ಅಲ್ಲಿಗೆ ತೆಗೆದುಕೊಂಡು ಹೋಗಿ ಮಾರುತ್ತಿದ್ದೀರಿ ಅದನ್ನು ಅವರು ಇವತ್ತು ಬೆಳೆಯುತ್ತಿದ್ದಾರೆ. ನೀವು ಏನು ಬನಾನಾ ತೆಗೆದುಕೊಂಡು ಹೋಗಿ ಅಲ್ಲಿ ಮಾರುತ್ತಿದ್ದೀರಿ ಅವರು ಇವತ್ತು ಅದನ್ನು ಬೆಳೆಯುತ್ತಿದ್ದಾರೆ. ಈ ರಾಜ್ಯದ ಬನಾನಾ ಹಾಳಾಗಿದೆ. ಈ ರಾಜ್ಯದ ಮ್ಯಾಂಗೋ ಹಾಳಾಗಿದೆ, ಈ ರಾಜ್ಯದ ಸಪೋಟ ಹಾಳಾಗಿದೆ, ಈ ರಾಜ್ಯದ ಕೊತ್ತಂಬರಿ ಸೊಪ್ಪು ಹಾಳಾಗಿದೆ, ನೀವು ಹಾರ್ಟಿಕಲ್ಚರ್ ಇಲಾಖೆಯಲ್ಲಿ ಏನೇನು ಮಾಡಿಕೊಂಡು ಬಂದಿರಿ, ಕರಿಬೇವಿನ ಸೊಪ್ಪಿನಿಂದ ಹಿಡಿದು ಎಲ್ಲಾ ನಿರ್ನಾಮವಾಗಿದೆ. ಆ ಕಡೆ ಸ್ವಲ್ಪ ಗಮನ ಕೊಡುತ್ತೀರಾ ಎಂದು ನಾನು ತಮ್ಮನ್ನು ಕೇಳಬಯಸುತ್ತೇನೆ.

(x) ಶ್ರೀ ಬಿ. ನಾಗರಾಜ ಶೆಟ್ಟಿ (ಬಂಟ್ವಾಳ) :– ಸನ್ಮಾನ್ಯ ಅಧ್ಯಕ್ಷರೆ, ನಮ್ಮ ತೋಟಗಾರಿಕಾ ಮಂತ್ರಿಗಳು ವಿಶೇಷವಾಗಿ, ನಮಗೆಲ್ಲಾ ಮನದಟ್ಟಾಗುವ ರೀತಿಯಲ್ಲಿ ಹೇಳಿದ್ದಾರೆ, ಅವರಿಗೆ ಧನ್ಯವಾದಗಳು. ಪ್ರಮುಖವಾಗಿ ಅಡಿಕೆ ಬೆಳೆಗಾರರ ಬಗ್ಗೆ ಈಗಾಗಲೇ ಅವರು ಕರ್ನಾಟಕ ಸರ್ಕಾರ ಹತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಎಂದು ಹೇಳಿದರು, ಅವರು ಪ್ರಯತ್ನ ಪಟ್ಟಿದ್ದಾರೆ, ಮಾನ್ಯ ಮುಖ್ಯಮಂತ್ರಿಯವರು ಒಪ್ಪಿದ್ದಾರೆ. ಆದರೆ ಅದರಲ್ಲಿ ನಾಲ್ಕು ಕೋಟಿ ರೂ.ಗಳು ಮಾತ್ರ ಈವರೆಗೆ ಬಿಡುಗಡೆಯಾಗಿದೆ. ಆರು ಕೋಟಿ ರೂ.ಗಳು ಈ ದಿನದವರೆಗೆ ಬಿಡುಗಡೆಯಾಗದೆ, ಈಗ ಬಡ ಅಡಿಕೆಬೆಳೆಗಾರರು ಬಹಳ ಕಷ್ಟದಲ್ಲಿದ್ದಾರೆ, ಅದಕ್ಕೆ ತಾವು ಕೂಡಲೇ ಒಂದು ವ್ಯವಸ್ಥೆಯನ್ನು ಮಾಡಬೇಕು, ಆ ಬಗ್ಗೆ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬೇಕು. ಎರಡನೆಯದಾಗಿ ವಿಶೇಷವಾಗಿ ಕೊಕೊ ಗಿಡಗಳ ಬಗ್ಗೆ ಹೇಳಿದರು, ನಾನು ಆಗಲೇ ಕೊಕೊ ಬಗ್ಗೆ ಮಾತನಾಡಿದ್ದೇನೆ. ನಮ್ಮ ರಾಜ್ಯ ಹಾಗೂ ದೇಶದಲ್ಲಿ ಏನು ಅವಶ್ಯಕತೆ ಇದೆ ಅದಕ್ಕೆ ಹಿಂದೆ ಕರ್ನಾಟಕ ರಾಜ್ಯ ಸೇಲ್ಸ್ ಟ್ಯಾಕ್ಸ್ ಇರಲಿಲ್ಲ, ಈ ವರ್ಷದಲ್ಲಿ ಕೊಕೊಗೆ ನಾಲ್ಕು ಪರ್ಸೆಂಟ್ VAT ಹಾಕಿದ್ದಾರೆ. ಉಪ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆ ಟ್ಯಾಕ್ಸ್ ವಾಪಸ್ ಪಡೆಯಲು ಕ್ರಮ ತೆಗೆದುಕೊಳ್ಳಬೇಕು. ಕೊಕೊ ಪಾಟಗೆ ಏನು ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ,

(x) ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.

ಅದನ್ನು ವಾಪಸ್ಸು ಮಾಡಬೇಕು. ಮೂರನೆಯದಾಗಿ, ಗೋಡಂಬಿ ವ್ಯವಹಾರದ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದೀರಿ, ಬಹಳ ಸಂತೋಷ. ಏಕೆಂದರೆ, ಇದನ್ನು ರಫ್ತು ಮಾಡುವುದರಿಂದ ನಮ್ಮ ದೇಶಕ್ಕೆ ಡಾಲರ್ಸ್ ರೂಪದಲ್ಲಿ ರೆವಿನ್ಯೂ ಬರುತ್ತಿರುವ ಒಳ್ಳೆಯ ಉದ್ದಿಮೆ . ಅದರ ಮೇಲೆ ಹದಿನೆಂಟುವರೆ ಪರ್ಸೆಂಟ್ VAT ಇದೆ, ಇಡೀ ದೇಶದಲ್ಲೇ ಇದು ಹೆಚ್ಚು ರಾ ಮತ್ತು ಫಿನಿಶ್ಡ್ ಗೋಡಂಬಿ ಮೇಲೆ ಸುಮಾರು ಹದಿನೆಂಟೂವರೆ ಪರ್ಸೆಂಟ್ ಟ್ಯಾಕ್ಸ್ ಹಾಕಲಾಗಿದೆ, ಈ ಮೂರು ವಿಚಾರಗಳ ಬಗ್ಗೆ ತಾವು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು, ಅದರ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಅಕ್ಕಿ :– ಮಾನ್ಯ ಮಂತ್ರಿಗಳ ಗಮನಕ್ಕೆ ನಾನು ಈ ವಿಷಯವನ್ನು ತಂದಿದ್ದೇನೆ, ತೋಟಗಾರಿಕೆಯಲ್ಲಿ ಪ್ರಮುಖವಾದ ಬೆಳೆ ಮೆಣಸಿನ ಕಾಯಿ, ತಾವು ಈಗ ಅಡಿಕೆ ಸೇರಿದಂತೆ ಬೇರೆ ಬೆಳೆಗೆಲ್ಲಾ ಬೆಂಬಲ ಕೊಡುತ್ತೇವೆಂದು ಹೇಳಿದಿರಿ. ಹಿಂದೆ ಒಂದು ಕ್ವಿಂಟಲ್‌ಗೆ 7–8 ಸಾವಿರ ರೂಪಾಯಿಗಳಿಗೆ ಮೆಣಸಿನ ಕಾಯಿಯನ್ನು ನಾವು ಮಾರಾಟ ಮಾಡುತ್ತಿದ್ದೆವು. ಈಗ ಆ ಬೆಲೆ ಇಲ್ಲ. ಬೆಲೆ ಕುಸಿತವಾದ ಸಮಯದಲ್ಲಿ ಅದಕ್ಕೂ ಕೂಡ ಬೆಂಬಲ ಬೆಲೆಯನ್ನು ಕೊಡುವ ವ್ಯವಸ್ಥೆಯಾಗಬೇಕು. ತಾವು, ಬಿಜಾಪುರ, ಅಲ್ಲಿ ಇಲ್ಲಿ ಕೋಲ್ಡ್ ಸ್ಟೋರೇಜ್ ಮಾಡಿದ್ದೇವೆಂದು ಹೇಳಿದಿರಿ. ಈಗ ಕುಂದಗೋಳ, ಸಿರಿಹಟ್ಟಿ, ಅಣ್ಣಿಗೇರಿ, ಕಲಗಟ್ಟಿ ಕೆಲವೊಂದು ಭಾಗಗಳಿರಬಹುದು, ಅವೆಲ್ಲಾ ಹೆಚ್ಚಿಗೆ ಮೆಣಸಿನಕಾಯಿಯನ್ನು ಬೆಳೆಯತಕ್ಕಂಥ ಪ್ರದೇಶಗಳು. ಆ ಪ್ರದೇಶದವರೆಲ್ಲಾ ಬೆಳೆದು, ಬ್ಯಾಡಗಿ ಮತ್ತು ಹುಬ್ಬಳ್ಳಿ–ಧಾರವಾಡದ ಕೋಲ್ಡ್ ಸ್ಟೋರೇಜ್‌ನಲ್ಲಿಡುತ್ತಾರೆ. ಅದಕ್ಕೆ ನೀವು ರೈತರ ಸಹಕಾರ ಸಂಘಕ್ಕೆ ಒಂದು ಕೋಲ್ಡ್ ಸ್ಟೋರೇಜ್ ಮಾಡಿಕೊಟ್ಟು ಹೆಚ್ಚಿನ ಸಬ್ಸಿಡಿಯನ್ನು ಕೊಡುವ ವ್ಯವಸ್ಥೆ ಮಾಡಬೇಕು. ಅದರ ಜೊತೆಗೆ ಇವತ್ತು ಮೆಣಸಿನಕಾಯಿ ಬೆಳೆ ಕಡಿಮೆಯಾಗಿರುವುದರಿಂದ ಬೆಂಬಲ ಬೆಲೆಯನ್ನು ಸರ್ಕಾರ ಆದಷ್ಟು ಬೇಗ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಗೋಪಾಲಕೃಷ್ಣ ಬೇಳೂರು :– ಮಾನ್ಯ ಅಧ್ಯಕ್ಷರೆ, ತಾಳೆ ಎಣ್ಣೆ ಫ್ಯಾಕ್ಟರಿ, ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿತ್ತು, ಅದು ಈಗ ಯಾವ ಪರಿಸ್ಥಿತಿಯಲ್ಲಿದೆ?

ಶ್ರೀ ಆರ್. ಶ್ರೀನಿವಾಸ್ :– ಅದು ಪ್ರಾರಂಭವಾಗಿದೆ.

ಶ್ರೀ ಗೋಪಾಲಕೃಷ್ಣ ಬೇಳೂರು :– ತಾಳೆ ಎಣ್ಣೆಗೆ ಬೇಕಾದ ತಾಳೆ ಬೆಳೆ ಬರುತ್ತಿದೆಯೇ? ನಮ್ಮ ತಾಲ್ಲೂಕಿನಲ್ಲೆಲ್ಲ ಪೂರ್ತಿ ತಾಳೆ ಗಿಡಗಳನ್ನೆಲ್ಲಾ ಕಡಿದು ಹಾಕಿದ್ದಾರೆ. ಬಾಲಾಜಿ ಆಯಿಲ್ ಫಾಂ ಎಂದು ಪ್ರಾರಂಭವಾಗಿದೆ.

ಶ್ರೀ ಆರ್. ಶ್ರೀನಿವಾಸ್ :– ಬಹಳ ಕಡೆ ತಾಳೆ ಬೆಳೆ ಬೆಳೆಯುವುದು ಪ್ರಾರಂಭವಾಗಿದೆ.

ಶ್ರೀ ಗೋಪಾಲಕೃಷ್ಣ ಬೇಳೂರು :– ಮಾನ್ಯ ಮಂತ್ರಿಗಳು ಏನು ಹೇಳಿದರು ಎಂಬುದು ಗೊತ್ತಾಗಲಿಲ್ಲ.

ಛೇರ್ಮನ್ :– ಮಂತ್ರಿಗಳು ಕ್ಲಾರಿಫಿಕೇಶನ್ ಕೊಡುವಾಗ ಇದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ತೋಟಗಾರಿಕೆ ಇಲಾಖೆಯ ಸಚಿವರು, ಉತ್ತರ ಕೊಡುವಾಗ ನಾವು ಸ್ವಲ್ಪ ಹಾಸ್ಯವಾಗಿ ಹೇಳಿರಬಹುದು. ಆದರೆ ನೀವು ಉಪಯುಕ್ತವಾದ ಉತ್ತರವನ್ನು ಕೊಟ್ಟಿದ್ದೀರಿ, ಉತ್ತರ ಡೀಪ್ ಇರಬಹುದು, ಅನೇಕ ವಿಚಾರಗಳಲ್ಲಿ ನಿಮಗೆ ತಿಳುವಳಿಕೆ ಇದೆ, ನೀವು ಗ್ರಾಮ್ಯವಾಗಿ ಮಾತನಾಡಿರಬಹುದು, ನಿಜಕ್ಕೂ ಅದರಲ್ಲಿ ಬಹಳ ಸತ್ಯವಿದೆ, ಶಕ್ತಿ ಇದೆ. ನಿಮ್ಮ ಧೈರ್ಯವನ್ನು ಮೆಚ್ಚಿದೆ, ದುಡ್ಡು ಇರಲಿ ಇಲ್ಲದಿರಲಿ, ನಾನು ಮಾಡುತ್ತೇನೆಂದು ಇಲ್ಲಿ ನೀವು ಹೇಳಿದಿರಿ; ಅದಕ್ಕೆ ನಾವು ಮೆಚ್ಚಬೇಕು. ಆದರೆ ನಾನು ಮಾತನಾಡುವಾಗ ತೆಂಗಿನ ಬೆಳೆಯ ಬಗ್ಗೆ ಹೇಳಿದೆ. ಕಳೆದ ಸಾರಿ ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿಯಲ್ಲಿ ನಲವತ್ತು ಕೋಟಿ ರೂಪಾಯಿಗಳನ್ನು ತೆಂಗು ನುಸಿ ರೋಗಕ್ಕೆ ಬೇಕಾದ ಔಷಧಿಗಳಿಗಾಗಿ ತಂದರು. ಈ ಹಣವನ್ನು ಯಾರು ತಿಂದುಬಿಟ್ಟರು? ಎಲ್ಲಿದೆ ಲೆಕ್ಕ? ಔಷಧಿ ತಿಂದವರು ಯಾರು? ಈ ಔಷಧಿಯನ್ನು ಎಲ್ಲೂ ಕೊಟ್ಟಿಲ್ಲ, ಈ ಬಗ್ಗೆ ಪ್ರಾಮಾಣಿಕವಾಗಿ ಹೇಳಬೇಕು. ಅವರು ಯಾರೇ ಇರಲಿ, ಅವರು ಎಷ್ಟು ದೊಡ್ಡವರೇ ಇರಲಿ, ಯಾವ ಪಕ್ಷದವರೇ ಇರಲಿ, ಯಾರೇ ಇರಲಿ, ಯಾರೇ ಮಂತ್ರಿಗಳಾಗಿರಲಿ, ಆ ನಲವತ್ತು ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯದ ತೆಂಗಿನ ಬೆಳೆ ನುಸಿ ರೋಗ ನಿವಾರಣೆಗೆಂದು ತಂದಿದ್ದನ್ನು ಏನು ಮಾಡಲಾಯಿತು ಎಂಬುದನ್ನು ಇವತ್ತು ನೀವು ಸ್ಪಷ್ಟವಾಗಿ ಹೇಳುವುದಕ್ಕಾಗಲಿಲ್ಲವೆಂದರೂ, ನಾಳೆಯಾದರೂ, ಸದನದಲ್ಲಿ ಒಂದು ವರದಿಯನ್ನು ಕೊಡಬೇಕು. ಕರ್ನಾಟಕ ರಾಜ್ಯದಲ್ಲಿ 7–8 ಕೋಟಿ ತೆಂಗಿನ ಗಿಡಗಳಿವೆ. ಇದನ್ನು ಮಾನ್ಯ ಉಪಮುಖ್ಯಮಂತ್ರಿಯವರ ಗಮನಕ್ಕೂ ತರುತ್ತಿದ್ದೇನೆ, ಕನಿಷ್ಟ ಮೂರು ಕೋಟಿ ತೆಂಗಿನ ಮರಗಳಿಗೆ ನುಸಿರೋಗ ತಗುಲಿ, ಒಂದು, ಒಂದೂವರೆ ಕೋಟಿ ತೆಂಗಿನ ಮರಗಳು ಸಂಪೂರ್ಣ ನಾಶವಾಗಿವೆ. ಆ ತೆಂಗು ಬೆಳೆಗಾರನಿಗೆ ಬೆಳೆ ರಕ್ಷಣೆ ಮಾಡುವುದಕ್ಕೆ ನೀವು ಯಾವ ರೀತಿಯಾಗಿ ರಕ್ಷಣೆ ಕೊಟ್ಟಿದ್ದೀರಿ? ಆ ನುಸಿರೋಗ ಹೋಗುವುದಕ್ಕೆ ? ಏನು ಮಾಡಿದ್ದೀರಿ? ನೀವು ಆವಾಗಲೆ ಹೇಳಿದಿರಿ, ನುಸಿ ರೋಗ ಬರೀ ಔಷಧಿಯಿಂದ ಹೋಗುವುದಿಲ್ಲ; ಗೊಬ್ಬರ ಹಾಕಬೇಕು, ಮಳೆ ಜಾಸ್ತಿ ಬರಬೇಕು, ನೀರು ಹಾಕಬೇಕು, ಬೇವಿನ ತಿಂಡಿ ಹಾಕಬೇಕ, ಇವೆಲ್ಲಾ ಹಾಕಬೇಕು ಎಂದು ನನಗೂ ಎರಡೂವರೆ ಸಾವಿರ ತೆಂಗಿನ ಗಿಡಗಳಿವೆ. ನಿಮಗೆ ಹೇಳುವುದಾದರೆ ನಾವು ಒಂದು ವರ್ಷಕ್ಕೆ 3 ರಿಂದ 5 ಲಕ್ಷ

ತೆಂಗಿನ ಕಾಯನ್ನು ಬೆಳೆಯುತ್ತೇವೆ, ಮೂರು ತಿಂಗಳ ಹಿಂದೆ ಒಂದು ತೆಂಗಿನ ಕಾಯಿಗೆ ಏಳು ರೂಪಾಯಿ ಇದ್ದರೆ, ಇವತ್ತು ನಾಲ್ಕು ರೂಪಾಯಿ ಆಗಿದೆ. ನಮ್ಮ ತೋಟದಲ್ಲಿ ಬಿದ್ದದ್ದನ್ನು ಮಾತ್ರ ಶೇಖರಣೆ ಮಾಡುತ್ತೇವೆ, ಕೀಳುವುದಕ್ಕೆ ಹೋಗುವುದಿಲ್ಲ. ಪ್ರತಿ ಸಾರಿ 30 ರಿಂದ 50 ಸಾವಿರ ತೆಂಗಿನ ಕಾಯಿಗಳನ್ನು ಮಾರುತ್ತೇವೆ. ಈಗಲೂ ನಮ್ಮಲ್ಲಿ ಹತ್ತು ಸಾವಿರ ಕಾಯಿಗಳಿವೆ, ಈಗ ಒಂದು ಕಾಯಿಯ ಬೆಲೆ ನಾಲ್ಕು ರೂಪಾಯಿಗಳು. ಒಂದೂವರೆ ಎರಡು ತಿಂಗಳುಗಳ ಹಿಂದೆ ಮಾರಿದ್ದರೆ ಏಳು ರೂಪಾಯಿಗಳು ಸಿಗುತ್ತಿತ್ತು. ಬೆಲೆ ಕೇವಲ ಒಂದೂವರೆ ತಿಂಗಳಲ್ಲಿ ಮೂರು ರೂಪಾಯಿಗಳು ಇಳಿದಿದೆ, ಮತ್ತೆ ನುಸಿ ರೋಗ ಬಂದಿರುವುದರಿಂದ ಈಗ ಜಾಸ್ತಿ ಉತ್ಪಾದನೆ ಇಲ್ಲ. ಈ ಪರಿಸ್ಥಿತಿಯಲ್ಲಿ ತೆಂಗಿನ ಬೆಳೆಗಾರರಿಗೆ ಸರ್ಕಾರದ ಸಹಾಯಧನವೇನು, ಪರಿಹಾರವೇನು ಮತ್ತು ಕಟ್ಟಿರತಕ್ಕಂಥ ಮರಗಳಿಗೆ, ನಾನು ನಿನ್ನೆ ಹೇಳಿದಂತೆ ಕನಿಷ್ಟ ಒಂದು ಮರಕ್ಕೆ ಒಂದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕು ಎಂಬುದು ನನ್ನ ವಾದ ಮತ್ತು ಒತ್ತಾಯ. ನೀವು ತೋಟಗಾರಿಕೆ ಇಲಾಖೆಯ ಸಚಿವರಾಗಿ ಎಷ್ಟು ಹಣ ಕೊಡಬಹುದು, ಎಲ್ಲಿಂದ ಹಣ ತರಬಹುದು?

ಶ್ರೀ ಆರ್. ಧ್ರುವನಾರಾಯಣ :– ಈಗ ಕೆಇಬಿ ಮತ್ತು ರೈಲ್ವೆ ಡಿಪಾರ್ಟ್‌ಮೆಂಟ್‌ಗಳಲ್ಲಿ, ಒತ್ತುವರಿಯಾದಾಗ ತೋಟವಿದ್ದರೆ, ಪರಿಹಾರವಾಗಿ ಒಂದು ಮರಕ್ಕೆ 1200 ರೂಪಾಯಿಗಳನ್ನು ಕೊಡುತ್ತಾರೆ, ದಯಮಾಡಿ ಆ ರೀತಿಯಾಗಿ ಪರಿಹಾರವನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ :– ಅದು ನಾಲ್ಕು ಸಾವಿರ ಇದೆ, ನಾನು ಕೇಳುತ್ತಿರುವುದು ಪ್ರತಿ ಮರಕ್ಕೆ ಒಂದು ಸಾವಿರ ರೂಪಾಯಿಗಳ ಪರಿಹಾರ ಕೊಡಿ ಎಂದು ಕೇಳುತ್ತಿದ್ದೇನೆ. ನಾನು ತಮಗೆ (ಮಂತ್ರಿ) ಬಹುಮಾನವಾಗಿ ಕೊಡಲು ಈ ಎರಡು ನುಸಿರೋಗಪೀಡಿತ ತೆಂಗಿನ ಕಾಯಿಗಳನ್ನು ತಂದಿದ್ದೇನೆ. ಇವನ್ನು ನಾನು ನಿಮಗೆ ಏತಕ್ಕೆ ಕೊಡುತ್ತಿದ್ದೇನೆಂದರೆ ಆ ಜನರ ಪರಿಸ್ಥಿತಿ ಹೇಗಾಗಿದೆ ಎಂದರೆ ಈ ತೆಂಗಿನ ಕಾಯಿಗಳ ರೀತಿಯಾಗಿದೆ. ಇದು ಒಣಗಿರುವುದಿಲ್ಲ, ನುಸಿರೋಗ ಬಂದು ಬೆಳೆಯುವುದಕ್ಕಾಗದೆ ಪರಿಸ್ಥಿತಿ ಈ ರೀತಿಯಾಗಿದೆ. ನಾನು ಮಾತನಾಡುವಾಗ ಸ್ವಲ್ಪ ವಿಡಂಬನ ಇರಬಹುದು, ಹಾಸ್ಯವಾಗಿ ಮಾತನಾಡಿರಬಹುದು. ಆದರೆ ವಸ್ತು ಸ್ಥಿತಿಯನ್ನು ಹೇಳುವಾಗ ತೋಟಗಾರಿಕೆ ಇಲಾಖೆಗೆ ಎಷ್ಟು ಮಹತ್ವ ಇದೆ ಎಂಬ ಬಗ್ಗೆ ಸಮಗ್ರವಾಗಿ ವಿವರಣೆ ಕೊಟ್ಟಿದ್ದೇನೆ. ಇವತ್ತಿನ ದಿವಸ ನುಸಿರೋಗ ಬಂದು ಸುಮಾರು ಒಂದುವರೆ ಕೋಟಿ ಮರಗಳು ಸಂಪೂರ್ಣವಾಗಿ ನಾಶವಾಗಿವೆ, ಇದನ್ನು ನಿಮಗೆ ಏತಕ್ಕೆ ಕೊಡುತ್ತೇನೆಂದರೆ, ತಾವು ಮರೆಯಬಾರದು, ಕನಿಷ್ಟ ಈ ಬಗ್ಗೆ ತನಿಖೆ ಮಾಡಬೇಕು, ಎಷ್ಟು ಮರಗಳು ಹೋಗಿವೆ, ಇದರ ನಷ್ಟವೆಷ್ಟು, ಇದಕ್ಕೆ ಯಾವ ರೀತಿಯಾಗಿ

ಹಣ ಕೊಡಬೇಕು? ನಾನು ಕೇಳಿರುವುದು ಒಂದು ಮರಕ್ಕೆ ಒಂದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕು ಎಂದು ನೀವೇಷ್ಟು ಕೊಡುವುದಕ್ಕೆ ಸಾಧ್ಯ ಕೊಡಿ. ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಅವರದ್ದು, ಅವರ ಬಂಧು ಬಳಗದ್ದು ಎಲ್ಲಾ ಇದೆ. ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಅವರ ಗಮನಕ್ಕೂ ತರುತ್ತಿದ್ದೇನೆ. ಅವರು ಹಣಕಾಸಿನ ಸಚಿವರೂ ಸಹ ಆಗಿದ್ದಾರೆ. ನಿಮಗೆ ಸಹಾಯ ಮಾಡಲೆಂದು ನಾನು ಒತ್ತಾಯ ಮಾಡುತ್ತಿದ್ದೇನೆ, ನೀವು ಯಾವ ರೀತಿಯಾಗಿ ಸಹಾಯ ಮಾಡುತ್ತೀರಿ ಎಂಬುದನ್ನು ಹೇಳಬೇಕು. ಈ ನುಸಿರೋಗದಿಂದ ಬಳಲಿರತಕ್ಕಂಥ ಆ ತೆಂಗಿನ ಮರದ ರೈತರ ಪರವಾಗಿ ಎರಡು ನುಸಿರೋಗಪೀಡಿತ ತೆಂಗಿನ ಕಾಯಿಗಳನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ.

(ನುಸಿ ರೋಗ ಪೀಡಿತ ತೆಂಗಿನ ಕಾಯಿಗಳನ್ನು ಮಾನ್ಯ ಸದಸ್ಯರು ಸನ್ಮಾನ್ಯ ಅಧ್ಯಕ್ಷರ ಮೂಲಕ ಸನ್ಮಾನ್ಯ ಸಚಿವರಿಗೆ ತಲುಪಿಸಿದರು)

ಶ್ರೀ ಸಿ.ಟಿ. ರವಿ :– ನುಸಿ ಪೀಡೆಯಿಂದ ಲಾಭ ಮಾಡಿಕೊಂಡವರ ಸಹ ಬಹಳ ಜನರಿದ್ದಾರೆ. ಅವರ ಬಗ್ಗೆಯೂ ಕೂಡ ತನಿಖೆ ಮಾಡಿಸಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೇ, ಹನಿ ನೀರಾವರಿಗೆ ಶೇಕಡ 70ರಷ್ಟು ಸಬ್ಸಿಡಿ ಕೊಡಲಾಗುವುದೆಂದು ಹೇಳಿದ್ದಾರೆ. ಮೊದಲಿಗೆ ಈಗೇನು ಸರ್ಕುಲರ್ ಕಳುಹಿಸಿದ್ದಾರೆ, ಅರ್ಜಿಗಳನ್ನು ಸ್ವೀಕರಿಸಬಾರದು ಎಂದು ಅದನ್ನು ವಾಪಸ್ ಪಡೆಯಬೇಕು. ಅರ್ಜಿ ಸ್ವೀಕರಿಸಲು ಶುರುಮಾಡಬೇಕು. ಆಮೇಲೆ ಎಷ್ಟು ಸಬ್ಸಿಡಿ ಕೊಡುತ್ತೀರಿ ಎಂಬುದನ್ನು ಹೇಳಬೇಕು. ಮತ್ತೆ ನುಸಿ ರೋಗದ ಬಗ್ಗೆ ನಾನು ನಿನ್ನೆ ಹೇಳಿದೆ; ಇವತ್ತು ಬೆಳೆಯೂ ಕಡಿಮೆ, ಬೆಲೆಯೂ ಕಡಿಮೆ. ಎಲ್ಲದಕ್ಕೂ ಮಾರುಕಟ್ಟೆ ಮಧ್ಯಪ್ರವೇಶ ಬೇರೆ ಮಾಡಿದ್ದಾರೆ. ಇದಕ್ಕೊಂದಕ್ಕೆ ಪರಿಹಾರ ಕೊಡುವ ವ್ಯವಸ್ಥೆಯಾಗಬೇಕು. ತೆಂಗಿನ ಬೆಳೆ ಮತ್ತು ಬೆಲೆಗಳೆರಡೂ ಕಡಿಮೆಯಾದರೆ ರೈತನ ಪರಿಸ್ಥಿತಿಯೇನು ಎಂಬುದನ್ನು ಸರ್ಕಾರ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಇಂಪೋರ್ಟ್ ಮಾಡುವ ಪಾಮ್ ಆಯಿಲ್ ಜೊತೆ ಇಲ್ಲಿಯವರು ಕಾಂಪೀಟ್ ಮಾಡಲು ಆಗುತ್ತಿಲ್ಲ. ಕೇಂದ್ರದವರು ಇಂಪೋರ್ಟ್ ಡ್ಯೂಟಿ ಕಡಿಮೆ ಮಾಡಿದಷ್ಟೇ ಮಲೇಷ್ಯಾದವರು ಕಡಿಮೆ ಮಾಡುತ್ತಿದ್ದಾರೆ. ಅದಕ್ಕೆ ಕೇಂದ್ರದ ಜೊತೆ ಮಾತನಾಡಿ ಸ್ವಲ್ಪ ಮಾರುಕಟ್ಟೆ ಹೊಂದಾಣಿಕೆಯಾಗುವ ವ್ಯವಸ್ಥೆಯಾಗಬೇಕು. ಫ್ಲೋರಿಕಲ್ಚರ್ ನೀವು ಮಲ್ಲಿಗೆಯದು ಹೇಳಿದಿರಿ, ಮಲ್ಲಿಗೆ ಸಸಿಗಳನ್ನು ಜಾಸ್ತಿ ಕೊಡಬೇಕು. ಆಮೇಲೆ ಕ್ಯಾಶ್ಯೂ ಉಳ್ಳಾಲ ವರೈಟಿ ಇನ್ನೂ ಜಾಸ್ತಿ ಮಾಡಿಸಿ. ಅದನ್ನು ಹೆಚ್ಚು ಕೊಡಿ. ಇವತ್ತು ತೆಂಗು, ಅಡಿಕೆ ಹಾಕಿ ರೈತರು ಉಳಿಯುವುದಿಲ್ಲ. ಕ್ಯಾಶ್ಯೂ ಜಾಸ್ತಿ ಕೊಟ್ಟಾಗ ಅದರಿಂದ

ಏನಾದರೂ ಉಳಿಯಲು ಪ್ರಯತ್ನಿಸಲಿ ಎಂದು ಹೇಳುತ್ತಾ ಮಾನ್ಯ ಸಚಿವರು ಎರಡು ಮೂರು ಬೇಡಿಕೆಗಳನ್ನು ನಮ್ಮ ಮುಂದಿಟ್ಟಿದ್ದಾರೆ, ಮಾನ್ಯ ಸಿದ್ದರಾಮಯ್ಯನವರು ಇರುವುದು ಒಳ್ಳೆಯದಾಯಿತು. ತೋಟಗಾರಿಕೆ ಇಲಾಖೆಗೆ ಹೆಚ್ಚು ಅನುದಾನ ಕೊಡುವ ವ್ಯವಸ್ಥೆಗಾಗಿ ನಾವು ತಮ್ಮಲ್ಲಿ ಮಾನ್ಯ ಸಚಿವರಿಗೋಸ್ಕರ ಮನವಿ ಮಾಡುತ್ತಿದ್ದೇವೆ. ನಾವೆಲ್ಲರೂ ಅವರ ಪರವಾಗಿದ್ದೇವೆ. ಆಮೇಲೆ ಅವರು ಹೇಳಿದರು, ನಾವು ಆದಾಯವನ್ನು ತರುತ್ತೇವೆ ಪೂರಾ ಸರ್ಕಾರದ ಹೆಡ್‌ಗೆ ಹೋಗುತ್ತದೆ ಎಂದು. ಹೆಡ್ ಆಫ್ ಅಕೌಂಟ್ ಅನ್ನು ಅವರ ಇಲಾಖೆಗೇ ಆಪರೇಟ್ ಮಾಡಲು ಬಿಡಿ, ಆದಾಯ ವೆಚ್ಚ ಅವರೇ ನೋಡಿಕೊಳ್ಳಲಿ. ಆಮೇಲೆ ಇನ್ನೊಂದು ವಿಚಾರವನ್ನು ಮಾನ್ಯ ಸಚಿವರು ಹೇಳಿದರು: ಎಕ್ಸೈಜ್ – ಕ್ಯಾಶ್ಯೂ ಫೆನ್ನಿ ಮಾಡಲಿಕ್ಕೆ 50 ಪರ್ಸೆಂಟ್ ಎಕ್ಸೈಜ್ ಡ್ಯೂಟಿ ಕಡಿಮೆ ಮಾಡಿಸಿ ಅನುಮತಿ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ ಎಂದು ಪ್ರಾಯಶಃ ಇದು ತಮ್ಮ ಇಲಾಖೆಗೆ ಬರುತ್ತದೆ. ಅದು ಸಾಧ್ಯವಾಗುತ್ತದೆಯೋ ಇಲ್ಲವೋ ಎಂಬುದನ್ನು ತಾವು ಹೇಳಬೇಕು. ಏಕೆಂದರೆ ಕ್ಯಾಶ್ಯೂಫೆನ್ನಿಗೆ ಗೋವಾದಲ್ಲಿರುವಷ್ಟು ಜನಪ್ರಿಯತೆ ನಮ್ಮ ಜಿಲ್ಲೆ ಮತ್ತು ಬೇರೆ ಕಡೆಗಳಲ್ಲಿಲ್ಲ ಕ್ಯಾಶ್ಯೂಫೆನ್ನಿಗೆ ಒಂದು ಪ್ರಯತ್ನವಾಗಿದೆ ಮಾನ್ಯ ಜೀವಿಜಯರು ಇರುವಾಗ ಗಂಗೊಳ್ಳಿಯಲ್ಲಿ ಒಂದು ಕಾರ್ಖಾನೆಯನ್ನು ಮಾಡಿದ್ದಾರೆ. ಅದು ಲೀಸಿಗೆ ಕೊಟ್ಟು ವಿಫಲವಾಯಿತು. ನೀವೇನಾದರೂ ಎಕ್ಸೈಜ್ ಡ್ಯೂಟಿ ಕಡಿಮೆ ಮಾಡಿದರೆ ಕಾಟೇಜ್ ಇಂಡಸ್ಟ್ರಿಯಾಗಿ ಬೇರೆ ರೂಪದಲ್ಲಿ ಮಾರುಕಟ್ಟೆಗೆ ಬರಲು ಶುರುವಾಗುತ್ತದೆಂಬ ಆಲೋಚನೆ ಮಾಡಬೇಕಾಗುತ್ತದೆ. ದಯವಿಟ್ಟು ಇದರ ಬಗ್ಗೆ ತಾವು ಉತ್ತರಿಸಬೇಕು.

ಚೇರ್ಮನ್ :– ಮಾನ್ಯ ಸದಸ್ಯರುಗಳು ಸಂಕ್ಷಿಪ್ತವಾಗಿ ಕೇಳಿ, ಇನ್ನೂ ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣ ಸಚಿವರಿಬ್ಬರೂ ಉತ್ತರ ಹೇಳಬೇಕಾಗಿದೆ. ಮತ್ತೆ ಪ್ರಶ್ನೋತ್ತರವೂ ನಡೆಯಬೇಕಾಗಿದೆ.

ಶ್ರೀ ಜಿ ಟಿ ದೇವೇಗೌಡ :– ಮಾನ್ಯ ಅಧ್ಯಕ್ಷರೇ, ಸರ್ಕಾರ ಆವರ್ತನಿಧಿಯನ್ನು ಕೊಟ್ಟಿದೆ. ಟೊಮೋಟೊ ಬೆಳೆದ ರೈತರು ಇವತ್ತು ಕಣ್ಣೀರು ಸುರಿಸುತ್ತಿದ್ದಾರೆ. ಬೆಳೆದ ಕೂಲಿಗೂ ಹಣವಿಲ್ಲದೆ ಸಾಲಸೋಲ ಮಾಡಿ ಕಂಗಾಲಾಗಿ ಕಣ್ಣೀರಿಡುತ್ತಿದ್ದಾರೆ. ಯಾವ ತೋಟಗಾರಿಕೆ ವಸ್ತುಗಳಿಗೆ ಬೆಲೆ ಬಿದ್ದಿದೆ ಅದಕ್ಕೆ ಮಾರುಕಟ್ಟೆ ಪ್ರವೇಶ ಮಾಡಿದ್ದೇವೆ ಎಂಬ ಬಗ್ಗೆ ನಮ್ಮ ಸಚಿವರು ಹೇಳಲಿಲ್ಲ. ಕೋಲ್ಡ್‌ಸ್ಟೋರೇಜ್‌ಗೆ ಕೇಂದ್ರ ಸರ್ಕಾರ 50 ಲಕ್ಷ ರೂ.ಗಳ ಪರಿಹಾರಧನ ಕೊಡುತ್ತದೆಂದು ಅವರು ಹೇಳಿದರು. ಎಲ್ಲೆಲ್ಲಿ ಎಪಿಎಂಸಿ ಇದೆಯೋ ಅಲ್ಲೆಲ್ಲಾ ಕೋಲ್ಡ್ ಸ್ಟೋರೇಜ್ ಮಾಡಲು ತೋಟಗಾರಿಕೆ ಇಲಾಖೆ ಪ್ರಯತ್ನಿಸಬೇಕು. ಮತ್ತು ರಾಸಾಯನಿಕ ಗೊಬ್ಬರ ಬಳಸದೆ ಬೇವಿನಕಿಂಡಿ ಬಳಸಬೇಕು, ತೆಂಗು, ಅಡಿಕೆ, ಬಾಳೆಗೆ ಎಲ್ಲಾ ಕಡೆ ರೋಗ ಇದೆ. ಈಗ ತೋಟಗಾರಿಕೆ ಲಾಭದಾಯಕ ಬೆಳೆಯಾಗಿಲ್ಲ.

7 ವರ್ಷ ಕಷ್ಟಪಟ್ಟು ಮಕ್ಕಳಂತೆ ಸಾಕಿದ ತೆಂಗು ಏನಿದೆ ಅಲ್ಲಿ ಬೇರೆ ಬೆಳೆಯನ್ನೂ ಬೆಳೆಯುವಂತಿಲ್ಲ, ಲಾಭವೂ ಇಲ್ಲ. ಈ ರೀತಿ ನಷ್ಟವುಂಟಾಗುತ್ತದೆ. ಆದ್ದರಿಂದ ಕನಿಷ್ಟ ಅವರಿಗೆ ಬೇವಿನಹಿಂಡಿ ಎಷ್ಟು ಹಾಕಬೇಕು, ದನದಗೊಬ್ಬರ ಎಷ್ಟು ಹಾಕಬೇಕು, ಏನೇನು ಮಾಡಬೇಕು ಎಂಬ ಬಗ್ಗೆ ತಿಳವಳಿಕೆ ಕೊಡುವಂತಹ ಬ್ರೋಚರ್ ಹೊರಡಿಸುವುದು, ತರಬೇತಿ ಕೊಡುವುದನ್ನು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮಾಡುತ್ತಾ ಇಲ್ಲ. ದಯಮಾಡಿ ಸರ್ಕಾರ ಎಲ್ಲಾ ರೈತರಿಗೆ ಆ ಬಗ್ಗೆ ತಿಳುವಳಿಕೆ ಕೊಡಿಸಬೇಕು. ಕೋಲ್ಡ್ ಸ್ಟೋರೇಜ್‌ನ್ನು ಶೀಘ್ರವಾಗಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಎಪಿಎಂಸಿ ಮೂಲಕ ಮಾಡಲು ಅವಕಾಶ ಇದೆ. ಅದನ್ನು ಮಾಡಬೇಕು. ಯಾವ ರೈತನ ಬೆಳೆ ಬಿದ್ದುಹೋಗಿದೆ ಎಲ್ಲಿ ಮಾರುಕಟ್ಟೆ ಪ್ರವೇಶ ಮಾಡಿಲ್ಲ. ಅಲ್ಲಿ ಕೂಡಲೇ ಪ್ರವೇಶ ಮಾಡಿ ರೈತರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರಿಸುವಾಗ ಮಾರ್ಕೆಟ್ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ. ಒಂದು ಪ್ರಯೋಗ ಕರ್ನಾಟಕದಲ್ಲಿ ನಡೆಯಿತು. ಹಾಪ್‌ಕಾಮ್ಸ್ ಮಾದರಿಯಲ್ಲಿ ಬೇರೆ ಬೇರೆ ಕಡೆ ಅಂತಹ ಸಂಸ್ಥೆಗಳನ್ನು ನಿರ್ಮಾಣ ಮಾಡಿ ಅಲ್ಲಿ ರೈತರಿಂದ ಖರೀದಿಸಿ ಬಳಕೆದಾರರಿಗೆ ಒದಗಿಸುವ ಪ್ರಯೋಗ ಪ್ರಾರಂಭ ಮಾಡಿದಿರಿ. ಆದರೆ ಅದು ವಿಫಲವಾಯಿತು. ಈಗ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ, ಅದನ್ನೇನಾದರೂ ಪುನರ್‌ಪರಿಶೀಲನೆ ಮಾಡಿ ಒಂದೇ ಹಾಪ್‌ಕಾಮ್ಸ್‌ನ್ನು ನೀವು ರಾಜ್ಯದ ಮುಖಾಂತರ ನಡೆಸಲಿಕ್ಕೆ ಏನಾದರೂ ಹೊರಟಿದ್ದೀರಾ? ಅದು ಮಾಡಿದರೆ ಒಳ್ಳೆಯದಾಗುತ್ತದೆ. ನಾನು ಏಕೆ ಹೇಳುತ್ತಿದ್ದೇನೆ ಅಂದರೆ ಕಮಿಶನ್ ಏಜೆಂಟ್ಸ್ ಶೇಕಡ 10 ರಿಂದ 13ರಷ್ಟು ಹಣವನ್ನು ರೈತರಿಂದ ಪಡೆಯುತ್ತಾರೆ. ಅದು ಪೆರಿಶಬಲ್ ಗೂಡ್ಸ್, ಅದನ್ನು ಮಾರ್ಕೆಟಿಗೆ ತಂದರೆ ಮಾರಾಟ ಮಾಡಬೇಕು, ಇಲ್ಲದಿದ್ದರೆ ತಿಪ್ಪೆಗೆ ಬಿಸಾಕಬೇಕು. ಅಂತಹ ಪರಿಸ್ಥಿತಿಯಿರುವಾಗ ನೀವು ಹಾಪ್‌ಕಾಮ್ಸ್‌ನ್ನು ಸ್ಟ್ರೆಂಥನ್ ಮಾಡಿ, ನಮ್ಮ ಗೌಡರೇನು ಹೇಳಿದರು ಆ ರೀತಿ ಕೋಲ್ಡ್ ಸ್ಟೋರೇಜನ್ನು ಇದಕ್ಕಾಗಿ ಮಾಡಿದರೆ ನಿಮಗೂ ಹಾಗೂ ರೈತರಿಗೂ ಒಳ್ಳೆಯದಾಗುತ್ತದೆ. ಎರಡನೆಯದು, ತೋಟಗಾರಿಕೆಯನ್ನು ನೀವು ರಾಜ್ಯ ಮತ್ತು ಜಿಲ್ಲಾ ವಲಯ ಎಂದು ಮಾಡಿದ್ದೀರಿ, ಇದು ಸರಿಯಿಲ್ಲ. ಬೆಂಗಳೂರು ನಗರವನ್ನು ಆಧಾರವಾಗಿಟ್ಟುಕೊಂಡು ನೀವೇನಾದರೂ ಮಾಡಿರಬೇಕು. ರಾಜ್ಯ ವಲಯದ್ದು ಆಡಳಿತ ವೆಚ್ಚ ಜಾಸ್ತಿಯಾಗುತ್ತದೆ, ಕೆಲಸವೇ ಆಗುವುದಿಲ್ಲ, ಹಾಗಾಗಿ ವಿಶೇಷವಾಗಿ ಬಯಲು ಪ್ರದೇಶದಲ್ಲಿ ರಾಜ್ಯ ಹಾಗೂ ಎಲ್ಲಾ ವಲಯ ಎಂಬುದು ಏನೂ ಪ್ರಯೋಗವಾಗಲಿಲ್ಲ. ಹಾಗಾಗಿ ಅದನ್ನು ಒಂದೇ ಮಾಡಿ ಸ್ಟ್ರೆಂಥನ್ ಮಾಡಿ ಆ ದುಡ್ಡನ್ನು ನೀವು ಎಕ್ಸ್‌ಟೆನ್‌ಶನ್‌ಗೆ ಖರ್ಚು ಮಾಡಿದರೆ ಹೆಚ್ಚಿಗೆ ಅನುಕೂಲವಾಗುತ್ತದೆ. ಇನ್ನೊಂದನ್ನು ಬಹಳ ಮುಖ್ಯವಾಗಿ ನಿಮ್ಮ

ಗಮನಕ್ಕೆ ತರುತ್ತೇನೆ. ಈಗ ಇಲಾಖೆ ಅಧಿಕಾರಿಗಳ ರೋಲೇ ಇಲ್ಲ, ರೈತರೇ ಸ್ವಯಂ ಶಿಕ್ಷಿತರಾಗಿ ಕೆಲಸ ಮಾಡುತ್ತಿದ್ದಾರೆ. ನಿಮ್ಮ ಯಾವ ಅಧಿಕಾರಿಯೂ ರೈತರ ಬಳಿ ಹೋಗಿ ಅವರಿಗೆ ಹೊಸ ಪ್ರಯೋಗ ಹೇಳಿ ಅವರನ್ನು ಮುಂದೆ ತರುತ್ತಿಲ್ಲ. ಆದ್ದರಿಂದ ನಿಮ್ಮ ಇಲಾಖೆ ಕಛೇರಿಗಳನ್ನು ಬಹುಶಃ ತೆಗೆದರೆ ಒಳ್ಳೆಯದು. ಈಗೆಲ್ಲಾ ಎಲೆಕ್ಟ್ರಾನಿಕ್ಸ್ ಮಿಡಿಯೂ ಬಂದಿದೆ. ಅವರದೇನೂ ಅವಶ್ಯಕತೇನೆ ಇಲ್ಲ. ರೈತರೇ ಸ್ವಂತ ಮಾಡಿಕೊಳ್ಳಲು ತಯಾರಿದ್ದಾರೆ. ಇದರ ಬಗ್ಗೆ ದಯಮಾಡಿ ವಿವರಣೆ ಕೊಡಿ.

ಶ್ರೀ ಬಂಡೆಪ್ಪ ಕಾಶೆಂಪುರ :– ಮುಖ್ಯಮಂತ್ರಿಗಳು ಬೀದರ್‌ಗೆ ಬಂದಾಗ 392 ಕೋಟಿ ರೂ.ಗಳ ಒಂದು ವಿಶೇಷ ಪ್ಯಾಕೇಜ್ ಪ್ರಕಟಿಸಿದ್ದರು; ಅದರಲ್ಲಿ ತೋಟಗಾರಿಕೆಗೆ ಎಂದು ಏಳೆಂಟು ಕೋಟಿ ರೂ.ಗಳನ್ನು ಆಗಲೇ ಕೊಟ್ಟಿದ್ದಾರೆ. ಆದರೆ ಏಳೆಂಟು ತಿಂಗಳಿಂದ ಬೀದರ್‌ನಲ್ಲಿ ಯಾವ ಚಟುವಟಿಕೆಗಳೂ ನಡೆಯುತ್ತಿಲ್ಲ. ಅವರ ಉತ್ತರದಲ್ಲೂ ಬೀದರ್ ಬಗ್ಗೆ ಯಾವ ಮಾತೂ ಬಂದಿಲ್ಲ. ಅದಕ್ಕೆ ಈ ಒಂದು ಪ್ಯಾಕೇಜ್ ಬಗ್ಗೆ ಏನು ಕ್ರಮ ತೆಗೆದುಕೊಂಡು ಯಾವಾಗ ಚಾಲೂ ಮಾಡುವಿರಿ ಎಂದು ಹೇಳಬೇಕು.

ಶ್ರೀ ಶಿವಾನಂದ ಪಾಟೀಲ್ :– ಮಾನ್ಯ ಅಧ್ಯಕ್ಷರೇ, ಫುಡ್ ಪ್ರೋಸೆಸಿಂಗ್ ಪಾರ್ಕ್ ಬಗ್ಗೆ ಅವರು ಎಲ್ಲೂ ರೆಫರ್ ಮಾಡಲಿಲ್ಲ. ಹಿಂದಿನ ಸರ್ಕಾರದು, ಬಿಜಾಪುರ ಹಾಗೂ ಕೋಲಾರಕ್ಕೆ ಡ್ರಿಪ್ಸ್ ಸಬ್ಸಿಡಿ ಕೊಡುವುದಕ್ಕೆ ಒಂದು ರೀಸನ್ ಮತ್ತು ಅದೇನೆಂದರೆ ಕೋಲಾರ ಹಾಗೂ ಬಿಜಾಪುರದವರು ಮಿಸ್‌ಪ್ರೋಪ್ರಿಯೇಶನ್ ಮಾಡಿಕೊಳ್ಳುತ್ತಾರೆ ಎಂದು ಅಲ್ಲ, ಕೋಲಾರ ಕೃಷ್ಣ ಬೇಸಿನ್‌ನಲ್ಲಿ ಬಂದರೂ ಅಲ್ಲಿ ನೀರಾವರಿಯಾಗುತ್ತಿಲ್ಲ, ಬಿಜಾಪುರದಲ್ಲಿ ಕೂಡ ನೀರಾವರಿಯಾಗುತ್ತಿಲ್ಲ; ಆ ಒಂದು ಸ್ಪೆಸಿಫಿಕ್ ಉದ್ದೇಶಕ್ಕಾಗಿ ಮಾತ್ರ ಈ ಎರಡು ಜಿಲ್ಲೆಗೆ ವಿಶೇಷ ಅನುದಾನ ಕೊಟ್ಟಿದ್ದಾರೆ. ಬೇರೆ ಜಿಲ್ಲೆಗೆ ಕೊಟ್ಟರೆ ನನ್ನ ಅಭ್ಯಂತರವಿಲ್ಲ ಆದರೆ ನೀವು ಅದನ್ನು ತೆಗೆದುಬಿಡುತ್ತೇನೆ ಎಂದು ಹೇಳಿದಿರಿ. ಅದರಲ್ಲಿ ಪಬ್ಲಿಕ್ ವಂತಿಗೆಯೂ ಬೇಕು, ನಾನು ಇಲ್ಲ ಅನ್ನುವುದಿಲ್ಲ. ಅದನ್ನೇನಾದರೂ ಮಿತಿ ಮಾಡಿ; 20 ಪರ್ಸೆಂಟ್ ಹಾಕಿ, ಆದ್ದರಿಂದ ಆ ಎರಡು ಜಿಲ್ಲೆಗೆ ಕೊಟ್ಟಿರುವ ಅನುದಾನವನ್ನು ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ತೋಟಗಾರಿಕೆಯ ಸಹಾಯಕ ನಿರ್ದೇಶಕರು ಮತ್ತು ಉಪ ನಿರ್ದೇಶಕರು – ಈ ಹುದ್ದೆಗಳಿಗೆ ಎಂಎಸ್‌ಸಿ ಹಾರ್ಟಿಕಲ್ಚರ್ ಮಾಡಿದವರನ್ನು ವಿಶೇಷವಾಗಿ ನೇಮಕ ಮಾಡುವ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಯೋಗೀಶ್ ಭಟ್ :– ಮಾನ್ಯ ಅಧ್ಯಕ್ಷರೇ, ಕೇಂದ್ರದ ನೆರವಿನಿಂದ ಕ್ಯಾಶ್ಯೂ ಕ್ಲಸ್ಟರ್ ಎಂದು ಒಂದು ವಿಶೇಷ ಘಟಕವನ್ನು ನಮ್ಮ ಜಿಲ್ಲೆಯಲ್ಲಿ ವ್ಯವಸ್ಥೆ ಮಾಡಿದೆ. ಅದೇ ರೀತಿ ಫುಡ್ ಪ್ರೋಸೆಸಿಂಗ್ ಪಾರ್ಕ್ ಬಗ್ಗೆ ಇಂಡಸ್ಟ್ರಿ ಮಿನಿಸ್ಟರ್ ಜೊತೆಯಲ್ಲಿ

ತಾವೂ ಸಂಯೋಜನೆಯನ್ನು ಮಾಡಿಕೊಂಡು ವಿಶೇಷವಾಗಿರುವ ಕೇಂದ್ರದ ನೆರವಿನಿಂದ ಯೋಜನೆಗಳನ್ನು ತರಲಿಕ್ಕೆ ಸಾಧ್ಯ ಇದೆ ಇದರ ಬಗ್ಗೆ ತಾವು ಯೋಚಿಸಬೇಕು ಎಂದು ಹೇಳುವುದು ಒಂದು. ಎರಡನೆಯದಾಗಿ ಈ ಔಷಧಿಯ ಗಿಡಗಳು ಅದರಲ್ಲಿ ಅಲೊವೆರಾ ಇರಬಹುದು. ಮೊರಿಂಡಾಸಿಟ್ರುಫೆಲಾ ಇರಬಹುದು. ಅದೇ ರೀತಿ ಬಯೋ ಡೀಸಲ್ ಅನ್ನು ಪ್ರೊಡ್ಯೂಸ್ ಮಾಡುವಂಥ ಜಿಟ್ರೋಪಾ ಎಂಬ ಬೆಳೆ ಇರಬಹುದು. ಕಡಿಮೆ ನೀರಿನಲ್ಲಿ, ಪಾಲನೆ ಕಡಿಮೆ ಇರುವಂಥ ತೋಟಗಾರಿಕೆಯಲ್ಲಿ ಇದನ್ನು ಕ್ಯಾಷ್ ಕ್ರಾಪ್ ಆಗಿ ಉತ್ಪನ್ನ ಮಾಡಲಿಕ್ಕೆ ಸಾಧ್ಯ ಇದೆ. ಇದರ ಬಗ್ಗೆ ಕೂಡ ತಾವು ಯೋಚನೆ ಮಾಡಬೇಕು. ಮತ್ತೆ ಅಡಿಕೆ ಬೆಂಬಲ ಬೆಲೆ, ಅದಕ್ಕೆ ಬಾಕಿ ಇರುವ ಆರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿ, ಇದಕ್ಕೆ ತಾವು ವಿಶೇಷವಾದ ಸಹಕಾರವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ತೆಂಗಿನ ಕಾಯಿಯ ಬಗ್ಗೆ ಹೇಳಿದ್ದಾರೆ. ಈಗಾಗಲೇ 1997–98ನೆ ಇಸವಿಯಿಂದ ನುಸಿರೋಗ, ಕಪ್ಪುತಲೆ ಹುಳ ಮತ್ತು ಅಣಬೆ ರೋಗಗಳು ಈ ರಾಜ್ಯದಲ್ಲಿ ಇವೆ. ತೆಂಗಿನ ಬೆಳೆಗಳಿಗೆ ಬಂದಂಥ ರೋಗವನ್ನು ನಿವಾರಣೆ ಮಾಡುವುದಕ್ಕೆ ಹಿಂದಿನ ಸರ್ಕಾರದಿಂದಲೂ ಆಗಿಲ್ಲ. ಈಗಿನ ಸರ್ಕಾರದಲ್ಲೂ ಮಂತ್ರಿಗಳು ಅದರ ಬಗ್ಗೆ ಏನನ್ನೂ ಹೇಳಲಿಲ್ಲ. ಕಳೆದ ವರ್ಷ ಕೂಡ ಈ ವಿಚಾರ ಹಿಂದೆ ಪ್ರಸ್ತಾಪವಾಯಿತು. ಏನಾಗಿದೆ ಅಂದರೆ ತೆಂಗಿನ ಕಾಯಿ ಬೆಲೆ ಅತ್ಯಂತ ಕೆಳಮಟ್ಟಕ್ಕೆ ಕುಸಿದಿದೆ. ತಮಿಳುನಾಡು, ಕೇರಳದಿಂದ ಏನಾದರೂ ಮುಂಬೈ ಮಾರುಕಟ್ಟೆಗೆ ತೆಂಗಿನಕಾಯಿ ಹೋಯಿತು ಎಂದು ಹೇಳಿದರೆ ಇವತ್ತು ಅರಸೀಕೆರೆ ಮಾರುಕಟ್ಟೆ ಇರಬಹುದು, ತಿಪಟೂರು ಮಾರುಕಟ್ಟೆ ಇರಬಹುದು, ಕಡೂರು ಮಾರುಕಟ್ಟೆ ಇರಬಹುದು, ಹೊಸದುರ್ಗ ಮಾರುಕಟ್ಟೆ ಇರಬಹುದು, ಮೂರೂವರೆ ಸಾವಿರ – ನಾಲ್ಕೂವರೆ ಸಾವಿರ ರೂ.ಬೆಲೆ ಇದೆ. ಅದಕ್ಕೇನಾದರೂ ಬೆಂಬಲ ಬೆಲೆಯನ್ನು ಕೊಡುತ್ತಾರಾ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣವನ್ನು ನೀಡಬೇಕು. ಆಮೇಲೆ ಮಾನ್ಯ ಶಿವಾನಂದ ಪಾಟೀಲರು ಹೇಳಿದ ಹಾಗೆ ತಾಲ್ಲೂಕು ಕೇಂದ್ರಗಳಲ್ಲಿ ಸ್ವಲ್ಪ ಟೊಮೆಟೊ, ಈರುಳ್ಳಿ ಎಲ್ಲಾ ಬೆಲೆ ಕುಸಿದ ಸಂದರ್ಭದಲ್ಲಿ ಅದನ್ನು ಪ್ರಿಸರ್ವ್ ಮಾಡಿ ಇಡಲಿಕ್ಕೆ ಕೋಲ್ಡ್ ಸ್ಟೋರೇಜ್‌ನ್ನು ಮಾಡಲಿಕ್ಕೆ ಒಂದು ಪ್ಯಾಕೇಜ್ ಮಾಡಲಿಕ್ಕೆ ಏನಾದರೂ ಸಾಧ್ಯವೇ? ಏಕೆಂದರೆ ಒಂದೊಂದು ಸಾರಿ ಮಾರುಕಟ್ಟೆಯನ್ನು ಬೆಲೆ ಕುಸಿದುಹೋಗಿರುವ ಸಂದರ್ಭದಲ್ಲಿ ಅನಿವಾರ್ಯವಾಗಿ ರೈತರು ಅವತ್ತೇನು ಮಾರುಕಟ್ಟೆಯಲ್ಲಿ ರೇಟು ಇರುತ್ತದೆ, ಅದಕ್ಕೆ ಡಿಲೆ ಮಾಡಿ ಕೊಡಬೇಕಾಗುತ್ತದೆ. ಮಾನ್ಯ ಸಚಿವರು ಅದರ ಬಗ್ಗೆ ಏನಾದರೂ ಹೆಚ್ಚಿನ ಕೋಲ್ಡ್ ಸ್ಟೋರೇಜ್ ಮಾಡುವಂಥದ್ದು ಮತ್ತು ರೈತರಿಗೆ ಬೆಂಬಲಬೆಲೆ ಕೊಡುವಂಥದ್ದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ತಮ್ಮ ಮುಖಾಂತರ ಅವರಲ್ಲಿ ಕೇಳುತ್ತೇನೆ.

ಶ್ರೀ ಧ್ರುವನಾರಾಯಣ :- ಬಾಳೆ ಬೆಳೆಗೆ ಬೆಳೆ ವಿಮೆ ಇಲ್ಲ. ಹಲವಾರು ಕಡೆ ಗಾಳಿ ಬೀಸಿ ಪ್ರಕೃತಿ ವಿಕೋಪದಿಂದ ಬಹಳಷ್ಟು ಹಾನಿಯಾಗಿದೆ. ಸರ್ಕಾರದಿಂದ ಕೊಡತಕ್ಕದ್ದು ಒಂದು ಎಕರೆಗೆ ಬರೀ 250 ರೂಪಾಯಿಗಳು ಬಾಳೆ ಸರಿಯಾಗಿ ಬೆಳೆದರೆ ಒಂದು ಗೊನೆಗೆ 250 ರೂ.ಗಳು ಸಿಗುತ್ತದೆ. ನೀವು ಒಂದು ಎಕರೆಗೆ 250 ರೂ.ಗಳನ್ನು ಸರ್ಕಾರದಿಂದ ಕೊಡುವುದಾದರೆ ಹೇಗೆ? ಅದಕ್ಕಾಗಿ ಬೆಳೆ ವಿಮೆಯನ್ನಾದರೂ ಮಾಡಿ ದಯಮಾಡಿ ಆ ಬಾಳೆ ಬೆಳೆಯನ್ನು ಅದರಲ್ಲಿ ಸೇರಿಸಬೇಕು. ಏಕೆಂದರೆ ಒಳ್ಳೆಯ ಮಳೆ ಗಾಳಿ ಬಂದಾಗ ಸಾರಾಸಗಟಾಗಿ ಇಡೀ ಎಕರೆವಾರು ಬೆಳೆ ಹಾಳಾಗುತ್ತದೆ. ದಯಮಾಡಿ ಮಾನ್ಯ ಮಂತ್ರಿಗಳು ಅದರಲ್ಲಿ ಸೇರಿಸಬೇಕು.

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು) :- ಮಾನ್ಯ ಅಧ್ಯಕ್ಷರೇ, ಕೋಲ್ಡ್ ಸ್ಟೋರೇಜ್ ಬಗ್ಗೆ ಇದರ ಬಗ್ಗೆ ಇಲಾಖೆ...

ಛೇರ್ಮನ್ :- ಮಾನ್ಯ ಮಂತ್ರಿಗಳು ಸ್ವಲ್ಪ ಸಂಕ್ಷಿಪ್ತವಾಗಿ ಹೇಳಿಬಿಡಿ. ಪಾಯಿಂಟ್ ಬೈ ಪಾಯಿಂಟ್, ಹೇಳಿಬಿಡಿ.

ಶ್ರೀ ಆರ್. ಶ್ರೀನಿವಾಸ್ :- ನಾವು ಮಾಡಿಫೈ ಮಾಡಿ ಅಷ್ಟೇನೂ ಸಕ್ಸಸ್ ಆಗುತ್ತಿಲ್ಲ. ಬಿಜ್ಞಾಪುರದ ಸಹಕಾರ ಸಂಘದಲ್ಲಿ ಒಂದು ಮಾಡಿದ್ದಾರೆ, ಬಹಳ ಚೆನ್ನಾಗಿ ನಡೆಯುತ್ತಿದೆ. ಅದೇ ಬಾಗಲಕೋಟೆ ಬಾರ್ಡರ್‌ನಲ್ಲಿ ಒಂದು ಆಗಿದೆ. ಅದು ಫೇಯಿಲ್ಯೂರ್ ಆಗಿದೆ. ಆದ್ದರಿಂದ ಇದಕ್ಕೆ ಸಹಾಯಧನ ಕೊಡತಕ್ಕಂಥದ್ದಕ್ಕೆ ನಾವು ಮುಂದೆ ಬರುತ್ತೇವೆ. ಅಥವಾ ಎಪಿಎಂಸಿ ಇಲಾಖೆಯಿಂದ ಆಗಬಹುದು, ಅಥವಾ ಸಹಕಾರ ಸಂಘದ ಇಲಾಖೆಯಿಂದಲೂ ಕೂಡ ಕೋಲ್ಡ್ ಸ್ಟೋರೇಜ್ ಬೇಕಾದರೆ ಅವರು ಕಟ್ಟಿಸಿಕೊಳ್ಳಲಿ; ನಮ್ಮದೇನೂ ಅಭ್ಯಂತರವಿಲ್ಲ. ಈಗ ಇರುವುದನ್ನು ಬೇಕಾದರೂ ಕೂಡ ನಾವು ಖಾಸಗಿಯವರಿಗೆ ಕೊಡುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಇದೆಯೋ ಅದೆಲ್ಲವನ್ನೂ ಖಾಸಗಿಯವರಿಗೆ ಕೊಡೋಣ. ಈ ಒಂದು ವ್ಯವಸ್ಥೆ ಮಾಡೋಣ ಆಮೇಲೆ ಹಿರಿಯ ನಾಯಕರಾದ ನಮ್ಮ ಕೃಷ್ಣಮೂರ್ತಿಯವರು ತೆಂಗಿನ ಕಾಯಿಯ ಬಗ್ಗೆ ಹೇಳಿದರು. ಅದರಲ್ಲಿ ಬಹುಶಃ ನಾನೂ ಒಬ್ಬ. ನಾನೂ ಕೂಡ ತೆಂಗಿನ ಕಾಯಿಯನ್ನು ಎಲ್ಲಾ ಕಿತ್ತು ಕಿತ್ತು ಹಾಕಿದ್ದೇನೆ. ಕೆಲವು ಗಿಡಗಳು ನನಗೂ ಹಾಗೇ ಆಗಿವೆ. ಈಗ ಸ್ವಲ್ಪ ಕಡಿಮೆಯಾಗಿದೆ. ಈ ಬೆಂಬಲ ಬೆಲೆ ಕೊಡುವುದು, ಇನ್ನೊಂದು ಆಗುವುದಿಲ್ಲ. ಇದರಲ್ಲಿ ಸ್ವಲ್ಪ ನ್ಯೂನತೆ ಇದೆ. ಕೇರಳದವರು ಇದರ ಬಗ್ಗೆ ಒಟ್ಟಿಗೆ ಕೂಡಿ ಪಾರ್ಲಿಮೆಂಟ್‌ನಲ್ಲಿ ಹೋರಾಟವನ್ನು ಮಾಡುತ್ತಾರೆ. ಕೇರಳದವರು ಏನಾದರೂ ಈ ಕೋಕನಟ್ ಎಣ್ಣೆ ಕಡಿಮೆಯಾಯಿತೆಂದರೆ ಎಲ್ಲಾ ಪಾರ್ಲಿಮೆಂಟ್ ಮೆಂಬರ್ಸ್ ಮೇಲೆ ಬೀಳುತ್ತಾರೆ. ಬಹುಶಃ ಮೂರು-ನಾಲ್ಕು ವರ್ಷಗಳ ಹಿಂದೆ ಪಾರ್ಲಿಮೆಂಟ್‌ನಲ್ಲಿ

ದೊಡ್ಡ ಗಲಾಟೆ ಆಯಿತು. ಅವರಿಗೆ ಪಕ್ಷ-ಗಿಕ್ಷ ಏನೂ ಬೇಕಾಗಿರುವುದಿಲ್ಲ. ಆ ಒಂದು ವ್ಯವಸ್ಥೆಯಲ್ಲಿ ಎಕ್ಸ್‌ಪೋರ್ಟನ್ನು ನಾವು ಇನ್‌ಕ್ರೀಸ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇದಕ್ಕೆ ತಕ್ಷಣಕ್ಕೆ ಏನು ಸಹಾಯಧನವನ್ನು ಕೊಡುತ್ತೇವೆ, ಅಥವಾ ಆ ಗಿಡ ಹೋಗಿರುವುದಕ್ಕೆ ಪರಿಹಾರ ಕೊಡುತ್ತೇವೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ ಸಾರ್. ರೈತರು ಎಲ್ಲಾ ನಾಶವಾಗಿ ಕುಳಿತಿದ್ದಾರೆ. ಏನಾದರೂ ಪರಿಹಾರ ಕೊಡಿ ಎಂದರೆ ನೀವು ಆಗುವುದಿಲ್ಲ ಎಂದುಬಿಟ್ಟರೆ ಹೇಗೆ?

(ಗೊಂದಲ)

ಶ್ರೀ ಆರ್. ಶ್ರೀನಿವಾಸ್ :- ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಇದು ಆಗುವುದಿಲ್ಲ. ಇದು ಸರಿ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಎರಡು ಕೋಟಿ ತೆಂಗಿನ ಮರಗಳಿವೆ.

(ಗೊಂದಲ)

ಶ್ರೀ ಆರ್. ಶ್ರೀನಿವಾಸ್ :- ನಿಜವಾಗಿ ತೋಟಗಾರಿಕಾ ಬೆಳೆಗೆ ನಮಗೆ ಇನ್‌ಶ್ಯೂರೆನ್ಸ್ ಇಲ್ಲ. ಇವತ್ತು ಪ್ರತಿ ಸಾರಿಯೂ ಮಳೆ ಜಾಸ್ತಿ ಬಿದ್ದರೂ, ಬೆಳೆ ಒಣಗಿ ಹೋದರೂ ಯಾವುದನ್ನೂ ಕೊಡುವುದಿಲ್ಲ. ಇದರ ಬಗ್ಗೆ ನಿಜವಾಗಿಯೂ ನಾನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೇನೆ. ಯಾವ ರೀತಿ ಶಿಫಾರಸ್ಸು ಮಾಡಿದ್ದೇವೆಂದರೆ ಈ ವಿಮೆ ಇದೆಯಲ್ಲಾ, ಇದು ಈ ರೀತಿ ಅಲ್ಲ. ಪ್ರತಿ ತೋಟಕ್ಕೂ ಕೂಡ ಅಸೆಸ್‌ಮೆಂಟನ್ನು ಮಾಡಿ 50 ಪರ್ಸೆಂಟ್ ಪ್ರೀಮಿಯಂ ಅನ್ನು ಸರ್ಕಾರ ಕಟ್ಟುವುದು, 50 ಪರ್ಸೆಂಟನ್ನು ಖಾಸಗಿಯವರು ಕಟ್ಟಿದರೆ, ಯಾವ ತೋಟದಲ್ಲಿ ಬೆಳೆ ನಾಶವಾಗುತ್ತದೋ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡೋಣ. ತಾವೆಲ್ಲಾ ಏನು ಹೇಳಿದ್ದೀರಿ.....

ಶ್ರೀ ಜೆ.ಸಿ. ಮಾಧುಸ್ವಾಮಿ :- ಇವತ್ತು ಬೆಳೆಯೂ ಇಲ್ಲ ಬೆಲೆಯೂ ಇಲ್ಲ. ರೋಗಕ್ಕೆ ಏನಾದರೂ ಪರಿಹಾರವನ್ನು ಕಂಡುಹಿಡಿಯಿರಿ ಎಂದರೆ ಅದಕ್ಕೂ ಇಲ್ಲ. ಒಂದು ಗಿಡವನ್ನು ಹಾಕಿ ಬೆಳೆ ಬರುವುದಕ್ಕೆ 20 ವರ್ಷ ಕಾಯಬೇಕು. ತೆಂಗು ಬೆಳೆದಿರುವ ರೈತರೆಲ್ಲಾ ಸತ್ತು ಹೋಗಬೇಕಾ?

(ಗೊಂದಲ)

ಶ್ರೀ ಆರ್. ಶ್ರೀನಿವಾಸ್ :- ಪ್ರೋಸೆಸಿಂಗ್ ಯೂನಿಟನ್ನು ಕೊಟ್ಟಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ತೆಂಗಿಗೆ ಹಾಗೂ ಮೆಣಸಿನಕಾಯಿಗೆ ನೀವು ಬೆಂಬಲ ಬೆಲೆಯನ್ನು ಕೊಡಲೇಬೇಕು.

ಶ್ರೀ ಆರ್. ಶ್ರೀನಿವಾಸ್ :- ಅದರ ಬಗ್ಗೆ ಸರ್ಕಾರದ ವತಿಯಿಂದ ಆಗಲೇ ಉತ್ತರವನ್ನು ಕೊಟ್ಟಿದ್ದೇವೆ. ತಾವೆಲ್ಲರೂ ಸಹಕಾರವನ್ನು ಕೊಡಬೇಕು. ದಯವಿಟ್ಟು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ :- ನಿಮ್ಮ ಉತ್ತರ ಸರಿ ಇಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ಸಾರ್, ನೀವು ಉತ್ತರ ಕೊಡತಕ್ಕ ಸಂದರ್ಭದಲ್ಲಿ ತುಂಬಾ ಸ್ಪಷ್ಟವಾಗಿ ಹೇಳಿದ್ದೀರಿ. ತೆಂಗು ಬೆಳೆದಿರುವ ರೈತರು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ ಎನ್ನುವ ಮಾತನ್ನು ನೀವೇ ಹೇಳಿದ್ದೀರಿ. ಇಂಥ ಸಂದರ್ಭದಲ್ಲಿ ಅವರು ಸಾಯುವುದನ್ನು ನೋಡಿ ಸರ್ಕಾರ ಸುಮ್ಮನೆ ಕುಳಿತುಕೊಳ್ಳಬೇಕೇ? ಅವರು ಸಾಯುವುದು ಅವಶ್ಯಕತೆ ಇಲ್ಲ, ನಾವು ಬದುಕಿಸುತ್ತೇವೆ ಎನ್ನುವ ಧೈರ್ಯವನ್ನು ಅವರಿಗೆ ಕೊಡಬೇಕೋ ಬೇಡವೋ ನೀವೇ ಹೇಳಿ. ಅದು ಬಿಟ್ಟು ನೀವು ಏನೂ ಉತ್ತರವನ್ನು ಕೊಡುವುದಿಲ್ಲ ಎನ್ನುವುದಾದರೆ ಹೇಗೆ?

ಶ್ರೀ ಆರ್. ಶ್ರೀನಿವಾಸ್ :- ಇದನ್ನು ಪರಿಶೀಲನೆ ಮಾಡಿ.....

ಶ್ರೀ ಕೆ.ಎಸ್. ಈಶ್ವರಪ್ಪ :- ಯಾವತ್ತು ಪರಿಶೀಲನೆ ಮಾಡುತ್ತೀರಿ ಸ್ವಾಮಿ? ಯಾವತ್ತು ಅವರನ್ನು ಬದುಕಿಸುತ್ತೀರಿ?

ಶ್ರೀ ಆರ್. ಶ್ರೀನಿವಾಸ್ :- ಪರಿಶೀಲನೆ ಮಾಡಿ ತಮಗೆ ಏನಾದರೂ ಕೂಡ...

ಶ್ರೀ ಕೆ.ಎಸ್. ಈಶ್ವರಪ್ಪ :- ಯಾವಾಗ ಎಂದೆ? ಉತ್ತರ ಕೊಡುವ ಸಂದರ್ಭದಲ್ಲೂ ಕೂಡ ಪರಿಶೀಲನೆ ಮಾಡಲಿಕ್ಕೆ ತಮ್ಮ ಕೈಯಲ್ಲಿ ಆಗುವುದಿಲ್ಲವೆಂದರೆ ಇನ್ನು ಎರಡು ವರ್ಷವಾದ ಮೇಲೆ ಮಾಡುತ್ತೀರಾ? ಅವರೆಲ್ಲಾ ಪೂರ್ಣ ನಿರ್ನಾಮವಾದ ಮೇಲೆ ಮಾಡುತ್ತೀರಾ?

ಶ್ರೀ ಆರ್. ಶ್ರೀನಿವಾಸ್ :- ಪರಿಶೀಲನೆ ಮಾಡುತ್ತೇವೆ. ಇದರಿಂದ ತಮಗೆ ಏನಾದರೂ ಸಹಾಯವಾದರೆ ನಮಗೂ ಸಹಾಯವಾಗುತ್ತದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರ ನುಸಿ ರೋಗಕ್ಕೆ ಔಷಧಿ ಕೊಡುತ್ತೇವೆ ಎಂದು ಹೇಳಿ ಹೇರಳವಾಗಿ ಹಣ ಖರ್ಚು ಮಾಡಿ ಒಂದು ರೂಪಾಯಿ ಕೂಡ ರೈತರಿಗೆ ತಲುಪಿಲ್ಲ. ಕೊಚ್ಚಿನ್ ಬೋರ್ಡ್‌ನಲ್ಲಿ ಹೇಳುತ್ತಾರೆ, ಇವತ್ತಿನವರೆಗೂ ಅಕೌಂಟ್ ಕೊಟ್ಟಿಲ್ಲ.

(ಗೊಂದಲ)

ಸಾರ್, ಏನೋ ಒಂದು ಮಾಡುತ್ತೇವೆ. ವಾಕ್‌ಔಟ್ ಮಾಡುತ್ತೇವೋ, ತಲೆ ಕೆಳಗಾಗಿ ನಿಂತುಕೊಳ್ಳುತ್ತೇವೋ, ಆಮೇಲೆ ನೋಡುವಿರಂತೆ. ನಮಗೆ ಕೋಕನೆಟ್‌ಗೆ ಮತ್ತೆ ಮೆಣಸಿನಕಾಯಿಗೆ ನೀವು ಪರಿಹಾರವನ್ನು ಕೊಡುತ್ತೀರೋ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಇದರ ಬಗ್ಗೆ ಸನ್ಮಾನ್ಯ ಹಣಕಾಸಿನ ಸಚಿವರು ಹೇಳಬೇಕು. ರೋಗಕ್ಕೆ ಏನಾದರೂ ಔಷಧಿ ಕೊಡಿ ಎಂದರೆ ಅದನ್ನೂ ಕೊಡುವುದಿಲ್ಲ. ಕೋಕನಟ್ ಬೋರ್ಡ್‌ನವರು ರೀ-ಪ್ಲಾಂಟೇಷನ್ ಸಬ್ಸಿಡಿ ಎಂದು ನೂರು ರೂಪಾಯಿಗಳನ್ನು ಕೊಡುತ್ತಿದ್ದರು. ಅದನ್ನೂ ಕೊಡಿಸುವುದಕ್ಕೆ ಆಗಲಿಲ್ಲ ಸಾರ್.

ಶ್ರೀ ಆರ್. ಶ್ರೀನಿವಾಸ್ :- ನಾನು ಉತ್ತರವನ್ನು ಕೊಟ್ಟಾಗಿದೆ. ಎಲ್ಲರಿಗೂ ಧನ್ಯವಾದಗಳು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಆಗುವುದಿಲ್ಲ ಸಾರ್. ನಾವು ಬಿಡುವುದಕ್ಕಾಗುವುದಿಲ್ಲ. ನಾವೇನಾಗಬೇಕು. ಎರಡು ಕೋಟಿ ತೆಂಗಿನ ಮರಗಳು ನಶಿಸಿ ಹೋಗಿವೆಯಲ್ಲಾ. ಆ ರೈತರು ಎಲ್ಲಿಗೆ ಹೋಗಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ :- ಮಾನ್ಯ ಉಪಮುಖ್ಯಮಂತ್ರಿಗಳು ತುಂಬಾ ಸ್ಪಷ್ಟವಾಗಿ ಪ್ರಶ್ನೆಯನ್ನೂ ಕೇಳಿದ್ದಾರೆ, ಉತ್ತರವನ್ನೂ ಕೇಳಿದ್ದಾರೆ. ಈ ಉತ್ತರವನ್ನು ನೀವು ಖಂಡಿತವಾಗಿಯೂ ನಿರೀಕ್ಷೆ ಮಾಡಿದ್ದಿರಿ ಎಂದು ನಾನಂತೂ ಅಂದುಕೊಂಡಿರಲಿಲ್ಲ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ನೀವು ನಿರೀಕ್ಷೆ ಮಾಡದೇ ಇರತಕ್ಕಂಥ ಅತ್ಯಂತ ಸೂಕ್ತವಾದ ಉತ್ತರವನ್ನು ಅವರು ಕೊಟ್ಟಿದ್ದಾರೆ. ನೀವು ನಿರೀಕ್ಷೆಯನ್ನು ಮಾಡಿರಲಿಲ್ಲ. ಅವರು ಬಹಳ ದೀರ್ಘವಾಗಿ, ಬಹಳ ಸಮರ್ಪಕವಾದಂಥ ಅನಿರೀಕ್ಷಿತವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ನೀವು ಎಲ್ಲಾ ಮೆಚ್ಚಿಕೊಂಡಿದ್ದೀರಿ. ಮಾನ್ಯ ಸಭಾಧ್ಯಕ್ಷರೇ, ಅವರು ಬಹಳ ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಅವರು ಎತ್ತಿರತಕ್ಕಂಥ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೇ, ಉಪ ಮುಖ್ಯಮಂತ್ರಿಗಳು ಇಡೀ ಕರ್ನಾಟಕ ರಾಜ್ಯದಲ್ಲಿ ರೈತರ ಪರ ನಾನು ಎಂದು ಹೇಳಿಕೊಂಡು ಓಡಾಡುತ್ತಿದ್ದರು. ಈ ಉತ್ತರವನ್ನೇ ನೀವು ಸೂಕ್ತ ಎನ್ನುವುದಾದರೆ ಖಂಡಿತಾ ನೀವು ರೈತರ ಪರ ಇಲ್ಲ ಎನ್ನುವ ಮಾತು ಬರುತ್ತದೆ. ನಾನು ನಿಮಗೆ ನೇರವಾಗಿ ಕೇಳುತ್ತೇನೆ. ಇದು ನಿಮ್ಮ ಬಾಯಿಂದ ಖಂಡಿತವಾಗಿ ಬರುವಂತಹ ಉತ್ತರವಲ್ಲ. ಒಂದು ಗುಲಗಂಜಿಯಷ್ಟು ಕೂಡ ಉತ್ತರವನ್ನು ಕೊಟ್ಟಿರುವುದಿಲ್ಲ. ಒಂದು ಗುಲಗಂಜಿಯಷ್ಟು ಸಹಾಯವನ್ನು ಮಾಡುತ್ತೇವೆಂದು ಕೂಡ ಹೇಳಿಲ್ಲ. ಇದೇ ಸೂಕ್ತವೆಂದರೆ ಸೂಕ್ತವಲ್ಲ. ವಿಷ ಕೊಟ್ಟುಬಿಟ್ಟರು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮತ್ತೆ ಏತಕ್ಕಾಗಿ ಕೇಳುವುದಕ್ಕೆ ಹೊರಟಿದ್ದೀರಿ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :– ಇದನ್ನು ತಾವು ಒಪ್ಪುತ್ತಿದ್ದೀರಾ? ಇದು ಯಾವ ನ್ಯಾಯ ಖಂಡಿತ ನಿಮ್ಮ ಬಾಯಿಂದ ಬರುವ ಉತ್ತರ ಅಲ್ಲ ಇದು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಹರಿಕಥೆಯನ್ನು ಕೇಳುವುದಕ್ಕೆ ನಾವು ಇಲ್ಲಿಗೆ ಬಂದಿದ್ದೇವಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಬೆಂಗಳೂರು ರೈತರ ಗತಿ ಏನಾಗಿದೆ?

ಶ್ರೀ ಕೆ.ಎಸ್. ಈಶ್ವರಪ್ಪ :– ಇದನ್ನು ನಾವು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಹರಿಕಥೆಯನ್ನು ಕೇಳುವುದಕ್ಕೋಸ್ಕರ ನಾವು ಇಲ್ಲಿ ಕುಳಿತುಕೊಳ್ಳಬೇಕಾ?

ಶ್ರೀ ಸಿದ್ಧರಾಮಯ್ಯ :– ತೆಂಗಿಗೆ ರೋಗ ಬಂದಿರುವುದು ನಿಜ, ನುಸಿ ರೋಗ ಬಂದಿದೆ, ಈಗ ಅದು ಕಡಿಮೆಯಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ನುಸಿ ರೋಗ ಕಡಿಮೆಯಾಗುತ್ತಿದೆ. ನಮ್ಮ ಹತ್ತಿರವೂ ತೆಂಗಿನ ಮರಗಳು ಇವೆ.

ಮಾನ್ಯ ಸದಸ್ಯರು :– ನಮ್ಮ ಕಡೆ ನುಸಿರೋಗ ತುಂಬಾ ಹೆಚ್ಚಾಗುತ್ತಿದೆ. ನಿಮ್ಮ ಕಡೆ ಕಡಿಮೆಯಾಯಿತು, ನಮ್ಮ ಕಡೆ ಹೆಚ್ಚಾಯಿತು.

ಶ್ರೀ ಸಿದ್ಧರಾಮಯ್ಯ :– ನಮ್ಮಲ್ಲಿ ಬಹಳ ಹಳೆಯ ಮರಗಳು ಇವೆ. ಸ್ವಲ್ಪ ನುಸಿ ರೋಗ ಬಂದಿರುವುದು ನಿಜ. ಈಗ ಕ್ರಮೇಣ ಕಡಿಮೆಯಾಗುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಇದು ಖಂಡಿತವಾಗಿ ಉತ್ತರವಲ್ಲ.

ಶ್ರೀ ಸಿದ್ಧರಾಮಯ್ಯ :– ಇದು ಉತ್ತರವಲ್ಲ, ಸತ್ಯವನ್ನು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :– ನೀವು ಹೇಳುವುದು ಸತ್ಯವಲ್ಲ. ನೀವು ಅಂದುಕೊಂಡಿರುವುದು ಸುಳ್ಳು. ತೆಂಗಿನಮರಗಳು ನಾಶವಾಗುತ್ತಿರಬೇಕಾದರೆ ತೊಂದರೆಯಾಗುತ್ತಿದೆ ಎಂದು ಹೇಳಿದರೆ ಇದಕ್ಕಿಂತ ಬೇರೆ ಮಾತು ಹೇಳಬೇಕೇ?

ಶ್ರೀ ಸಿದ್ಧರಾಮಯ್ಯ :– ಅವರು ಬೇರೆ ಏನೇನು ಪ್ರಸ್ತಾಪ ಮಾಡಿದ್ದಾರಲ್ಲಾ, ಬೆಲೆ ಕಡಿಮೆ ಆದಾಗ ಮಾರ್ಕೆಟ್ ಇಂಟರವೀಸ್ ಮಾಡಬೇಕು, ಎನ್ನುವುದರ ಬಗ್ಗೆ ನಾವು ಒಪ್ಪಿಕೊಂಡಿದ್ದೇವೆ. ಅಡಿಕೆ ಬೆಲೆ ಕಡಿಮೆ ಆದಾಗ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಿದ್ದೇವೆ. ಮೆಣಸಿನಕಾಯಿ ಬೆಲೆ ಬಿದ್ದುಹೋದಾಗ ಅದಕ್ಕೂ ಕೂಡ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡುತ್ತೇವೆ. ಮೆಣಸಿನ ಕಾಯಿ ಬೆಲೆ ಬಿದ್ದುಹೋದರೂ ಮಾಡುತ್ತೇವೆ. ಅಡಿಕೆ ಬೆಲೆ ಬಿದ್ದು ಹೋದರೂ ಮಾಡುತ್ತವೆ, ಕೊಬ್ಬರಿ ಬೆಲೆ ಬಿದ್ದು ಹೋದರೂ ನಾವು ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಅಡಿಕೆ ಬಗ್ಗೆ 4 ಕೋಟಿ ರೂಪಾಯಿಗಳನ್ನು ಕೊಟ್ಟು ಕೈತೊಳೆದುಕೊಳ್ಳುವುದು ಬೇಡ. ಇನ್ನೂ 6 ಕೋಟಿ ರೂಪಾಯಿಗಳು ಬರಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ತೆಂಗು, ತೆಂಗು......

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :– ಅಲ್ಲಾ ಅಧ್ಯಕ್ಷರೆ, ಈಗ.....

ಶ್ರೀ ವಾಟಾಳ್ ನಾಗರಾಜ್ :– ತೆಂಗಿನ ಮರ ಒಣಗಿ ಹೋಗಿದೆ. ಅದಕ್ಕೆ ಕೊಡಿ.

ಶ್ರೀ ಸಿದ್ಧರಾಮಯ್ಯ :– ವಯಸ್ಸಾದ ಮೇಲೆ ತೆಂಗಿನಮರಗಳು ಓಣಗುತ್ತವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– 20–30 ವರ್ಷಗಳ ಮರಗಳು ಒಣಗಿ ನಿಂತಿವೆ. ಅಡಿಕೆ ಮತ್ತು ತೆಂಗಿನ ಮರಗಳು ಒಣಗಿಹೋಗುತ್ತಿವೆ; ಅದಕ್ಕೇನು ಮಾಡುತ್ತೀರಿ?

(ಶ್ರೀ ಎನ್.ವೈ. ಗೋಪಾಲಕೃಷ್ಣರವರು)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಸಿ. ಚೆನ್ನಿಗಪ್ಪ (ರೇಷ್ಮೆ ಸಚಿವರು) :- ತೆಂಗಿನ ಸಸಿಗಳ್ನು ಫ್ರೀ ಆಗಿ ಕೊಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಯಾರು ಕೊಡುತ್ತಾರೆ? ಅನೌನ್ಸ್ ಮಾಡಿಸಿ, ತೆಂಗಿನ ಸಸಿಗಳನ್ನು ಫ್ರೀ ಆಗಿ ಕೊಡುತ್ತೇವೆ. ಅವುಗಳನ್ನು ನೆಡುವುದಕ್ಕೆ ದುಡ್ಡು ಕೊಡುತ್ತೇವೆ ಎಂದು ಅನೌನ್ಸ್ ಮಾಡಿಸಿ. ಎಲ್ಲಿದೆ ಸಸಿ ಹೇಳಿ? ಸಸಿ ಎಲ್ಲಿದೆ ಎಂದು ಅವರ ಹತ್ತಿರ ಹೇಳಿಸಿ.

ಮಾನ್ಯ ಸದಸ್ಯರೊಬ್ಬರು :- ಉಚಿತವಾಗಿ ತೆಂಗಿನ ಸಸಿ

ಶ್ರೀ ಜೆ.ಸಿ. ಮಾಧುಸ್ವಾಮಿ :- ಎಲ್ಲಿದೆ ನಿಮ್ಮ ಹತ್ತಿರ ತೆಂಗಿನ ಸಸಿ? ಯಾವಾಗ ಪ್ರಾರಂಭ ಮಾಡಿದ್ದೀರಿ? ನಮಗಿಂತ ನಿಮಗೆ ಗೊತ್ತಾ ಹಾರ್ಟಿಕಲ್ಚರ್ ವಿಚಾರ ?

(ಗೊಂದಲ)

ಶ್ರೀ ಜೆ.ಸಿ ಮಾಧುಸ್ವಾಮಿ :- ಅವರು ಹೇಳುತ್ತಾರೆ ಎಂದು ನೀವು ಹೇಳುತ್ತೀರಲ್ಲಾ

(ಗೊಂದಲ)

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕಾ ಸಚಿವರು) :- ನಾನೂ ಕೂಡ ಪಾವಗಡದ ಕಡೆ ಎಲ್ಲಾ ಹೋದಾಗ ನೋಡಿದ್ದೇನೆ. ಇದು ನಿಜವಾಗಿ ನುಸಿ ರೋಗ ಅಲ್ಲ. ಇದು ಮಳೆ ಇಲ್ಲದೇ ತೆಂಗಿನ ಮರಗಳು ಒಣಗಿ ಹೋಗಿವೆ. ನೀವು ಎರಡು ಸಾವಿರ ಗಿಡಗಳು ಹೋಗಿವೆ ಎಂದು ಹೇಳುತ್ತೀರಿ. ನಾವು ಎರಡು ಸಾವಿರ ಗಿಡಗಳನ್ನು ಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನನಗೊಬ್ಬನಿಗೆ ಕೊಡುತ್ತೀರಾ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಲಕ್ಷಾಂತರ ಗಿಡಗಳು ನೀರಿಲ್ಲದೆ ಒಣಗಿ ಹೋಗಿವೆ. ಎರಡು ಸಾವಿರ ಗಿಡಗಳಿಲ್ಲ.

(ಗೊಂದಲ)

ಶ್ರೀ ಆರ್. ಶ್ರೀನಿವಾಸ್ :- ಮಾನ್ಯ ಅಧ್ಯಕ್ಷರೆ ಬರುವ ವರ್ಷ ಎರಡು ಲಕ್ಷ ಗಿಡಗಳನ್ನು ಉಚಿತವಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಿಮ್ಮ ಹತ್ತಿರ ಎರಡು ಲಕ್ಷ ಗಿಡಗಳು ಎಲ್ಲಿವೆ ಸ್ವಾಮಿ?

ಶ್ರೀ ವಾಟಾಳ್ ನಾಗರಾಜ್ :- ಒಂದೂವರೆ ಕೋಟಿ ಸ್ವಾಮಿ ...

ಶ್ರೀ ಜೆ.ಸಿ. ಮಾಧುಸ್ವಾಮಿ :- ಸಾರ್, ಪರಿಹಾರ ಕೊಡಲೇಬೇಕು. ಅದೆಲ್ಲಾ ಆಗುವುದಿಲ್ಲ.

ಶ್ರೀ ಆರ್. ಶ್ರೀನಿವಾಸ್ :- ಎರಡು ಲಕ್ಷ ಸಸಿಗಳನ್ನು ಕೊಡೋಣ ಬಿಡಿ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಅವರು ಹೇಳತಕ್ಕ ಮಾತು ರೈತರಿಗೆ ಬಹಳ ಅನ್ಯಾಯ ಆಗಿದೆ.........

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಯಾವ ತೆಂಗಿನ ಮರ ಅವರು ಬೆಳೆದಿದ್ದಾರೆ ?....

ಶ್ರೀ ಎಸ್.ಎಸ್. ಪಾಟೀಲ್ :- ನಾನೂ ಬೆಳೆದಿದ್ದೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ತೆಂಗಿನ ಮರಕ್ಕೆ ರೋಗ ಇಲ್ಲ ಎಂದು ನೀವು ಹೇಳುತ್ತೀರಾ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ತೆಂಗಿನ ಮರ ಕಪ್ಪು ತಲೆ ಹುಳದಲ್ಲಿ, ನುಸಿ ರೋಗದಲ್ಲಿ...

(ಗೊಂದಲ)

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ :- ಈ ರೋಗ ಬಂದಿರುವುದು ನಿಜ. ಆದರೆ ಕ್ರಮೇಣ ನುಸಿ ರೋಗ ನಮ್ಮ ಯಾವುದೇ ಔಷಧಿಗೆ ಹೋಗದಿದ್ದರೂ ಸಹಜವಾಗಿ ಕಡಿಮೆ ಆಗುತ್ತಾ ಬಂದಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಹದೇವ್ ಪ್ರಸಾದ ಅವರೇ, ನಾವು ನುಸಿ ರೋಗದ ಸುದ್ದಿ ಮಾತನಾಡುತ್ತಿಲ್ಲ. ಅಣಬೆ ರೋಗದಲ್ಲಿ ಹೋಗಿದೆ.

ಶ್ರೀ ವಾಟಾಳ್ ನಾಗರಾಜ್ :- ಬೇರೆ ಬೇರೆ ಕಾರಣಕ್ಕೆ...

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಕೃಷ್ಣಮೂರ್ತಿಯವರು ಹೇಳಲಿ. ಕಡೂರು ತಾಲ್ಲೂಕಿನಲ್ಲಿ ಎಷ್ಟು ಮರ ಒಣಗಿ ಹೋಗಿದೆ ಎಂದು ಅವರು ಹೇಳಲಿ.

(ಗೊಂದಲ)

ಶ್ರೀ ಚಂದ್ರಣ್ಣ :– ನಿಯಮಾವಳಿಗಳ ಪ್ರಕಾರ ಮಾತನಾಡಲಿ. ಏನು ಹೀಗೆ ಈ ತರಹ ಮಾತನಾಡುತ್ತಿದ್ದಾರೆ?

(ಗೊಂದಲ)

ಉಪಾಧ್ಯಕ್ಷರು :– ಮಾಧುಸ್ವಾಮಿಯವರೇ...

ಮಾನ್ಯ ಸದಸ್ಯರು :– ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಬಣ್ಣ ಬದಲಾಯಿಸುತ್ತಿದ್ದಾರೆ.

(ಗೊಂದಲ)

ಶ್ರೀ ಆರ್. ಶ್ರೀನಿವಾಸ್ :– ಅಲ್ಲಿಂದ ಮಾಹಿತಿ ತೆಗೆದುಕೊಂಡು, ಎಲ್ಲಿ ನುಸಿ ರೋಗದಿಂದ ಸತ್ತಿರತಕ್ಕ ಗಿಡ ಎಷ್ಟು ಇದೆ, ಅವಕ್ಕೆಲ್ಲಾ ಗಿಡ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನುಸಿ ರೋಗ ಒಂದೇ ಅಲ್ಲ; ನುಸಿ, ಅಣಬೆ, ಕಪ್ಪು ತಲೆ ರೋಗಗಳು ಇವೆ. ಅಣಬೆ ರೋಗಕ್ಕೆ ಕೋಕನಟ್ ಬೋರ್ಡ್‌ನವರು ಒಂದು ನೂರು ರೂಪಾಯಿ ಸಬ್ಸಿಡಿ ಕೊಡುತ್ತಿದ್ದರು. ಆ ಸಬ್ಸಿಡಿಯನ್ನೂ ಕೊಡಿವುದುದಕ್ಕೆ ನಿಮಗೆ ಯೋಗ್ಯತೆ ಇಲ್ಲ ಎಂದು ನಾವು ಹೇಳುತ್ತಿರುವುದು. ಅಣಬೆ ರೋಗ ಬಂದಿದ್ದರೆ 100 ರೂಪಾಯಿಗಳನ್ನು ಕೋಕನಟ್ ಬೋರ್ಡ್‌ನವರು ಕೊಡುತ್ತಿದ್ದರು. ಈಗ ಅದನ್ನೂ ನಿಲ್ಲಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ಒಂದೂವರೆ ಕೋಟಿ ತೆಂಗಿನ ಸಸಿಗಳಿಗೆ ಹಣ ಕೊಡಬೇಕು. ಅಡಕೆಗೆ ಹಣ ಕೊಡಬೇಕು. ಅದನ್ನು ತಾವು ಹೇಳಬೇಕು.

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ನುಸಿ ರೋಗಕ್ಕೂ, ತೆಂಗು ಹಾಳಾಗುವುದಕ್ಕೂ ವ್ಯತ್ಯಾಸ ಇದೆ. ನುಸಿ ರೋಗ ಏನು ಬಡ್ಡಿಂಗ್ ಇದೆ, ಅದಕ್ಕೆ ಮಾತ್ರ ನುಸಿ ರೋಗ ಬರುತ್ತದೆಯೇ ಹೊರತು, ಗರಿಗೆ ಬರುವುದಿಲ್ಲ. ಗರಿಗೆ ಯಾವುದು ಬರುತ್ತದೆ ಎಂದರೆ ಬ್ಲಾಕ್ ಹೆಡೆಡ್ ಆದಂತಹ ಸಂದರ್ಭದಲ್ಲಿ ಮತ್ತು ನೀರಾವರಿ ಸೌಕರ್ಯ ಕಡಿಮೆ ಆದಂತಹ ಸಂದರ್ಭದಲ್ಲಿ ಬರುತ್ತದೆ.

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ :– 1997–98 ರಲ್ಲಿ ಗ್ಯಾಪ್ ಫಿಲ್ಲಿಂಗ್ ಎಂದು ಹೇಳಿ ಒಂದು ಸಸಿಗೆ 250 ರೂಪಾಯಿಗಳನ್ನು ಕೊಡುತ್ತಿದ್ದರು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇವತ್ತು ಅದನ್ನು ನಿಲ್ಲಿಸುತ್ತಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಹಾಗೆ ಬರೀ ನೀವು ಸಸಿ ಕೊಟ್ಟರೆ ಆಗುವುದಿಲ್ಲ. ಅವನಿಗೆ ಈಗಿನ ಧಾರಣೆ ಪ್ರಕಾರ ಒಂದು ತೆಂಗಿನ ಸಸಿಗೆ 400 ರೂಪಾಯಿಗಳನ್ನು ಕೊಟ್ಟರೆ ಅನುಕೂಲ ಆಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– 250 ರೂಪಾಯಿಗಳನ್ನು ನಮಗೆ ಕೊಡುತ್ತಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ವಿರೋಧ ಪಕ್ಷದವರು ಏನು ಹೇಳುತ್ತಿದ್ದಾರೆ ಅದು ತಪ್ಪು ಎಂದು ನಾನು ಹೇಳುವುದಿಲ್ಲ. ನಾನು ಪ್ರಾಕ್ಟಿಕಲ್ ಆಗಿ ನನ್ನ ಕ್ಷೇತ್ರದ ಬಗ್ಗೆ ಹೇಳುತ್ತಿದ್ದೇನೆ. ಅವರು ವಿರೋಧ ಪಕ್ಷದವರು ಹೇಳುತ್ತಿದ್ದಾರೆ ಎಂದು, ಆಡಳಿತ ಪಕ್ಷದಲ್ಲಿದ್ದು, ನನ್ನ ಪ್ರಕಾರ ಹೇಳಬಾರದೆ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಸಾರ್ ನೀವು ವಾಸ್ತವಾಂಶವನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಹಣಕಾಸು ಸಚಿವರು ಸ್ವಲ್ಪ ಗಮನ ಇಟ್ಟು ಕೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಕೋಕನಟ್ ಬೋರ್ಡಿನಿಂದ ದುಡ್ಡು ತರಿಸಿಕೊಂಡು ಎರಡು ನೂರು ರೂಪಾಯಿಗಳನ್ನು ನಮಗೆ ಅಣಬೆ ರೋಗ ಬಂದ ಮರಕ್ಕೆ ಕೊಡಬೇಕು. ಕಪ್ಪು ತಲೆ ಹುಳ ರೋಗ ಬಂದ ಮರಕ್ಕೆ ಕೊಡುತ್ತಿದ್ದರು. ಈಗ ಅದೆಲ್ಲಾ ಬಂದ ಮಾಡಿ ಬಿಟ್ಟಿದ್ದಾರೆ. ಅದನ್ನು ಏನಾದರೂ ಮಾಡಿ ಕೊಡುವ ಹಾಗೆ ಮಾಡಿದರೆ ಎಂದರೆ ನೀವು ಕೇಳುವುದಕ್ಕೇ ತಯಾರಾಗಿಲ್ಲವಲ್ಲಾ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಸ್ವಲ್ಪ ಮಾಹಿತಿ ತರಿಸಿಕೊಳ್ಳಿ.

ಶ್ರೀ ಜೆ.ಸಿ ಮಾಧುಸ್ವಾಮಿ :– ಕೋಕನಟ್ ಬೋರ್ಡ್‌ನವರು 200 ರೂಪಾಯಿಗಳನ್ನು ಕೊಡುತ್ತಿದ್ದರು.

ಶ್ರೀ ಸಿದ್ಧರಾಮಯ್ಯ :– ನಮ್ಮ ಅಧಿಕಾರಿಗಳು ಕೋಕನಟ್ ಬೋರ್ಡ್‌ನ್ನು ಅಪ್ರೋಚ್ ಮಾಡುತ್ತಾರೆ. ಅಲ್ಲಿಂದ ಬಂದಮೇಲೆ ಏನು ಪರಿಹಾರ ಕೊಡಬೇಕೋ ಅದನ್ನು ಕೊಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವರು ಸ್ಕೀಮ್ ನಿಲ್ಲಿಸಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ಕೇಂದ್ರ ಸರ್ಕಾರದಿಂದ ಅಂಥ ಸ್ಕೀಮ್‌ಗಳಿದ್ದರೆ ಅವರನ್ನು ಅಪ್ರೋಚ್ ಮಾಡಿ ಹಣ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದು ಒಂದು ವಿಚಾರ. ಈ ಕಪ್ಪು ತಲೆ ಹುಳ ರೋಗ ಬಂದು, ಸುಳಿ ಒಣಗಿ ಹೋಗತಕ್ಕ ಮರಗಳು ಇರುತ್ತವೆ. ಆ ತರಹದ್ದು ಇದ್ದರೆ, ಆ ಬಗ್ಗೆ ಸಸಿಗಳನ್ನು ಕೊಡತಕ್ಕದ್ದಕ್ಕೆ ರಿಪೋರ್ಟ್ ತರಿಸಿಕೊಂಡು ಸಸಿಗಳನ್ನು ಕೊಡುತ್ತಾರೆ. ಈಗ ನುಸಿ ರೋಗ ಬಂದರೆ ಮರಗಳು ಸಾಯುವುದಿಲ್ಲ. ಕಾಯಿ ಬಿಡತಕ್ಕಂಥ ಮರಗಳು ಏನಿವೆ ಅವು ರೋಗ ಬಂದು ಕೆಲವು ಬಿದ್ದು ಹೋಗುತ್ತವೆ, ಕೆಲವು ಸಣ್ಣಗೆ ಆಗುತ್ತವೆ. ಆ ತರಹ ಆಗುತ್ತದೆಯೇ ಹೊರತು ಎಲ್ಲಾ ಫಲವೂ ನುಸಿ ರೋಗ ಬಂದಾಗ ಹೊರಟು ಹೋಗುವುದಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವು ನುಸಿರೋಗದಲ್ಲಿ ಮರ ಸತ್ತು ಹೋಗುತ್ತವೆ ಎಂದು ವಾದ ಮಾಡಿಲ್ಲ.

ಮಾನ್ಯ ಸದಸ್ಯರು :- ಪ್ರೊಡಕ್ಷನ್ ಕಡಿಮೆಯಾಗಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ನುಸಿರೋಗದಿಂದ ಮರ ಸತ್ತು ಹೋಗಿದೆ ಎಂದು ನಾವೂ ಹೇಳಿಲ್ಲ. ಅಣಬೆ ರೋಗದಲ್ಲಿ, ಕಪ್ಪು ತಲೆಹುಳು ರೋಗದಲ್ಲಿ ಮರಗಳು ಏನು ಸತ್ತು ಹೋಗಿವೆ ಅದಕ್ಕೆ ಪರಿಹಾರವನ್ನು ಸರ್ಕಾರ ಕೊಡುತ್ತಿತ್ತು. ಈಗ ನಿಲ್ಲಿಸಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ಯಾವಾಗ ?

ಶ್ರೀ ಕೆ.ಎಂ. ಕೃಷ್ಣಮೂರ್ತಿ :- 1997-98 ರಲ್ಲಿ 250 ರೂ. ಪರಿಹಾರಧನವನ್ನು ಕೊಡುತ್ತಿದ್ದರು.

ಶ್ರೀ ಜೆ.ಸಿ. ಮಾಧುಸ್ವಾಮಿ :- 1997-98 ರಲ್ಲಿ ಪರಿಹಾರ ಧನವನ್ನು ಕೊಡುತ್ತಿದ್ದರು ಅದು ಈಗ ನಿಂತುಹೋಗಿದೆ.

ಶ್ರೀ ಸಿದ್ಧರಾಮಯ್ಯ :- 7 ವರ್ಷಗಳ ಹಿಂದಿನದನ್ನು ಹೇಳುತ್ತಿದ್ದೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಹೀಗೆ ಹೇಳುತ್ತಾ ಕುಳಿತರೆ ನಾವು ಎಲ್ಲಿಗೆ ಹೋಗಬೇಕು ರೈತರು?

ಶ್ರೀ ಕೆ.ಆರ್. ರಮೇಶ್ ಕುಮಾರ್ :- 1997-98 ರಲ್ಲಿ ಕೊಟ್ಟಿದ್ದಾರೆಂದು ಹೇಳುತ್ತಿದ್ದೀರಿ, ಆಗ ಕಪ್ಪುತಲೆ ಹುಳ ರೋಗ ಬಂದಿತ್ತೆಂದು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :– ಅದನ್ನು ಪರಿಶೀಲನೆ ಮಾಡಿ ಸರ್ಕಾರ ಸೂಕ್ತವಾದಂತಹ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇದು ಆಗುವುದಿಲ್ಲ

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :– ಇದು ಸರಿಯಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :– ಸನ್ಮಾನ್ಯ ಅಧ್ಯಕ್ಷರೆ, ಅಡಿಕೆ ಮತ್ತು ತೆಂಗಿನ ಮರಕ್ಕೆ ....

(ಗೊಂದಲ)

ಶ್ರೀ ಆರ್. ಶ್ರೀನಿವಾಸ :– ಅದಕ್ಕಾಗಿ 6 ಕೋಟಿ ರೂಪಾಯಿಗಳ ಪರಿಹಾರವನ್ನು ಅನೌನ್ಸ್ ಮಾಡಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಅಡಿಕೆಗೆ ಬೆಂಬಲ ಬೆಲೆಯನ್ನು ಕಳೆದ ಬಾರಿ ಮುಖ್ಯ ಮಂತ್ರಿಗಳು 10 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂಬ ಬಗ್ಗೆ ವಿಶ್ವಾಸವನ್ನು ಕೊಟ್ಟಿದ್ದರು. 10 ಕೋಟಿ ರೂಪಾಯಿಗಳಲ್ಲಿ ಕೇವಲ 4 ಕೋಟಿ ರೂಪಾಯಿಗಳನ್ನು ಮಾತ್ರ ರಿಲೀಸ್ ಮಾಡಿ ಇನ್ನು 6 ಕೋಟಿ ರೂಪಾಯಿಗಳನ್ನು ಇವತ್ತಿನವರೆಗೂ ಕೊಟ್ಟಿರುವುದಿಲ್ಲ. ಅದು ಯಾವಾಗ ಕೊಡುತ್ತೀರೆಂದು ಹೇಳಬೇಕಲ್ಲ?

ಶ್ರೀ ಆರ್. ಶ್ರೀನಿವಾಸ್ :– ಅದರ ಬಗ್ಗೆ ಹಣಕಾಸಿನ ಮಂತ್ರಿಗಳ ಮತ್ತು ನಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ ಮುಖ್ಯ ಅಧಿಕಾರಿಗಳ ಗಮನಕ್ಕೆ ತರುತ್ತೇನೆ. ಇದು ನನ್ನ ಗಮನಕ್ಕೆ ಈಗಾಗಲೇ ಬಂದಿದೆ. ಬಹುಶಃ ನಾನು ದಕ್ಷಿಣ ಕನ್ನಡಕ್ಕೆ ಹೋದಾಗ ಇದರ ಬಗ್ಗೆ ಬಹಳ ಜನರು ಕೇಳಿದರು. ಇದರ ಬಗ್ಗೆ, ತಕ್ಷಣ ಹಣ ಕೊಡುವುದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಇದರ ಬಗ್ಗೆ ಯಾವಾಗ ಹೇಳುತ್ತೀರಿ ? ಯಾವಾಗ ಎಂದು ಕೇಳಬೇಕಲ್ಲವೇ?

ಶ್ರೀ ಸಿದ್ಧರಾಮಯ್ಯ :– ಸರ್ಕಾರ ಮಾರ್ಕೆಟ್ ಇಂಟರ್‌ವೆನ್ಷನ್ ಮಾಡುತ್ತದೆ ಎಂದು ಹೇಳಿರುವುದು ನಿಜ. ಅದಕ್ಕೋಸ್ಕರವಾಗಿ 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮಾರ್ಕೆಟ್ ಇಂಟರ್‌ವೆಷ್‌ನ್ ಆಗಿ ಎಷ್ಟು ತೆಗೆದುಕೊಂಡಿದ್ದಾರೆ.

ಎಷ್ಟು ಬ್ಯಾಲೆನ್ಸ್ ಕೊಡಬೇಕೆಂಬುದರ ಬಗ್ಗೆ ಮಾಹಿತಿ ತರಿಸಿಕೊಂಡು ಕೂಡಲೇ ಅದನ್ನು ಪಾವತಿ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಕೂಡಲೇ ಅಂದರೆ ಎಷ್ಟು ದಿವಸದಲ್ಲಿ ಮಾಡುತ್ತೀರಿ?

ಶ್ರೀ ಸಿದ್ಧರಾಮಯ್ಯ :– ಇನ್ನು ಏನೆಂದು ಹೇಳಬೇಕು? ಕೂಡಲೇ ಅಂದರೆ ನಿಮಗೆ ಕನ್ನಡ ಅರ್ಥವಾಗುವುದಿಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಕೂಡಲೇ ಅಂದರೆ ಈಗ...

ಶ್ರೀ ಸಿದ್ಧರಾಮಯ್ಯ :– ಆ ಪದ ಯಾವುದು ಎಂದು ನೀವು ಹೇಳಿಬಿಡಿ. ಅದೇ ರೀತಿಯಾಗಿ ಹೇಳಿಬಿಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಇನ್ನೊಂದು ವಾರದಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳಬೇಕು.

ಶ್ರೀ ಸಿದ್ಧರಾಮಯ್ಯ :– ಆದಷ್ಟು ಜಾಗ್ರತೆ ಬಿಡುಗಡೆ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಅದು ಆಗುವುದಿಲ್ಲ

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ 'ಆದಷ್ಟು ಬೇಗ, ಕೂಡಲೇ' ಈ ಉತ್ತರ ಕೊಟ್ಟೂ ಕೊಟ್ಟೂ ಅಭ್ಯಾಸವಾಗಿ ಹೋಗಿಬಿಟ್ಟಿದೆ. ಯಾರೇ ಕೇಳಿದರೂ ಅವರದ್ದು ಇದೇ ಉತ್ತರ. ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಬಗ್ಗೆ ಕೇಳಿದರೂ ಕೂಡ 'ತಕ್ಷಣ ಹಣ ಬಿಡುಗಡೆ ಮಾಡುತ್ತೇವೆ, ಕೂಡಲೇ ಬಿಡುಗಡೆ ಮಾಡುತ್ತೇವೆ' ಎಂದು ಇದನ್ನು ಅವರು ಡೈರಿಯಲ್ಲಿ ಇಟ್ಟುಕೊಂಡು ಓದುತ್ತಲೇ ಇರುತ್ತಾರೆ. ಸ್ವಾಮಿ, ನಮಗೆ ಇಷ್ಟೇ ಬೇಕಾಗಿರುವುದು. ಅಡಿಕೆ ಬೆಳೆಗಾರರ ಬಗ್ಗೆ ಮುಖ್ಯಮಂತ್ರಿಗಳೇ ಹತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ತುಂಬಾ ಸ್ಪಷ್ಟವಾಗಿ ಹೇಳಿದ್ದರು. ನಾಲ್ಕು ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ಇಡೀ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿರುವಂಥ ಸಂದರ್ಭದಲ್ಲಿ ಎಲ್ಲಾ ಕಡೆಗಳಲ್ಲಿರುವ ರೈತರು ತುಂಬಾ ತುಂಬಾ ತೊಂದರೆಯಲ್ಲಿದ್ದಾರೆ, ಖಂಡಿತಾ ನನಗೂ ಗೊತ್ತಿದೆಯೆಂದು ಹೇಳಿದ್ದೀರಿ. ಈಗ ಕೂಡಲೇ ಅಲ್ಲ, ಒಂದು ವಾರದಲ್ಲಿ ಮಾಡುತ್ತೀರಾ? ಹದಿನೈದು ದಿವಸಗಳಲ್ಲಿ ಮಾಡುತ್ತೀರಾ? ಒಂದು ತಿಂಗಳಿನಲ್ಲಿ ಮಾಡುತ್ತೀರಾ? ಹತ್ತು ವರ್ಷಗಳಲ್ಲಿ ಮಾಡುತ್ತೀರಾ? ಇದರ ಬಗ್ಗೆ ಹೇಳಿಸ್ವಾಮಿ. ಇದು ಯಾವ ಲೆಕ್ಕ? 'ಕೂಡಲೇ' ಅಂತ ನಿಮ್ಮಿಷ್ಟ ಬಂದ ಹಾಗೆ ಹೇಳುವುದೇ ?

ಶ್ರೀ ಡಿ. ಮಂಜುನಾಥ್ :– ಮೆಲ್ಲಗೆ ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ :– ಸ್ವಾಮಿ ಮೆಲ್ಲಗಲ್ಲ, ಅಲ್ಲಿ ರೈತರು ಸಾಯುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ :– ಇವರು ಮಾತ್ರ ರೈತರಂತೆ! ನಾವೂ ಕೂಡ ರೈತರ ಮನೆಯಿಂದಲೇ ಬಂದಿರುವುದು. ನಾವು ಎಲ್ಲೋ ಹೋಗಿದ್ದೇವಂತೆ!

ಶ್ರೀ ಕೆ.ಎಸ್. ಈಶ್ವರಪ್ಪ :– ತೆಂಗಿನ ಬೆಳೆಗಾರರಿಗೆ ಗೂಸಾ ಕೊಟ್ಟಿರಿ. ಅಡಿಕೆ ಬೆಳೆಯುವ ರೈತರ ಬಗ್ಗೆ ಕೇಳಿದರೆ ಏನಿದು? ಇದರ ಬಗ್ಗೆ ಏನು ಹೇಳುತ್ತೀರಾ ಹೇಳಿ.

ಶ್ರೀ ಅರಗ ಜ್ಞಾನೇಂದ್ರ :– ತಾವು ಯಾವುದಾದರೊಂದು ನಿರ್ದಿಷ್ಟವಾದ ಸಮಯವನ್ನು ಕೊಡಿ.

ಶ್ರೀ ಸಿದ್ಧರಾಮಯ್ಯ :– ಇವರು ಒಂದು ತಿಂಗಳು ಎಂದು ಹೇಳುತ್ತಾರಲ್ಲಾ, ನಾವು ಒಂದು ತಿಂಗಳು ತೆಗೆದುಕೊಳ್ಳುವುದಿಲ್ಲ ಅದಕ್ಕಿಂತಲೂ ಮುಂಚಿತವಾಗಿಯೇ ಕೊಡುತ್ತೇವೆ.

(ಗೊಂದಲ)

ಉಪಾಧ್ಯಕ್ಷರು :– ಇದು ಸರಿಯಲ್ಲ; ಅವರು ಹೇಳಿದ್ದಾರಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ :– ಸ್ವಾಮಿ, ಒಂದು ತಿಂಗಳೊಳಗೆ ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ :– ಒಂದು ತಿಂಗಳು ಎಂದು ಹೇಳಿರುವುದು, ಅದು ದಿನಾಂಕವಲ್ಲವೇ? 'ಒಂದು ತಿಂಗಳೊಳಗೆ' ಎಂದರೆ ನಿರ್ದಿಷ್ಟ ಅಲ್ಲವೇ?

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಉಪಾಧ್ಯಕ್ಷರೆ, ಅವರು ಇದನ್ನಾದರೂ ಉಳಿಸಿಕೊಳ್ಳಲಿ. ನಾವು ಅವರ ಮಾತನ್ನು ನಂಬಿದ್ದೇವೆ, ಕುಳಿತುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ತೆಂಗಿನ ಮರಗಳಿಗೆ ಹುಳುಗಳ ಬಾಧೆಯುಂಟಾಗಿ ನಾಶಗೊಂಡಿರುವುದರ ಬಗ್ಗೆ ಏನೂ ಹೇಳಲಿಲ್ಲ...ಈ ಕಾಲದ ರೈತರಿಗೆ ಅದೇನೂ ಸಾಕಾಗುವುದಿಲ್ಲ. ಅದು ಮಕ್ಕಳು ಮೊಮ್ಮಕ್ಕಳಿಗಾಯಿತು. ಈಗ ಆ ರೈತ ಏನು ಮಾಡಬೇಕು?

ಶ್ರೀ ಅರಗ ಜ್ಞಾನೇಂದ್ರ :– ಅಡಿಕೆ ತೋಟದಲ್ಲಿ yellow leaves disease ಬಂದು ತೆಂಗಿನ ಮರಗಳು ಸತ್ತರೆ ಅದಕ್ಕೆ ಪರಿಹಾರ ಕೊಡುವುದಿತ್ತು. ಇತ್ತೀಚಿನ ವರ್ಷಗಳಲ್ಲಿ ಹೀಗಾಗಿದೆ. ಅದಕ್ಕೆ ದಯವಿಟ್ಟು ಕೊಡಿಸಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :– ಇಡೀ ಕರ್ನಾಟಕ ರಾಜ್ಯದಲ್ಲಿ ಉಪ ಮುಖ್ಯಮಂತ್ರಿಗಳು ಅಡಿಕೆ ಬೆಳೆ ಬಗ್ಗೆ ಕೊಟ್ಟಿರುವ ಉತ್ತರದ ಬಗ್ಗೆ ನಮಗೆ ನಿಜಕ್ಕೂ ಸಮಾಧಾನವಾಗಿದೆ. ಅಡಿಕೆ ಬೆಳೆಗಾರರ ಪರವಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ತೆಂಗಿನ ತೋಟಗಳ ಕಡೆಗೂ ತಾವು ಗಮನ ಕೊಡಿ. ನೀವು ಈ ರೀತಿ ದೃಢವಾದ ಉತ್ತರ ಕೊಟ್ಟರೆ ಮಾತ್ರ ಸಂತೋಷವಾಗುತ್ತದೆ.

ಶ್ರೀ ಸಿದ್ಧರಾಮಯ್ಯ :– ಮಾನ್ಯ ಉಪಾಧ್ಯಕ್ಷರೆ, 1997–98 ರಲ್ಲಿ ಈ ತರಹದ ಕಾರ್ಯಕ್ರಮ ಇತ್ತೆಂದು ಹೇಳುತ್ತಾರೆ. ಆ ಕಾರ್ಯಕ್ರಮದ ವಿವರಗಳನ್ನು ತರಿಸಿ ನೋಡಿ, ಅದರ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರ ಸೂಕ್ತವಾದಂಥ ನಿರ್ಧಾರ ಮಾಡುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಇವೊತ್ತಿನ ಟಾರ್ಗೆಟ್ ಇಲ್ಲೇನೂ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– 'ಸೂಕ್ತವಾದ' ಅಂದರೆ ಏನು? ಸೂಕ್ತವಾದ ಅಂದರೆ appropriate ಎಂದು ಅದು ರೆಗ್ಯುಲರ್ ಕಾಮನ್ ರಪ್ಲೈ That should not happen.

ಶ್ರೀ ಕೆ.ಎಸ್. ಈಶ್ವರಪ್ಪ :– ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುತ್ತೇನಲ್ಲಾ ಉಪ ಮುಖ್ಯಮಂತ್ರಿಗಳು ಕೊಟ್ಟಂಥ ಉತ್ತರದಿಂದ ಅಡಿಕೆ ಬೆಳೆಗಾರರಿಗೆ ತುಂಬಾ ಸಂತೊಷವಾಗುತ್ತದೆ. ಖಂಡಿತವಾಗಿಯೂ ಅದರಲ್ಲೇನೂ ಅನುಮಾನವಿಲ್ಲ. ಅಡಿಕೆ ಬೆಳೆಗಾರರು ಮಾತ್ರ ರೈತರೇ? ತೆಂಗು ಬೆಳೆಗಾರರು ರೈತರಲ್ಲವೇ? ನೀವು ಮಾಹಿತಿ ತರಿಸಿಕೊಳ್ಳಿ. ಹಿಂದೆ ಏನು ಸಮಸ್ಯೆ ಇತ್ತೋ ಆ ಸಮಸ್ಯೆ ಇದ್ದಂಥ ಸಂದರ್ಭದಲ್ಲಿ ಆಗಿನ ಸರ್ಕಾರ ಒಂದೊಂದು ತೆಂಗಿನ ಗಿಡಕ್ಕೆ ಒಂದೊಂದು ಗಿಡ ಕೊಟ್ಟು 250 ರೂಪಾಯಿಗಳನ್ನು ಕೊಡುತ್ತಿತ್ತು. ತಾವು ಇದನ್ನು ನೋಡಿಲ್ಲವೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಅಧಿಕಾರಿಗಳು ಇಲ್ಲೇ ಇದ್ದಾರಲ್ಲಾ, ಅವರನ್ನು ಕೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ :– ಹಿಂದೆ ಕೊಟ್ಟಿದ್ದರೋ ಇಲ್ಲವೋ ಕೇಳಿ. ಕೊಟ್ಟಿದ್ದರೆ ಒಪ್ಪಿಕೊಳ್ಳಿ. ನಾನು ಹೇಳುತ್ತೇನಲ್ಲಾ, ಹಿಂದೆ ಕೊಟ್ಟಿದ್ದರೆ ಈಗಲೂ ಕೊಡಿ.

ಶ್ರೀ ಸಿದ್ಧರಾಮಯ್ಯ :– ಪರಿಶೀಲಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಸ್ವಾಮಿ, ನಮಗೆ ಅದೇ ಸಮಸ್ಯೆಯಾಗಿರುವುದು. ನಿಮ್ಮ ಪರಿಶೀಲನೆಯಿಂದ ನಮಗೆ ಉತ್ತರವಿಲ್ಲ.

SRI SIDDARAMAIAH :- The Government is with open mind. ರೈತರಿಗೆ ಸಹಾಯ ಮಾಡಬೇಕೆಂಬುದೇ ನಮ್ಮ ಉದ್ದೇಶ. ಈ ಸರ್ಕಾರ ಯಾವತ್ತೂ ಕೂಡ ರೈತರ ಪರವಾಗಿದೆ. ರೈತರ ಸಹಾಯಕ್ಕೆ ಹೋಗಬೇಕೆಂಬುದೇ ನಮ್ಮ ಉದ್ದೇಶ. ಇವರು ಮಾತನಾಡುತ್ತಾ, 1997–98 ರಲ್ಲಿ ಇಂತಹ ಒಂದು ಕಾರ್ಯಕ್ರಮ ಇತ್ತು. ಒಂದು ಗಿಡ ಕೊಟ್ಟು 250 ರೂಪಾಯಿಗಳನ್ನು ಕೊಡುತ್ತಿದ್ದರು, ಈ ಮಧ್ಯೆ ನಿಲ್ಲಿಸಿದ್ದಾರೆಂದು ಹೇಳುತ್ತಿದ್ದೀರಿ. ಅದಕ್ಕೋಸ್ಕರ, ಆ ಕಾರ್ಯಕ್ರಮ ಯಾವುದೆಂದು ತರಿಸಿ ನೋಡಿ, ಅದನ್ನು ಪರಿಶೀಲನೆ ಮಾಡಿ, ಅದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ ಮೇಲೂ ಕೂಡ 'ಈಗಲೇ ಹೇಳಿ, ಈಗಲೇ ಕಂಟಿನ್ಯೂ ಮಾಡಿ' ಎಂದು ಹೇಳುತ್ತಿದ್ದೀರಲ್ಲಾ

ಶ್ರೀ ಅರಗ ಜ್ಞಾನೇಂದ್ರ :– ಹಿಂದೆ ಕೊಡದಿದ್ದರೆ ಈಗ ಕೊಡುತ್ತೀರೆಂದು ಕೇಳಿ ನಾವು ತಿಳಿದುಕೊಳ್ಳಬಹುದೇ?

ಶ್ರೀ ಆರ್. ಶ್ರೀನಿವಾಸ್ :– ಇಲ್ಲಿದೆ ನೋಡಿ. ಕೋಕನಟ್ ಬೋರ್ಡ್‌ನವರು ತೆಂಗು ಬೆಳೆ ಅಭಿವೃದ್ಧಿಗೋಸ್ಕರ ಗಿಡ ಕೊಟ್ಟು ಗೊಬ್ಬರ ಕೊಟ್ಟು ಸಹಾಯಧನವನ್ನು ಕೊಡುತ್ತಿದ್ದರು ಆದರೆ... ಎಲ್ಲರಿಗೂ ಕೊಡುತ್ತಿರಲಿಲ್ಲ. ಕೆಲವೇ ಜನರಿಗೆ ಕೊಡುತ್ತಿದ್ದರು. ಇಲ್ಲಿದೆ ನೋಡಿ 1 ಕೋಟಿ 40 ಲಕ್ಷ ರೂ.ಗಳನ್ನು ನಾವು ಅವರಿಗೆ ಈಗಲೂ ಕೊಡುತ್ತಿದ್ದೇವೆ. ನುಸಿರೋಗ ಮತ್ತೊಂದು ರೋಗವೆಂದು ಕೊಡುತ್ತಿಲ್ಲ. ಕೋಕನಟ್ ಬೋರ್ಡ್‌ನವರು ತೆಂಗು ಅಭಿವೃದ್ಧಿಗೋಸ್ಕರ.... 1 ಕೋಟಿ 40 ಲಕ್ಷ ರೂಪಾಯಿಗಳನ್ನು ಈ ಸಲವೂ ಕೊಟ್ಟಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಎಷ್ಟೋ ಬೆಳೆ ಬೆಳೆದವರಿಗೆ ಪರಿಹಾರ ಕೊಟ್ಟಿರಿ. ಆದರೆ ತೆಂಗು ಬೆಳೆ ಬೆಳೆದಿರುವವರಿಗೆ ಮಾತ್ರ ಏನು ಮಾಡುತ್ತೀರಿ? ಆ ರೈತರ ಪರಿಸ್ಥಿತಿ ಏನು?

ಶ್ರೀ ಆರ್. ಶ್ರೀನಿವಾಸ್ :– ಮಾನ್ಯ ಉಪಾಧ್ಯಕ್ಷರೆ, ಈಗಲೂ 1 ಕೋಟಿ 40 ಲಕ್ಷ ರೂಪಾಯಿಗಳ ಗಿಡ ಕೊಡುತ್ತಿದ್ದೇವೆ, ಗೊಬ್ಬರ ಕೊಡುತ್ತಿದ್ದೇವೆ, ಸಹಾಯಧನ ಕೊಡುತ್ತಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ :– ಅದು ಯಾರಿಗೆ ಸಾರ್?

ಶ್ರೀ ಆರ್. ಶ್ರೀನಿವಾಸ್ :– ಯಾರಿಗೆ ಎಂದು ಅಲ್ಲ. ಬೇಕಾದರೆ, ಬೆಳೆ ಕಳೆದುಕೊಂಡವರಿಗೆಂದೇ ಮಾಡೋಣ.

ಶ್ರೀ ಅರಗ ಜ್ಞಾನೇಂದ್ರ :– ಅದು ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಸಾರ್. ಅವೆಲ್ಲಾ ರೆಗ್ಯುಲರ್ ಪ್ರೋಗ್ರಾಂಗಳು. ನೀವು ಅವುಗಳೆಲ್ಲವನ್ನೂ ಹೇಳಬೇಡಿ. ಅದು ಪ್ರಾಮಾಣಿಕವಾಗಿ ಕೊಡುವಂತಾದ್ದು.

ಶ್ರೀ ಕೆ.ಎಸ್. ಈಶ್ವರಪ್ಪ :– ಆಯಿತು. ಹೋಗಲಿ, ಹಿಂದೆ ಇಲ್ಲವೆಂದುಕೊಳ್ಳಿ. ನಾನು ಹೇಳುತ್ತಿರುವುದೇನೆಂದರೆ, ಈಗ ತೆಂಗು ಬೆಳೆಗಾರರಿಗೆ ತೆಂಗಿನ ಗಿಡಗಳು ಬೇಕಾಗಿದೆ. ಆ ಸಮಸ್ಯೆ ಇರುವುದಂತೂ ತುಂಬಾ ಸ್ಪಷ್ಟವಾಗಿದೆ. ಒಂದೂವರೆ ಕೋಟಿಗೂ ಹೆಚ್ಚು ತೆಂಗಿನ ಸಸಿಗಳು ಹಾಳಾಗಿ ಹೋಗಿರುವ ಸಂದರ್ಭದಲ್ಲಿ ಒಂದು ಗಿಡಕ್ಕೆ 250 ರೂಪಾಯಿಗಳನ್ನು ಕೊಡುವುದಕ್ಕೂ ನಿಮ್ಮಿಂದ ಆಗುವುದಿಲ್ಲವೆಂದರೆ, ರೈತ ಹೇಗೆ ಬದುಕಬೇಕು? ದಯವಿಟ್ಟು ಆ ದಿಕ್ಕಿನಲ್ಲಿ ಗಮನಹರಿಸಿ, ತಮ್ಮ ಉತ್ತರವನ್ನು ಇಡೀ ರಾಜ್ಯ ಎದುರು ನೋಡುತ್ತಿದೆ. ದಯವಿಟ್ಟು ಒಂದು ಗಿಡಕ್ಕೆ 250 ರೂಪಾಯಿಗಳನ್ನಾದರೂ ಕೊಡುತ್ತೇವೆಂಬ ಉತ್ತರ ಕೊಟ್ಟುಬಿಟ್ಟರೆ ತೆಂಗು ಬೆಳೆಗಾರರು ತುಂಬಾ ಸಂತೋಷಗೊಳ್ಳುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಇಂತಿಷ್ಟು ಪರಿಹಾರ ಕೊಡುತ್ತೇವೆಂದು ಹೇಳಿ, ಅನಂತರ ಎಷ್ಟೆಂದು ಅಸೆಸ್ ಮಾಡಿಸಿ. ಸುಮ್ಮನೆ ಸೂಕ್ತ ಪರಿಹಾರ ಕೊಡುತ್ತೇವೆಂದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ :– ಒಂದು ತೆಂಗಿನ ಗಿಡಕ್ಕೆ 250 ರೂಪಾಯಿಗಳನ್ನು ಕೊಡಿ ಸಾಕು. ನಾವು ಹೆಚ್ಚೇನೂ ಕೇಳುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಈಗ ನಾವು ಕೇಳಿದಾಗ ಉತ್ತರ ಬರುವುದಷ್ಟೆ. ಪರಿಶೀಲಿಸುತ್ತೇವೆ, ಸೂಕ್ತ ಪರಿಹಾರ ಕೈಗೊಳ್ಳುತ್ತೇವೆಂತಲೇ ಹೇಳುತ್ತೀರಿ.

ಶ್ರೀ ಸಿ.ಎಸ್. ಪುಟ್ಟೇಗೌಡ :– ಸಾರ್, ಒಂದು ನಿಮಿಷ. ಕೋಕನಟ್ ಬೋರ್ಡ್‌ನವರು ಕೊಟ್ಟಿದ್ದಾರೆ. ಎಲ್ಲರಿಗೂ ಕೊಡಲಿಲ್ಲ. ಅದು ಅವರ ಕಾರ್ಯಕ್ರಮ. ಕೆಲವರಿಗೆ, ಒಬ್ಬ ರೈತನಿಗೆ ಬೆಳೆ ಕಳೆದುಕೊಂಡವನಿಗೆ ಹತ್ತು ಸಾವಿರ ರೂ.ಗಳನ್ನು ಕೊಟ್ಟರು. ಮತ್ತೊಬ್ಬ ರೈತನಿಗೆ ಮೂರು ಸಾವಿರ ರೂ.ಗಳನ್ನು ಕೊಟ್ಟರು. ಸ್ವಲ್ಪ ಜಬರ್‌ದಸ್ತ ಆಗಿರುವವನು ಐವತ್ತು ಸಾವಿರ ರೂ.ಗಳನ್ನು ತೆಗೆದುಕೊಂಡ. ಅದು ಸರ್ಕಾರದ ಕಾರ್ಯಕ್ರಮವಲ್ಲ, ಕೋಕನಟ್ ಬೋರ್ಡ್‌ನವರು ಕೊಟ್ಟಂಥ ಕಾರ್ಯಕ್ರಮ. ನೀವೂ ಧಾರಾಳವಾಗಿ ಕೊಡುವುದಾದರೆ, ಸರ್ಕಾರದಲ್ಲಿ ಆರ್ಥಿಕ ಸಧೃಡವಾಗಿದ್ದರೆ, ಎಲ್ಲರಿಗೂ ಕೊಡಿ ನಮ್ಮದೇನೂ ಅಡ್ಡಿಯಿಲ್ಲ.

ಶ್ರೀ ಸಿದ್ಧರಾಮಯ್ಯ :– ಪುಟ್ಟೇಗೌಡರೆ, ನೀವು ಹೇಳುವುದೂ ಸರಿಯೇ. 1997–98 ರಲ್ಲಿ ಕೋಕನಟ್ ಬೋರ್ಡ್‌ನವರು ಕೆಲವರಿಗೆ ಕೊಟ್ಟಿರುವುದು ನಿಜ. ಇಲ್ಲವೆಂದು ಹೇಳುತ್ತಿಲ್ಲ. ಆಮೇಲೆ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ಈಗ ಕೊಡುತ್ತಿಲ್ಲ. ಆದ್ದರಿಂದ, ಈ ಕಾರ್ಯಕ್ರಮವನ್ನು ಮತ್ತೆ ನಾವು ಪರಿಶೀಲನೆ ಮಾಡುತ್ತೇವೆ. ಇದನ್ನು ಕೋಕನಟ್ ಬೋರ್ಡ್‌ನವರು ಕೊಡುತ್ತಿದ್ದುದು, ಸರ್ಕಾರದಿಂದ ಕೊಡುತ್ತಿದ್ದುದ್ದಲ್ಲ, ಅದರ ಪರಿಶೀಲನೆ ಮಾಡಿ, ಅದರ financial implications ಎಲವನ್ನೂ ನೋಡಿ ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಕೋಕನಟ್ ಬೋರ್ಡ್‌ಕೂಡ ತೆಂಗು ಬೆಳೆಗಾರರನ್ನು ಕೈಬಿಟ್ಟಾಯಿತು. 'ರೈತರ ಪರ ನಾವು' ಎಂದು ಹೇಳುತ್ತಿರುವಂಥ ಸರ್ಕಾರ ಕೂಡ ಆ ರೈತರನ್ನು ಕೈಬಿಟ್ಟಾಯಿತು. ಈ ಸರ್ಕಾರದ ರೈತ ವಿರೋಧಿ ಧೋರಣೆಯನ್ನು ಖಂಡಿಸಿ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ :– ಇವರಿಗಿಂತಲೂ ರೈತ ವಿರೋಧಿಗಳು ಈ ಜಗತ್ತಿನಲ್ಲೇ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :– ತುಂಬಾ ಸಂತೋಷ.

ಶ್ರೀ ಸಿದ್ಧರಾಮಯ್ಯ :– ಇಂತಹ ರೈತ ವಿರೋಧಿಗಳು ಜಗತ್ತಿನಲ್ಲೇ ಸಿಕ್ಕುವುದಿಲ್ಲ.

(ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಮಾನ್ಯ ಸದಸ್ಯರು :– ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ಇವರ ಕಾಲದಲ್ಲೇ.

ಮಾನ್ಯ ಸದಸ್ಯರು :– ಈಗ ಕೇಂದ್ರದಲ್ಲಿ ಅಧಿಕಾರ ಮಾಡದಿದ್ದರೂ ಬೇರೆ ಸಮಯದಲ್ಲಿ ಅಧಿಕಾರದಲ್ಲಿದ್ದಾಗ ರೈತರ ಪರವಾಗಿ ಇವರು ಏನು ಮಾಡಿದರು?

(ಗೊಂದಲ)

ಮಾನ್ಯ ಸದಸ್ಯರು :– ಆರು ವರ್ಷ ಕೇಂದ್ರ ಸರ್ಕಾರವನ್ನು ನಡೆಸಿದರು. ರೈತರಿಗೆ ಒಂದು ರೂಪಾಯಿಯನ್ನೂ ಕೊಡಲಿಲ್ಲ.

(ಗೊಂದಲ)

ಮಾನ್ಯ ಸದಸ್ಯರು :– ರೈತರ ಪರವಾಗಿ ಮೊಸಳೆ ಕಣ್ಣೀರಿಡುತ್ತಿರುವ ಬಿಜೆಪಿಯವರಿಗೆ ಧಿಕ್ಕಾರ.

(ಗೊಂದಲ)

ಉಪಾಧ್ಯಕ್ಷರು :– ನಾನು ಈಗ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"31–03–2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 1ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗಳನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

(ಮಾನ್ಯರು ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ –1 ಕೃಷಿ ಮತ್ತು ತೋಟಗಾರಿಕೆ

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕೃಷಿ ಮತ್ತು ತೋಟಗಾರಿಕೆ' ಇಲಾಖೆಗಳ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10258011 ಲಕ್ಷ ರೂಪಾಯಿಗಳಿಗಿಂತ ಹಾಗೂ ಬಂಡವಾಳ ಖಾತೆಯಲ್ಲಿ 3091.07 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಉಪಾಧ್ಯಕ್ಷರು :– ಈಗ ಶಿಕ್ಷಣ ಸಚಿವರು.

5) ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಸದನವನ್ನು ಮುಂದೂಡಿಸುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ನಾವು ಬೆಳಿಗ್ಗೆ ಹತ್ತು ಗಂಟೆಗೆ ಬಂದಿದ್ದೇವೆ. ಆದ್ದರಿಂದ ದಯವಿಟ್ಟು ನಮಗೆ ಹೋಗಲು ಪರವಾನಗಿ ಕೊಡಿ.

ಶ್ರೀ ಡಿ. ಮಂಜುನಾಥ್ :– ಮಾನ್ಯ ಪಾಟೀಲ್‌ರೆ, ಸಮಯ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷರೆ, ಸದನವನ್ನು ದಯಮಾಡಿ ಮುಂದಕ್ಕೆ ಹಾಕಿ. ಈಗಾಗಲೇ ಏಳು ಗಂಟೆಯಾಗಿದೆ. ನಮಗೆ ನಿಮ್ಮ ಮೇಲೆ ಗೌರವವಿದೆ.